




# ಕೊಡೆಯ ಗೋಪಾಲ

ಲಂಕಾ ಕೃಷ್ಣಮೂರ್ತಿ

KODEYA GOPALA (Kannada Novel) by Lanka Krishna Murthy, Published by Kowshika Prakashana and Printed at ILA Printers, Bangalore

© Author

First Edition-1978 Pages-168+viii
1,000 Copies

ಮುಖಪುಟ ವಿನ್ಯಾಸ ಕಲ್ಪನೆ: ಸಿ. ಸೀತಾರಾಂ

ಕಲೆ: ಅಖಂಡೇಶ್ವರ ಪತ್ತಾರ್

ಬೆಲೆ: ಆರು ರೂಪಾಯಿಗಳು

ಕೌಶಿಕ ಪ್ರಕಾಶನ
ನಂ. ೫೩, ೧೨ನೇ ಮೇಯಿನ್
೩ನೇ ಬ್ಲಾಕ್ ಜಯನಗರ
ಬೆಂಗಳೂರು-೫೬೦ ೦೧೧

## ಅರ್ಪಣೆ

ಈ ಕಾದಂಬರಿಯನ್ನು ಗುರುತುಲ್ಯರೂ, ಸೌಶೀಲ್ಯ ಸೌಜನ್ಯ ಸೌಹಾರ್ದ ಮೂರ್ತಿಗಳೂ ಸುಪ್ರಸಿದ್ಧ ಕನ್ನಡ ಸಾಹಿತಿಗಳೂ ಆದ

ದಿವಂಗತ ಕೆ. ಗೋಪಾಲ ಕೃಷ್ಣ ರಾಯರಿಗೆ
ಭಕ್ತಿಪೂರ್ವಕವಾಗಿ ಅರ್ಪಿಸುತ್ತಿದ್ದೇನೆ.

ಲಂಕಾ ಕೃಷ್ಣಮೂರ್ತಿ

# ಆವಿರ್ಭಾವ

ನನ್ನ ಜನ್ಮಸ್ಥಳವಾದ ಪೆನುಗೊಂಡ (ಘನಗಿರಿ) ಎಂಬ ಊರಿನಲ್ಲಿ ನಾನು ವಿದ್ಯಾರ್ಥಿಯಾಗಿರುವಾಗ ಹಿರಿಯರಿಂದ ಒಂದು ಕಥೆಯನ್ನು ಕೇಳಿದ್ದೆ. "ಹಿಂದೆ ಆ ಪಟ್ಟಣದ ಅರಸನಿಗೆ ಕೊಡೆ ಹಿಡಿಯುತ್ತಿದ್ದ ಒಬ್ಬನು, ಆ ಅರಸನು ಬೇರೆ ಊರಿನಿಂದ ಕುದುರೆಯನ್ನೇರಿ ಆತುರವಾಗಿ ತನ್ನ ರಾಜಧಾನಿಗೆ ಹಿಂತಿರುಗಿ ಬರುವಾಗ, ಅರಸನಿಗೆ ಕೊಡೆ ಹಿಡಿಯುವುದು ತನ್ನ ಕರ್ತವ್ಯವಾದುದರಿಂದ, ಆತನಿಗೆ ಕೊಡೆ ಹಿಡಿದು ಕುದುರೆಯ ಸಮವಾಗಿ ಓಡಿ ಬಂದನು. ಘನಗಿರಿ ಪಟ್ಟಣದ ಪೂರ್ವದ ಬಾಗಿಲಿಗೆ ಬಂದ ಕೂಡಲೇ ರಾಜನಿಗಾಗಿ ಕಾದಿದ್ದ ಪ್ರಧಾನಿ ಮೊದಲಾದವರು ರಾಜನನ್ನು ಅಂತಃಪುರಕ್ಕೆ ಕರೆದುಕೊಂಡು ಹೋದರು. ಓಡಿ ಬಂದಾತನು ಬಹಳ ಆಯಾಸಪಟ್ಟಿದ್ದು ಏನು ಮಾಡಲೂ ತೋಚದೆ ಅಲ್ಲಿಯೇ ಇದ್ದ ವಿಘ್ನೇಶ್ವರನ ಗುಡಿಯಲ್ಲಿ ಪ್ರವೇಶಿಸಿದನು. ಅದರ ದ್ವಾರದ ಎತ್ತರ ಕಡಿಮೆ ಇದ್ದು ಅದು ಆತನ ತಲೆಗೆ ತಾಕಿ ರಕ್ತ ಸುರಿಯಿತು. ಸುಸ್ತಾಗಿ ದೇವರ ಮುಂದೆ ಕುಸಿದು ಬಿದ್ದ ಆತನಿಗೆ, ಅಲ್ಲಿ ಯಾರೋ ದೇವರಿಗೆ ಅರ್ಪಿಸಿ ಬಿಟ್ಟಿದ್ದ ತಂಬಿಟ್ಟೂ, ಪಾನಕವೂ ಸಿಕ್ಕಿದವು. ಬಹಳ ಹಸಿದಿದ್ದ ಆತನು ಅವನ್ನು

ಹೊಟ್ಟೆಗೆ ಹಾಕಿಕೊಂಡನು. ಆತನಿಗೆ ನಿದ್ರೆ ಬಂತು. ಗರ್ಭಗುಡಿಯು ಅಗಲ ಕಿರ ಕಡಿಮೆಯಿದ್ದುದರಿಂದ ಆತನು ಕಾಲುಗಳನ್ನು ವಿಗ್ರಹದಮೇಲೆ ಇಟ್ಟು ಕೊಂಡು ಮಲಗಿ ನಿದ್ರೆಯಲ್ಲಿ ಮೈಮರೆತನು. ರಾಜನಿಗೆ ತನ್ನ ಕಾರ್ಯ ಮುಗಿದ ಮೇಲೆ ಕೊಡೆಹಿಡಿಯುವವನು ಕುದುರೆಯ ಸಮವಾಗಿ ಓಡಿ ಬಂದಹಾಗೆ ನೆನಪಿಗೆ ಬಂತು. ಆತನ ಗತಿ ಏನಾಯಿತೋ ನೋಡಿಕೊಂಡು ಬರಬೇಕೆಂದು ರಾಜನು ಬೇರೆ ಪರಿಚಾರಕರನ್ನು ಕಳುಹಿಸಿದನು. ಅವರು ಬಂದು ಗುಡಿಯಲ್ಲಿ ನಿದ್ರಿಸುತ್ತಿದ್ದವನನ್ನು ಎಬ್ಬಿಸಿದರು. ಆತನು ಎದ್ದು ಎಂದಿನಂತೆ ಕೈಯಲ್ಲಿ ಕೊಡೆ ಹಿಡಿದುಕೊಂಡು ಅನಾಯಾಸವಾಗಿ ಅಂತಃಪುರಕ್ಕೆ ನಡೆದುಕೊಂಡು ಬಂದನು. ಇಷ್ಟರೊಳಗೆ ದೊರೆ ವೈದ್ಯರನ್ನು ಕರೆಯಿಸಿ ಅತಿ ಓಟದಿಂದ ಬಳಲಿದವನಿಗೆ ಏನು ಚಿಕಿತ್ಸೆ ಮಾಡಬೇಕೆಂದು ಕೇಳಿದನು. ಅವರು ಅಂತಹವನ ತಲೆಗೆ ಗಾಯ ಮಾಡಿ ರಕ್ತ ಸುರಿಸಿ, ಗಟ್ಟಿಯಾದ ಆಹಾರವನ್ನುಣಿಸಿ ಅವನನ್ನು ಕಾಲುಗಳು ಸ್ವಲ್ಪ ಮೇಲಕ್ಕಿಟ್ಟು ಮಲಗಿಸಬೇಕೆಂದು ಹೇಳಿದರು. ಬಂದ ಪರಿಚಾರಕನಿಗೆ ದೇವರೇ ಇಂತಹ ಚಿಕಿತ್ಸೆಯಾಗುವಂತೆ ಮಾಡಿರುವುದನ್ನು ತಿಳಿದು ಆಶ್ಚರ್ಯ ಪಟ್ಟು ರಾಜನು ಆತನ ರಾಜಭಕ್ತಿಗೆ ಮೆಚ್ಚಿ ವರ ಕೇಳಬೇಕೆಂದು ಹೇಳಿದನು. ಆತನು ತನಗೆ ಮೂರು ಮುಕ್ಕಾಲು ಘಳಿಗೆಗಳ ಕಾಲ ರಾಜ್ಯಭಾರವನ್ನು ಕೊಡ ಬೇಕೆಂದು ಬೇಡಿದನು. ರಾಜನು ಆ ವರವನ್ನು ಕೊಟ್ಟನು. ಮೂರುಮುಕ್ಕಾಲು ಘಳಿಗೆ ರಾಜನಾದ ಆತನು ಅನೇಕರಿಗೆ ಮಾನ್ಯಗಳನ್ನು ಕೊಟ್ಟನು. 'ಗೊಡುಗುಪಾಲ'ನು (ಕೊಡೆಯ ಭೂಪಾಲನು) ಕೊಟ್ಟ ಆ ಮಾನ್ಯಗಳು ಇಂದಿಗೂ ಇವೆ.* ಎಂಬುದೇ ಆ ಕಥೆ.

ಬಹಳ ವರ್ಷಗಳು ಕಳೆದ ನಂತರ ರಾಮನಗರದಲ್ಲಿದ್ದ ನಮ್ಮ ಬಂಧುಗಳಾದ ಶ್ರೀಮಾನ್ ಟಿ. ಎಸ್. ವಾಸುದೇವರಾಯರು ಒಂದು ಸಂದರ್ಭದಲ್ಲಿ ಪುನಃ ಇದೇ ಕಥೆಯನ್ನು ನನಗೆ ಹೇಳಿದರು. ಆದರೆ ಅವರು ಆ ರಾಜನ ಕಾಲದಲ್ಲಿ ವಿದ್ವಾಂಸರಿಗೆ ತುಂಬ ಅನಾದರವಿತ್ತೆಂದೂ ಕೊಡೆ ಹಿಡಿಯುವವನು ರಾಜನ ಜೊತೆಯಲ್ಲಿ ದೇಶ ಸಂಚಾರ ಮಾಡಿದಾಗೆಲ್ಲ ಅವರ ದೀನ ಸ್ಥಿತಿಯನ್ನು ನೋಡಿದ್ದನೆಂದೂ ಆತನು ಮೂರುಮುಕ್ಕಾಲುಘಳಿಗೆ ರಾಜನಾಗಿ ಪೋಷಣೆ ಯಿಲ್ಲದ ವಿದ್ವಾಂಸರಿಗೆ ಮಾನ್ಯಗಳನ್ನು ಕೊಟ್ಟನೆಂದೂ ಹೇಳಿದರು. ಅವರು

ಹೇಳಿದ ಈ ವಿಷಯ ನನಗೆ ತಿಳಿದಿದ್ದ ಕಥೆಗೆ ಪ್ರಾಣ ಕೊಟ್ಟಿತು. ಅಂದಿನಿಂದ ಯಾರಾದರೂ ಈ ಕಥೆಯನ್ನು ಬರೆದರೆ ಎಷ್ಟು ಚೆನ್ನಾಗಿರುತ್ತೆ ಎಂದು ನನಗೆ ಅನ್ನಿಸುತ್ತಿತ್ತು.

ನಾನು ಈ ಕಥೆಯನ್ನು ಕೆಲವರು ಸಾಹಿತಿಗಳಿಗೆ ಹೇಳಿ ಇದನ್ನು ಕಾದಂಬರಿಯ ರೂಪದಲ್ಲಿ ಬರೆಯಬಹುದೆಂದು ಸಲಹೆ ಕೊಟ್ಟೆ. ಆದರೆ ಅವರು ಬರೆಯಲಿಲ್ಲ. ನನಗೆ ಕನ್ನಡ ಭಾಷೆಯಲ್ಲಿ ಆಸಕ್ತಿಯನ್ನುಂಟುಮಾಡಿ ಬರೆಯಲು ಪ್ರೋತ್ಸಾಹಕೊಟ್ಟ ಸುಪ್ರಸಿದ್ಧ ಕನ್ನಡ ಸಾಹಿತಿಗಳಾದ ದಿ|| ಕೆ. ಗೋಪಾಲ ಕೃಷ್ಣರಾಯರಲ್ಲಿ ನನಗೆ ಸದಾ ಗುರುಭಾವವಿದೆ. ಒಂದು ದಿನ ಜೊತೆಯಲ್ಲಿ ಪ್ರಯಾಣ ಮಾಡುವಾಗ ಈ ಕಥೆಯನ್ನು ನಾನು ಅವರಿಗೆ ಹೇಳಿದೆ. ಹಿಂತಿರುಗಿದ ಮೇಲೆ ಅವರು ಇದನ್ನು ಒಂದು ಪುಟ್ಟ ಕಥಾಕವನದ ರೂಪದಲ್ಲಿ ಬರೆದರು.

ಈಚೆಗೆ ನನಗೆ ಕಾಲಾವಕಾಶ ಲಭಿಸಿ ನಾನೇ ಈ ಕಥೆಯನ್ನು "ಕೊಡೆಯ ಗೋಪಾಲ" ಎಂಬ ಈ ಕಾದಂಬರಿಯ ರೂಪದಲ್ಲಿ ಬರೆದೆ. ಮೇಲೆ ಹೇಳಿದ ಕಥೆಯಲ್ಲಿ ಚಾರಿತ್ರಿಕ ಸತ್ಯವಿದೆ ಎಂದು ನನ್ನ ನಂಬಿಕೆ. ಅಲ್ಲದೆ ಬಿಲ್ಲಿನ ಸಹಾಯದಿಂದ ಮಾಳಿಗೆಯಿಂದ ಮಾಳಿಗೆಗೆ ಹಾರುತ್ತಿದ್ದ ಒಬ್ಬ ಕಳ್ಳನಿದ್ದನೆಂಬ ಕಥೆಯೊಂದನ್ನು ನಾನು ಕೇಳಿದ್ದೆ. ಈ ಕಥೆಗಳನ್ನು ಬಿಟ್ಟರೆ ಈ ಕಾದಂಬರಿಯಲ್ಲಿ ಬರುವ ಇತರ ಎಲ್ಲ ಅಂಶಗಳೂ ನನ್ನ ಕಲ್ಪನೆ.

ಇದನ್ನು ನಾನು ತೆಲುಗಿನಲ್ಲಲ್ಲದೆ ಕನ್ನಡದಲ್ಲಿ ಬರೆಯುವುದಕ್ಕೆ ಕಾರಣ ನನ್ನ ಮಕ್ಕಳ ವಿದ್ಯಾಭ್ಯಾಸವೆಲ್ಲ ಕನ್ನಡದಲ್ಲಿ ಆಗಿರುವುದು. ಅಂದರೆ ನಾನು ಕಥೆಯನ್ನು ಹೇಳುತ್ತಿದ್ದರೆ ಬರೆದಿಡುವುದಕ್ಕೆ ಅವರ ಸಹಾಯ ನನಗಿರುವಿಕೆ. ಅಷ್ಟೇ ಹೊರತು ಕನ್ನಡದಲ್ಲಿ ಕಾದಂಬರಿಯನ್ನು ಬರೆಯುವಷ್ಟು ಶಕ್ತಿ ನನಗಿದೆ ಎಂಬ ನಂಬಿಕೆಯಲ್ಲ. ನಿಜ ಹೇಳಬೇಕಾದರೆ ನಾನು ತೆಲುಗಿನಲ್ಲಿ ಸಹ, ಕಾವ್ಯ ರಚನೆ ಮಾಡಿದ್ದೇನೆಯೇ ಹೊರತು, ಕಾದಂಬರಿಯನ್ನಾಗಲಿ ಕಥೆಗಳನ್ನಾಗಲಿ ಬರೆದಿಲ್ಲ. ಆದುದರಿಂದ ಈ ಕಾದಂಬರಿಯಲ್ಲಿ ಭಾಷೆಯಲ್ಲಾಗಲಿ ಸನ್ನಿವೇಶ ಚಿತ್ರಣದಲ್ಲಾಗಲಿ ಕಂಡು ಬರುವ ತೊಡಕುಗಳನ್ನು ಓದುಗರು ಕ್ಷಮಿಸ

ಬೇಕೆಂದು ಪ್ರಾರ್ಥಿಸುತ್ತಿದ್ದೇನೆ.

ಈ ಕಾದಂಬರಿಯನ್ನು ಮೊದಲು ಓದಿ ಅನುಮೋದಿಸಿದವರೂ, ಕೊನೆಗೆ ಕನ್ನಡ ಪ್ರಭದ ಕಛೇರಿಗೆ ನನ್ನನ್ನು ಕರೆದುಕೊಂಡು ಹೋಗಿ ಇದನ್ನು ಸಂಪಾದಕ ವರ್ಗದವರಿಗೆ ಕೊಡಿಸಿದವರೂ, ಪೂಜ್ಯರಾದ ಡಾಕ್ಟರ್ ಧನ್ವಂತರಿ ರಘೂತ್ತಮಾಚಾರ್ಯರು. ಇಷ್ಟರೊಳಗೆ ಇದನ್ನು ಓದಿ ನನ್ನ ಹಿತೈಷಿಗಳೂ, ಸುಪ್ರಸಿದ್ಧ ಕನ್ನಡ ಸಾಹಿತಿಗಳೂ ಆದ ದಿ|| ಅರ್ಚಿಕ ವೆಂಕಟೇಶ್ ಅವರು ಕೂಡಲೇ ನನಗೆ ಹೀಗೆಂದು ಪತ್ರ ಬರೆದರು.

ತೆಲಗು ಕವಿಗಳಾದ ನಿಮ್ಮ ಕನ್ನಡ ಕಾದಂಬರಿ ಹೇಗಿದೆ ನೋಡೋಣವೆಂದು ನಿನ್ನೆ ಮಧ್ಯಾಹ್ನ ಓದಲು ಆರಂಭಿಸಿದೆ. ನಂಬಿದರೆ ನಂಬಿ, ಬಿಟ್ಟರೆ ಬಿಡಿ. ಅದು ನನ್ನನ್ನು ಸಂಪೂರ್ಣ ಸೆರೆ ಹಿಡಿದು ಬಿಟ್ಟಿತು. ಕೆಳಗೆ ಇಡಲು ಸಾಧ್ಯವಾಗಲೇ ಇಲ್ಲ. ಕತ್ತಲಾದ್ದರಿಂದ ನಿರ್ವಾಹವಿಲ್ಲದೆ ಓದು ನಿಲ್ಲಿಸಿದೆ. ಈ ಬೆಳಿಗ್ಗೆ ಸ್ನಾನ, ಅಹ್ನಿಕಗಳ ನಂತರ ಮತ್ತೆ ಕೈಗೆತ್ತಿಕೊಂಡೆ. ಪೂರ್ತಿ ಓದಿದ ಕೂಡಲೇ ಈ ಪತ್ರ ಬರೆಯುತ್ತಿದ್ದೇನೆ.

ಕೊಡೆಯಗೋಪಾಲ ನಿಜಕ್ಕೂ ಧೀರನೂ, ತ್ಯಾಗಶೀಲನೂ, ದೇಶ ವತ್ಸಲನೂ ಆದ ಪುಣ್ಯಪುರುಷೋತ್ತಮ. ಅಂಥ ಅಪ್ರತಿಮ ಮಹಾ ಪುರುಷನನ್ನು ಕಥಾನಾಯಕನನ್ನಾಗಿ ಮಾಡಿಕೊಂಡು, ನೀವು ಬರೆದಿರುವ ಕಾದಂಬರಿ ನಿಜಕ್ಕೂ ಅತ್ಯಪೂರ್ವವಾಗಿದೆ. ಇಂದಿನ ಕಾಲದ ನೈತಿಕ ಅಧಃಪತನವನ್ನು ಕಂಡು, ದೇಶೋದ್ಧಾರಕ್ಕಾಗಿಯೇ ಈ ಕೃತಿ ನಿಮ್ಮಿಂದ ರಚಿಸಲ್ಪಟ್ಟಂತೆ ತೋರುತ್ತದೆ. ಮಹಾ ಆದರ್ಶವಾದಿಯಾದ ನನಗೆ ಇದನ್ನು ಓದಿ ಆಗಿರುವ ಆನಂದಕ್ಕೆ ಮಿತಿ ಇಲ್ಲ. ಕನ್ನಡದಲ್ಲೂ ನೀವು ಸೊಗಸಾಗಿ, ದಿವ್ಯವಾಗಿ ಬರೆಯಬಲ್ಲಿರಿ ಎಂಬುದನ್ನು ಕಂಡು ನನಗೆ ಹೇಳತೀರದ ಸಂತೋಷ ವಾಗಿದೆ.

ಭಾಷಾ ದೃಷ್ಟಿಯಿಂದ ಕೆಲವು ಬದಲಾವಣೆ ಅವಶ್ಯವಾಗಿದೆ. ದೋಷ

ವೆಂದಲ್ಲ. ಸೌಂದರ್ಯವನ್ನು ಇನ್ನೂ ಹೆಚ್ಚಿಸುವ ದೃಷ್ಟಿಯಿಂದ. ತಾವು ಸ್ವತಃ ಬಂದಾಗ ನನ್ನ ಅಲ್ಪಮತಿಗೆ ತಿಳಿದಂತೆ ಸೂಚನೆ ಮಾಡುತ್ತೇನೆ. ತಮಗೆ ಒಪ್ಪಿಗೆಯಾದರೆ ಅವನ್ನು ಸ್ವೀಕರಿಸಿ. ನೀವು ಯಾವಾಗ ಬೇಕಾದರೂ ಬರಬಹುದು.

ನಿಮಗೆ ಸರ್ವದಾ ಅಭ್ಯುದಯ, ಮಂಗಳ ಮತ್ತು ಶುಭ ಕೋರುವ ಕನ್ನಡ ಬಂಧು,

ಅರ್ಚಿಕ ವೆಂಕಟೇಶ

ಕನ್ನಡ ಅಧ್ಯಾಪಕರೂ, ಸಾಹಿತಿಗಳೂ, ವಿಮರ್ಶಕರೂ ಆದ ನನ್ನ ಮಿತ್ರರು ಶ್ರೀ ಅ. ಸೂ. ವೆಂಕಟರಾಮಯ್ಯನವರು ಸಹ ಈ ಕಾದಂಬರಿಯನ್ನು ಓದಿ ಗುಣದೋಷ ಪರಿಶೀಲನೆ ಮಾಡಿ ನನಗೆ ತಿಳಿಸಿದರು. ಆಮೇಲೆ ಕನ್ನಡ ಪ್ರಭದ ಸಂಪಾದಕರು ಇದನ್ನು ತಮ್ಮ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿ ನನಗೆ ಪ್ರೋತ್ಸಾಹ ಕೊಟ್ಟರು. ಈಗ ಅವರ ಸೌಜನ್ಯದಿಂದ ಇದು ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ.

ಮೇಲೆ ನೆನೆಸಿಕೊಂಡ ಎಲ್ಲ ಹಿರಿಯರಿಗೂ ಹಿತೈಷಿಗಳಿಗೂ ನನ್ನ ಕೃತಜ್ಞತಾ ಪೂರ್ವಕ ವಂದನಗಳನ್ನರ್ಪಿಸುತ್ತಿದ್ದೇನೆ.

ಈ ಕಾದಂಬರಿಯನ್ನು ಪ್ರಕಟಿಸಲು ನೆರವಾದ ಪ್ರಸಿದ್ಧ ಸಾಹಿತಿಗಳೂ, ಮಿತ್ರರೂ ಆದ ಶ್ರೀ ಟಿ. ಜಿ. ಅಶ್ವತ್ಥನಾರಾಯಣ ಅವರಿಗೂ, ತಮ್ಮ ಅಮೂಲ್ಯವಾದ ಅಭಿಪ್ರಾಯವನ್ನು ಕೊಟ್ಟಿರುವ ಶ್ರೀ ಹೆಚ್. ಎನ್. ಮೂರ್ತಿ ಅವರಿಗೂ, ಪ್ರಕಾಶಕರಿಗೂ, ಮುದ್ರಕರಿಗೂ ನಾನು ಚಿರಋಣಿಯಾಗಿದ್ದೇನೆ.

ಬೆಂಗಳೂರು
15-12-1978

ಲಂಕಾ ಕೃಷ್ಣಮೂರ್ತಿ

# ಕೊಡೆಯ ಗೋಪಾಲ

## ೧

ಶ್ರೀ ರಾಮಚಂದ್ರನು ಸೀತಾ ವಿಯೋಗದಿಂದ ಪರಿತಪಿಸುತ್ತ ಲಕ್ಷ್ಮೀಸ್ವರೂಪಳಾದ ಆಕೆಯನ್ನು ಬಂಧನದಿಂದ ಬಿಡುಗಡೆ ಮಾಡಲು ತೀವ್ರ ನಿಷ್ಠೆಯನ್ನು ಕೈಕೊಂಡ ಪುಣ್ಯ ಪ್ರದೇಶವದು. ಆ ಪುಣ್ಯ ಸಂಕಲ್ಪಕ್ಕೆ ಅತಿಭಕ್ತಿಯಿಂದ ಆತ್ಮಾರ್ಪಣಸ್ವರೂಪವಾದ ನೆರವನ್ನು ನೀಡಿದ ಕಪಿಶ್ರೇಷ್ಠರ ಮತ್ತು ಭಲ್ಲೂಕಶ್ರೇಷ್ಠರ ಮನೋಜ್ಞ ನಿವಾಸವದು. ರಾಕ್ಷಸರ ನಾಶವನ್ನು ಮಾಡಿ ಲಕ್ಷ್ಮಿಯನ್ನುದ್ಧರಿಸಿ ಪರಮಾತ್ಮನಿಗರ್ಪಿಸಲು ಅಂದಿನ ಕಪಿಶ್ರೇಷ್ಠರು ಮಾಡಿದ ಸತ್ಯ ಪ್ರತಿಜ್ಞೆಯು ಅಲ್ಲಿನ ಶಿಲಾ ವೃಕ್ಷ ನದೀ ತಟಾಕಗಳಲ್ಲಿ ಯುಗ ಯುಗಾಂತರಗಳವರೆಗೂ ಪ್ರತಿಧ್ವನಿತವಾಗುತ್ತಿರುವುದು. ಕಿಷ್ಕಿಂಧಾ ದೇಶವನ್ನೂ ಕುಂತಲ ದೇಶವನ್ನೂ ಒಳಗೊಂಡ ಈ ಪ್ರದೇಶವು ಹನುಮಂತ, ಚಂದ್ರಹಾಸ, ಮಯೂರಧ್ವಜ ಮುಂತಾದ ಪೌರಾಣಿಕಧೀರರನ್ನೂ, ಶ್ರೀ ಕೃಷ್ಣದೇವರಾಯ, ತಿಮ್ಮರಸು ಮುಂತಾದ ಚಾರಿತ್ರಿಕ ಪುರುಷರನ್ನೂ ಲೋಕಕ್ಕೆ ಕೊಟ್ಟು ಜಗದ್ವಿಖ್ಯಾತವಾಗಿದೆ. ಈ ಪ್ರದೇಶವೇ ಕರ್ನಾಟಕ ದೇಶದ ಕೇಂದ್ರವಾಗಿ ತೆಲುಗು ಮತ್ತು ಕನ್ನಡ ಮಾತಿನವರ ರಮ್ಯ ಸಂಗಮವಾಗಿ ವಿರಾಜಿಸುತ್ತಿದೆ.

ಈ ಪ್ರದೇಶಕ್ಕೆ ಒಳಪಟ್ಟು, ಮೇಲೆ ವರ್ಣಿಸಿದ ಪೌರಾಣಿಕ ಮತ್ತು ಐತಿಹಾಸಿಕ ಕೀರ್ತಿ ಕಿರೀಟವನ್ನು ಧರಿಸಿ ವೀರ ಪುರುಷನಂತೆ, ನಿಶ್ಚಲ ಯೋಗಿಯಂತೆ, ಅಕ್ಷಯ ಬಲಶಾಲಿಯಂತೆ, ಚಿರಂಜೀವಿಯಂತೆ, ಮೌನಿಯಂತೆ ಘನಗಿರಿಯು ವಿರಾಜಿಸುತ್ತಿರುವುದು. ನಾನಾ ವಿಧವಾದ ವೃಕ್ಷಗಳಿಂದಲೂ, ಬಳ್ಳಿಗಳಿಂದಲೂ, ಪೊದರು ಮೆಳೆಗಳಿಂದಲೂ ಅಲಂಕೃತವಾದ ಈ ಉತ್ತುಂಗ ಪರ್ವತದ ಮೈಯಲ್ಲಿ ಬೃಹತ್ ಪ್ರಮಾಣದ ಶಿಲೆಗಳು ಬಲಿಷ್ಠನ ಮೈಯಲ್ಲಿನ ಮಾಂಸಖಂಡಗಳಂತೆ ನಡುವೆ ನಡುವೆ ಕಾಣಿಸುತ್ತಿರುವುವು. ಮೆಟ್ಟಿಲುಗಳ ಪಂಕ್ತಿಗಳು ವೀರಪುರುಷನು ಧರಿಸಿರುವ ಹವಳದ ಸರಗಳಂತೆ ಹಬ್ಬಿದ ಗಿಡ ಮರಗಳ ನಡುವೆ ಅಲ್ಲಲ್ಲಿ ಕಾಣಿಸುತ್ತಿರುವುವು. ಈ ಮೆಟ್ಟಿಲುಗಳ ನಡುವೆ ಅಲ್ಲಲ್ಲಿ ಕಾಣುವ ಮಂಟಪಗಳೂ, ದ್ವಾರಗಳೂ, ಗೋಪುರಗಳೂ, ಸರಗಳ ನಡುವೆ ಪೋಣಿಸಿರುವ ವಿವಿಧಾಕಾರದ ಮಣಿಗಳ ಗೊಂಚಲುಗಳಂತಿವೆ. ಈ ಪರ್ವತದಲ್ಲಿನ ದೇವಸ್ಥಾನಗಳು ಭಕ್ತನು ಧರಿಸಿರುವ ಭಗವಂತನ ವಿವಿಧ ಮುದ್ರೆಗಳಂತಿವೆ.

ಇಂಥ ಘನಗಿರಿಯ ತಪ್ಪಲಿನಲ್ಲಿ ವಿಶಾಲವೂ ಸಂಪದ್ಭರಿತವೂ ಆದ ಪಟ್ಟಣವೊಂದು ನೆಲೆಸಿತ್ತು. ಈ ಪಟ್ಟಣವನ್ನು ಘನಗಿರಿ ಪಟ್ಟಣವೆಂದೂ ತೆಲುಗಿನಲ್ಲಿ 'ಪೆನುಗೊಂಡ' ಎಂದೂ ಕರೆಯುತ್ತಿದ್ದರು. ವಿಜಯನಗರದ ಸಾಮ್ರಾಟರು ಬೇಸಿಗೆಯಲ್ಲಿ ಈ ಪಟ್ಟಣಕ್ಕೆ ಬಂದು ತಂಗುತ್ತಿದ್ದರು. ಪರ್ವತದ ಅಡಿಯಲ್ಲಿ ನಿರ್ಮಿತವಾದ 'ಗಗನ ಮಹಲು' ಎಂಬ ಸುಂದರ ಭವನವೇ ಅವರ ಗ್ರೀಷ್ಮ ನಿವಾಸವಾಗಿತ್ತು. ಬೆಟ್ಟದ ನೆರವು ನೆರಳುಗಳಿಂದಲೂ ಸುತ್ತಲೂ ಬೆಳೆಸಿದ ಪುಷ್ಪಫಲಭರಿತಗಳಾದ ಉದ್ಯಾನವನಗಳಿಂದಲೂ ಅವುಗಳಲ್ಲಿನ ಪಕ್ಷಿಗಳ ಕಲಕಲರವದಿಂದಲೂ, ಸಮೀಪದಲ್ಲಿರುವ ಕೆರೆಯ ನೀರಿನ ತಂಪಿನಿಂದಲೂ ವಿಜಯನಗರ ಸಮ್ರಾಟರಿಗೆ ಗ್ರೀಷ್ಮವು ವಸಂತವಾಗಿಯೇ ಕಳೆಯುತ್ತಿತ್ತು.

ವಿಜಯನಗರದ ಕಾಲಕ್ಕೆ ಹಿಂದೆ ಗಗನಮಹಲೇ ಸ್ಥಳೀಯ ಅರಸನ ಅರಮನೆಯಾಗಿತ್ತು. ಅದರ ಸುತ್ತಲೂ ಉದ್ಯಾನವನಗಳೂ ಅವುಗಳ ನಡುವೆ ಅಲ್ಲಲ್ಲಿ ದೇವಸ್ಥಾನಗಳೂ ಇದ್ದವು. ಉದ್ಯಾನಗಳಿಗೆ ಪೂರ್ವೋತ್ತರ ದಿಕ್ಕುಗಳಲ್ಲಿ ಅರಸು ಬಂಧುಗಳ ಸೌಧಗಳೂ, ಕೋಶಾಗಾರವೂ, ಸೈನ್ಯಾಗಾರಗಳೂ,

ಮಂತ್ರಿಗಳು, ಸೈನ್ಯಾಧಿಪತಿ, ದಂಡನಾಯಕರು ಮುಂತಾದವರ ಗೃಹಗಳೂ, ಪರಿಚಾರಕರ ಕೇರಿಗಳೂ, ಇವುಗಳ ಸುತ್ತಲೂ ಬಲಿಷ್ಠವಾದ ಕಲ್ಲು ಕೋಟೆಯೂ ಇದ್ದವು. ಕೋಟೆಯು ಅಂತಃಪುರಾದಿಗಳನ್ನು ಉತ್ತರ, ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಸುತ್ತಿಕೊಂಡು ಪಶ್ಚಿಮದಲ್ಲಿರುವ ಬೆಟ್ಟದ ಮೇಲೆ ಹರಡಿತ್ತು. ದಕ್ಷಿಣ ದಿಕ್ಕಿನಿಂದ ಬೆಟ್ಟವನ್ನು ಹತ್ತಿದ್ದ ಕೋಟೆಯು ಉತ್ತರ ದಿಕ್ಕಿನಿಂದ ಬೆಟ್ಟವನ್ನು ಹತ್ತಿದ್ದ ಕೋಟೆಯನ್ನು ಬೆಟ್ಟದ ಶಿಖರದಿಂದಾಚೆ ಸೇರಿಕೊಂಡಿತ್ತು. ಈ ಕೋಟೆಯಲ್ಲಿ ಪೂರ್ವ ದಿಕ್ಕಿನಲ್ಲೊಂದೂ, ದಕ್ಷಿಣ ದಿಕ್ಕಿನಲ್ಲೊಂದೂ, ಉತ್ತರ ದಿಕ್ಕಿನಲ್ಲೊಂದೂ ಬಾಗಿಲುಗಳಿದ್ದವು. ಪಶ್ಚಿಮ ದಿಕ್ಕಿನಲ್ಲಿ ಬೆಟ್ಟದ ಶಿಖರದಲ್ಲಿ ಕೋಟೆಗೆ ಸೇರಿ 'ಕಿಲ್ಲೆ' ಎಂಬ ಒಂದು ಸೈನಿಕರ ನಿವಾಸವಿತ್ತು. ದಕ್ಷಿಣದ ಕೋಟೆಯ ಬಾಗಿಲಿನ ಪಕ್ಕದಲ್ಲೇ ಪರ್ವತಗಳ ನಡುವೆ ಒಂದು ಕೆರೆ ಇತ್ತು. ಈ ಕೆರೆಯು ತುಂಬಿ ಕೋಡಿ ಹರಿದರೆ ಅದರ ನೀರು ಕೋಟೆಯ ಸುತ್ತಲೂ ಪೂರ್ವ ಮತ್ತು ಉತ್ತರ ದಿಕ್ಕುಗಳಲ್ಲಿ ಅಗೆದಿದ್ದ ಆಳವಾದ ಕಂದಕವನ್ನು ತುಂಬುತ್ತಿತ್ತು. ಕೋಟೆಗೆ ಹೊರಗಡೆ ವಾಯವ್ಯ ದಿಕ್ಕಿನಲ್ಲಿ ಯುದ್ಧ ಭೂಮಿಗಳೂ, ಪೂರ್ವೋತ್ತರ ದಿಕ್ಕುಗಳಲ್ಲಿ ವಿಶಾಲ ಮತ್ತು ಸಂಪದ್ಭರಿತವಾದ ಘನಗಿರಿ ಪಟ್ಟಣವೂ ಇದ್ದವು. ಗಗನ ಮಹಲಿನಿಂದ 'ಕಿಲ್ಲೆ' ಯವರೆಗೂ ಬೆಟ್ಟದ ಮೈಯೊಳಗೆ ಸುರಂಗ ಮಾರ್ಗವಿತ್ತು. ಕೋಟೆಯ ಮೇಲೆ ಶತ್ರುಗಳ ಬರುವಿಕೆಯನ್ನು ಕಾದು ನೋಡುತ್ತಿರುವುದಕ್ಕೆ ಅಲ್ಲಲ್ಲಿ ಬುರುಜುಗಳಿದ್ದವು. ಇವುಗಳಲ್ಲಿ ರಾಮ ಬುರುಜು, ಲಕ್ಷ್ಮಣ ಬುರುಜು ಎಂಬವು ಪ್ರಸಿದ್ಧವಾದವು.

## ೨

ಗಗನ ಮಹಲಿನಲ್ಲಿ ಎರಡನೆಯ ಅಂತಸ್ತಿನಲ್ಲಿ ಒಂದು ಪಡಸಾಲೆ. ಅದರಲ್ಲಿ ಒಂದು ಮೂಲೆಯಲ್ಲಿ ಉಪಯೋಗದಲ್ಲಿಲ್ಲದ ಆಸನಗಳೂ, ಕೋಲುಗಳೂ, ಛತ್ರಗಳೂ, ಚಾಮರಗಳೂ, ಪಾದ ಪೀಠಗಳೂ, ಪಲ್ಲಕ್ಕಿಗಳೂ ಇಡಲ್ಪಟ್ಟಿದ್ದವು. ಅವುಗಳ ಮೇಲೆ ಧೂಳು ತುಂಬಿತ್ತು. ಒಬ್ಬ ಮುದುಕ

ಪರಿಚಾರಕನು ಅವುಗಳನ್ನು ಜರುಗಿಸುತ್ತ 'ಏನನ್ನೋ' ಹುಡುಕುತ್ತಿದ್ದನು. ಧೂಳು ಎದ್ದಾಗ ಅವನು ಸ್ವಲ್ಪ ಕೆಮ್ಮುತ್ತಿದ್ದನು. ಸುತ್ತಲೂ ಇದ್ದ ಉದ್ಯಾನದ ಪಕ್ಷಿಗಳ ಕಲಕಲವಲ್ಲದೆ ಇನ್ನಾವ ಶಬ್ದವೂ ಕೇಳಿ ಬರುತ್ತಿರಲಿಲ್ಲ. ವಿಜಯನಗರ ರಾಜ್ಯ ಉದಯಿಸುವುದಕ್ಕಿಂತಲೂ ಹಿಂದಿನ ಕಾಲವದು. ಅಗ ಗಗನ ಮಹಲೇ ಸ್ಥಳೀಯ ರಾಜನ ಅರಮನೆಯಾಗಿತ್ತು. ರಾಜನು ಸಂಚಾರಕ್ಕೆ ಹೋಗಿದ್ದುದರಿಂದ ಅಂದು ಜನರ ಸಂದಣಿ 'ಏನೂ' ಇರಲಿಲ್ಲ. ಆ ಸಮಯದಲ್ಲಿ ಒಬ್ಬ ಯುವಕನು ಹಠಾತ್ತಾಗಿ ಆ ಪಡಸಾಲೆಯೊಳಕ್ಕೆ ಓಡಿ ಬಂದು ನಾಲ್ಕೂ ಕಡೆ ನೋಡುತ್ತಾ 'ಚಿನ್ನಾ, ಚಿನ್ನಾ' ಎಂದು ಕೂಗಿದನು. ಕೂಡಲೇ ಇನ್ನೊಂದು ಕಡೆಯಿಂದ ಹದಿಮೂರು ವರುಷದ ಬಾಲಿಕೆಯೊಬ್ಬಳು ನಗುತ್ತ ಓಡಿ ಬಂದು ಹೀಗೆ ಹೇಳಿದಳು:

"ಸ್ವಲ್ಪ ಹೊತ್ತು ನಾನು ಜತೆಯಲ್ಲಿಲ್ಲದಿದ್ದಕ್ಕೆ ಗಾಬರಿ ಬಿದ್ದೆಯಾ? ಹೌದು. ರಾಜರ ಅಂತಃ ಪುರ ಅಂದರೆ ಏನು? ಇದೆಲ್ಲಾ ನೀನು ಯಾವತ್ತು ನೋಡಿದ್ದೀಯೆ? ನೋಡಿದೆಯಾ? ಅಂತಃ ಪುರಕ್ಕೆ ಎಲ್ಲಿಂದ ಪ್ರವೇಶ ಮಾಡ ಬೇಕು? ಒಂದು ಅಂತಸ್ತಿನಿಂದ ಇನ್ನೊಂದು ಅಂತಸ್ತಿಗೆ ಯಾವ ಮೆಟ್ಟಿಲಲ್ಲಿ ಹತ್ತಬೇಕು? ಒಂದು ಸಾಲೆಯಿಂದ ಇನ್ನೊಂದು ಸಾಲೆಗೆ ಯಾವ ಬಾಗಿಲಲ್ಲಿ ಹೋಗಬೇಕು? ಯಾವ ಯಾವ ಕೋಣೆಗಳ ಕಡೆ ನೋಡಬಾರದು? ಎಲ್ಲೆಲ್ಲಿ ಹೆಚ್ಚು ಕಾಲ ನಿಲ್ಲಬಹುದು? ಎಲ್ಲಿ ನಿಲ್ಲಬಾರದು? ಇವೆಲ್ಲಾ ರೂಢಿಯಾಗಿರ ಬೇಕು. ತಿಳಿದುಕೊಳ್ಳುವುದಕ್ಕೆ ಗಮನ ಇರಬೇಕು. ಕೇವಲ ಬುದ್ಧಿವಂತ ನಾಗಿ ಮನೆಯಲ್ಲೇ ಇದ್ದು ವಿದ್ಯೆಯನ್ನು ಕಲಿತರೆ ಇವೆಲ್ಲಾ ತಿಳಿಯುವುದಿಲ್ಲ. ಇದಕ್ಕೆಲ್ಲಾ ತಿಳುವಳಿಕೆ ಬೇಕು. ಚಾಲಾಕು ಬೇಕು, ಗಂಡುತನ ಬೇಕು."

"ಸಾಕೇ ಗಂಡುಬೀರೀ, ಹೆಂಗಸಾಗಿ ಹುಟ್ಟಿ ಇಷ್ಟು ಮಾತಾಡಬಾರದು. ಯಾರೂ ಇಲ್ಲವೆಂದು ವಿಜೃಂಭಿಸುತ್ತಿದ್ದೀಯೆ. ನೋಡು, ಆ ಮುದುಕಪ್ಪನಿಗೆ ಎಷ್ಟು ವಯಸ್ಸಾಗಿದೆ. ಆತನು ಏನು ತಿಳಿದುಕೊಂಡಾನು? 'ನಾರ್‍ಯಾ ಲಜ್ಜೈವ ಭೂಷಣಂ' ಎಂದು ಹೇಳಿದ್ದಾನೆ ಕವಿ. ಅಂದರೆ ಹೆಂಗಸಿಗೆ ನಾಚಿಕೆ ಇದ್ದರೇನೆ ಭೂಷಣವೆಂದು. ಇನ್ನೇನು ಸ್ವಲ್ಪ ದಿವಸ ಹೋದರೆ ನಿಮ್ಮ ತಂದೆ ನಿನ್ನನ್ನು ನನಗೇ ಕೊಟ್ಟು ಮದುವೆ ಮಾಡುತ್ತಾನೆ. ಆಮೇಲೂ ನನ್ನಲ್ಲಿ ಹೀಗೆಯೇ ಪ್ರವರ್ತಿಸುತ್ತೀಯಾ?" ಎಂದು ಆ ಯುವಕನು ಹೇಳಿದನು.

"ಬಹಳ ಚೆನ್ನಾಗಿದೆ ರಂಗಯ್ಯ ಭಾವಾ, ಬಹಳ ಚೆನ್ನಾಗಿದೆ. ನನಗೂ ನಿನಗೂ ಮದುವೆ ಆದ ಹಾಗೆ ಮಾತಾಡುತ್ತೀಯೆ. ನಿನ್ನ ಬಂಧುತ್ವ, ಸಿರಿ ಇವನ್ನೆಲ್ಲಾ ನಮ್ಮ ತಂದೆ ಮೆಚ್ಚಿಕೊಂಡಿರುವುದೇನೋ ಸರಿ. ನಮ್ಮ ಅಂತಸ್ತಿಗೆ ನಿನ್ನ ಅಂತಸ್ತೂ ಪರವಾಯಿಲ್ಲ. ನಾನು ಘನಗಿರಿ ರಾಜ್ಯದ ಸೈನ್ಯಾಧಿಪತಿ ವೀರಪ್ಪನ ಒಬ್ಬಳೇ ಮಗಳು. ನೀನು ಕೋಶಾಧಿಪತಿ ರಾಮಪ್ಪನ ಒಬ್ಬನೇ ಮಗ. ಸೈನ್ಯಾಧಿಪತಿಯ ಅಂತಸ್ತು ಕೋಶಾಧಿಪತಿಗಿಂತಲೂ ಸ್ವಲ್ಪ ಮೇಲೇನೇ." ಎಂದು ಅವಳು ಹೇಳಿ ಪಕ್ಕಕ್ಕೆ ತಿರುಗಿ "ಹೌದೋ ಅಲ್ಲವೋ ಮುದುಕಪ್ಪಾ, ನೀನೇ ಹೇಳು" ಎಂದಳು.

ಮುದುಕ ಪರಿಚಾರಕನು ಚಿನ್ನಕ್ಕನ ಗಟ್ಟಿಧ್ವನಿಯನ್ನು ಕೇಳಿ ಮೆಲ್ಲನೆ ಎದ್ದು ಅವರ ಹತ್ತಿರಕ್ಕೆ ಬಂದನು.

ಚಿನ್ನಕ್ಕ—"ನಿನ್ನ ಈ ರೂಪ, ನಿನ್ನ ಈ ಬಲಹೀನ ಶರೀರ, ನೋಡಿದರೆ ನಮ್ಮ ತಂದೆ ನನ್ನನ್ನು ನಿನಗೆ ಕೊಡುವುದಕ್ಕೆ ಖಂಡಿತವಾಗಿಯೂ ಒಪ್ಪುವುದಿಲ್ಲ."

ಮುದುಕ—"ಯಾರಮ್ಮಾ ನೀನು ? ಏನು ಕರೆದೆ?"

ರಂಗಯ್ಯ—"ಅವಳು ಗಂಡಸಾಗಿ ಹುಟ್ಟಬೇಕಾಗಿತ್ತು ಮುದುಕಪ್ಪಾ. ಹೇಗೋ ಆ ಬ್ರಹ್ಮ ದೇವನು ಹೆಣ್ಣು ಜನ್ಮ ಕೊಟ್ಟಿದ್ದಾನೆ. ಅವಳ ಮಾತು ಕಟ್ಟಿಕೊಂಡು ನಿನಗೇನು? ಬಾಯಿಗೆ ಬಂದ ಹಾಗೆ ಮಾತಾಡುತ್ತಾಳೆ. ನೀನು ಏನೋ ಹುಡುಕುತ್ತಾ ಇದ್ದೀಯಲ್ಲಾ ಹುಡುಕಿಕೋ ಹೋಗು."

ಮುದುಕ—"ಹುಡುಕುತ್ತಾ ಇದ್ದೇನೆ, ನನಗೆ ಪ್ರಿಯವಾದ ಒಂದು ವಸ್ತುವನ್ನು. ಕಣ್ಣು ಸರಿಯಾಗಿ ಕಾಣುವುದಿಲ್ಲ. ಸಾಮಾನುಗಳನ್ನು ಎತ್ತುವುದಕ್ಕೆ ಶಕ್ತಿಯಿಲ್ಲ. ನೀವಾದರೂ ಸ್ವಲ್ಪ ಸಹಾಯ ಮಾಡಿ."

ಚಿನ್ನಕ್ಕ—"ಏನಪ್ಪಾ ಅಷ್ಟು ಪ್ರಿಯವಾದ ವಸ್ತು? ಏನು ಚಿನ್ನಾನೋ, ಬೆಳ್ಳೀನೋ? ಏನು ಬಿದ್ದಿದೆ?."

ಮುದುಕ—"ಬೆಳ್ಳಿ, ಚಿನ್ನಾ ಯಾರಿಗೆ ಬೇಕು ತಾಯೀ. ನಮ್ಮವನಿಗೊಬ್ಬನಿಗೆ ಕೆಲಸ ಹುಡುಕುತ್ತಾ ಇದ್ದೇನೆ. ಕೆಲಸವಿದ್ದರೆ ಬಾಳೆಲ್ಲಾ ನಿಶ್ಚಿಂತೆಯಾಗಿ ತೃಪ್ತಿಯಾಗಿ ಧರ್ಮದಿಂದ ಕಳೆಯಬಹುದು. ನೀವಿಬ್ಬರೂ ಸ್ವಲ್ಪ ಸಹಾಯ ಮಾಡಿ."

ರಂಗಯ್ಯ—"ಭಲೇ ಮುದುಕಪ್ಪಾ, ನೀನು ಶಾಸ್ತ್ರಗಳನ್ನು ಓದಿದ್ದೀಯಾ?

ಧರ್ಮವಾದ ಜೀವನಕ್ಕೆ ಕರ್ಮವೇ ಆಧಾರವೆಂದೆ. ಆದರೆ ವಯಸ್ಸಾಗಿ ಅವನು ಮರುಳಾದ ಹಾಗೆ ಕಾಣುತ್ತೀಯೆ. ಈ ಹಳೆಯ ಸಾಮಾನುಗಳಲ್ಲಿ ಬಿದ್ದಿರುವುದಕ್ಕೆ ಕೆಲಸವೆಂಬರೆ ಏನು ಒಂದು ಹಾಳು ಕೊಡೆಯೇ?"

ಚಿನ್ನಕ್ಕ—"ಎಂತಹ ಗಂಡಸು ಭಾವಾ ನೀನು? ಮುದುಕನೊಡನೆ ವಾದಾ ಮಾಡುತ್ತೀಯೇ ಹೊರತು ಸೊಂಟ ಬಗ್ಗಿಸಿ ಆತನಿಗೆ ಸಹಾಯ ಮಾಡಬೇಕೆಂದು ನೀನು ಮುಂದೆ ಬರುತ್ತಾ ಇಲ್ಲವಲ್ಲಾ."

ಮುದುಕ—"ಹೌದಪ್ಪಾ. ನಾನು ಹುಡುಕುತ್ತಿರುವುದು ಒಂದು ಕೊಡೆಯನ್ನೇ. ಹಳೆಯ ಕೊಡೆಯನ್ನು, ಹಾಳು ಕೊಡೆಯನ್ನಲ್ಲ. ನಿನ್ನ ಪಾಲಿಗೆ ಹಾಳು ಕೊಡೆಯಾದರೂ ನಮ್ಮ ಗೋಪಾಲನಿಗೆ ಆ ಹಳೆಯ ಕೊಡೆಯೇ ಮೇಲು ಕೊಡೆ. ಅದೇ ಅವನಿಗೆ ಕೆಲಸ, ಅದೇ ಅವನಿಗೆ ಜೀವನಾಧಾರ. ಅವನು ಬಂದಿದ್ದರೆ ನೀನೂ ನಾನೂ ಮಾತಾಡುವಷ್ಟರೊಳಗೆ ಈ ಸಾಮಾನನ್ನೆಲ್ಲಾ ಈಚೆಗೆ ಳೆದು ಆ ಕೊಡೆಯನ್ನು ತೆಗೆದು ಕೊಡುತ್ತಿದ್ದ. ಅವನ ಶಕ್ತಿ ಎಂದರೆ, ಯಾರಿಗಿದೆ ಅಂತಹ ಶಕ್ತಿ? ನಮ್ಮ ನಾಡಿನಲ್ಲೇ ಯಾರಿಗೂ ಇಲ್ಲ. ಸೈನಿಕರಂತೆ, ಸೈನ್ಯಾಧಿಪತಿಗಳಂತೆ, ಸಂಬಳ ತೆಗೆದುಕೊಳ್ಳುತ್ತಾರೆ, ಕಸರತ್ತು ಮಾಡುತ್ತಾರೆ. ಅವರದ್ದೆಲ್ಲಾ ಸಾಧಾರಣ ಶಕ್ತಿ. ನಮ್ಮ ಗೋಪಾಲನ ಶಕ್ತಿ ಅಸಾಧಾರಣವಾದದ್ದು. ಅವನ ತಂದೆ ಸೀನಪ್ಪ ತೀರಿಕೊಂಡು ಹದಿನೆಂಟು ವರುಷಗಳಾದವು. ಇವನು ಆಗ ಇನ್ನೂ ಚಿಕ್ಕ ಹುಡುಗ. ಸೀನಪ್ಪ ರಾಜನಿಗೆ ಕೊಡೆ ಹಿಡಿಯುವ ಕೆಲಸ ಮಾಡುತ್ತಾ ಇದ್ದ. ಅವನಿಗೆ ಆ ಕೆಲಸಕ್ಕಾಗಿ ರಾಜರು ಮಾನ್ಯವನ್ನು ಕೊಟ್ಟಿದ್ದಾರೆ. ಅದೇ ಅವನ ಕುಟುಂಬಕ್ಕೆ ಜೀವನಾಧಾರ. ಆತನ ಹೆಂಡತಿ ರಾಮಕ್ಕ ಗೋಪಾಲನನ್ನು ಹೇಗೋ ಕಷ್ಟಪಟ್ಟು ಬೆಳೆಸಿದ್ದಾಳೆ. ಅವನಿಗೆ ಈಗ ಇಪ್ಪತ್ತು ವರುಷ ಇನ್ನು ಸ್ವಲ್ಪ ದಿವಸಕ್ಕೆ ತುಂಬುತ್ತದೆ. ತಕ್ಷಣ ಅವನು ತನ್ನ ವಂಶದ ಕೆಲಸಕ್ಕೆ ಅಂತಃಪುರದಲ್ಲಿ ಬಂದು ಸೇರಬೇಕು. ಸೇರದಿದ್ದರೆ ಅವನ ಮಾನ್ಯವನ್ನು ರಾಜರು ಕಿತ್ತುಕೊಳ್ಳುತ್ತಾರೆ. ಅವನು ಅಷ್ಟು ಶಕ್ತಿವಂತನಾದರೂ ಅವನನ್ನು ಸೈನ್ಯಕ್ಕೆ ಸೇರಿಸುವುದಕ್ಕೆ ರಾಮಕ್ಕ ಒಪ್ಪುವುದಿಲ್ಲ. ವಂಶವೃತ್ತಿಯನ್ನು ಬಿಡಬಾರದೆಂದು ಅವಳ ಧ್ಯೇಯ. ನಾನೂ ಅದನ್ನು ಒಪ್ಪುತ್ತೇನೆ. ಅವನಿಗಾಗಿ ಅವನ ತಂದೆಯ ಕೊಡೆಯನ್ನು ಇಲ್ಲಿ ಹುಡುಕುತ್ತಾ ಇದ್ದೇನೆ."

ಚಿನ್ನಕ್ಕ—"ಗೋಪಾಲನು ಅಷ್ಟು ಶಕ್ತಿವಂತನೇ? ಸೈನ್ಯಾಧಿಪತಿಗಳ ಹೆಸರು ಹೇಳುತ್ತೀಯಲ್ಲಾ ಮುದುಕಪ್ಪಾ, ನಾನು ಯಾರೆಂದು ತಿಳಿದುಕೊಂಡೆ? ನಾನು ಸೈನ್ಯಾಧಿಪತಿ ವೀರಪ್ಪನ ಮಗಳು. ವೀರಪ್ಪ ನಿನಗೆ ಗೊತ್ತಿಲ್ಲವಾ? ಅವರು ಮೊದಲು ಸಾಮಾನ್ಯ ಸೈನಿಕರಾಗಿದ್ದು ತಮ್ಮ ಶಕ್ತಿಯಿಂದ ಪ್ರಭುಗಳ ಮೆಚ್ಚಿಗೆ ಪಡೆದು ಸೈನ್ಯಾಧಿಪತಿಗಳಾದರು. ಅಂತಹ ಸೈನ್ಯಾಧಿಪತಿಗಳೆಲ್ಲಿ? ಒಡ ಹುಡುಗ ಗೋಪಾಲನೆಲ್ಲಿ ? ಏನು ಅಂತಹ ಶಕ್ತಿ ಅವನದು ? ಬಾಯಿಗೆ ಬಂದ ಹಾಗೆ ಮಾತನಾಡುತ್ತಿದ್ದೀಯೆ."

ಮುದುಕ—"ಕೋಪ ಮಾಡಿಕೋ ಬೇಡ ತಾಯೀ, ನಾನು ಇಷ್ಟು ಹೊತ್ತಿಗೆ ಒಂದು ಎಂಭತ್ತು ಉಗಾದಿಗಳನ್ನಾದರೂ ನೋಡಿದ್ದೇನೆ. ನನಗೆ ಗೊತ್ತಿಲ್ಲವೇ ಸೈನ್ಯಾಧಿಪತಿ ವೀರಪ್ಪ? ಅದೃಷ್ಟ ಶಾಲಿ. ನೀನು ಆತನ ಮಗಳೇ? ಸಾಕು ಮಗಳಲ್ಲವೇ ನೀನು ? ನಿನ್ನನ್ನು ಎಲ್ಲರೂ ಕೆರೆಯುವುದು ಭಾಗ್ಯಲಕ್ಷ್ಮೀ ಎಂದಲ್ಲವೇ?"

ಚಿನ್ನಕ್ಕ—"ಹೌದು. ಇದೇನಾಶ್ಚರ್ಯ ! ಈ ವಿಷಯ ನಿನಗೆ ಹೇಗೆ ಗೊತ್ತು ?"

ಮುದುಕ—"ನನಗೆಲ್ಲಾ ಗೊತ್ತಿದೆಯಮ್ಮಾ. ನಾನೂ ನಿಮ್ಮ ತಂದೆ ವೀರಪ್ಪನೂ, ಗೋಪಾಲನ ತಂದೆ ಸೀನಪ್ಪನೂ, ಈಗ ಕೋಶಾಧಿಕಾರಿ ಆಗಿದ್ದಾನಲ್ಲಾ ಆ ರಾಮಪ್ಪನೂ, ನಾವೆಲ್ಲರೂ ಒಬ್ಬರಿಗೊಬ್ಬರು ನೆಂಟರೇ."

ರಂಗಯ್ಯ—"ನಾನೇ ರಾಮಪ್ಪನ ಮಗ ರಂಗಯ್ಯ."

ಮುದುಕ—"ನನಗೆಲ್ಲಾ ಗೊತ್ತಪ್ಪಾ. ಅಲ್ಲಿ ಯಾರು ಬರುತ್ತಿರುವುದು?"

ಅಷ್ಟರೊಳಗೆ ಗೋಪಾಲನು ಅಲ್ಲಿಗೆ ಬಂದನು.

ಗೋಪಾಲನು ದೂರದಿಂದಲೇ— "ನಾನು ತಾತಾ, ಗೋಪಾಲ." ಮುದಕನು "ಬಂದೆಯಾ ಗೋಪಾಲಾ" ಎಂದು ಗೋಪಾಲನನ್ನು ಕೈ ಹಿಡಿದು ಹತ್ತಿರಕ್ಕೆ ಎಳೆದುಕೊಂಡನು.

ಗೋಪಾಲನು ಇಪ್ಪತ್ತು ವರುಷದ ಯುವಕ. ಸ್ಫುರದ್ರೂಪಿ. ತಕ್ಕಮಟ್ಟಿಗೆ ಎತ್ತರವಾದ ಆಕಾರ. ಮುಖದಲ್ಲಿ ತೇಜಸ್ಸು ತುಳುಕುತ್ತಿತ್ತು. ಅದು ಗಾಂಭೀರ್ಯ, ಸಹಿಷ್ಣುತೆ, ಪ್ರಶಾಂತತೆ, ಸ್ಥೈರ್ಯ, ಧೈರ್ಯ ಇವುಗಳಿಂದ ತುಂಬಿತ್ತು. ಕ್ಲಿಷ್ಟವಾಗಿಯೂ, ಪುಷ್ಟವಾಗಿಯೂ, ಸ್ಪಷ್ಟವಾಗಿಯೂ ಕಾಣುತ್ತಿರುವ ಸ್ನಾಯುಗಳು

ಆತನದೇಹಶಕ್ತಿಯನ್ನು ಸೂಚಿಸುತ್ತಿದ್ದವು. ಆತನು ಸಾಮಾನ್ಯ ಬಡತನದ ಉಡುಪುಗಳನ್ನು ಧರಿಸಿದ್ದನು. ಆದರೂ ತನ್ನ ನೈಜವಾದ ತೇಜಸ್ಸಿನಿಂದ ಆತನು ಸಿರಿವಂತಿಕೆಯ ಉಡುಪುಗಳನ್ನು ಧರಿಸಿದ್ದ ರಂಗಯ್ಯ ಮತ್ತು ಭಾಗ್ಯಲಕ್ಷ್ಮಿಗಳಿಗಿಂತಲೂ ಹೆಚ್ಚು ಪ್ರಕಾಶಮಾನನಾಗಿದ್ದನು.

ಭಾಗ್ಯಲಕ್ಷ್ಮಿಯು ಗೋಪಾಲನನ್ನು ಆಪಾದಮಸ್ತಕ ಕುತೂಹಲದಿಂದಲೂ, ಮೆಚ್ಚುಗೆಯಿಂದಲೂ ನೋಡಿ, ಆತನ ಶಕ್ತಿ ಸೌಂದರ್ಯಗಳಿಂದಲೂ ಧೈರ್ಯ ಸ್ಥೈರ್ಯಗಳಿಂದಲೂ ವಿಸ್ಮಿತಳಾದಳು.

ಮುಮುಕ— "ಇವನೇ ನಮ್ಮ ಗೋಪಾಲ. ಇವನ ತಂದೆ ಶೀನಪ್ಪನೂ (ಭಾಗ್ಯಲಕ್ಷ್ಮಿಯನ್ನು ಕುರಿತು) ನಿನ್ನ ತಂದೆ ವೀರಪ್ಪನೂ (ರಂಗಯ್ಯನನ್ನು ಕುರಿತು) ನಿನ್ನ ತಂದೆ ರಾಮಪ್ಪನೂ, ನಾನೂ, ನಾವೆಲ್ಲಾ ನೆಂಟರೆಂದು ಆಗಲೇ ಹೇಳಿದೆನಲ್ಲಾ. ಇಷ್ಟೇ ಅಲ್ಲ. ಇನ್ನೊಬ್ಬ ಶಂಕರಪ್ಪನೂ ಇದ್ದನು. ಆತನೂ ನಮ್ಮ ನೆಂಟನೇ. ಭಾಗ್ಯಲಕ್ಷ್ಮಮ್ಮಾ, ನೀನು ಆ ಶಂಕರಪ್ಪನ ಮಗಳು. ನಿನ್ನ ತಾಯಿಯ ಹೆಸರು ಗಂಗಮ್ಮ. ಗಂಗಮ್ಮನಿಗೆ ಇಬ್ಬರು ಹೆಣ್ಣು ಮಕ್ಕಳು ಅವಳಿ ಜವಳಿಯಾಗಿ ಹುಟ್ಟಿದರು. ನೀನೊಬ್ಬಳು, ಕಮಲಮ್ಮ ಮತ್ತೊಬ್ಬಳು. ಆದರೆ ಗಂಗಮ್ಮನು ನಿಮ್ಮನ್ನು ಹೆತ್ತ ಕೂಡಲೇ ತೀರಿಕೊಂಡಳು. ಶಂಕರಪ್ಪನು ನಿಮ್ಮನ್ನು ಸಾಕಲಾರದೆ ಯೋಚಿಸುತ್ತಿದ್ದನು. ಆಗ ನೆಂಟರೆಲ್ಲಾ ಸೇರಿ ಒಂದು ಏರ್ಪಾಡು ಮಾಡಿದೆವು. ನಿನ್ನನ್ನು ವೀರಪ್ಪನ ಪಾಲಿಗೆ ಕೊಟ್ಟೆವು. ವೀರಪ್ಪನಿಗೆ ಮಕ್ಕಳಿರಲಿಲ್ಲ. ಇನ್ನೊಬ್ಬಳನ್ನು ಈ ಗೋಪಾಲನ ತಾಯಿ ರಾಮಕ್ಕನ ವಶಕ್ಕೆ ಕೊಟ್ಟೆವು. ಆಗ ವೀರಪ್ಪ ಸಾಮಾನ್ಯ ಸೈನಿಕನಾಗಿದ್ದ. ನಿನ್ನನ್ನು ಮನೆಗೆ ತೆಗೆದುಕೊಂಡು ಹೋಗಿ ಆತನು ನಿನಗೆ 'ಚಿನ್ನಕ್ಕ' ಎಂದು ಹೆಸರಿಟ್ಟನು. ರಾಮಕ್ಕ ಇನ್ನೊಬ್ಬಳಿಗೆ 'ಕಮಲಮ್ಮ' ಎಂದು ಹೆಸರಿಟ್ಟು ಸಾಕಿದಳು. ಸ್ವಲ್ಪ ಕಾಲಕ್ಕೆ ವೀರಪ್ಪನಿಗೆ ಉದ್ಯೋಗದಲ್ಲಿ ಮೇಲಿನ ಕೆಲಸ ಸಿಕ್ಕಿತು. ಹಾಗೆಯೇ ಮುಂದುವರಿಯುತ್ತಾ ವೀರಪ್ಪನು ಸೈನ್ಯಾಧಿಪತಿಯಾದನು. ಈ ಭಾಗ್ಯವೆಲ್ಲಾ ನೀನು ಮನೆಗೆ ಬಂದ ಮೇಲೆ ಬಂದಿದ್ದುದರಿಂದ ವೀರಪ್ಪನು ನಿನಗೆ 'ಭಾಗ್ಯಲಕ್ಷ್ಮಿ' ಎಂದು ಹೆಸರನ್ನು ಕೊಟ್ಟನು. ರಾಮಕ್ಕ ಕಮಲಮ್ಮನನ್ನು ಏಳೆಂಟು ವರ್ಷ ವಯಸ್ಸಾಗುವವರೆಗೂ ಸಾಕಿ ವರದಪ್ಪಸ್ವಾಮಿಗಳ ಆಶ್ರಮದಲ್ಲಿ ಬಿಟ್ಟಳು. ಅವಳು ಅಲ್ಲೇ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾಳೆ.

ವಿದ್ಯೆಯನ್ನೂ ಕಲಿಯುತ್ತಾ ಇದ್ದಾಳೆ. ವರದಪ್ಪ ಸ್ವಾಮಿಗಳ ಆಶ್ರಮ ಎಲ್ಲಿದೆ ಅಂತ ತಿಳಿದಿದ್ದೀರಿ? ಅಗೋ, ಆ ಪೂರ್ವ ದಿಕ್ಕಿನಲ್ಲಿ ಆ ಗುಡ್ಡಗಳಿವೆಯಲ್ಲಾ, ಅಲ್ಲಿ ಒಂದು ಶಿವನ ದೇವಸ್ಥಾನವಿದೆ. ಅದರಿಂದ ಹಾಗೆಯೇ ಮುಂದಕ್ಕೆ ಹೋದರೆ ಅರ್ಧ ಕೂಗಿನಷ್ಟು ದೂರದಲ್ಲಿ ಒಂದು ಭಾವಿ ಇದೆ. ಅಲ್ಲಿಯೇ ಅವರ ಆಶ್ರಮ. ಗೋಪಾಲಾ, ಇವರನ್ನು ನೋಡು. ಇವರೆಲ್ಲಾ ನಿಮ್ಮ ನೆಂಟರೇ. ರಂಗಯ್ಯಾ, ಸ್ವಲ್ಪ ಸಹಾಯ ಮಾಡುತ್ತೀಯಾ, ಕೊಡೆಯನ್ನು ಹುಡುಕುವುದಕ್ಕೆ?"

ಗೋಪಾಲ—"ಏನು ಸಹಾಯ ಮಾಡಬೇಕು ತಾತಯ್ಯಾ?"

ಮುದುಕ—"ಆಗಲೇ ಹೇಳಿದೆನಲ್ಲಪ್ಪಾ, ಇನ್ನು ಸ್ವಲ್ಪ ದಿವಸಕ್ಕೆ ನಿನಗೆ ಇಪ್ಪತ್ತು ವರ್ಷ ತುಂಬುತ್ತೆಂದು. ಅದಾದ ಕೂಡಲೇ ನೀನು ನಿಮ್ಮ ತಂದೆ ಹಿಡಿಯುತ್ತಿದ್ದ ಕೊಡೆಯನ್ನು ಸಿದ್ಧವಾಗಿಟ್ಟುಕೊಂಡು ಕೆಲಸಕ್ಕೆ ಸೇರಬೇಕು ಎಂದು ಹೇಳಿದೆನಲ್ಲಾ ಆ ಕೊಡೆಯನ್ನೇ ಇಲ್ಲಿ ಹುಡುಕುತ್ತಿದ್ದೇನೆ. ಎಲ್ಲೋ ಕೆಳಗೆ ಬಿದ್ದಿರಬೇಕು"

ಗೋಪಾಲ—"ನಾನು ಹುಡುಕಿ ಕೊಡುತ್ತೇನೆ ಬನ್ನಿ."

ಗೋಪಾಲನು ಹೋಗಿ ಭಾರವಾದ ಹಳೆಯ ಸಿಂಹಾಸನಗಳನ್ನೂ, ಪಲ್ಲಕ್ಕಿಗಳನ್ನೂ, ಇತರ ಸಾಮಾನುಗಳನ್ನೂ ಸುಲಭವಾಗಿ ಈಚೆ ಇಟ್ಟು ಅವನ ತಂದೆ ಹಿಡಿಯುತ್ತಿದ್ದ ಕೊಡೆಯನ್ನು ಹುಡುಕಿ ತೆಗೆದನು. ಮುದುಕನಿಂದ ಅದೇ ತನ್ನ ತಂದೆಯ ಕೊಡೆ ಎಂದು ಸ್ಪಷ್ಟ ಮಾಡಿಸಿಕೊಂಡು, ಸಂತೋಷದಿಂದ ಅದರ ಮೇಲಿನ ಧೂಳು ಕೊಡವಿ, ಅದನ್ನು ಬಿಚ್ಚಿ "ಹೀಗೆ ತಾನೇ ರಾಜರಿಗೆ ಕೊಡೆ ಹಿಡಿಯುವುದು" ಎಂದು ಅದನ್ನು ಹಿಡಿದು ಮುದುಕನಿಗೆ ತೋರಿಸಿದನು.

ಭಾಗ್ಯಲಕ್ಷ್ಮಿ—"ಕೊಡೆ ಎಷ್ಟು ಚೆನ್ನಾಗಿದೆ! ಎಂತಹ ಒಳ್ಳೆಯ ರೇಷ್ಮೆ ಬಟ್ಟೆಗಳಿಂದ ಇದನ್ನು ತಯಾರಿಸಿದ್ದಾರೆ! ಇದರ ಸುತ್ತಲೂ ಮುತ್ತಿನ ಹಾರಗಳನ್ನು ಎಷ್ಟು ಚೆನ್ನಾಗಿ ಜೋಡಿಸಿದ್ದಾರೆ! ಗೋಪಾಲನು ಕೊಡೆಯನ್ನು ಎಷ್ಟು ಚೆನ್ನಾಗಿ ಹಿಡಿದಿದ್ದಾನೆ!"

ರಂಗಯ್ಯ (ಗೋಪಾಲನನ್ನು ಈರ್ಷ್ಯೆಯಿಂದ ನೋಡುತ್ತ ಕುಹಕಿಯಾಗಿ) —"ಏನು ಗೋಪಾಲಾ, ನಮ್ಮ ಭಾಗ್ಯಲಕ್ಷ್ಮಿ ನೀನು ಕೊಡೆ ಹಿಡಿಯುವ ರೀತಿಯನ್ನು ಎಷ್ಟು ಮೆಚ್ಚುತ್ತಿದ್ದಾಳೆ! ಆದರೆ ನೀನು ಬರಿ ಬಯಲಿಗೆ ಕೊಡೆ ಹಿಡಿದು ಏನು ಪ್ರಯೋಜನ? ಇಲ್ಲಿ ರಾಜರೂ ಇಲ್ಲ,

ರಾಣಿಯೂ ಇಲ್ಲ. ಬಯಲಿಗೆ ಕೊಡೆ ಹಿಡಿದು ಏನು ಪ್ರಯೋಜನ?
ಭಾಗ್ಯಲಕ್ಷ್ಮಿ—"ನಾಳೆ ಮಾಡಬೇಕಾಗಿರುವ ಕೆಲಸವನ್ನು ಈ ದಿನ ಅಭ್ಯಾಸ
ಮಾಡುವುದು ಒಳ್ಳೆಯದೇ ಗೋಪಾಲಾ. ನಾಳೆ ನೀನು ರಾಣಿಗೂ ಕೊಡೆ
ಹಿಡಿಯಬೇಕಾಗಿರುವುದು. ಅದನ್ನು ಈಗಲೇ ಸ್ವಲ್ಪ ಅಭ್ಯಾಸಮಾಡಿಕೊಂಡು.
ಆ ಕೊಡೆಯನ್ನು ಇಲ್ಲಿ ತೆಗೆದು ಕೊಂಡು ಬಾ. ನಾನು ರಾಣಿಯ ಹಾಗೆ ಈ
ಕಡೆಯಿಂದ ಆಕಡೆಯವರೆಗೂ ಮಂದಗಮನದಲ್ಲಿ ಠೀವಿಯಿಂದ ನಡೆಯು
ತ್ತೇನೆ. ನೀನು ನನ್ನ ಹಿಂದೆ ಕೊಡೆ ಹಿಡಿದುಕೊಂಡು ಬಂದು ಅಭ್ಯಾಸ
ಮಾಡಿಕೋ."

ಈ ಜಂಭದ ಮಾತುಗಳನ್ನು ಕೇಳಿ ಗೋಪಾಲನು ನಸುನಕ್ಕು ಗಾಂಭೀ
ರ್ಯದಿಂದ ಮೆಲ್ಲಗೆ ಹೇಳಿದನು—"ಅಂತಃಪುರದಲ್ಲಿ ಹಾಗೆ ಮಾಡುವುದು ಸರ್
ಉಚಿತವಲ್ಲ."

ರಂಗಯ್ಯ—(ಈರ್ಷ್ಯೆಯಿಂದ) "ಚೆನ್ನಾ, ನೀನು ನನ್ನ ರಾಣಿಯಾಗು
ವವಳು. ಗೋಪಾಲನು ನಿನಗೆ ಕೊಡೆ ಹಿಡಿಯುವುದು ಅನುಚಿತವಲ್ಲವೇ?
ನಾನೇ ಆ ಕೆಲಸವನ್ನು ನಿನಗಾಗಿ ಮಾಡುತ್ತೇನೆ. ಆ ಮೂಲೆಗೆ ಹೋಗಿ
ರಾಣಿಯಂತೆ ಅಲ್ಲಿ ನಿಂತುಕೋ. ನಾನು ಆ ಕೊಡೆಯನ್ನು ತಂದು ನಿನಗೆ
ಹಿಡಿಯುತ್ತೇನೆ. ಅಲ್ಲಿಂದ ಮುಂದಕ್ಕೆ ನಾವಿಬ್ಬರೂ ನಡೆಯೋಣ."

ಹೀಗೆ ಹೇಳಿ ರಂಗಯ್ಯನು ಕೂಡಲೇ ಗೋಪಾಲನ ಹತ್ತಿರಕ್ಕೆ ಹೋದನು.
ಗೋಪಾಲನು ಕೊಡೆಯನ್ನು ಮುಚ್ಚಿ ಇಳಿಸಿದನು. ರಂಗಯ್ಯನು ಕೊಡೆಯನ್ನು
ತೆಗೆದುಕೊಳ್ಳುವುದಕ್ಕೆ ಹೋದಾಗ ಗೋಪಾಲನು ಅದನ್ನು ಆತನಿಗೆ
ಕೊಡಲಿಲ್ಲ. ರಂಗಯ್ಯನು ಒಳ್ಳೆಯ ಮಾತುಗಳಿಂದ ಗೋಪಾಲನನ್ನು ಕೇಳಿದನು.
ಆದರೂ ಗೋಪಾಲನು ಕೊಡೆಯನ್ನು ಕೊಡಲಿಲ್ಲ. ರಂಗಯ್ಯನು ಮುದುಕ
ನನ್ನು ಕೊಡೆಯನ್ನು ಕೊಡಿಸಬೇಕೆಂದು ಒತ್ತಾಯ ಮಾಡಿದನು. ಮುದುಕನಿಗೆ
ಕೊಡೆಯನ್ನು ಬಿಚ್ಚುವುದು ಈತನಿಗೆ ಬರುವುದಿಲ್ಲ, ಕೊಡೆಯನ್ನು ಎತ್ತಿ
ಹಿಡಿಯುವುದು ಈತನ ಕೈಲಾಗದು, ಸ್ವಲ್ಪ ಕೊಡೆಯನ್ನು ಈತನ ಕೈಗೆ
ಕೊಡಿಸಿ ನೋಡೋಣ ಎನ್ನಿಸಿತು.

ಮುದುಕ—(ಗೋಪಾಲನನ್ನು ಕುರಿತು)
"ಸ್ವಲ್ಪ ಕೊಡು, ನಾನಿದ್ದೇನೆ."

ಗೋಪಾಲನು ರಂಗಯ್ಯನ ಕೈಗೆ ಕೊಡೆಯನ್ನು ಕೊಟ್ಟನು. ಆತನು ಅದನ್ನು ಬಿಚ್ಚಲಾರದೆ ಹೋದನು.

ಮುದುಕ ಹೇಳಿದನು— "ಇದನ್ನು ಎತ್ತಿ ಬಿಚ್ಚುವುದೂ, ಸರಿಯಾಗಿ ಹಿಡಿದುಕೊಳ್ಳುವುದೂ ನಿನ್ನಂತಹ ಬಲಹೀನರಿಗೆ ಸಾಧ್ಯವಾಗದು. ಕೊಡೆಯನ್ನು ನಮ್ಮ ಗೋಪಾಲನಿಗೆ ಕೊಟ್ಟು ಬಿಡು."

ಗೋಪಾಲನು ಕೊಡೆಯನ್ನು ತೆಗೆದುಕೊಂಡನು. ರಂಗಯ್ಯನಿಗೆ ನಾಚಿಕೆಯಾಯಿತು. ಭಾಗ್ಯಲಕ್ಷ್ಮಿಯು ರಂಗಯ್ಯನ ಹತ್ತಿರಕ್ಕೆ ಓಡಿಬಂದು ಹೇಳಿದಳು.

"ರಾಣಿಯ ಸೇವೆಯನ್ನು ಚೆನ್ನಾಗಿ ಮಾಡಿದೆ. ನಿನ್ನಂತಹ ಬಲಹೀನನಿಗೆ ರಾಣಿಯಾದರೆ ಸೈನ್ಯಾಧಿಪತಿಯ ಮಗಳ ಗತಿ ಅಧೋಗತಿಯೇ." ಹೀಗೆಂದು ಅವಳು ಕಿಲ ಕಿಲನೆ ನಕ್ಕು ಬಿಟ್ಟಳು.

## ೩

"ಸದ್ಯೋಜಾತಂ ಪ್ರಪದ್ಯಾಮಿ ಸದ್ಯೋಜಾತಾಯ
ವೈ ನಮೋ ನಮಃ.............................................."
"ಈಶಾನಸ್ಸರ್ವ ವಿದ್ಯಾನಾಂ ಈಶ್ವರಸ್ಸರ್ವ
ಭೂತಾನಾಂ ಬ್ರಹ್ಮಾಧಿಪತಿಃ ಬ್ರಹ್ಮಣೋಧಿಪತಿ
ಬ್ರಹ್ಮಾ ಶಿವೋಮೇ ಅಸ್ತು ಸದಾಶಿವೋಂ...."

ಎಂದು ಪರಮಾತ್ಮ ಭಾವನೆಯಿಂದ ಮೈಯೆಲ್ಲಾ ವಿಭೂತಿಯನ್ನು ವರದಪ್ಪ ಸ್ವಾಮಿಗಳೂ, ಅವರ ಶಿಷ್ಯರೂ ಬಳಿದುಕೊಳ್ಳುತ್ತಿದ್ದರು. ಪಂಚ ಪಂಚ ಉಷಃ ಕಾಲದಲ್ಲಿಯೇ ಎಚ್ಚತ್ತು ಅವರು ಅಷ್ಟು ಹೊತ್ತಿಗೆ ಸ್ನಾನ ಮಾಡಿದ್ದರು. ಪೂರ್ವ ಶೈಲದ ಹಿಂದೆ ಇದ್ದು ಉದಯಿಸಲಿರುವ ಸೂರ್ಯನ ಮುಂಬೆಳಕು ಎಲ್ಲ ಕಡೆಗಳಲ್ಲೂ ವ್ಯಾಪಿಸಿತ್ತು. ಪಟ್ಟಣಕ್ಕೆ ಸ್ವಲ್ಪ ದೂರದಲ್ಲಿದ್ದುದರಿಂದ ಸ್ವಾಮಿಗಳ ಆಶ್ರಮದಲ್ಲಿ ಆ ಹೊತ್ತಿನಲ್ಲಿ ಕೇವಲ ಪಕ್ಷಿಗಳ ಸ್ವಲ್ಪ ಇಂಚರ ಅಲ್ಲಲ್ಲಿ ಕೇಳಿ ಬರುತ್ತಿತ್ತು. ಆ ಪ್ರಶಾಂತ ಸಮಯದಲ್ಲಿ ಬ್ರಹ್ಮಚಾರಿಗಳ

ಹೋಮಾದಿ ಕಾರ್ಯಗಳಿಗೆ ಬೇಕಾದ ಸಾಮಗ್ರಿಗಳನ್ನು ಕಮಲಮ್ಮ ಸಿದ್ಧಪಡಿಸುತ್ತಿದ್ದಳು. ಅವಳು ಇತರ ಶಿಷ್ಯರಂತೆಯೇ ಆಲಸ್ಯವನ್ನು ತೊರೆದು ಮುಂಜಾನೆಯೇ ಎದ್ದು ಆಶ್ರಮವನ್ನು ಗುಡಿಸಿ, ಸಾರಿಸಿ ಆಗಲೇ ರಂಗೋಲಿಯಿಂದ ಅಲಂಕರಿಸಿದ್ದಳು. ಸ್ವಾಮಿಗಳು ಮತ್ತು ಶಿಷ್ಯರು ಸಂಧ್ಯಾವಂದನೆಯನ್ನು ಸಕಾಲಕ್ಕೆ ಮಾಡಿದರು.

ಸೂರ್ಯೋದಯಾನಂತರ ಸ್ವಲ್ಪ ಹೊತ್ತಿಗೆ ಶಿಷ್ಯರು ಅಗ್ನಿ ಕಾರ್ಯವನ್ನು ಮಾಡಿದ ಮೇಲೆ ಸ್ವಾಮಿಗಳು ಅವರಿಗೆ ಸ್ವಲ್ಪ ಹೊತ್ತು ವೇದಪಾಠವನ್ನು ಹೇಳಿಕೊಟ್ಟರು. ಆದಾದ ಮೇಲೆ ಅವರು ಸಾಹಿತ್ಯಪ್ರವಚನವನ್ನು ಪ್ರಾರಂಭಿಸಿದರು.

ಆಗ ಅವರು ಕಮಲಮ್ಮನನ್ನೂ ಶಿಷ್ಯರ ಜೊತೆಗೆ ಕುಳ್ಳಿರಿಸಿ ಅವಳಿಗೂ ಸಾಹಿತ್ಯ ಬೋಧನೆಯನ್ನು ಮಾಡುತ್ತಿದ್ದರು. ಕಮಲಮ್ಮನಿಗೆ ವಿದ್ಯಾಭ್ಯಾಸದಲ್ಲಿ ಆಗಲೇ ಆರೇಳು ವರ್ಷಗಳು ಕಳೆದಿದ್ದವು. ಅವಳು ಇತರ ಶಿಷ್ಯರಿಗೆ ಸಮಾನವಾಗಿ ಸಂಸ್ಕೃತಾಭ್ಯಾಸದಲ್ಲಿ ಮುಂದುವರಿದಿದ್ದಳು. ಅಷ್ಟರೊಳಗೆ ನಗರದಿಂದ ಇನ್ನೂ ಕೆಲವರು ವಿದ್ಯಾರ್ಥಿಗಳು ಆಶ್ರಮಕ್ಕೆ ಬಂದರು. ಆ ದಿನ ಅವರೆಲ್ಲರೂ ತಡವಾಗಿ ಬಂದರು. ಎಲ್ಲರ ಮುಖಗಳಲ್ಲೂ ತಡೆಗಟ್ಟಿದ ದುಃಖವು ಉಕ್ಕಿ ಬರುವುದಕ್ಕೆ ಸಿದ್ಧವಾಗಿ ನಿಂತಂತೆ ಇತ್ತು. ಅವರು ಬಂದ ಕೂಡಲೇ ಅವರಲ್ಲಿ ಸುಮಾರು ಹದಿನೈದು ವರ್ಷ ವಯಸ್ಸಿನ ಒಬ್ಬ ವಿದ್ಯಾರ್ಥಿಯು ದುಃಖಪರವಶನಾಗಿ ಓಡಿ ಬಂದು ಗುರುಗಳ ಪಾದಗಳ ಮೇಲೆ ಬಿದ್ದು ಗೋಳೋ ಎಂದು ಅಳತೊಡಗಿದನು. ಉಳಿದ ವಿದ್ಯಾರ್ಥಿಗಳೆಲ್ಲರೂ ನಿಂತುಕೊಂಡೇ ಅಳತೊಡಗಿದರು. ಗುರುಗಳೂ, ಬ್ರಹ್ಮಚಾರಿಗಳೂ, ಕಮಲಮ್ಮನೂ ವಿಸ್ಮಯದೊಂದಿಗೆ ಸೇರಿದ ದುಃಖದಿಂದ ಕ್ಷಣಮಾತ್ರ ಸ್ತಬ್ಧರಾದರು. ಕಮಲಮ್ಮನು ಗಾಭರಿಯಿಂದ 'ಅಯ್ಯೋ' ಎಂದು ಕಿರುಚಿಕೊಂಡಳು. ಗುರುಗಳು ದುಃಖಾವೇಶವನ್ನು ತಡೆದುಕೊಂಡು, ಆತುರದಿಂದ ಕೇಳಿದರು—"ಏನು, ಕುಮಾರಾ, ಏಕೆ ಹೀಗೆ ದುಃಖಿಸುತ್ತೀಯೆ? ಏನಾಯಿತು ಹೇಳು. ಕುಳಿತುಕೋ, ದುಃಖವನ್ನು ಸ್ವಲ್ಪ ನಿಲ್ಲಿಸಿಕೋ" ಎಂದು ತಮ್ಮ ಪಾದದ ಮೇಲೆ ಬಿದ್ದಿದ್ದ ಕುಮಾರನನ್ನೆಬ್ಬಿಸಿ ಕುಳ್ಳಿರಿಸಿದರು. ಕುಮಾರನಿಗೆ ಮಾತಾಡಲು ಆಗಲಿಲ್ಲ. ಅವನ ಜತೆಯಲ್ಲಿ ಬಂದಿದ್ದ ವಿದ್ಯಾರ್ಥಿಗಳಲ್ಲಿ ಒಬ್ಬನು ಹೇಳಿದನು—"ಗಣಪತಿಗೆ ಕಣ್ಣುಗಳನ್ನು

ಕೀಳಿಸಿಬಿಟ್ಟರು. ಗುರುಗಳೇ, ಎಂತಹ ಅನ್ಯಾಯ! ಏನು ಮಾಡಬೇಕು? ಅಯ್ಯೋ ಇನ್ನೇನು ಗತಿ?"

ಗುರುಗಳು—"ಅಷ್ಟು ಕ್ರೂರ ಶಿಕ್ಷೆಯನ್ನು ವಿಧಿಸಿದರೇ ಅವನಿಗೆ? ಪಾಪ, ಕುಮಾರಾ, ಕಣ್ಣುಗಳಿಗೆ ಚಿಕಿತ್ಸೆಯನ್ನು ಕೂಡಲೇ ಮಾಡಿಸಿದೆಯಲ್ಲಾ?

ಕುಮಾರನು ಗದ್ಗದಕಂಠನಾಗಿ ಬಹು ಪ್ರಯತ್ನದಿಂದ ಹೇಳಿದನು—"ಆ ಭಾಗ್ಯವು ಗಣಪತಿಗೆ ಇಲ್ಲ ಗುರುಗಳೇ. ನಗರದಲ್ಲಿ ಕೀಳಿಸಿರುವ ಕಣ್ಣುಗಳ ಗಾಯಗಳಿಗೆ ತಕ್ಷಣ ಔಷಧಿಯನ್ನು ಹಾಕಿ ಅಪಾಯವಿಲ್ಲದೆ, ನೋವಿಲ್ಲದೆ, ಪ್ರಾಣವನ್ನಾದರೂ ಕಾಪಾಡಬಲ್ಲ ವೈದ್ಯರು ಯಾರಿದ್ದಾರೆ?" ಗುರುಗಳು—"ಹೌದಪ್ಪಾ, ಈಗ ಅಂತಹ ನಿಪುಣರಾದ ವೈದ್ಯರು ನಗರದಲ್ಲೇ ಇಲ್ಲ."

ತುಸು ಹೊತ್ತು ಆಲೋಚಿಸಿ ಗುರುಗಳು ಮತ್ತೆ ಹೀಗೆ ನುಡಿದರು—"ನೀವೆಲ್ಲರೂ ತಕ್ಷಣ ನಗರಕ್ಕೆ ಓಡಿ ಹೋಗಿ ಕುದುರೆಯನ್ನು ಏರ್ಪಾಟು ಮಾಡಿಕೊಂಡು ಇಲ್ಲಿಗೆ ನಾಲ್ಕು ಕ್ರೋಶಗಳ ದೂರದಲ್ಲಿರುವ ಗೋವಿಂದಪುರವೆಂಬ ಹಳ್ಳಿಗೆ ಹೋಗಿ. ಅಲ್ಲಿ ಒಬ್ಬ ವೈದ್ಯನಿದ್ದಾನೆ. ಅವನನ್ನು ತಕ್ಷಣ ಕರೆದುಕೊಂಡು ಬಂದು ಗಣಪತಿಗೆ ಚಿಕಿತ್ಸೆಯನ್ನು ಮಾಡಿಸಿ. ಆ ವೈದ್ಯನ ಹೆಸರು ವೆಂಕಟಸ್ವಾಮಿ. ಅವನು ಬಹಳ ಬುದ್ಧಿವಂತ. ಬಹಳ ಒಳ್ಳೆಯವನು. ಮೊನ್ನೆ ದೇವೀ ನವರಾತ್ರಿಗಳಲ್ಲಿ ಇಲ್ಲಿಗೆ ಆತನೂ ಬಂದಿದ್ದ. ಜಾಗ್ರತೆಯಾಗಿ ಹೊರಡಿ."

ಕೂಡಲೇ ನಗರದಿಂದ ಬಂದಿದ್ದ ವಿದ್ಯಾರ್ಥಿಗಳು ನಗರಕ್ಕೆ ವಾಪಸು ಓಡಿ ಹೋದರು. ಇತ್ತ ಆಶ್ರಮದಲ್ಲಿ ಅಂದಿನ ಪಾಠವು ಮುಂದುವರೆಯಲಿಲ್ಲ. ಗಣಪತಿ ಯಾರು? ಗಣಪತಿಗೆ ಕಣ್ಣುಗಳನ್ನು ಕೀಳಿಸಲು ಕಾರಣವೇನು? ಇದೆಲ್ಲಾ ಅರಿಯದ ಆಶ್ರಮವಾಸಿಗಳಿಗೆ ಗುರುಗಳು ನಿಟ್ಟುಸಿರನ್ನು ಬಿಟ್ಟು ಹೀಗೆ ಹೇಳಲಾರಂಭಿಸಿದರು.

"ಶಿಷ್ಯರೇ, ನಮಗೆಲ್ಲಾ ಪರೀಕ್ಷೆಯ ಕಾಲ ಸಮೀಪಿಸಿದ ಹಾಗೆ ಕಾಣುತ್ತದೆ. ರಾಜ್ಯ ವ್ಯವಹಾರಗಳಲ್ಲಿ ವಿದ್ಯಾರ್ಥಿಗಳು ಆಸಕ್ತಿ ವಹಿಸುವುದು ಕೇಡೆಂದು ನಾನಿದುವರೆಗೂ ನಿಮಗೆ ಇದರ ಹಿನ್ನೆಲೆಯನ್ನು ತಿಳಿಸಿಲ್ಲ. ಈಗಾಗಲೇ ನೀವು ತಕ್ಕಮಟ್ಟಿಗೆ ವಿದ್ಯೆಯನ್ನು ಕಲಿತಿರುವುದಲ್ಲದೆ ವಿವೇಕವನ್ನೂ ಸಂಪಾದಿಸಿದ್ದೀರಿ. ಸಂಯಮವನ್ನು ಅಭ್ಯಾಸ ಮಾಡಿದ್ದೀರಿ. ಆದುದರಿಂದ ನೀವು ಈ ವಿಷಯವನ್ನು ತಿಳಿದುಕೊಂಡು ತಕ್ಕ ರೀತಿಯಲ್ಲಿ ನಡೆದುಕೊಳ್ಳ ಬೇಕಾಗಿರುವುದರಿಂದ

ತಿಳಿಸುತ್ತಿದ್ದೇನೆ. ನೀವು ಈ ವಿಷಯಗಳನ್ನು ತಿಳಿದು ಆವೇಶಪೂರಿತರಾಗುವು ದಿಲ್ಲವೆಂದೂ ಸಂಯಮದಿಂದ ಲೋಕ ಕಲ್ಯಾಣಕ್ಕೆ ನಿಮ್ಮಿಂದಾಗುವ ನೆರವು ನೀಡುವಿರೆಂದೂ ನಂಬಿದ್ದೇನೆ.

"ನಾವಿರುವ ಘನಗಿರಿ" ರಾಜ್ಯಕ್ಕೆ ಈಗಿನ ದೊರೆಗಳು ರುದ್ರಸಿಂಹ ಪ್ರಭುಗಳು. ಇವರ ತಂದೆಯವರು ನರಸಿಂಹ ಪ್ರಭುಗಳು. ಅವರ ತಂದೆಯವರು ಪ್ರತಾಪಸಿಂಹ ಪ್ರಭುಗಳು. ಪ್ರತಾಪಸಿಂಹ ಪ್ರಭುಗಳ ಕಾಲದಲ್ಲಿಯೇ ಈ ಘನಗಿರಿಯ ಕೋಟೆ ನಿರ್ಮಿತವಾಯಿತು. ಆತನ ಕಾಲದಲ್ಲಿಯೇ ಘನಗಿರಿ ಪಟ್ಟಣವು ಬಹಳ ಸಂಪದ್ಭರಿತವಾಗಿ ಇಂದಿನದಕ್ಕಿಂತ ಮೂರರಷ್ಟು ವೈಭವದಿಂದ ಮೆರೆಯುತ್ತಿದ್ದಿತು. ಪ್ರತಾಪ ಸಿಂಹನು ಬಹಳ ಧೈರ್ಯ ಸಾಹಸಗಳಿಂದಲೂ ಯುಕ್ತಿಯಿಂದಲೂ ಕೂಡಿದ್ದು, ಬುದ್ಧಿವಂತರಾದ ಮಂತ್ರಿಗಳ ಸಹಾಯ ದಿಂದಲೂ, ಯೋಗ್ಯನಾದ ಪುರೋಹಿತನ ನೆರವಿನಿಂದಲೂ ಬಹಳ ವಿಜೃಂಭಣೆ ಯಿಂದ ರಾಜ್ಯಪಾಲನೆ ಮಾಡುತ್ತಿದ್ದನು. ಆತನು ಪ್ರಜೆಗಳಲ್ಲಿ ವಿನಯವನ್ನೂ ಐಕ್ಯಮತ್ಯವನ್ನೂ, ವಿವೇಕವನ್ನೂ, ಉತ್ಸಾಹವನ್ನೂ, ದೈವಭಕ್ತಿಯನ್ನೂ ಸಂತೋಷವನ್ನೂ ಅಭಿವೃದ್ಧಿ ಪಡಿಸಲು ಅನೇಕ ವಿದ್ವಾಂಸರಿಗೂ, ಕಲೆಗಾರರಿಗೂ ಪ್ರೋತ್ಸಾಹಕೊಟ್ಟನು. ಸ್ವತಃ ಆತನು ವಿದ್ಯಾವಂತನಾಗಿದ್ದನು. ಆತನ ಕಿರಿಯ ತಂಗಿಯ ಹೆಸರು ವಿಜಯಾಂಬಿಕೆ. ವಿಜಯಾಂಬಿಕೆಯು ಕಾಂಚೀಪುರದಲ್ಲಿ ಲೋಕಪ್ರಸಿದ್ಧನಾದ ಸುಂದರಾಚಾರ್ಯರ ಹತ್ತಿರ ಸಾಹಿತ್ಯವನ್ನು ಕಲಿಯು ತ್ತಿದ್ದಳು.

"ಮೊದಲು ಹೇಮಗಿರಿ ರಾಜ್ಯವೂ ಘನಗಿರಿ ರಾಜ್ಯಕ್ಕೆ ಸೇರಿತ್ತು. ಅಲ್ಲಿನ ಬಲದೇವ ಪ್ರಭುವು ಪ್ರತಾಪ ಸಿಂಹನಿಗೆ ಸಾಮಂತನಾಗಿದ್ದನು. ಆದರೆ ಪ್ರತಾಪ ಸಿಂಹನು ಅಕಾಲ ಮೃತ್ಯುವನ್ನು ಹೊಂದಿದ ಕೂಡಲೇ ಬಲದೇವನು ಸ್ವತಂತ್ರನಾಗಿಬಿಟ್ಟನು. ನರಸಿಂಹ ಪ್ರಭುವು ಆಗ ಇನ್ನೂ ಚಿಕ್ಕ ಹುಡುಗ ನಾಗಿದ್ದುದರಿಂದ ಅವನ ತಾಯಿ ನಾಗಲಾಂಬಿಕೆಯೇ ಮಂತ್ರಿಗಳ ಸಹಾಯ ದಿಂದ ಘನಗಿರಿ ರಾಜ್ಯವನ್ನು ಆಳಿಕೊಡಿಗಿದಳು. ಅವಳು ಸ್ತ್ರೀಯಾಗಿದ್ದುದ ರಿಂದಲೂ ಬಲದೇವನು ಬಹಳ ಪರಾಕ್ರಮಶಾಲಿ ಆಗಿದ್ದುದರಿಂದಲೂ ಸ್ವತಂತ್ರ ನಾದ ಬಲದೇವನ ಮೇಲೆ ಯುದ್ಧ ಮಾಡಿ ಹೇಮಗಿರಿಯನ್ನು ಸಾಮಂತರಾಜ್ಯ ವಾಗಿಯೇ ಉಳಿಸಿಕೊಳ್ಳಲು ನಾಗಲಾಂಬಿಕೆಯು ಪ್ರಯತ್ನಿಸಲಿಲ್ಲ. ಯುದ್ಧ

ಮಾಡದಿರುವುದಕ್ಕೆ ಇದಕ್ಕಿಂತಲೂ ಪ್ರಬಲವಾದ ಮತ್ತೊಂದು ಕಾರಣವೂ ಇತ್ತು.

"ವಿಜಯಾಂಬಿಕೆಯು ಕಾಂಚೀಪುರದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ಬಲದೇವನ ಬಂಧುವರ್ಗದಲ್ಲಿ ಒಬ್ಬನಾದ ಕೃಷ್ಣದೇವನು ಕೂಡ ಅಲ್ಲಿಯೇ ವಿದ್ಯಾಭ್ಯಾಸ ಮಾಡುತ್ತಿದ್ದನು. ಆತನು ಪ್ರಸಿದ್ಧನಾದ ವಿಷ್ಣುತೀರ್ಥನೆಂಬ ಸಂಗೀತ ವಿದ್ವಾಂಸನ ಶಿಷ್ಯನಾಗಿ ಸಂಗೀತವನ್ನು ಕಲಿಯುತ್ತಿದ್ದನು. ಒಮ್ಮೆ ವರದರಾಜ ಸ್ವಾಮಿಗಳ ಉತ್ಸವಗಳಲ್ಲಿಯೂ ಮತ್ತೊಮ್ಮೆ "ಏಕಾಮ್ರನಾಥನ" ಉತ್ಸವಗಳಲ್ಲಿಯೂ ಆತನು ವಿಜಯಾಂಬಿಕೆ ರಚಿಸಿದ್ದ ಗೀತೆಗಳನ್ನು ಹಾಡಿದನು. ಆತನ ಗಾನ ಕಲೆಯು ವಿಜಯಾಂಬಿಕೆಯನ್ನು ಮುಗ್ಧಗೊಳಿಸಿತು. ವಿಜಯಾಂಬಿಕೆಯು ತನ್ನ ಅಣ್ಣನಾದ ಪ್ರತಾಪಸಿಂಹನ ಅನುಮತಿಯನ್ನು ಪಡೆದು ಆತನನ್ನು ವಿವಾಹವಾಗುವೆನೆಂದು ಆತನಿಗೆ ಮಾತು ಕೊಟ್ಟು ಘನಗಿರಿಗೆ ಹಿಂತಿರುಗಿದಳು.

"ಅವಳು ಅಲ್ಲಿಗೆ ವಾಪಸಾಗುವ ವೇಳೆಗೆ ಸರಿಯಾಗಿ ಪ್ರತಾಪಸಿಂಹನು ಮೃತನಾಗಿದ್ದನು. ಘನಗಿರಿಯಲ್ಲಿ ವಿಜಯಾಂಬಿಕೆಯ ನೆಂಟರೆಲ್ಲರೂ, ಸ್ವತಂತ್ರನಾಗಿ ಘನಗಿರಿಗೆ ಶತ್ರುವಾಗಿದ್ದ ಬಲದೇವನ ನೆಂಟನಾದ ಕೃಷ್ಣದೇವನನ್ನು ವಿಜಯಾಂಬಿಕೆಯು ಮದುವೆ ಆಗುವುದನ್ನು ವಿರೋಧಿಸಿದರು. ಆದರೆ ವಿಜಯಾಂಬಿಕೆ ಕೃಷ್ಣದೇವನನ್ನೂ, ಕೃಷ್ಣದೇವನು ವಿಜಯಾಂಬಿಕೆಯನ್ನೂ, ಪರಸ್ಪರ ಪ್ರೇಮಿಸಿದ್ದುದರಿಂದಲೂ, ಕೃಷ್ಣದೇವನು ಕೇವಲ ಸಂಗೀತಕಲೋಪಾಸಕನಾಗಿ ಘನಗಿರಿ ಅರಸುಗಳ ಮೇಲಾಗಲಿ ಇನ್ನಾರಮೇಲಾಗಲಿ ಶತ್ರುತ್ವವಿಲ್ಲದವನಾದ್ದರಿಂದಲೂ, ವಿಜಯಾಂಬಿಕೆಯು ಆತನಿಗೆ ಮಾತು ಕೊಟ್ಟಿದ್ದರಿಂದಲೂ ಅವಳು ಘನಗಿರಿಯಲ್ಲಿನ ನೆಂಟರನ್ನೆಲ್ಲಾ ಬಿಟ್ಟು ಕೆಲವು ಪರಿಚಾರಕರೊಂದಿಗೆ ಹೇಮಗಿರಿಯನ್ನು ಸೇರಿ ಅಲ್ಲಿಯೇ ಕೃಷ್ಣದೇವನನ್ನು ಮದುವೆಯಾಗಿಬಿಟ್ಟಳು. ವಿಜಯಾಂಬಿಕೆಯು ಹೇಮಗಿರಿಯಲ್ಲಿ ಕೆಲವು ಸಂಸ್ಕೃತ ಕಾವ್ಯಗಳನ್ನು ರಚಿಸಿದಳೆಂದು ತಿಳಿದು ಬರುತ್ತದೆ. ಆದರೆ ಅಂದಿನಿಂದ ಘನಗಿರಿಯ ಅರಸುಗಳಿಗೂ ಹೇಮಗಿರಿಯ ಅರಸುಗಳಿಗೂ ಶತ್ರುತ್ವ ಬೆಳೆದು ಬಂದಿದ್ದರಿಂದಲೂ ಎರಡು ಪಟ್ಟಣಗಳಿಗೂ ಹೆಚ್ಚು ದೂರವಿದ್ದಿದ್ದರಿಂದಲೂ ಘನಗಿರಿ ರಾಜ್ಯದಲ್ಲಿ ತೆಲುಗು ಮಾತಾಡುವ ಜನಗಳು ಹೆಚ್ಚಾಗಿದ್ದು ಹೇಮಗಿರಿ ರಾಜ್ಯದಲ್ಲಿ ಕನ್ನಡ

ಮಾತಾಡುವ ಜನರು ಹೆಚ್ಚಾಗಿ ಇದ್ದುದರಿಂದಲೂ ವಿಜಯಾಂಬಿಕೆಯ ಕಾವ್ಯಗಳು ಘನಗಿರಿ ರಾಜ್ಯದಲ್ಲಿ ಪ್ರಚಾರ ಹೊಂದಲಿಲ್ಲ.

"ವಿಜಯಾಂಬಿಕೆಯು ಶತ್ರು ರಾಜ್ಯದಲ್ಲಿ ಇದ್ದುದರಿಂದ ಬಲದೇವನ ಮೇಲೆ ಯುದ್ಧಕ್ಕೆ ಹೋದರೆ ವಿಜಯಾಂಬಿಕೆಯು ಬಲದೇವನಿಗೆ ನೆರವಾಗಿ ನಿಲ್ಲಬಹುದೆಂಬ ಆಶಂಕೆಯು ನಾಗಲಾಂಬಿಕೆಗೆ ಇತ್ತು. ಪರಾಕ್ರಮಿಯಾದ ಶತ್ರುವಿನೊಡನೆ ಹೋರಾಡುವಾಗ ಜಯವು ಯಾರಿಗೆ ಲಭಿಸುವುದೋ ಹೇಳುವುದು ಕಷ್ಟ. ಒಂದು ವೇಳೆ ಯುದ್ಧದಲ್ಲಿ ಬಲದೇವನು ಜಯಿಸಿದರೆ, ವಿಜಯಾಂಬಿಕೆಯ ಪ್ರೋತ್ಸಾಹದಿಂದ ಆತನು ಘನಗಿರಿಯ ಮೇಲೆಯೇ ಧಾಳಿ ನಡೆಸಬಹುದು. ಎಂಬ ಭಯವೂ ನಾಗಲಾಂಬಿಕೆಗೆ ಇದ್ದಿತು. ಆದುದರಿಂದ ಅವಳು ಬಲದೇವನ ಮೇಲೆ ಯುದ್ಧಕ್ಕೆ ಹೋಗಲಿಲ್ಲ.

"ನರಸಿಂಹನಿಗೆ ವಯಸ್ಸು ಬಂದ ಮೇಲೆ ಆತನಿಗೆ ಪಟ್ಟವನ್ನು ಕಟ್ಟಿದರು. ನರಸಿಂಹನಿಗೆ ಸೋದರತ್ತೆಯಾದ ವಿಜಯಾಂಬಿಕೆಯ ಪ್ರವರ್ತನೆ ತನ್ನ ಚಿಕ್ಕಂದಿನಿಂದಲೂ ಅವನಿಗೆ ಸರಿ ಬೀಳುತ್ತಿರಲಿಲ್ಲ. ಆಕೆ ಕೃಷ್ಣದೇವನನ್ನು ಮದುವೆಯಾಗುವುದನ್ನು ನರಸಿಂಹನು ಪ್ರಬಲವಾಗಿ ವಿರೋಧಿಸಿದನು. ಆದರೂ ಆಕೆ ನೆಂಟರ ಮಾತನ್ನು ಕೇಳದೆ ಶತ್ರು ರಾಜ್ಯಕ್ಕೆ ಓಡಿಹೋಗಿ ಶತ್ರುಸಂಬಂಧಿಯನ್ನು ಮದುವೆಯಾಗಲು ಅವಳ ಸಾಹಿತ್ಯ ವ್ಯಾಸಂಗ ಮತ್ತು ಸಂಗೀತ ಕಲಾ ಪ್ರೇಮವೇ ಕಾರಣಗಳೆಂಬ ಭಾವನೆ ನರಸಿಂಹನ ಮನಸ್ಸಿನಲ್ಲಿ ಬೇರೂರಿಬಿಟ್ಟಿತು. ಆಕೆಯ ಕೆಲಸವನ್ನು ಆತನೂ, ಮಿಕ್ಕ ನೆಂಟರೂ ತಮಗೆ ಅವಮಾನಕರವಾದ ಕೃತ್ಯವೆಂದು ಭಾವಿಸುತ್ತಿದ್ದರು. ನರಸಿಂಹನಿಗೆ ಸ್ವತಃ ವಿದ್ಯಾಭಿರುಚಿಯಾಗಲಿ, ಕಲಾಭಿರುಚಿಯಾಗಲಿ ಇರಲಿಲ್ಲ. ಆತನು ಬಹಳ ಸ್ವಾಭಿಮಾನಿ. ತನ್ನ ಮಾನಕ್ಕೆ ಕುಂದು ಬಂದರೆ ಆತನು ಎಳ್ಳಷ್ಟೂ ಸಹಿಸುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಆತನಿಗೆ ವಿದ್ಯೆಯೆಂದರೆ, ಕಲೆಗಳೆಂದರೆ, ಅಭಿಮಾನಕ್ಕೆ ಬದಲಾಗಿ ದ್ವೇಷವಿತ್ತು. ಆದುದರಿಂದ ಕ್ರಮ ಕ್ರಮವಾಗಿ ಘನಗಿರಿ ರಾಜ್ಯದಲ್ಲಿ ವಿದ್ಯೆಗೂ, ಕಲೆಗಳಿಗೂ ರಾಜಪೋಷಣೆ ತಪ್ಪಿಹೋಗಿ, ಅವುಗಳ ಸ್ಥಾನವನ್ನು ಸಾಹಸ ಕೃತ್ಯಗಳು ಆಕ್ರಮಿಸಿಕೊಂಡವು. ನರಸಿಂಹನು ಸ್ವತಃ ಸಾಹಸಪ್ರಿಯನಾದುದರಿಂದ, ಧೈರ್ಯಸಾಹಸಗಳುಳ್ಳ ಜನರಿಗೆ ಪ್ರೋತ್ಸಾಹ ಕೊಟ್ಟು ಹೇಗಾದರೂ ಸೈನ್ಯ ಬಲವನ್ನು ಬೆಳೆಸಿ,

ಬಲದೇವನ ಮೇಲೆ ಯುದ್ಧ ಮಾಡಿ ಅವನನ್ನು ನಾಶಮಾಡಬೇಕೆಂಬ ಹಠವೂ, ಹಂಬಲವೂ ಅವನ ಮನಸ್ಸಿನೊಳಗೇ ಅಗ್ನಿಯಂತೆ ಪ್ರವರ್ಧಿಸುತ್ತಿತ್ತು.

"ಹೀಗಿರುವಲ್ಲಿ ವಿಧಿಯ ವೈಪರೀತ್ಯದಿಂದಲೂ, ಬಲದೇವನ ಕುಹಕದಿಂದಲೂ, ನರಸಿಂಹನ ಆವೇಶದಿಂದಲೂ ಘನಗಿರಿ ರಾಜ್ಯದಲ್ಲಿ ಬಾಯಿಂದ ಉಚ್ಚರಿಸಲಾರದಂತಹ ಒಂದು ಘೋರ ಕೃತ್ಯವು ನಡೆಯಿತು. ಅದನ್ನು ಕೇಳಿ ನೀವು ಉದ್ರಿಕ್ತರಾಗಬೇಡಿ. ಒಮ್ಮೆ ನರಸಿಂಹನು ಬಲದೇವನ ಮೇಲೆ ತನ್ನ ಆಧಿಪತ್ಯವನ್ನು ಪ್ರಕಟಿಸಲು ಪ್ರಯತ್ನಿಸಿ ಅವನ ಆಸ್ಥಾನಕ್ಕೆ ದೂತನೊಬ್ಬನನ್ನು ಕಳುಹಿಸಿದನು. ನರಸಿಂಹನ ಆಜ್ಞೆಯಂತೆ ದೂತನು ಹೋಗಿ ಬಲದೇವನಿಗೆ, ಘನಗಿರಿ ಪ್ರಭುಗಳಿಗೆ ಹೇಮಗಿರಿ ರಾಜನು ಯಾವಾಗಲೂ ಸಾಮಂತನೆಂದೂ ಹಿಂದಿನ ಕಪ್ಪ ಕಾಣಿಕೆಗಳನ್ನು ಕೂಡಲೇ ಕೊಟ್ಟು ನರಸಿಂಹನಿಗೆ ಶರಣಾಗತನಾಗಬೇಕೆಂದೂ, ಇಲ್ಲದಿದ್ದರೆ ನರಸಿಂಹನು ಪ್ರಬಲವಾದ ಸೈನ್ಯದೊಂದಿಗೆ ಬಂದು ಬಲದೇವನನ್ನು ನಾಶ ಮಾಡುವನೆಂದೂ ಹೇಳಿದನು. ಅಭಿಮಾನಿಯಾದ ಬಲದೇವನು ಇದನ್ನು ಕೇಳಿ ಬಹಳ ಕೋಪೋದ್ರಿಕ್ತನಾದನು. ಆದರೆ ಆತನು ಕುಹಕಿ ಆದುದರಿಂದ ದೂತನಿಗೆ ತನ್ನ ಪ್ರತ್ಯುತ್ತರವನ್ನು ಕೂಡಲೇ ಹೇಳದೆ ಒಂದು ತಂತ್ರವನ್ನು ಹೂಡಿದನು. ಪ್ರತ್ಯುತ್ತರವನ್ನು ನಾಲ್ಕು ದಿನಗಳ ನಂತರ ಹೇಳುವುದಾಗಿ ದೂತನನ್ನು ಅಲ್ಲಿಯೇ ನಿಲ್ಲಿಸಿಕೊಂಡನು. ಆಗ್ಗೆ ಬಲದೇವನು ಅರವತ್ತು ವರ್ಷದ ಮುದುಕನಾಗಿದ್ದನು. ಆದರೂ ಅವನ ಕುಹಕತನ ಕಡಿಮೆಯಾಗಿರಲಿಲ್ಲ. ಅಲ್ಲದೆ, ತಾನು ವಯಸ್ಸಿನಲ್ಲಿ ದೊಡ್ಡವನೆಂದೂ, ನರಸಿಂಹನು ತನಗಿಂತಲೂ ಚಿಕ್ಕವನಾಗಿ ಹೀಗೆ ಹೇಳಿಕಳುಹಿಸುವುದು ತನಗೆ ಅವಮಾನಕರವೆಂದೂ ಆತನು ಭಾವಿಸಿದನು. ಆದಕ್ಕೆ ಕೆಲವು ವರ್ಷಗಳ ಮುಂಚೆಯೇ ಕೃಷ್ಣದೇವನೂ, ವಿಜಯಾಂಬಿಕೆಯೂ ತೀರಿಕೊಂಡಿದ್ದರು. ಆತನು ಒಬ್ಬ ಶೀಲವಿಲ್ಲದ ಯುವಕ ಕವಿಯನ್ನು ಕರೆಸಿಕೊಂಡು ಎರಡು ದಿನಗಳಲ್ಲಿಯೇ ಘನಗಿರಿಯ ರಾಜರನ್ನು ಅಪಮಾನಗೊಳಿಸುವಂತಹ ಒಂದು ಪ್ರಹಸನವನ್ನು ಬರೆಯಿಸಿದನು. ಅದರಲ್ಲಿ ವಿಜಯಾಂಬಿಕೆಯನ್ನು ತಮ್ಮ ಮಾತಿನಲ್ಲಿ ನಿಲ್ಲಿಸಿಕೊಳ್ಳಲು ಅಸಮರ್ಥರಾದ ಹೇಡಿಗಳೆಂದು ಘನಗಿರಿ ರಾಜಮನೆತನದವರನ್ನು ಅಪಹಾಸ್ಯಕ್ಕೆ ಈಡು ಮಾಡಲ್ಪಟ್ಟಿತ್ತು. ಹಣದಾಸೆಗೆ ಆ ಕ್ಷುದ್ರ ಕವಿಯು ಸ್ವಲ್ಪ ಸತ್ಯಾಂಶದ ಆಧಾರದ ಮೇಲೆ ಅನೇಕ ಸುಳ್ಳುಗಳನ್ನು ಸೃಷ್ಟಿಸಿ

ಘನಗಿರಿ ರಾಜರನ್ನು ಚಿಕ್ಕಾಪಟ್ಟೆ ಅವಮಾನಗೊಳಿಸುವ ಪ್ರಹಸನವನ್ನು ತಯಾರುಮಾಡಿದ್ದನು. ಆ ಕ್ಷುದ್ರ ಕವಿ ಕನ್ನಡಿಗನಾಗಿದ್ದು, ಕನ್ನಡಿಗರು ಆಂಧ್ರರಿಗಿಂತಲೂ ಉತ್ತಮರೆಂಬ ದುರಭಿಮಾನವುಳ್ಳವನಾಗಿದ್ದನು. ಆಂಧ್ರರಾದ ಘನಗಿರಿಯ ಅರಸರನ್ನು ಅವಮಾನಿಸುವ ಪ್ರಹಸನದಲ್ಲಿ ಆತನು ಇದನ್ನು ಕೋರಿಸಿದ್ದನು. ನಾಲ್ಕು ದಿನಗಳ ನಂತರ ಒಂದು ರಾತ್ರಿ ರಾಜ ಸಭೆಯಲ್ಲಿ ದೂತನ ಎದುರಿನಲ್ಲಿ ಆ ಪ್ರಹಸನವನ್ನು ನಟ ನಟಿಯರು ಅಭಿನಯಿಸಿದರು. ಆ ಪ್ರಹಸನದ ಒಂದು ತಾಳ ಪತ್ರ ಪ್ರತಿಯನ್ನು ತಯಾರು ಮಾಡಿಸಿ ಬಲದೇವನು ದೂತನಿಗೆ ಕೊಟ್ಟು ಇದೇ ನನ್ನ ಪ್ರತ್ಯುತ್ತರ. ನಿಮ್ಮ ರಾಜನಿಗೆ ಕೊಡು. ಎಂದು ಹೇಳಿ ಅವನನ್ನು ಘನಗಿರಿಗೆ ಕಳುಹಿಸಿಬಿಟ್ಟನು ಸ್ವಾಮಿ ಭಕ್ತನಾದ ದೂತನು ಬಹಳ ಕಷ್ಟದಿಂದ ತನ್ನ ಸ್ವಾಮಿಯ ದೂಷಣವನ್ನೂ, ಅವಮಾನವನ್ನೂ ಸಹಿಸಿಕೊಂಡು ಘನಗಿರಿಗೆ ಹಿಂದಿರುಗಿ ಬಂದು ನರಸಿಂಹನಿಗೆ ನಡೆದ ವಿಚಾರಗಳನ್ನೆಲ್ಲ ತಿಳಿಸಿದನು. ಆ ಪ್ರಹಸನದ ತಾಳ ಪತ್ರ ಪ್ರತಿಯನ್ನು ಆತನ ಮುಂದೆ ಇಟ್ಟನು. ಕೋಪೋದ್ರಿಕ್ತನಾದ ನರಸಿಂಹ ಆ ಪ್ರಹಸನವನ್ನು ಮಂತ್ರಿಯಿಂದ ಓದಿಸಿ ಕೇಳುತ್ತ ಕೇಳುತ್ತಲೇ ಅದನ್ನು ಮಂತ್ರಿಯ ಕೈಯಿಂದ ಕಿತ್ತುಕೊಂಡು ಬೆಂಕಿಯಲ್ಲಿ ಹಾಕಿ ಸುಡಿಸಿದನು. ಆತನ ಕೋಪ ಅಷ್ಟಕ್ಕೇ ತಗ್ಗಲಿಲ್ಲ. ಆತ ಭಟರಿಗೆ ಆಜ್ಞೆ ಮಾಡಿ ದೇಶದಲ್ಲಿ ಎಲ್ಲೆಲ್ಲಿ ಕಾವ್ಯ ನಾಟಕಗಳು ಇರುವುವೋ ಅವನ್ನೆಲ್ಲಾ ಸುಟ್ಟು ಹಾಕಬೇಕೆಂದು ಕ್ರೂರವಾದ ಆಜ್ಞೆಯನ್ನು ಮಾಡಿದನು. ಬಲದೇವನ ಮೇಲೆ ದಂಡೆತ್ತಿ ಹೋಗಿ ಅವನನ್ನು ನಾಶಮಾಡಬೇಕೆಂದು ಯೋಚಿಸಿದನು. ಆದರೆ ಮಂತ್ರಿಗಳೂ, ಸೈನ್ಯಾಧಿಪತಿಯೂ ಕೆಲವು ಕಾರಣಗಳಿಂದ ಅದು ಅಸಾಧ್ಯವಾದ ಕೆಲಸವೆಂದೂ ಅದಕ್ಕೆ ಸರಿಯಾದ ಸಮಯವು ಒದಗುವವರೆವಿಗೂ ಕಾದಿರಬೇಕೆಂದೂ, ಸಲಹೆಯನ್ನಿತ್ತರು.

"ಆದರೆ ಪವಿತ್ರವಾದ ಭರತ ಖಂಡದಲ್ಲಿಯೇ ಎಂದಿಗೂ ನಡೆಯದಂತಹ ಘೋರ ಕೃತ್ಯವು ಇಲ್ಲಿ ನಡೆದೇ ಹೋಯಿತು. ನಗರದಲ್ಲಿಯೂ ಕೆಲವು ಪಟ್ಟಣಗಳಲ್ಲಿಯೂ, ಹಳ್ಳಿಗಳಲ್ಲಿಯೂ ಕ್ರೂರರಾದ ರಾಜ ಭಟರು ಬಂದು ತಾಳ ಪತ್ರ ಗ್ರಂಥಗಳನ್ನು ಸುಡಲು ಆರಂಭಿಸಿದರು. ಕೆಲವರು ಈ ಸಮಾಚಾರವನ್ನು ತಿಳಿದು ತಾಳ ಪತ್ರ ಗ್ರಂಥಗಳನ್ನು ನೆಲದಲ್ಲಿ ಹೂತುಬಿಟ್ಟರು. ಇದರ ಪರಿಣಾಮವು ಅಷ್ಟಕ್ಕೆ ನಿಲ್ಲಲಿಲ್ಲ. ರಾಜ ಭಟರಿಗೆ ಕಾವ್ಯವಾವುದು, ನಾಟಕವಾವುದು, ಶಾಸ್ತ್ರ

ಪಾವುದು ಎಂಬ ವಿಚಕ್ಷಣೆ ಎಲ್ಲಿಂದ ಬರಬೇಕು? ಅವರು ಸಿಕ್ಕಿದ ಹಾಗೆಲ್ಲ ತಾಳ ಪತ್ರ ಗ್ರಂಥಗಳನ್ನು ಸುಟ್ಟುಬಿಟ್ಟರು. ಆದರಲ್ಲಿ ರಾಜ ವೈದ್ಯನ ಮನೆಯಲ್ಲಿನ ವೈದ್ಯ ಶಾಸ್ತ್ರಗ್ರಂಥಗಳು ಕೂಡ ಸುಟ್ಟು ಹೋದವಂತೆ. ಇನ್ನು ಯಾವ ಯಾವ ಶಾಸ್ತ್ರಗಳು ಸುಟ್ಟು ಹೋದವೋ ? ಆದುದರಿಂದಲೇ ಈ ತಲೆ ಮಾರಿನಲ್ಲಿ ರಾಜ ವೈದ್ಯನಿಗಾಗಲೀ,ನಗರದಲ್ಲಿನ ಇತರ ವೈದ್ಯರಿಗಾಗಲಿ ಕಣ್ಣುಗಳನ್ನು ಕೀಳಿಸಿರುವ ಅಪರಾಧಿಗೆ ಏನು ಚಿಕಿತ್ಸೆಯನ್ನು ಮಾಡಬೇಕೆಂಬ ಜ್ಞಾನವೇ ಇಲ್ಲದಂತಾಗಿದೆ. ಎಲ್ಲೋ ಹಳ್ಳಿಗಳಲ್ಲಿ ಅಪರೂಪವಾಗಿ ಶಾಸ್ತ್ರಗಳ ಜ್ಞಾನವೂ, ಕಲೆಗಳ ಅಭಿ ರುಚಿಯೂ ಉಳಿದಿದೆ.

"ಸ್ವಲ್ಪ ದಿನಗಳಲ್ಲಿಯೇ ಚಿಂತೆಯಿಂದ ನರಳಿ ನರಳಿ ನರಸಿಂಹನು ತೀರಿ ಕೊಂಡನು. ಆಮೇಲೆ ಈಗಿನ ರುದ್ರಸಿಂಹನು ರಾಜನಾದನು. ರುದ್ರಸಿಂಹನು ನರಸಿಂಹನಂತೆಯೇ ಸಾಹಿತ್ಯ ದ್ವೇಷಿ ಮತ್ತು ಕಲಾದ್ವೇಷಿ. ಆತನಂತೆಯೇ ಈತನೂ ಸಾಹಸ ಪ್ರಿಯ, ಹಟಮಾರಿ. ತನ್ನ ವಂಶದವರು ಸತ್ಯವಾಕ್ಯ ಪರಿ ಪಾಲಕರೆಂದೂ ತಾನು ಆ ಕೀರ್ತಿಯನ್ನು ಉಳಿಸಿಕೊಳ್ಳಬೇಕೆಂದೂ ಆತನ ಹಟ. ಆತನು ಒಳ್ಳೆಯ ಮಾತನ್ನಾಡಲಿ, ಕೆಟ್ಟ ಮಾತನ್ನಾಡಲಿ ಬಾಯಿಂದ ಹೀಗೆ ಮಾಡುತ್ತೇನೆಂದು ಒನ್ಮೆ ಹೇಳಿ ಬಿಟ್ಟರೆ ಸಾಕು ಹಾಗೆ ನಡಿಸಿಯೇ ತೀರಬೇಕು. ಅದಕ್ಕಾಗಿ ಆತನು ಏನಾದರೂ ತ್ಯಾಗ ಮಾಡುವನು.

"ಹೀಗೆ ಪ್ರಾರಂಭವಾಗಿ ಬೆಳೆದು ಬಂದ ರಾಜರ ಅನಾದರ ಮತ್ತು ದ್ವೇಷ ಗಳಿಂದ ಘನಗಿರಿ ರಾಜ್ಯದಲ್ಲಿ ಸಾಹಿತ್ಯವೂ, ಕಲೆಗಳೂ ನಾಶವಾಗುತ್ತಾ ಬಂದವು. ಹಿಂದೆ ಘನಗಿರಿ ರಾಜ್ಯದಲ್ಲಿ ಎಂತಹ ವಿದ್ವಾಂಸರಿದ್ದರು ! ಒಳ್ಳೆಯ ವಿದ್ವಾಂಸನಿಗೆ ಮತ್ತು ಒಳ್ಳೆಯ ಕಲೆಗಾರನಿಗೆ ಎಷ್ಟು ಗೌರವ ಪ್ರೋತ್ಸಾಹಗಳಿದ್ದವು ! ಆಗ ವಿದ್ಯೆಗಳಲ್ಲಿ ಮತ್ತು ಕಲೆಗಳಲ್ಲಿ ಒಂದು ಸತ್ಸಂಪ್ರದಾಯವು ರೂಢಿಯಲ್ಲಿತ್ತು. ಅಭಿರುಚಿಯನ್ನೂ ಅರ್ಹತೆಯನ್ನೂ ಅನುಸರಿಸಿ ವಿದ್ಯೆ ಬೋಧಿಸಲ್ಪಡುತ್ತಿತ್ತು. ಉತ್ತಮ ವಿದ್ಯಾವಂತರಿಗೆ ಮತ್ತು ಕಲೆಗಾರರಿಗೆ ವಿದ್ಯೆಯೂ, ಕಲೆಯೂ ಆರಾಧ್ಯ ವಾದ ವಸ್ತುಗಳಾಗಿದ್ದವೇ ಹೊರತು ಕೇವಲ ಹೊಟ್ಟೆಪಾಡಿಗಾಗಿ ಮಾಡಬೇಕಾದ ಕೆಲಸವಾಗಿರಲಿಲ್ಲ. ಅವರಿಗೆ ಜೀವನಕ್ಕೆ ರಾಜರು ಮಾನ್ಯಗಳನ್ನು ಕೊಟ್ಟಿದ್ದರು. ಎಲ್ಲಿಗೆ ಹೋದರೂ ಅವರಿಗೆ ಗೌರವವಿತ್ತು. ಆದುದರಿಂದ ಅವರು ವಿದ್ಯೆಗಳನ್ನಾ ಗಲಿ,ಕಲೆಗಳನ್ನಾಗಲಿ, ಕೀಳುಮಟ್ಟಕ್ಕೆ ಇಳಿಸುವುದಕ್ಕೆ ಹೋಗುತ್ತಿರಲಿಲ್ಲ.ಅವರ

ಜೀವನವು ವಿದ್ಯೋಪಾಸನೆ ಮತ್ತು ಕಲೋಪಾಸನೆಗೆ ಮೀಸಲಾಗಿ ಅವರು ಲಾಭಾಲಾಭಗಳ ಮತ್ತು ಸುಖ ದುಃಖಗಳ ಆಲೆದಾಟವಾದ ವ್ಯವಹಾರದಲ್ಲಿ ಮಗ್ನರಾಗುತ್ತಿರಲಿಲ್ಲ. ಅವರು ಸತ್ಯವಾದಿಗಳಾಗಿದ್ದು ರಾಜಕೀಯ ಪಕ್ಷಗಳ ಮತ್ತು ಬಡಪಬಲ್ಲಿದರ ಪಕ್ಷಗಳಲ್ಲಿ ಯಾವ ಕಡೆಯೂ ಬಗ್ಗುತ್ತಿರಲಿಲ್ಲ. ಅವರು ನಿತ್ಯ ತೃಪ್ತರಾಗಿದ್ದರು. ಅವರ ಸತ್ಯ ಸಂಧತೆ ಮತ್ತು ಪ್ರಾಮಾಣಿಕತೆಯಿಂದ ವಿವಾದಾಸ್ಪದವಾದ ವಿಷಯಗಳಲ್ಲಿ ಅವರ ತೀರ್ಮಾನವನ್ನು ಜನರೂ, ರಾಜರೂ ಸಹ ಮನ್ನಿಸುತ್ತಿದ್ದರು. ಉತ್ತಮ ವಿದ್ಯಾವಂತರ ಮತ್ತು ಕಲಾವಂತರ ಪ್ರಭಾವದ ಎದುರಿನಲ್ಲಿ ಸತ್ವ ಹೀನರಾದ ಅಲ್ಪ ವಿದ್ಯಾವಂತರ ಆಡಂಬರಗಳಾಗಲಿ, ಭ್ರಮೋತ್ಪಾದನೆಗಳಾಗಲಿ ನಿಲ್ಲುತ್ತಿರಲಿಲ್ಲ. ಎಂತಹ ಮೇಧಾವಿಯಾದರೂ ಹೊಸ ಹೊಸ ಪಂಥಗಳನ್ನು ಸೃಷ್ಟಿಸಿ ಜನರಲ್ಲಿ ಭಾವ ಭೇದಗಳನ್ನು ಸೃಷ್ಟಿಸಲು ಅವಕಾಶವಾಗುತ್ತಿರಲಿಲ್ಲ.

"ಆದರೆ ಕೆಲ ಕಾಲದಿಂದ ನಡೆದು ಬಂದ ವಿದ್ಯಾ ದ್ವೇಷದಿಂದ ಮೇಲಿನ ಲಾಭಗಳು ಪ್ರಜೆಗಳಿಗೆ ಇಲ್ಲದಂತಾಗಿದೆ. ಅಧಿಕ ವಿದ್ಯಾವಂತರ ಮಾನ್ಯಗಳೆಲ್ಲಾ ಕಿತ್ತುಕೊಳ್ಳಲ್ಪಟ್ಟಿವೆ. ಅವುಗಳನ್ನು ಸಾಹಸಿಗಳಿಗೆ ರಾಜರು ಕೊಡುತ್ತಿದ್ದಾರೆ. ಆದುದರಿಂದ ಅಧಿಕ ವಿದ್ಯಾವಂತರು ಅಪ್ರಯೋಜಕರೆನಿಸಿಕೊಂಡು ಕೆಲವರು ಜೀವನಕ್ಕೆ ಬೇರೆ ಬೇರೆ ಮಾರ್ಗಗಳನ್ನು ಹುಡುಕಿಕೊಂಡರು. ಕೆಲವರು ವಿರಕ್ತರಾದರು. ಹಿಂದಿನ ತಲೆಮಾರಿನಲ್ಲಿ ಇದು ಪ್ರಾರಂಭವಾಗಿ ಈ ತಲೆಮಾರಿನವರೆಗೆ ಗುರು ಶಿಷ್ಯ ಸಂಪ್ರದಾಯವಾಗಲಿ, ಸರಿಯಾದ ವಿದ್ಯಾರ್ಜನೆಗೆ ಉತ್ಸಾಹ ಅನುಕೂಲತೆಗಳಾಗಲಿ ಇಲ್ಲದಂತಾಗಿದೆ. ನಾವು ಈಗ ರಾಜ್ಯದಲ್ಲಿ ನೋಡುವುದು ವಿದ್ಯಾ ವಿಹೀನತೆ ಅಥವಾ ಅಲ್ಪ ವಿದ್ಯೆ. ವಿದ್ಯಾರ್ಜನೆಯು ಈಗ ಕೆಲವರಿಂದ ಕೇವಲ ಸ್ವಾರ್ಥಕ್ಕಾಗಿ ಅಥವಾ ಉದರ ಪೋಷಣೆಗಾಗಿ ಮಾಡಲ್ಪಡುತ್ತಿದೆ. ನಿಜವಾದ ವಿದ್ಯೆಯಿಂದ ಮಾನವನು ಹೊಂದಬೇಕಾದ ವಿನಯವು ಹೋಗಿ ಯುವಕರಲ್ಲಿ ಮತ್ತು ತರುಣರಲ್ಲಿ ಅಹಂಕಾರವೂ, ಸ್ವಾರ್ಥವೂ, ತಲೆದೋರಿದೆ. ವಿವೇಕವು ಹೋಗಿ ಅವಿವೇಕವು ಆವರಿಸಿದೆ. ಇವುಗಳಿಂದ ಜನರಲ್ಲಿ ಸಹಕಾರವು ಹೋಗಿ ಸ್ಪರ್ಧೆ ಹೆಚ್ಚುತ್ತಿದೆ. ಇದರಿಂದ ದ್ವೇಷಗಳೂ, ಪಕ್ಷಗಳೂ ಹೆಚ್ಚುತ್ತಿವೆ. ಅಲ್ಪಜ್ಞರೂ, ಸತ್ವ ಹೀನರೂ ಆದ ಮೇಧಾವಿಗಳು ವಿವೇಕವಿಲ್ಲದೆ, ಆತ್ಮನಾಶವನ್ನೂ ಅರಿಯದೆ, ಕ್ಷಣಿಕವಾದ ಆವೇಶಗಳನ್ನು ಎಬ್ಬಿಸುತ್ತಾ ಜನರಲ್ಲಿ

ಸತ್ಸಂಪ್ರದಾಯಗಳನ್ನು ಕೆಡಿಸಿ, ವಿಭೇದಗಳನ್ನು ಹಬ್ಬಿಸುತ್ತಿದ್ದಾರೆ. ಮತ, ಕುಲ, ಭಾಷೆ ಇವುಗಳಿಗೂ ವಿದ್ಯೆಗೂ ಏನು ಸಂಬಂಧವಿದೆ? ಇಂತಹದರಲ್ಲಿ ಅಲ್ಪ ವಿದ್ಯಾವಂತರುಮತ ಕುಲ ಭಾಷೆಗಳ ದುರಭಿಮಾನಗಳನ್ನು ಎಬ್ಬಿಸಿ ಸ್ವಾರ್ಥಕ್ಕಾಗಿ ಪಕ್ಷಗಳನ್ನು ಕಲ್ಪಿಸುತ್ತಿದ್ದಾರೆ. ಗಣಪತಿ ಇಂತಹ ಅಲ್ಪಜ್ಞರಾದವರನ್ನು ಎದುರಿಸಿ ಅವರಿಗೆ ವಿವೇಕವನ್ನು ಹೇಳಲು ಪ್ರಯತ್ನಿಸಿ ರಾಜ ಕೋಪಕ್ಕೆ ಆಹುತಿಯಾಗಿದ್ದಾನೆ.

"ಗಣಪತಿಯ ತಂದೆಯ ಹೆಸರು 'ಮಹೇಶ್ವರ ಗಣಕ' ಎಂದು. ಆತನು ಗಣಕರ ವಂಶಕ್ಕೆ ಸೇರಿ ಗಣಿತದಲ್ಲಿ ಒಳ್ಳೆಯ ಜ್ಞಾನವನ್ನು ಹೊಂದಿದ್ದ. ಆತನ ಹಿರಿಯ ಮಗನೇ ಗಣಪತಿ. ಕಿರಿಯ ಮಗನೇ ನಿಮ್ಮ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡುವ ಕುಮಾರನು. ಗಣಪತಿಯೂ, ಕುಮಾರನೂ ಬಹಳ ಬುದ್ಧಿವಂತರು. ಇವರಿಗೆ ಅಪಾರವಾದ ಜ್ಞಾಪಕಶಕ್ತಿ ಇದೆ. ಮಹೇಶ್ವರ ಗಣಕನ ಮನೆಯಲ್ಲಿ ಅನೇಕ ಗಣಿತಶಾಸ್ತ್ರ ಗ್ರಂಥಗಳಿದ್ದವು. ಅವನ್ನೆಲ್ಲಾ ರಾಜಭಟರು ಸುಟ್ಟುಬಿಟ್ಟರು. ಆತನು ಕವಿಯೂ ಆಗಿದ್ದನು. ಆದುದರಿಂದ ಗಣಕನಾಗಿ ಆತನಿಗೆ ಕೊಟ್ಟಿದ್ದ ಮಾನ್ಯವನ್ನು ಕಿತ್ತುಕೊಂಡು ಬಿಟ್ಟರು. ಆತನು ತೀರಿ ಹೋದ ಮೇಲೆ ಆತನ ಹೆಂಡತಿಯೇ ಹೇಗೋ ಕಷ್ಟಪಟ್ಟು ಇಬ್ಬರು ಮಕ್ಕಳನ್ನೂ ಸಾಕುತ್ತಿದ್ದಾಳೆ.

"ಇತ್ತೀಚೆಗೆ ಕೆಲವರು ಸ್ವಾರ್ಥಿಗಳಾದ ಅಲ್ಪ ವಿದ್ಯಾವಂತರು, ರಾಜನ ದೌರ್ಬಲ್ಯವನ್ನು ದುರುಪಯೋಗ ಮಾಡಿಕೊಂಡು ರಾಜನಿಗೆ "ನೀನು ಆಂಧ್ರನು. ತೆಲುಗು ಮಾತನಾಡುತ್ತೀಯೆ. ಹೇಮಗಿರಿ ರಾಜ್ಯದ ಬಲದೇವನೂ, ಕೃಷ್ಣದೇವನೂ ಕನ್ನಡದವರು." ಎಂದು ಬೋಧಿಸಿ ರಾಜನಿಗೆ ಕನ್ನಡಿಗರ ಮೇಲೆ ದ್ವೇಷಾಸೂಯೆಗಳನ್ನು ಕಲ್ಪಿಸಲು ಪ್ರಯತ್ನ ಮಾಡಿರುತ್ತಾರೆ. ರಾಜನು ಅಲ್ಪಬುದ್ಧಿಯಾದುದರಿಂದಲೂ, ವಿದ್ಯಾ ವಿಹೀನನಾದುದರಿಂದಲೂ ಇಂತಹವರ ಮಾತಿಗೆ ಕಿವಿಗೊಟ್ಟಿದ್ದಾನೆ. ಹೇಮಗಿರಿ ರಾಜನ ಮೇಲೆ ಈತನಿಗಿರುವ ಹಗೆ ಈತನಲ್ಲಿ ಆಂಧ್ರನೆಂಬ ದುರಭಿಮಾನವನ್ನು ಹೆಚ್ಚಿಸುತ್ತಾ ಇವೆ.

"ಸ್ವಾರ್ಥಿಗಳ ದುರ್ಬೋಧೆಗೆ ಒಳಗಾಗಿ ಕನ್ನಡ ಮಾತಾಡುವ ಜನರನ್ನು ಶತ್ರು ರಾಜನ ಸಹಕಾರಿಗಳೆಂದು ಶಂಕಿಸುತ್ತಿದ್ದಾನೆ. ಆದುದರಿಂದಲೇ ಕನಡ್ನ ಜನರ ಮೇಲೆ ಇಲ್ಲದ ನಿರ್ಬಂಧಗಳನ್ನು ಹೊರಿಸಿ ಅವುಗಳ ಉಲ್ಲಂಘನೆಗೆ ತೀವ್ರ

ಶಿಕ್ಷೆಯನ್ನು ವಿಧಿಸಿದ್ದಾನೆ. ಗಣಪತಿ ಇಂತಹ ಪಕ್ಷಪಾತವನ್ನು ವಿರೋಧಿಸಿ ರಾಜಾಜ್ಞೆಯನ್ನು ಉಲ್ಲಂಘಿಸಿರುವುದರಿಂದಲೇ ಆತನ ಕಣ್ಣುಗಳನ್ನು ಕಿತ್ತಿದ್ದಾರೆ.

"ಇದೆಲ್ಲಾ ಅವಿವೇಕದ ಮತ್ತು ವಿದ್ಯಾಕಲಾ ದ್ವೇಷದ ಘೋರ ಪರಿಣಾಮವಾಗಿದೆ."

ಹೀಗೆ ಹೇಳಿ ನಿಟ್ಟುಸಿರನ್ನು ಬಿಟ್ಟು ಗುರುಗಳು ಸ್ವಲ್ಪ ಹೊತ್ತು ಮೌನ ತಾಳಿದರು. ವಿದ್ಯಾರ್ಥಿಗಳೆಲ್ಲರೂ ಮೌನವಾಗಿ ಕುಳಿತು ಆಲೋಚನಾ ಮಗ್ನರಾಗಿದ್ದರು. ಆ ಮೇಲೆ ಗುರುಗಳು ಅಂದಿನ ಪಾಠವನ್ನು ಮುಂದುವರಿಸಿದರು. ಅವರು ಅಭಿಜ್ಞಾನ ಶಾಕುಂತಲದಲ್ಲಿನ ತೃತೀಯಾಂಕವನ್ನು ಆ ದಿನ ಮುಗಿಸಿದರು.

## ೪

ಆ ದಿನ ಹಗಲೆಲ್ಲಾ ಕಮಲಮ್ಮನು ತನ್ನ ಕೆಲಸಗಳಲ್ಲಿ ತೊಡಗಿದ್ದರೂ, ಆಕೆಯ ಮನಸ್ಸೆಲ್ಲಾ ಗುರುಗಳು ತಿಳಿಸಿದ ವಿಷಯಗಳಲ್ಲಿಯೇ ಮಗ್ನವಾಗಿತ್ತು. ಅವಳು ಆ ವಿಷಯಗಳನ್ನು ಕುರಿತು ನಾನಾ ವಿಧಗಳಲ್ಲಿ ಪರ್ಯಾಲೋಚನೆ ಮಾಡುತ್ತಿದ್ದಳು. ರಾತ್ರಿಯೆಲ್ಲಾ ಅವಳು ಅದನ್ನೇ ಯೋಚಿಸುತ್ತಾ ಇದ್ದುದರಿಂದ ಮಲಗಿದ್ದರೂ ಅವಳಿಗೆ ನಿದ್ರೆ ಬರಲಿಲ್ಲ. ಮಾರನೇ ದಿನ ಬೆಳಗ್ಗೆ ತನ್ನ ಕೆಲಸಗಳನ್ನು ನಿರ್ವಹಿಸಿ ಗುರುಗಳ ಅನುಮತಿಯನ್ನು ಪಡೆದು ರಾಮಕ್ಕನ ಮನೆಗೆ ಹೊರಟಳು.

ರಾಮಕ್ಕನ ಮನೆಯು ಕೋಟೆಯಲ್ಲಿ ಉತ್ತರ ದಿಕ್ಕಿನಲ್ಲಿ ಕಟ್ಟಿದ್ದ ಪರಿಚಾರಕರ ಕೇರಿಯಲ್ಲಿತ್ತು. ಕಮಲಮ್ಮನು ಆಶ್ರಮದಿಂದ ಹೊರಟವಳು ನಗರದಲ್ಲಿನ ಹೂಗಳ ಪೇಟೆಯ ಮಾರ್ಗವಾಗಿ ಕೋಟೆಯ ಉತ್ತರದ ಬಾಗಿಲಿಗೆ ಬಂದಳು. ಅದೇ ಸಮೀಪದ ಮಾರ್ಗವಾಗಿತ್ತು. ಅಲ್ಲಿ ಅವಳು ಸೈನಿಕರ ಕುಚೇಷ್ಟೆಯನ್ನು ಕಂಡಳು. ಕೆಲವರು ಸೈನಿಕರು ಹೂ ಮಾರುವ ಹೆಣ್ಣುಗಳೊಂದಿಗೆ ಮಾಡುತ್ತಿದ್ದ ಗ್ರಾಮ್ಯ ಮತ್ತು ಅಶ್ಲೀಲವಾದ ಸಂಭಾಷಣೆ ಅವಳ ಕಿವಿಯಲ್ಲಿ ಬಿದ್ದಿತು. ಅವಳು ಇವುಗಳಿಗೆ ವಿಮುಖಳಾಗಿ ತಲೆಬಾಗಿಸಿಕೊಂಡು

ಯಾರ ಕಣ್ಣಿಗೂ ಬೀಳದಂತೆ ಆ ಬೀದಿಯನ್ನು ದಾಟಿ ಕೋಟೆಯ ಉತ್ತರದ ಬಾಗಿಲಿನಿಂದ ಕೋಟೆಯನ್ನು ಪ್ರವೇಶ ಮಾಡಿದಳು. ಅಲ್ಲಿಂದ ರಾಮಕ್ಕನ ಮನೆಯನ್ನು ತಲುಪಿದಳು.

ರಾಮಕ್ಕ ಗೋಪಾಲನಿಗೆ ತಿಂಡಿಯನ್ನು ಕೊಡುತ್ತಿದ್ದವಳು ಕಮಲಮ್ಮ ಬರುವುದನ್ನು ನೋಡಿ ಹಾಗೆಯೇ ಮನೆಯಿಂದ ಹೊರಗೆ ಬಂದು ಅವಳನ್ನು ಮನೆಯೊಳಕ್ಕೆ ಕರೆದುಕೊಂಡು ಹೋದಳು. ಅವಳ ಮುಖದಲ್ಲಿನ ಗಾಬರಿಯನ್ನೂ, ಕಳವಳವನ್ನೂ, ದುಃಖವನ್ನೂ ನೋಡಿ ರಾಮಕ್ಕನೂ, ಗೋಪಾಲನೂ ಚಕಿತಗೊಂಡರು. ರಾಮಕ್ಕ ಅವಳಿಗೆ ಕೈ, ಕಾಲುಗಳನ್ನು ತೊಳೆದು ಕೊಳ್ಳುವಂತೆ ಹೇಳಿ ಅಡುಗೆಯ ಮನೆಯಲ್ಲಿ ಒಂದು ಚಾಪೆಯನ್ನು ಹಾಸಿ ಅದರ ಮುಂದೆ ತಿಂಡಿಯನ್ನು ಇಟ್ಟಳು. ಗೋಪಾಲನು ಅಡುಗೆ ಮನೆಯ ಬಾಗಿಲಿನಿಂದ ಹೊರಗೆ ಆಗಲೇ ಹಾಕಿದ್ದ ಚಾಪೆಯ ಮೇಲೆ ಪುನಃ ಬಂದು ಕುಳಿತು ಕೊಂಡನು. ರಾಮಕ್ಕ ಅವನಿಗೂ ತಿಂಡಿಯನ್ನು ಕೊಟ್ಟಳು. ಆದರೆ ಗೋಪಾಲನು ಕಮಲಮ್ಮನು ತಿಂಡಿಯನ್ನು ತೆಗೆದು ಕೊಳ್ಳುವವರೆಗೂ ತಾನು ತೆಗೆದು ಕೊಳ್ಳಲಿಲ್ಲ.

ಕಮಲಮ್ಮನು ಬಂದು ಚಾಪೆಯ ಮೇಲೆ ಕುಳಿತುಕೊಂಡಳು. ರಾಮಕ್ಕ ಕಮಲಮ್ಮನನ್ನು ಕೇಳಿದಳು:—

"ಏನಾಯಿತು ಕಮಲಾ? ನಿನ್ನ ಮುಖ ಯಾಕೋ ಸಪ್ಪಗಿದೆ, ನಿನ್ನ ಗುರುಗಳು ಚೆನ್ನಾಗಿದ್ದಾರಲ್ಲಾ ?"

ಕಮಲಮ್ಮನು ಮೆದುವಾದ ಧ್ವನಿಯಲ್ಲಿ ಹೇಳಿದಳು:—

"ಗುರುಗಳು ಚೆನ್ನಾಗಿದ್ದಾರೆ. ಆದರೆ ನಿನ್ನೆ ಕೆಲವು ವಿಷಯಗಳನ್ನು ತಿಳಿದು ನನ್ನ ಮನಸ್ಸಿಗೆ ತೀರಾ ಬೇಸರವಾಗಿದೆ. ನಮ್ಮ ರಾಜರ ಆಳ್ವಿಕೆ ಸರಿಯಾಗಿಲ್ಲ, ಜನರಿಗೆ ಬರುತ್ತಾ ಬರುತ್ತಾ ಇನ್ನೂ ಹೆಚ್ಚು ಕಷ್ಟಗಳು ಬರುವಂತಿವೆ."

ರಾಮಕ್ಕ — "ಏನಮ್ಮಾ ಅಷ್ಟು ಮನಸ್ಸಿಗೆ ಬೇಸರವಾಗುವಂತಹ ವಿಷಯಗಳು ನಿನಗೆ ತಿಳಿದಿದ್ದು ? ಯಾರು ಹೇಳಿದ್ದು, ಏನು ನಡೆಯಿತು ?"

ಗೋಪಾಲ — "ಮೊದಲು ತಿಂಡಿ ತೆಗೆದುಕೋ, ಕಮಲಾ ಸ್ವಲ್ಪ ಮನಸ್ಸನ್ನು ಸಮಾಧಾನ ಮಾಡಿಕೋ. ಆ ಮೇಲೆ ಹೇಳುವೆಯಂತೆ."

ಇಬ್ಬರೂ ಮೌನವಾಗಿ ತಿಂಡಿಯನ್ನು ತಿಂದರು. ರಾಮಕ್ಕನೂ ಮೌನವಾಗಿದ್ದಳು. ಆ ಮೇಲೆ ರಾಮಕ್ಕನು ಪುನಃ ಕೇಳಿದಳು. ಕಮಲನ್ನು ಗಣಪತಿಗೆ ಕಣ್ಣುಗಳನ್ನು ಕೀಳಿಸಿರುವ ವಿಷಯವನ್ನೂ ಗುರುಗಳು ಹೇಳಿದ ರಾಜರ ಚರಿತ್ರೆಯನ್ನೂ ದೇಶದಲ್ಲಿ ಹಿಂದೆ ವಿದ್ಯೆಗಳಿಗೆ ಇದ್ದ ಪ್ರೋತ್ಸಾಹವನ್ನೂ, ಅವುಗಳಿಗೆ ಬಂದ ವಿನಾಶವನ್ನೂ, ಆದರಿಂದಾದ ಪರಿಣಾಮಗಳನ್ನೂ, ಹೊಸದಾಗಿ ಪುಂಡರು ಎಬ್ಬಿಸಿದ್ದ ಭಾಷಾ ದ್ವೇಷವನ್ನೂ, ಮುಂದೆ ಸಂಭವಿಸಬಹುದಾದ ಅನರ್ಥಗಳನ್ನೂ ವಿದ್ಯಾವತಿಯಾದುದರಿಂದ ಮನ ಮುಟ್ಟುವಂತೆ ತಿಳಿಸಿ, ತೆರಿಗೆಗಳನ್ನು ತೆಗೆದುಕೊಂಡು ಜನರ ಕ್ಷೇಮವನ್ನರಿಯದ ದೊರೆಯನ್ನು ಆಕ್ಷೇಪಿಸಿದಳು.

ರಾಮಕ್ಕ—"ಒಳ್ಳೆಯವನೋ ಕೆಟ್ಟವನೋ, ದೊರೆ ಒಬ್ಬನಿರಬೇಕು. ಅವನಿಲ್ಲದಿದ್ದರೆ ದೇಶ ಅರಾಜಕವಾಗಿ ಜನರಿಗೆ ಕ್ಷೋಭೆ ಉಂಟಾಗುವುದು. ಈಗಿನ ದೊರೆ ಜನರನ್ನು ಪೀಡಿಸುವವನಲ್ಲ, ಅವಿವೇಕಿಯಾಗಿರಬಹುದು. ತಮ್ಮ ಕ್ಷೇಮವನ್ನು ನೋಡಿಕೊಳ್ಳುವುದು ಜನರ ಕರ್ತವ್ಯವೂ ಆಗಿದೆ. ಈಗಿನ ದೊರೆಯು ಸಾಹಸಪ್ರಿಯ ಹೌದು. ಆತನೂ ಒಬ್ಬ ಮನುಷ್ಯನೇ. ಆತನಿಗೂ ಎಲ್ಲರಂತೆಯೇ ಕಾಮ ಕ್ರೋಧಗಳಿವೆ. ತನ್ನ ಕ್ಷೇಮಕ್ಕೆ ಮತ್ತು ಪ್ರಜೆಗಳ ಕ್ಷೇಮಕ್ಕೆ ತನಗೆ ಯುಕ್ತವೆಂದು ತೋರಿದ ಶಾಸನವನ್ನು ಮಾಡಿ ಅದರಂತೆ ಪಕ್ಷಪಾತವಿಲ್ಲದೆ ರಾಜ್ಯ ನಡೆಸುತ್ತಿದ್ದಾನೆ."

ಕಮಲಮ್ಮ — "ಏನೂ ಅರಿಯದ ಹಿರಿಯರು ಹೇಳುವುದು ಹಾಗೆಯೇ. ನಾನು ಈ ವಿಷಯದಲ್ಲಿ ಎಷ್ಟೋ ಪರ್ಯಾಲೋಚನೆ ಮಾಡಿದ್ದೇನೆ. ರಾಜನು ಜನರಿಂದ ತೆರಿಗೆಗಳನ್ನು ತೆಗೆದುಕೊಂಡ ಮೇಲೆ ಜನರ ಕ್ಷೇಮಕ್ಕೆ ಯಾವ ತೊಂದರೆ ಆದರೂ ಜವಾಬ್ದಾರಿ ಆತನದೇ. 'ಯಥಾರಾಜಾ ತಥಾಪ್ರಜಾ,' 'ರಾಜಾ ಕಾಲಸ್ಯ ಕಾರಣಂ' ಎಂದು ನುಡಿದಿದ್ದಾರೆ ಪಂಡಿತರು."

ಗೋಪಾಲ — "ಕಮಲಾ, ಹಾಗಾದರೆ ನೀನು ಇದಕ್ಕೆ ಏನು ಮಾಡಬೇಕೆಂದಿದ್ದೀಯೆ ? ನಿನ್ನ ಓದನ್ನೆಲ್ಲಾ ಖರ್ಚು ಮಾಡಿ ರಾಜನ ವಿರುದ್ಧ ಪ್ರಚಾರ ಮಾಡಬೇಕೆಂದಿದ್ದೀಯಾ ? ಪಾಪ, ಆ ಗಣಪತಿ ಏನು ಮಾಡಿದನೋ? ಏನಿಲ್ಲವೋ ? ರಾಜನ ಶಾಸನವನ್ನು ಉಲ್ಲಂಘಿಸಿದನೆಂದು ಆತನ ಕಣ್ಣು ಕಿತ್ತು ಹಾಕಿಬಿಟ್ಟರು. ನೀನೇನಾದರೂ ಆತನಿಗೆ ಸಹಾಯ ಮಾಡಬೇಕೆಂದು

ಭಾವಿಸಿದೆಯಾ? ಇಲ್ಲವೇ ರಾಜನ ವಿರುದ್ಧ ಪ್ರಚಾರ ಮಾಡಿ ನಿನ್ನ ಬಾಳು ಹಾಳು ಮಾಡಿಕೊಳ್ಳಬೇಕೆಂದಿದ್ದೀಯಾ?"

ಕಮಲಮ್ಮ—"ಹೌದು, ನೀನು ನೆನಪಿಗೆ ತಂದಿದ್ದು ಒಳ್ಳೆಯದಾಯಿತು. ನಾವೆಲ್ಲರೂ ಕೂಡಲೇ ಹೋಗಿ ಗಣಪತಿಯನ್ನು ನೋಡಿಕೊಂಡು ಬರೋಣ. ಆತನಿಗೆ ಚಿಕಿತ್ಸೆ ಮಾಡುವ ವೈದ್ಯರೇ ಈಗ ಈ ಊರಿನಲ್ಲಿಲ್ಲವಂತೆ. ಗುರುಗಳು ಗೋವಿಂದಪುರದಲ್ಲಿರುವ ವೆಂಕಟಸ್ವಾಮಿಯಿಂದ ಚಿಕಿತ್ಸೆಮಾಡಿಸಬೇಕೆಂದು ಹೇಳಿದರು. ಆತನು ಬಂದನೋ ಇಲ್ಲವೋ ?"

ಗೋಪಾಲ—"ಅಮ್ಮಾ ನೀನೂ ಬಾ. ನಾವೆಲ್ಲರೂ ಕೂಡಲೇ ಗಣಪತಿಯನ್ನು ನೋಡಿಕೊಂಡು ಬರೋಣ."

ಎಲ್ಲರೂ ಗಣಪತಿಯ ಮನೆಗೆ ಹೋದರು. ಹಿಂದಿನ ದಿನವೇ ವೆಂಕಟಸ್ವಾಮಿ ಬಂದು ಗಣಪತಿಯ ಕಣ್ಣುಗಳಿಗೆ ಚಿಕಿತ್ಸೆ ಮಾಡಿ ಪಟ್ಟಿಯನ್ನು ಕಟ್ಟಿದ್ದನು. ಗಣಪತಿಗೆ ವಿಪರೀತ ಜ್ವರ ಬಂದಿತ್ತು. ಕಣ್ಣಿನ ನೋವು ಕಡಿಮೆಯಾಗುವುದಕ್ಕೂ ಜ್ವರ ಇಳಿಯುವದಕ್ಕೂ ವೆಂಕಟಸ್ವಾಮಿ ಒಂದು ಔಷಧಿಯನ್ನು ಕೊಟ್ಟಿದ್ದನು. ಆ ಔಷಧಿಯ ಪ್ರಭಾವದಿಂದ ಗಣಪತಿಗೆ ಅಮಲೇರಿತ್ತು. ಆ ಅಮಲನ್ನು ಹೋಗಲಾಡಿಸುವುದಕ್ಕೆ ವೆಂಕಟಸ್ವಾಮಿಯ ಬಳಿ ಇದ್ದ ಒಂದು ವೈದ್ಯಶಾಸ್ತ್ರ ಗ್ರಂಥದಲ್ಲಿ ಒಂದು ಮೂಲಿಕೆಯ ಹೆಸರನ್ನು ಕೊಟ್ಟಿತ್ತು. ಆ ಶಾಸ್ತ್ರವು ಸಂಸ್ಕೃತ ಭಾಷೆಯಲ್ಲಿ ಇತ್ತು. ವೆಂಕಟಸ್ವಾಮಿಗೆ ದೇಶ ಭಾಷೆಯಲ್ಲಿ ಆ ಮೂಲಿಕೆಯ ಹೆಸರೇನೆಂದು ತಿಳಿದಿರಲಿಲ್ಲ.

ಗೋಪಾಲ, ಕಮಲಮ್ಮ, ರಾಮಕ್ಕ ಇವರು ಗಣಪತಿಯ ಸ್ಥಿತಿಯನ್ನು ನೋಡಿ ಬಹಳ ಮರುಗಿದರು. ಕುಮಾರನಿಗೆ ತಮ್ಮಿಂದ ಏನಾದರೂ ಸಹಾಯವಾಗುವುದಿದ್ದರೆ ಮಾಡುವೆವೆಂದು ಹೇಳಿದರು. ವೆಂಕಟಸ್ವಾಮಿಯನ್ನು ಆತನ ವೈದ್ಯ ಜ್ಞಾನಕ್ಕಾಗಿಯೂ ಪರೋಪಕಾರ ಬುದ್ಧಿಗಾಗಿಯೂ ಕೊಂಡಾಡಿದರು. ಆತನನ್ನು ಗಣಪತಿಯ ದೇಹಸ್ಥಿತಿಯನ್ನು ಕುರಿತು ವಿಚಾರಿಸಿದರು. ವೆಂಕಟಸ್ವಾಮಿಯೂ ತನಗೆ ವೈದ್ಯ ಚೆನ್ನಾಗಿ ತಿಳಿದಿದೆಯೆಂಬ ಅಹಂಕಾರವಿಲ್ಲದವನು. ಕೂಡಲೇ ಆತನು ತಾನು ಮಾಡಿದ ಚಿಕಿತ್ಸೆಯನ್ನೂ, ಗಣಪತಿಯ ದೇಹಸ್ಥಿತಿಯನ್ನೂ ತಿಳಿಸಿ ವೈದ್ಯ ಶಾಸ್ತ್ರದಲ್ಲಿ ಹೇಳಿದ್ದ ಮೂಲಿಕೆ ಯಾವುದೆಂದು ತಿಳಿದು ಅದು ಸಿಕ್ಕಿದರೆ ಅದರಿಂದ ಗಣಪತಿಗೆ ಬಹಳ ಉಪಕಾರವಾಗುವುದೆಂದು ಹೇಳಿ

ದನು. ಆ ಮೂಲಿಕೆಯ ಸಂಸ್ಕೃತ ಭಾಷೆಯಲ್ಲಿನ ಹೆಸರನ್ನು ಹೇಳಿದನು. ಇದರ ಅರ್ಥವನ್ನು ತಿಳಿಯಲು ಈ ಊರಿನಲ್ಲಿ ವೈದ್ಯರಾಗಲಿ, ಪಂಡಿತರಾಗಲಿ ಇದ್ದಾರೆಯೇ ಎಂದು ಕೇಳಿದನು.

ಕಮಲಮ್ಮನಿಗೆ ಮೂರು ಕಾಂಡಗಳ ಅಮರಕೋಶ ಬಾಯಿಗೆ ಬರು ತ್ತಿತ್ತು. 'ನಿಘಂಟು ಕಾರಿ' ಎಂದು ಹೇಳಲ್ಪಡುವ ವನೌಷಧಿ ವರ್ಗವನ್ನೂ ಅವಳು ಕಂಠಪಾಠ ಮಾಡಿದ್ದಳು. ಆ ಮೂಲಿಕೆಯ ಹೆಸರನ್ನು ಕೇಳಿದ ಕೂಡಲೇ ಕಮಲಮ್ಮನು ವನೌಷಧಿ ವರ್ಗದಲ್ಲಿ ಆ ಹೆಸರು ಬರುವ ಶ್ಲೋಕವನ್ನು ಹೇಳಿ ದಳು. ಅದರಿಂದ ವೆಂಕಟಸ್ವಾಮಿಗೆ ಆ ಮೂಲಿಕೆಗೆ ಇರುವ ಇನ್ನೊಂದು ಹೆಸರು ತಿಳಿಯಿತು. ಆ ಹೆಸರು ಆತನಿಗೆ ಪರಿಚಿತವಾಗಿತ್ತು. ಕೂಡಲೇ ಅದರ ದೇಶ ಭಾಷೆಯ ಹೆಸರನ್ನು ಹೇಳಿ ಆ ಮೂಲಿಕೆಯನ್ನು ಯಾರಾದರೂ ತಂದು ಕೊಡುವರೇ ಎಂದು ಕೇಳಿದನು. ಗೋಪಾಲನಿಗೆ ಓದು ಬರಹ ಬಾರ ದಿದ್ದರೂ, ಆತನು ವಿದ್ಯೆಯನ್ನು ಕಲಿಯದಿದ್ದರೂ, ಅನುಭವದಿಂದ ಎಷ್ಟೋ ಜ್ಞಾನವನ್ನು ಸಂಪಾದಿಸಿದ್ದನು. ಆತನು ಘನಗಿರಿಯಲ್ಲಿದ್ದ ಎಲ್ಲಾ ಪ್ರದೇಶ ಗಳನ್ನೂ ಎಷ್ಟೋ ಸಲ ಸುತ್ತಿದ್ದನು. ಎಲ್ಲೆಲ್ಲಿ ಯಾವ ಯಾವ ಗಿಡಮರಗಳೂ ಮೂಲಿಕೆಗಳೂ ಇದ್ದವೋ ಅವೆಲ್ಲವೂ ಆತನಿಗೆ ನೆನಪಿನಲ್ಲಿದ್ದುವು. ಆತನ ದೇಹ ಶಕ್ತಿ ಎಷ್ಟು ಹೆಚ್ಚಾಗಿತ್ತೋ, ಜ್ಞಾಪಕಶಕ್ತಿಯೂ ಅಷ್ಟೇ ಹೆಚ್ಚಾಗಿತ್ತು. ಪರೋಪಕಾರಕ್ಕೆ ಆತನು ಯಾವಾಗಲೂ ಬದ್ಧನಾಗಿದ್ದನು. ಆತನು ಕೂಡಲೇ ತಾನು ಮೂಲಿಕೆಯನ್ನು ತಂದು ಕೊಡುವುದಾಗಿ ಹೇಳಿ ಓಡಿಹೋದನು.

ಅಮಲೇರಿದ್ದ ಗಣಪತಿಯು ಮೈಮೇಲೆ ಎಚ್ಚರವಿಲ್ಲದೆ ಒಂದು ಹಾಸಿಗೆಯ ಮೇಲೆ ನಿದ್ರಾಪರವಶನಂತೆ ಬಿದ್ದಿದ್ದನು. ಹಗಲಿನ ಎರಡನೆಯ ಯಾಮವು ಇನ್ನು ಸ್ವಲ್ಪ ಹೊತ್ತಿನಲ್ಲೇ ಮುಗಿಯಲಿತ್ತು. ಗಣಪತಿಯ ಸುತ್ತಲೂ ವೆಂಕಟಸ್ವಾಮಿ, ಕುಮಾರ, ರಾಮಕ್ಕ ಮತ್ತು ಕಮಲಮ್ಮ ಮೌನವಾಗಿ ಕುಳಿತುಕೊಂಡು ಗಣ ಪತಿಯ ಮುಖವನ್ನೇ ನೋಡುತ್ತಿದ್ದರು. ಗಣಪತಿಯ ಉಸಿರಾಡುವಿಕೆಯನ್ನು ಗಮನಿಸುತ್ತಿದ್ದರು. ಗಣಪತಿಯ ತಾಯಿ ಕತ್ತಲಿನಿಂದ ತುಂಬಿದ ಅಡುಗೆಯ ಮನೆಯಲ್ಲಿ ಅಳುತ್ತ ವಿಧಿಯಿಲ್ಲದೇ ಅಡುಗೆಯ ಶಾಸ್ತ್ರವನ್ನು ಮಾಡುತ್ತಿದ್ದಳು. ಅವಳು ಪದೇ ಪದೇ ಗಾಬರಿಯಿಂದ ಹೊರಕ್ಕೆ ಬಂದು ಗಣಪತಿಯ ಸ್ಥಿತಿಯನ್ನು ದೀನ ದೃಷ್ಟಿಯಿಂದ ನೋಡಿಕೊಂಡು ಹೋಗುತ್ತಿದ್ದಳು. ವೆಂಕಟಸ್ವಾಮಿಯು

ಆಗಿಂದಾಗ್ಗೆ ಗಣಪತಿಯ ನಾಡಿಯನ್ನು ಪರೀಕ್ಷಿಸುತ್ತಿದ್ದನು. ಬರಬರುತ್ತಾ ಗಣಪತಿಯ ಉಸಿರಾಟವು ಮಂದವಾಗುತ್ತಿತ್ತು. ಅವನ ತಾಯಿ ಬಂದು ಆತನ ಕಾಲುಗಳನ್ನೂ, ಕೈಗಳನ್ನೂ ಮುಟ್ಟಿ "ಅಯ್ಯೋ, ಏನಪ್ಪಾ ಗತಿ? ಕೈ ಕಾಲುಗಳು ಬರಬರುತ್ತಾ ತಣ್ಣಗಾಗುತ್ತಿವೆಯಲ್ಲಾ? ನೀವೆಲ್ಲರೂ ಏನಾದರೂ ಮಾಡಿ ನನ್ನ ಗಣಪತಿಯನ್ನು ನನಗೆ ಉಳಿಸಿ ಕೊಡಿ. ನಿಮಗೆ ಬಹಳ ಪುಣ್ಯ ಬರುತ್ತದೆ." ಎಂದು ಎಲ್ಲರನ್ನೂ ನೋಡಿ ದೀನವಾಗಿ ಆಕ್ರೋಶಿಸಿದಳು. ಅವಳ ದೀನಸ್ಥಿತಿ ಎಲ್ಲರ ಮನಸ್ಸನ್ನೂ ಕರಗಿಸಿತು. ಕಮಲಮ್ಮನು ತಟಕ್ಕನೆ ಎದ್ದು ಬೀದಿಗೆ ಓಡಿಹೋಗಿ ಗೋಪಾಲನು ಬರುತ್ತಿರುವನೇ ಎಂದು ನೋಡಿದಳು. ದೂರದಲ್ಲಿ ಗೋಪಾಲನು ಓಡಿ ಬರುತ್ತಾ ಇರುವುದನ್ನು ನೋಡಿ ಮನೆಯೊಳಗೆ ಓಡಿ ಬಂದು "ಗೋಪಾಲ ಬಂದುಬಿಟ್ಟ" ಎಂದು ಉತ್ಸಾಹದಿಂದ ಹೇಳಿದಳು. ಅವಳು ಈ ಮಾತನ್ನು ಹೇಳುತ್ತಿರುವಷ್ಟರಲ್ಲಿಯೇ ಗೋಪಾಲನು ಮೂಲಿಕೆಯೊಂದಿಗೆ ಪ್ರವೇಶಿಸಿದನು. ವೆಂಕಟಸ್ವಾಮಿಯು ಆತನ ಕೈಯಿಂದ ಮೂಲಿಕೆಯನ್ನು ಎಳೆದುಕೊಂಡು ಪರೀಕ್ಷಿಸಿ ಅದರ ರಸವನ್ನು ತೆಗೆದು ಗಣಪತಿಗೆ ಕುಡಿಸಿದನು. ಗಣಪತಿಯ ತಾಯಿಯು ಅವನ ಕಾಲುಗಳ ಮೇಲೆ ಕೈಯಿಂದ ಸವರುತ್ತಲೇ ಇದ್ದವಳು ಸ್ವಲ್ಪ ಹೊತ್ತಿಗೆ ಕಾಲುಗಳಲ್ಲಿ ಕಾಖವು ಪ್ರಸರಿಸುವುದನ್ನು ನೋಡಿ ಉತ್ಸಾಹದಿಂದ ಅದನ್ನು ವೆಂಕಟಸ್ವಾಮಿಗೆ ತಿಳಿಸಿದಳು. ವೆಂಕಟಸ್ವಾಮಿಯು ನಾಡಿಯ ಪರೀಕ್ಷೆಯಿಂದ ಗಣಪತಿಗೆ ಅಪಾಯ ಸ್ಥಿತಿ ತಪ್ಪಿತೆಂದು ತಿಳಿದು ಎಲ್ಲರಿಗೂ ಅದನ್ನು ತಿಳಿಸಿದನು. ಎಲ್ಲರೂ ಬಹಳ ಸಂತೋಷಪಟ್ಟರು. ಗಣಪತಿಗೆ ಎಚ್ಚರವೂ ಬಂದಿತು. ರಾಮಕ್ಕನು ಹೋಗಿ ಬರುವೆನೆಂದು ಗಣಪತಿಯ ತಾಯಿಗೆ ಹೇಳಿದಳು. ಗಣಪತಿಯ ತಾಯಿ, ವೆಂಕಟಸ್ವಾಮಿ ಮತ್ತು ಕುಮಾರನು ಗೋಪಾಲನನ್ನೂ, ಕಮಲಮ್ಮನನ್ನೂ ಅವರು ಮಾಡಿದ ಉಪಕಾರಕ್ಕಾಗಿ ಬಹಳ ಪ್ರಶಂಸಿಸಿದರು. ಈ ಮೂವರೂ ಮನೆಗೆ ಹಿಂತಿರುಗಿದರು.

೫

ಮನೆಗೆ ಬಂದ ಕೂಡಲೇ ರಾಮಕ್ಕ ಕಮಲಮ್ಮನಿಗೆ "ಈ ದಿನ ನೀನೇ ಅಡುಗೆ ಮಾಡು. ನಾನು ಸ್ನಾನ ಮಾಡಿ ಗಣಪತಿಯ ಪೂಜೆ ಮಾಡಲು

ಹೊರಡಬೇಕು" ಎಂದು ಹೇಳಿದಳು. ಅಂದು ಗುರುವಾರವಾಗಿತ್ತು. ಪ್ರತಿ ಗುರುವಾರವೂ ರಾಮಕ್ಕ ನೇಮದಿಂದ ತಲೆಗೆ ನೀರು ಹಾಕಿಕೊಂಡು ಒದ್ದೆ ಬಟ್ಟೆ ತೊಟ್ಟುಕೊಂಡೇ ತಂಬಿಟ್ಟು ತಯಾರು ಮಾಡಿ ಅದರಿಂದ ಎರಡು ಜ್ಯೋತಿಗಳನ್ನು ಮಾಡಿ ಅವುಗಳಲ್ಲಿ ತುಪ್ಪ ಹಾಕಿ ದೀಪ ಹೊತ್ತಿಸಿ ಎರಡು ಜ್ಯೋತಿಗಳನ್ನೂ, ಒಂದು ಎಳನೀರನ್ನೂ, ಪೂಜಾ ದ್ರವ್ಯಗಳನ್ನೂ ತಲೆಯ ಮೇಲೆ ಹೊತ್ತುಕೊಂಡು ಕೋಟೆಯ ಪೂರ್ವ ಬಾಗಿಲಿನ ಪಕ್ಕದಲ್ಲಿರುವ ಗಣಪತಿಗೆ ಅರ್ಪಿಸಿ ಬರುತ್ತಿದ್ದಳು. ಆ ದಿನವೂ ಹಾಗೆಯೇ ಮಾಡಲು ತಂಬಿಟ್ಟಿನ ಜ್ಯೋತಿಗಳನ್ನೂ, ಎಳನೀರನ್ನೂ, ಪೂಜಾ ದ್ರವ್ಯಗಳನ್ನೂ ತೆಗೆದುಕೊಂಡು ಒದ್ದೆ ಬಟ್ಟೆ ಉಟ್ಟುಕೊಂಡೇ ಹೊರಟಳು. ಗಣಪತಿಯ ದೇವಸ್ಥಾನವೂ ಬಹಳ ಚಿಕ್ಕದಾಗಿದ್ದು, ಜನರಿಂದ ಅಲಕ್ಷಿತವಾಗಿದ್ದು ಆ ದೇವರಿಗೆ ಯಾರೂ ಪೂಜೆಯನ್ನೇ ಮಾಡುತ್ತಿರಲಿಲ್ಲ. ಆ ದೇವರು ಅಲ್ಲಿ ಎಷ್ಟು ವರ್ಷಗಳ ಹಿಂದೆ ಪ್ರತಿಷ್ಠಿತವಾಗಿತ್ತೋ, ಅದಕ್ಕೆ ಪೂಜೆಗೆ ಏನು ಏರ್ಪಾಡು ಮಾಡಿತ್ತೋ ಯಾರಿಗೂ ತಿಳಿಯದು. ರಾಮಕ್ಕನ ಕಾಲಕ್ಕೆ ಎಲ್ಲಾ ದೇವರಂತೆ ಮತ್ತು ವಿದ್ಯಾ ಕಲೆಗಳಂತೆ ಆ ಗಣಪತಿಯ ವಿಷಯದಲ್ಲೂ ಅನಾದರ ಹೆಚ್ಚಾಗಿತ್ತು. ಆದರೆ ರಾಮಕ್ಕನೊಬ್ಬಳೇ ತಪ್ಪದೆ ಆ ದೇವರಿಗೆ ಮೇಲೆ ಹೇಳಿದಂತೆ ವಾರಕ್ಕೊಂದು ಸಲ ಪೂಜೆ ಮಾಡುತ್ತಿದ್ದಳು. ಅವಳು ದೇವರ ಮುಂದೆ ಇಟ್ಟ ಜ್ಯೋತಿಗಳನ್ನೂ, ಎಳನೀರನ್ನೂ ಹಿಂದಕ್ಕೆ ತರುತ್ತಿರಲಿಲ್ಲ. ಆ ಗುಡಿಯಲ್ಲಿ ಗರ್ಭಗುಡಿ ಒಂದೇ ಇದ್ದಿದ್ದು ಅದಕ್ಕೆ ದ್ವಾರಬಂಧನವಿದ್ದರೂ ಬಾಗಿಲುಗಳು ಹೋಗಿದ್ದವು. ರಾಮಕ್ಕನು ಇಟ್ಟ ಪದಾರ್ಥಗಳನ್ನು ಆ ದಾರಿಯಲ್ಲಿ ಹೋಗುತ್ತಿದ್ದ ಯಾರಾದರೂ ಅನಾಥರು ಮಾತ್ರ ಕಣ್ಣಿಗೆ ಬಿದ್ದಾಗ ಉಪಯೋಗಿಸುತ್ತಿದ್ದರು.

ರಾಮಕ್ಕನು ಗುಡಿಗೆ ಹೋಗಿ ಬರುವವರೆಗೂ ಕಮಲಮ್ಮ ಅಡುಗೆಯನ್ನು ಮಾಡುತ್ತಿದ್ದಳು. ಈಚೆ ಗೋಪಾಲನು ಸೌದೆ ಕಡಿಯುತ್ತಿದ್ದನು. ರಾಮಕ್ಕ ಬಂದ ಕೂಡಲೇ ಕಮಲಮ್ಮನಿಗೆ ಬಿಡುಗಡೆಯಾಯಿತು. ಕಮಲಮ್ಮ ಹೊರಗೆ ಬಂದು ಗೋಪಾಲನೊಂದಿಗೆ ಅನೇಕ ವಿಷಯಗಳನ್ನು ಕುರಿತು ಮಾತಾಡತೊಡಗಿದಳು. ಗೋಪಾಲನು ಬೇಗ ಸೌದೆ ಒಡೆಯುವುದನ್ನು

ಮುಗಿಸಿ ಮನೆಯೊಳಗೆ ಬಂದು ಕುಳಿತುಕೊಂಡನು. ಆತನೂ, ಕಮಲಮ್ಮನೂ, ಅಡುಗೆ ಮಾಡುತ್ತಿದ್ದ ರಾಮಕ್ಕನೂ ಅನೇಕ ವಿಷಯಗಳನ್ನು ಚರ್ಚಿಸುತ್ತಿದ್ದರು.

ಊಟವಾದ ಮೇಲೆ ಪುನಃ ಇವರೆಲ್ಲರೂ ಮಾತನಾಡುತ್ತಿದ್ದರು. ಕಮಲಮ್ಮನು ಓದಿ ತಿಳಿದುಕೊಂಡ ವಿಷಯಗಳನ್ನು ಇನ್ನಿಬ್ಬರಿಗೂ ತಿಳಿಸುತ್ತಿದ್ದಳು. ಇವರಿಬ್ಬರೂ ಕಮಲಮ್ಮನಿಗೆ ತಮ್ಮ ಅನುಭವಕ್ಕೆ ಬಂದ ವಿಷಯಗಳನ್ನು ಸ್ವಲ್ಪ ಸ್ವಲ್ಪ ತಿಳಿಸುತ್ತಿದ್ದರು. ನಡುವೆ ನಡುವೆ ಅವರು ಪಾತ್ರೆಗಳನ್ನು ತೊಳೆಯುವುದು, ದನ ಕರುಗಳನ್ನು ನೋಡಿಕೊಳ್ಳುವುದು ಮುಂತಾದ ಕೆಲಸಗಳನ್ನು ಮಾಡುತ್ತಲೇ ಇದ್ದರು.

ಪ್ರಾಸ್ತಾವಿಕವಾಗಿ ಗೋಪಾಲನು ಆ ದಿನ ಅರಮನೆಯಲ್ಲಿ ಮುದುಕಪ್ಪನು ತಿಳಿಸಿದ ಪರಸ್ಪರ ಬಂಧುತ್ವದ ವಿಚಾರವನ್ನು ಹೇಳಿದನು. ಹೇಳುತ್ತಿದ್ದಂತೆಯೇ ಅಕಸ್ಮಾತ್ ಮುದುಕಪ್ಪನು ಅಲ್ಲಿಗೆ ಬಂದನು. ಎಲ್ಲರೂ ಮುದುಕಪ್ಪನನ್ನು ನೋಡಿ ಎದ್ದು ನಿಂತರು. ರಾಮಕ್ಕ "ಏನು ಗವಿಯಪ್ಪಾ, ಚೆನ್ನಾಗಿದ್ದೀಯಾ?" ಎಂದು ಮುದುಕಪ್ಪನನ್ನು ವಿಚಾರಿಸಿದಳು.

ಮುದುಕಪ್ಪ—"ಚೆನ್ನಾಗಿದ್ದೀನಮ್ಮಾ. ನೀವೆಲ್ಲಾ ಚೆನ್ನಾಗಿದ್ದೀರಾ? ಕಮಲಮ್ಮನೂ ಬಂದಿದ್ದಾಳಲ್ಲಾ? ಅವಳನ್ನು ನೋಡಿ ಎಷ್ಟು ದಿನಗಳಾದವು? ಏನು ಕಮಲಮ್ಮಾ, ಹೇಗಿದೆ ವಿದ್ಯಾಭ್ಯಾಸ?"

ಕಮಲಮ್ಮ—"ನಡೆಯುತ್ತಾ ಇದೆ, ತಾತಾ. ವಿದ್ಯೆಗೆ ಪಾರವಿದೆಯೇ"

ಗವಿಯಪ್ಪ—"ಅಗಲಮ್ಮಾ, ನಮಗಂತೂ ವಿದ್ಯೆಯಿಲ್ಲ. ನಮ್ಮ ಗೋಪಾಲನಿಗೂ ಓದು ಬರಹಗಳೇ ಬರುವುದಿಲ್ಲ, ಅಂದರೆ ಅವನು ಕಲಿಯುವುದಕ್ಕೆ ಹೋಗಲಿಲ್ಲ. ನೀನಾದರೂ ವಿದ್ಯೆ ಕಲಿತು ಬುದ್ಧಿವಂತಳಾದೆಯಲ್ಲಾ. ವಿದ್ಯೆಗೆ ಈಗ ಬೆಲೆಯೇ ಇಲ್ಲ. ಹಾಗಾದರೂ ಕಲಿತವರಿಗೆ ಅದು ಒಂದು ದೊಡ್ಡ ಲಾಭವೇ. ಅದರಿಂದ ಬುದ್ಧಿ ಅರಳುತ್ತದೆ."

ಕಮಲಮ್ಮ—"ಏನು ತಾತಾ, ವಿದ್ಯೆ ಕಲಿಯದಿದ್ದರೆ ಅಥವಾ ಓದು ಬರಹ ಕಲಿಯದಿದ್ದರೆ ಬುದ್ಧಿ ಅರಳುವುದಿಲ್ಲವೇ? ನೀವೆಲ್ಲಾ ಬುದ್ಧಿಯಲ್ಲಿ ಯಾರಿಗೇನು ಕಡಿಮೆ? ನಮ್ಮ ಗೋಪಾಲ ಏನು ಕಡಿಮೆ? ಓದಿ ಓದಿ ಮರುಳಾದವರಿಲ್ಲವೇ?"

ರಾಮಕ್ಕ—"ಈಗ ತಾನೇ ನಿನ್ನ ಮಾತೇ ಆಡುತ್ತಾ ಇದ್ದೆವು, ಗವಿ

ಯಪ್ಪಾ. ನೀನೂ ಬಂದು ಬಿಟ್ಟೆ. ನೀನು ನಮ್ಮ ಯಜಮಾನರ ಕೊಡೆಯನ್ನು ಹುಡುಕಿ ಕೊಟ್ಟಿದ್ದೂ, ಭಾಗ್ಯಲಕ್ಷ್ಮಿ, ರಂಗಯ್ಯ ಇವರಿಗೂ ಇರುವ ಬಂಧುತ್ವವನ್ನು ಹೇಳಿದ್ದೂ ಎಲ್ಲಾ ಈಗ ತಾನೇ ಗೋಪಾಲನು ನೆನೆಸಿ ಕೊಳ್ಳುತ್ತಿದ್ದ."

ಗವಿಯಪ್ಪ—"ಹೌದು, ಇನ್ನೈದಾರು ದಿನಗಳು ತಾನೇ ಉಳಿದಿರುವುದು, ಗೋಪಾಲನು ತನ್ನ ವಂಶದ ಕೆಲಸಕ್ಕೆ ಸೇರಲು. ನನಗಂತೂ ಬಹಳ ಸಂತೋಷ. ಗೋಪಾಲನ ವಿಷಯದಲ್ಲಿ ನನಗಂತೂ ಬಹಳ ಹೆಮ್ಮೆ. ಇವನು ನಮ್ಮ ಬಂಧುಗಳಲ್ಲೆಲ್ಲ ಬಹಳ ಉತ್ತಮ. ರಂಗಯ್ಯನಿಗೂ ಭಾಗ್ಯಲಕ್ಷ್ಮಿಗೂ ಐಶ್ವರ್ಯವಿರಬಹುದು, ಅಂತಸ್ತು ಇರಬಹುದು. ಆದರೆ ಗೋಪಾಲ, ಕಮಲಮ್ಮ ಇವರಿಗಿರುವ ಸಂಸ್ಕಾರ ಅವರಿಗಿಲ್ಲ. ನಾನು ಈಗ ಬಂದಿದ್ದು ಏಕೆಂದು ಗೊತ್ತೋ? ಇವರನ್ನು ಸೈನ್ಯಾಧಿಪತಿ ವೀರಪ್ಪನ ಮನೆಗೆ ಕರೆದು ಕೊಂಡು ಹೋಗಬೇಕೆಂದು. ಕಮಲಮ್ಮನು ಭಾಗ್ಯಲಕ್ಷ್ಮಿಗೆ ಖಾಸಾ ಒಡಹುಟ್ಟಿದವಳಲ್ಲವೆ? ಗೋಪಾಲನು ನಾಳೆ ಅರಮನೆಯ ಕೆಲಸಕ್ಕೆ ಸೇರುವವನು. ಮುಂಚಿತವಾಗಿಯೇ ಮಂತ್ರಿ, ಸೈನ್ಯಾಧಿಪತಿ, ಕೋಶಾಧಿಪತಿ ಇವರನ್ನೆಲ್ಲಾ ನೋಡಿ ಅವರಿಗೆ ನಮಸ್ಕಾರ ಮಾಡಿ ಬರುವುದು ಪರಿಚಾರಕರ ಧರ್ಮ."

ರಾಮಕ್ಕ—"ನೀನು ನಮಗೆ ಒಳ್ಳೆಯದನ್ನೇ ಬಯಸುವವನು. ಅರಮನೆಯಲ್ಲೇ ಪಳಗಿದವನು. ನಮ್ಮ ಗೋಪಾಲನಿಗೆ ಇನ್ನೂ ಪರಿಚಾರಕರು ಹೇಗೆ ನಡೆದುಕೊಳ್ಳಬೇಕು ಎನ್ನುವುದು ಗೊತ್ತಿಲ್ಲ. ನೀನೇ ಇಂದಿನಿಂದ ಎಲ್ಲಾ ಕಲಿಸಿಕೊಡು. ಬಂಧುಗಳಲ್ಲಿ ವೀರಪ್ಪನಿಗೆ ಅದೃಷ್ಟ ಬಂತು. ಸೈನ್ಯಾಧಿಪತಿಯಾದ. ಅದೆಲ್ಲಾ ಅವರವರ ಅದೃಷ್ಟ. ಅಂತಸ್ತಿನ ವ್ಯತ್ಯಾಸಗಳಿಂದ ಒಬ್ಬರ ಮನೆಗೆ ಒಬ್ಬರು ಹೋಗಿ ಬರುವುದೂ, ಕೊಡುವುದೂ ತೆಗೆದುಕೊಳ್ಳುವುದೂ ಅಪರೂಪವಾಗಿದ್ದರೂ ನಮಗೇನೋ ಬಂಧುಗಳ ಮೇಲೆಲ್ಲಾ ಅಕ್ಕರೆಯೇ. ಸ್ವಲ್ಪ ಮೇಲಿನ ಅಂತಸ್ತಿನವರು ಒಂದು ವಿಧವಾಗಿ ಪ್ರವರ್ತಿಸಬಹುದು. ಆಗಲಿ. ನಮಗೆ ಅಸೂಯೆಯೂ ಇಲ್ಲ. ದ್ವೇಷವೂ ಇಲ್ಲ. ಯಾರು ಹೇಗೆ ಪ್ರವರ್ತಿಸಿದರೂ ನಾವು ನಮ್ಮ ಅಂತಸ್ತಿಗೆ ತಕ್ಕಂತೆ ನಡೆಯಬೇಕು. ನಮ್ಮ ಕರ್ತವ್ಯವನ್ನು ನಾವು ಮಾಡಬೇಕು. ಇಷ್ಟು ಗಮನದಲ್ಲಿ ಇಟ್ಟುಕೊಂಡರೆ ಸಾಕು."

ಗೋಪಾಲನೂ ಕಮಲಮ್ಮನೂ ಸುಮ್ಮನೆ ಕೇಳುತ್ತಿದ್ದರು. ಗವಿಯಪ್ಪ ನಿಗೆ ಸತ್ಕಾರ ಮಾಡಿದಮೇಲೆ ಆತನು ಗೋಪಾಲನನ್ನೂ ಕಮಲಮ್ಮನನ್ನೂ ಸೈನ್ಯಾಧಿಪತಿ ವೀರಪ್ಪನ ಮನೆಗೆ ಕರೆದುಕೊಂಡು ಹೋದನು. ವೀರಪ್ಪನ ಮನೆ ಆತನ ಹುದ್ದೆಗೆ ತಕ್ಕಂತೆ ದೊಡ್ಡದಾಗಿದ್ದು, ವೈಭವದಿಂದ ಕೂಡಿತ್ತು. ಮನೆಯ ಮುಂದೆ ಇಬ್ಬರು ಶಸ್ತ್ರಪಾಣಿಗಳಾದ ಸೈನಿಕರು ಕಾವಲಿದ್ದರು. ಮನೆಯ ಒಳಗೆಲ್ಲಾ ಸೈನಿಕರು ಸಡಗರದಿಂದ ಓಡಾಡುತ್ತ ಏನೇನೋ ಕೆಲಸ ಗಳನ್ನು ಮಾಡುತ್ತಿದ್ದರು. ಒಂದು ಕೋಣೆಯಲ್ಲಿ ಕಿಟಕಿಯ ಬಳಿ ಕುಳಿತು ಕೊಂಡಿದ್ದ ವೀರಪ್ಪನ ಏಕೈಕ ಪಾಲಿತ ಪುತ್ರಿ ಭಾಗ್ಯಲಕ್ಷ್ಮಿಯು ಬೀದಿಯಲ್ಲಿ ತಮ್ಮ ಮನೆಯ ಕಡೆ ಬರುತ್ತಿದ್ದ ಗೋಪಾಲನನ್ನೂ, ಗವಿಯಪ್ಪನನ್ನೂ, ಇನ್ನೊಬ್ಬಳು ಹೆಣ್ಣುಮಗಳನ್ನೂ ನೋಡಿದಳು. ಪರಿಚಾರಕರನ್ನು ಕಳುಹಿಸಿ ಅವರನ್ನು ತನ್ನ ಕೋಣೆಯೊಳಕ್ಕೆ ಬರಮಾಡಿಸಿಕೊಳ್ಳೋಣವೇ ಎನ್ನಿಸಿತು. ಆದರೆ ಗೋಪಾಲನ ಮೇಲೆ ಅವಳಲ್ಲಿ ಆಗಲೇ ಮೂಡಿದ್ದ ಆಕರ್ಷಣೆಯು ಅವ ಳನ್ನು ಎಬ್ಬಿಸಿ ಹೊರ ಬಾಗಿಲಿನವರೆಗೂ ಎಳೆದುಕೊಂಡುಬಂತು. ಅವಳೇ ಬಂದು ಈ ಬಡವರನ್ನು ಸ್ವಾಗತಿಸಿಸುವುದನ್ನು ನೋಡಿ ಕಾವಲುಗಾರರು ಬೆರ ಗಾದರು. ಭಾಗ್ಯಲಕ್ಷ್ಮಿಯು ಬಂದವರನ್ನು ನಡುಮನೆಯಲ್ಲಿದ್ದ ತಂದೆಯ ಬಳಿಗೆ ಕರೆದುಕೊಂಡು ಹೋದಳು. ಎಲ್ಲರೂ ಸೈನ್ಯಾಧಿಪತಿಗೆ ಉಚಿತ ರೀತಿ ಯಲ್ಲಿ ನಮಸ್ಕರಿಸಿದರು. ಒಂದು ವೀರಾಸನದ ಮೇಲೆ ಕುಳಿತಿದ್ದ ವೀರಪ್ಪನು ಅವರಿಗೆಲ್ಲ ಕುಳಿತುಕೊಳ್ಳಲು ನೆಲದ ಮೇಲೆ ಹಾಸಿದ್ದ ಚಿವಾಸಿಯನ್ನು ತೋರಿಸಿ ದನು. ಅವರೆಲ್ಲಾ ನಮ್ರತೆಯಿಂದ ಕುಳಿತುಕೊಂಡರು. ಭಾಗ್ಯಲಕ್ಷ್ಮಿ ನಿಂತು ಕೊಂಡೇ ಇದ್ದಳು.

ವೀರಪ್ಪ—"ಏನು ಗವಿಯಪ್ಪಾ, ಚೆನ್ನಾಗಿದ್ದೀಯಾ? ಈಚೆಗೆ ಇತ್ತ ಕಡೆ ಬರಲೇ ಇಲ್ಲವಲ್ಲಾ. ಈ ಹುಡುಗ ಹುಡುಗಿಯರು ಯಾರು ?"

ಗವಿಯಪ್ಪ—"ಸೈನ್ಯಾಧಿಪತಿ ವೀರಪ್ಪನ ರಕ್ಷಣೆಯಲ್ಲಿ ಘನಗಿರಿ ರಾಜ್ಯದ ಪ್ರಜೆಗಳೊಂದಿಗೆ ನಾವೆಲ್ಲಾ ಸೌಖ್ಯವಾಗಿದ್ದೇವೆ. ತಮಗೆ ಜಯವನ್ನೂ, ಐಶ್ವರ್ಯವನ್ನೂ, ಆರೋಗ್ಯವನ್ನೂ ಯಾವಾಗಲೂ ಕೋರುತ್ತಾ ಇದ್ದೇವೆ. ನಮ್ಮ ಕೊಡೆ ಒಡಿಯುವ ಸೀನಪ್ಪ ಇದ್ದನಲ್ಲಾ ಆತನ ಮಗ ಈತ. ಹೆಸರು

ಗೋಪಾಲ. ಇವಳು ನಿಮ್ಮ ಭಾಗ್ಯಲಕ್ಷ್ಮಮ್ಮನ ಒಡ ಹುಟ್ಟಿದವಳು ಕಮಲಮ್ಮ-ಸೀನಪ್ಪನ ಹೆಂಡತಿ ರಾಮಕ್ಕ ಸಾಕಿದವಳು.

ಭಾಗ್ಯಲಕ್ಷ್ಮಿ—ನನ್ನ ತಂಗೀನಾ ಈ ಹುಡುಗಿ. ನನ್ನ ತಂಗಿ!

ವೀರಪ್ಪ—ಹೌದಮ್ಮ, ಭಾಗ್ಯಲಕ್ಷ್ಮೀ. ನೀನು ನನ್ನ ಸಾಕುವುಗಳಲ್ಲವೇ. ನೀನೂ, ಈ ಹುಡುಗಿಯೂ, ಅವಳಿ ಜವಳಿಯಾಗಿ ಹುಟ್ಟಿದವರು, ತಂದೆ ತಾಯಿಗಳಿಲ್ಲದ ನಿನ್ನನ್ನು ನಾನು ಬೆಳೆಸಿಕೊಂಡೆ. ಈ ಹುಡುಗಿಯನ್ನು ರಾಮಕ್ಕ ಬೆಳೆಸಿಕೊಂಡಳು. ಇವಳ ಹೆಸರು ಕಮಲಮ್ಮನೇ? ಇವನು ರಾಮಕ್ಕನ ಮಗನೇ? ಇವಳು ಈಗ ವರದಪ್ಪಸ್ವಾಮಿಗಳ ಹತ್ತಿರ ವಿದ್ಯೆ ಕಲಿಯುತ್ತಾ ಇದ್ದಾರೆಂದು ಯಾರೋ ಹೇಳಿದರು. ಯಾರು ಹೇಳಿದರು? ನಮ್ಮ ರಂಗಯ್ಯ ಹೇಳಿದಹಾಗಿದೆ. ರಂಗಯ್ಯ ಅಂದರೆ ಯಾರು ಗೊತ್ತಾ ಗವಿಯಪ್ಪಾ? ರಂಗಯ್ಯ ನಮ್ಮ ಕೋಶಾಧಿಪತಿ ರಾಮಪ್ಪನ ಒಬ್ಬನೇ ಮಗ. ಒಳ್ಳೆಯ ಬುದ್ಧಿವಂತ, (ಒಬ್ಬ ಸೈನಿಕನನ್ನು ಕುರಿತು) ಎಲಾ, ಆ ರಂಗಯ್ಯನು ಇಲ್ಲಿ ಎಲ್ಲಾದರೂ ಇದ್ದಾನೇನೋ ನೋಡು.

ಭಾಗ್ಯಲಕ್ಷ್ಮಿ—ನನ್ನ ತಂಗಿ ಕಮಲಮ್ಮ ಹೇಗಿದ್ದಾಳೆ ನೋಡಪ್ಪಾ, ಪಾಪ, ಎಷ್ಟು ಬಡವಳಾಗಿದ್ದಾಳೆ. ಪಾಪ, ನನಗೆ ಬಂದ ಅದೃಷ್ಟ ಅವಳಿಗೆ ಇಲ್ಲವಾಯಿತಲ್ಲಾ? ಏನು ದುರದೃಷ್ಟವಂತಳು.

ಕಮಲಮ್ಮ (ಗದ್ಗದ ಸ್ವರದಿಂದ)—ನಾನೇನು ದುರದೃಷ್ಟವಂತಳಲ್ಲ, ಅಕ್ಕಾ.

ಇಷ್ಟರೊಳಗೆ ರಂಗಯ್ಯನು ಪ್ರವೇಶಿಸಿದನು; ಗೋಪಾಲನನ್ನು ಈರ್ಷ್ಯೆಯಿಂದ ನೋಡಿದನು. ಕಮಲಮ್ಮನನ್ನು ತೋರಿಸಿ ಸೈನ್ಯಾಧಿಪತಿ ವೀರಪ್ಪನೊಂದಿಗೆ "ಈ ಹುಡಿಗಿ ಯಾರು ಮಾವಯ್ಯ?" ಎಂದು ಕೇಳಿದನು.

ವೀರಪ್ಪ—ನೀನೇ ಹೇಳಿದೆಯಲ್ಲಾ, ಮೊನ್ನೆ ವಿದ್ಯೆಗಳು ಕಲಿಯುತ್ತಿರುವವರ ವಿಚಾರವಾಗಿ ಮಾತನಾಡುತ್ತಾ ಭಾಗ್ಯಲಕ್ಷ್ಮಿಯ ಒಡಹುಟ್ಟಿದವಳು ಕಮಲಮ್ಮ ವರದಪ್ಪ ಸ್ವಾಮಿಗಳ ಹತ್ತಿರ ವಿದ್ಯೆಯನ್ನು ಕಲಿಯುತ್ತಿದ್ದಾಳೆಂದು. ಅವಳೇ ಈ ಕಮಲಮ್ಮ.

ರಂಗಯ್ಯ—ಇವಳೇನಾ ಕಮಲಮ್ಮ. ನಾನು ಇದುವರೆಗೂ ನೋಡಿಲ್ಲ. ಈ ಮುದುಕಪ್ಪನು ಹೇಳಿದ ವಿಷಯ ಮಾತ್ರ ಕೇಳಿದ್ದೆ. ಅಲ್ಲದೆ ನಮ್ಮ ಸ್ನೇಹಿ

ತ್ರರು ಕೆಲವರು ಹೇಳಿದರು. ಕಮಲಮ್ಮ ಎಂಬ ಹುಡುಗಿ ಚೆನ್ನಾಗಿ ವಿದ್ಯೆಯನ್ನು ಕಲಿಯುತ್ತಿದ್ದಾಳೆಂದು. ನೀನೇ ಭಾಗ್ಯಶಾಲಿನಿ ಕಮಲಮ್ಮಾ, ವಿದ್ಯೆಯಲ್ಲಿ ಅಭಿರುಚಿ ಮತ್ತು ಪರಿಶ್ರಮ ಎರಡೂ ಇವೆ ನಿನಗೆ. ಸಾಹಿತ್ಯ ರಸಾಸ್ವಾದನವು ಎಷ್ಟು ಆನಂದವನ್ನು ಕೊಡುತ್ತೆ ಅನ್ನುವುದನ್ನು ಬಲ್ಲವರು ಮಾತ್ರ ಬಲ್ಲರು. ಇದಕ್ಕೆಲ್ಲಾ ಪೂರ್ವಜನ್ಮಸಂಸ್ಕಾರ ಬೇಕು.

ಕಮಲಮ್ಮ—ಪೂರ್ವಜನ್ಮಸಂಸ್ಕಾರ ಬೇಕೆಂದೇ ಕಾಣುತ್ತೆ. ಹೇಳಿಲ್ಲವೇ ಕುಮಾರ ಸಂಭವದಲ್ಲಿ " ಪ್ರಪೇದಿರೇ ಪ್ರಾಕ್ತನ ಜನ್ಮ ವಿದ್ಯಾಃ " ಎಂದು.

ರಂಗಯ್ಯ—ಭೇಷ್, ಕಮಲಮ್ಮಾ. ಚೆನ್ನಾಗಿ ಕಾವ್ಯದ ಸಾರವನ್ನು ಗ್ರಹಿಸಿದ್ದೀಯೆ. ನಿನ್ನ ಬುದ್ಧಿಯೂ ಚುರುಕಾಗಿದೆ. ಕಾವ್ಯಗಳನ್ನು ಕೇವಲ ಕಂಠಪಾಠ ಮಾಡುವವರಿಗೆ ಹೀಗೆ ಸಮಯಕ್ಕೆ ತಕ್ಕಂತೆ ಸ್ಫುರಿಸುವುದಿಲ್ಲ.

ವೀರಪ್ಪ—ನಮ್ಮ ರಂಗಯ್ಯನು ಮೆಚ್ಚಿಕೊಂಡ ಮೇಲೆ ನೀನು ನಿಜವಾಗಿಯೂ ಒಳ್ಳೆಯ ಬುದ್ಧಿವಂತಳೂ ವಿದ್ಯಾವಂತಳೂ ಆಗಿರಲೇಬೇಕು. ನನಗೆ ತುಂಬಾ ಸಂತೋಷ.

ಭಾಗ್ಯಲಕ್ಷ್ಮಿ—ಬರೀ ಒಂದು ವಿದ್ಯೆಯಿದ್ದರೆ ಸಾಲದು. ಶಕ್ತಿ ಇರಬೇಕು. ಪರಾಕ್ರಮ ಇರಬೇಕು. ಅದೃಷ್ಟವಿರಬೇಕು.

ವೀರಪ್ಪ—(ಗೋಪಾಲನನ್ನು ಕುರಿತು) ನೀನು ಏನೇನು ಕಲಿತಿದ್ದೀಯ ಹುಡುಗಾ? ನಿಮ್ಮ ತಂದೆ ನಮಗೆಲ್ಲಾ ಬಹಳ ಬೇಕಾದವನು.

ಗೋಪಾಲ—ನಾನು ಓದುಬರಹ ಕಲಿಯಲಿಲ್ಲ ಸ್ವಾಮೀ. ಇವು ಬಿಟ್ಟು ನೋಟದಿಂದ, ಕೇಳುವಿಕೆಯಿಂದ, ಅನುಭವಿಸುವುದರಿಂದ, ಆಲೋಚಿಸುವುದರಿಂದ ಏನೇನು ಕಲಿಯುವುದಕ್ಕೆ ಸಾಧ್ಯವೋ ಅದೆಲ್ಲಾ ಕಲಿತುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಗವಿಯಪ್ಪ—ನಮ್ಮ ಗೋಪಾಲ ಅಂದರೆ ಬಲಭೀಮ. ಏನು ಇವನ ದೇಹಶಕ್ತಿ! ಅಲ್ಲದೆ ಓಡಿದರೆ ಗಾಳಿ ಬೀಸಿದ ಹಾಗೆಯೇ.

ವೀರಪ್ಪ—ಗೋಪಾಲಾ, ನೀನು ನಿಜವಾಗಿಯೂ ಈ ಕಾಲಕ್ಕೆ ಅದೃಷ್ಟವಂತ. ಓದುಬರಹ ಯಾರಿಗೆ ಬೇಕು? ನೀನು ಬಲಿಷ್ಠನೂ ಸಾಹಸಿಯೂ ಆದರೆ ಸಾಕು. ಕಸರತ್ತು ಮಾಡಿದ್ದೀಯಾ? ಬೇಟೆ ಆಡುವುದನ್ನು ಕಲಿತಿದ್ದೀಯಾ? ಕುದುರೆ ಸವಾರಿ ಗೊತ್ತಾ ನಿನಗೆ?

ಗೋಪಾಲ—ತಕ್ಕಮಟ್ಟಿಗೆ. ಆದರೆ ಅವುಗಳಿಗೆ ಪ್ರಾಮುಖ್ಯತೆ ಕೊಡಲಿಲ್ಲ ನಾನು.

ವೀರಪ್ಪ—ಕತ್ತಿವರಸೆ ಕಲಿತಿದ್ದೀಯಾ ?

ಗೋಪಾಲ—ತಕ್ಕಮಟ್ಟಿಗೆ.

ವೀರಪ್ಪ, ಥಟ್ಟನೆ ತನ್ನ ಸಿಂಹಾಸನಕ್ಕೆ ಲಗತ್ತಿಸಿದ್ದ ಒರೆಯಿಂದ ಒಂದು ಭಾರಿ ಕತ್ತಿಯನ್ನು ಎಳೆದು 'ಇದರಲ್ಲಿ ಕತ್ತಿವರಸೆ ತೋರಿಸು' ಎಂದು ಗೋಪಾಲನಿಗೆ ತೋರಿಸಿದನು. ಗೋಪಾಲನು ತತ್‌ಕ್ಷಣ ಎದ್ದು ತನ್ನ ಮೈ ಮೇಲಿನ ಅಂಗಿಯನ್ನು ಬಿಚ್ಚಿ ಕತ್ತಿಯನ್ನು ತೆಗೆದುಕೊಂಡು ಅವಲೀಲೆಯಾಗಿ ಅದನ್ನು ತಿರುವುತ್ತ ಕತ್ತಿವರಸೆಯನ್ನು ತೋರಿಸಿದನು. ವೀರಪ್ಪನೂ, ಭಾಗ್ಯಲಕ್ಷ್ಮಿಯೂ, ಅಲ್ಲಿದ್ದ ಸೈನಿಕರೂ, ತದಿತರರೂ, ಆತನ ದೇಹದ ಸೌಷ್ಠವಕ್ಕೂ, ಸ್ನಾಯು ಬಂಧಗಳಿಗೂ, ಶಕ್ತಿಗೂ, ಚಾಕಚಕ್ಯಕ್ಕೂ ಬೆರಗಾಗಿ ಮೆಚ್ಚಿಕೊಂಡರು.

ವೀರಪ್ಪನು ಗೋಪಾಲನಿಗೆ ಸೈನ್ಯಕ್ಕೆ ಸೇರುವುದು ಬಹಳ ಒಳ್ಳೆಯದೆಂದೂ, ಆತನ ಭವಿಷ್ಯವು ಆದರಿಂದ ಬೆಳಗುವುದೆಂದೂ ಉಪದೇಶಿಸಿದನು. ಭಾಗ್ಯಲಕ್ಷ್ಮಿಯು ಪ್ರಾರ್ಥನಾ ಧೋರಣೆಯಿಂದ ಗೋಪಾಲನಿಗೆ "ಸೈನ್ಯಕ್ಕೆ ಸೇರು, ಗೋಪಾಲಾ," ಎಂದು ಹೇಳಿದಳು. ಗೋಪಾಲನು ಸುಮ್ಮನಿದ್ದನು. ಗವಿಯಪ್ಪ, "ಗೋಪಾಲನು ಸೈನ್ಯಕ್ಕೆ ಸೇರುವುದು ರಾಮಕ್ಕನಿಗೆ ಇಷ್ಟವಿಲ್ಲ ಸ್ವಾಮಿ, ಅವನ ತಂದೆಯ ವೃತ್ತಿಯಾದ ಕೊಡೆ ಹಿಡಿಯುವುದನ್ನೇ ಇವನು ಮಾಡಬೇಕೆಂದು ಅವಳ ಇಚ್ಛೆ. ಆ ವೃತ್ತಿಗೆ ಕೊಟ್ಟಿರುವ ಮಾನ್ಯದಿಂದ ಇವರಿಗೆಜೀವನ ನಡೆಯುತ್ತೆ. ಅವರಿಗೆ ಅದಕ್ಕಿಂತಲೂ ಹೆಚ್ಚು ಬೇಕೆಂಬ ಆಸೆ ಇಲ್ಲ. ಇನ್ನು ಐದಾರು ದಿನಗಳಲ್ಲಿ ಇವನಿಗೆ ಇಪ್ಪತ್ತು ವರ್ಷ ತುಂಬುವುದು. ಕೂಡಲೇ ಇವನು ತನ್ನ ತಂದೆಯ ವೃತ್ತಿಗೆ ಸೇರಬೇಕು. ಆದ್ದರಿಂದ ಮುಂಚಿತವಾಗಿ ಸ್ವಾಮಿಯ ದರ್ಶನ ಮಾಡಿಕೊಂಡು ಸ್ವಾಮಿಯ ಆಶೀರ್ವಾದ ತೆಗೆದುಕೊಂಡು ಹೋಗಲಿ ಎಂದೇ ನಾನು ಈತನನ್ನು ಈಗ ಇಲ್ಲಿಗೆ ಕರೆತಂದದ್ದು.

ವೀರಪ್ಪ—ಸರಿಯೇ. ಅವರವರ ಇಷ್ಟ ಹೇಗಿದ್ದರೆ ಹಾಗೆ ಆಗಲಿ. ಗವಿಯಪ್ಪನ ಪ್ರೇರಣೆಯಿಂದ ಗೋಪಾಲನು ವೀರಪ್ಪನಿಗೆ ನಮಸ್ಕಾರ ಮಾಡಿದನು. ವೀರಪ್ಪನು ಆಶೀರ್ವಾದ ಮಾಡಿದನು.

ಎಲ್ಲರೂ ವೀರಪ್ಪನ ಅನುಮತಿ ಪಡೆದು ಹೊರಡಲು ಸಿದ್ಧವಾದರು.

ವೀರಪ್ಪನು ಬಂದವರಿಗೆಲ್ಲ ಸೈನಿಕರಿಂದ ತರಿಸಿ ಭಾಗ್ಯಲಕ್ಷ್ಮಿಯಿಂದ ಫಲ ತಾಂಬೂಲಗಳನ್ನು ಕೊಡಿಸಿದನು. ಭಾಗ್ಯಲಕ್ಷ್ಮಿ ಕಮಲಮ್ಮನಿಗೆ ಅರಿಸಿನ ಕುಂಕುಮಗಳನ್ನೂ ಕೊಟ್ಟಳು.

## ೬

ಮೂರನೆಯ ದಿನ ಗವಿಯಪ್ಪನು ಗೋಪಾಲನನ್ನು ಮಾತ್ರ ಪ್ರಧಾನಿಯ ಮನೆಗೆ ಕರೆದುಕೊಂಡು ಹೋದನು. ಪ್ರಧಾನಿಗೆ ಇಬ್ಬರೂ ಉಚಿತ ರೀತಿಯಲ್ಲಿ ನಮಸ್ಕಾರ ಮಾಡಿದ ಮೇಲೆ ಇನ್ನು ನಾಲ್ಕೈದು ದಿನಗಳಲ್ಲಿ ಗೋಪಾಲನು ತನ್ನ ತಂದೆಯ ಕೆಲಸಕ್ಕೆ ಸೇರಿಕೊಳ್ಳಲಿರುವ ವಿಚಾರವನ್ನು ಗವಿಯಪ್ಪ ತಿಳಿಸಿದನು. ಪ್ರಧಾನಿಯು ಅಂತಃಪುರದಲ್ಲಿ ಕೆಲಸ ಮಾಡಲು ಗೋಪಾಲನು ಅರ್ಹನೇ ಎಂಬ ವಿಚಾರದಲ್ಲಿ ಆತನನ್ನು ಅನೇಕ ಪ್ರಶ್ನೆಗಳನ್ನು ಕೇಳಿ ಪರೀಕ್ಷಿಸಿದನು. ಪ್ರಧಾನಿಯು ಬಹಳ ಬುದ್ಧಿವಂತನೂ, ರಾಜ ಭಕ್ತನೂ, ಪ್ರಜಾಹಿತವನ್ನು ಬಯಸುವವನೂ, ಶೀಲವಂತನೂ ಆಗಿದ್ದನು. ಆತನಿಗೆ ಗೋಪಾಲನ ತಂದೆಯ ವಿಚಾರ ಚೆನ್ನಾಗಿ ತಿಳಿದಿತ್ತು. ಗೋಪಾಲನು ಅಂತಹ ಯೋಗ್ಯನ ಮಗನಾಗಿರುವುದನ್ನೂ ಅವನ ಮುಖ ಭಾವದಲ್ಲಿ ಮತ್ತು ಚೇಷ್ಟೆಗಳಲ್ಲಿ ಕಂಡು ಬರುತ್ತಿದ್ದ ಧೀರೋದಾತ್ತತೆಯನ್ನೂ, ಆತನ ಮನಸ್ತತ್ವವನ್ನು ಪರೀಕ್ಷಿಸಲು ತಾನು ಕೇಳಿದ ಪ್ರಶ್ನೆಗಳಿಗೆ ಆತನು ಕೊಟ್ಟ ಉತ್ತರಗಳನ್ನೂ, ರಾಜಭಕ್ತನೂ, ವೃದ್ಧನೂ ಆಗಿದ್ದ ಗವಿಯಪ್ಪನು ಗೋಪಾಲನನ್ನು ಕುರಿತು ಹೇಳಿದ ವಿಶ್ವಸನೀಯ ವಾಕ್ಯಗಳನ್ನೂ ಗಮನಿಸಿ ಪ್ರಧಾನಿಯು ಗೋಪಾಲನನ್ನು ಅಂತಃಪುರದ ಕೆಲಸಕ್ಕೆ ಅರ್ಹನೆಂದು ತೀರ್ಮಾನಿಸಿದನು. ಕೂಡಲೇ ಗವಿಯಪ್ಪನನ್ನೂ, ಗೋಪಾಲನನ್ನೂ ರಾಜಾಂತಃಪುರಕ್ಕೆ ಕರೆದುಕೊಂಡು ಹೋಗಿ ಮಹಾರಾಜ ರುದ್ರಸಿಂಹನಿಗೂ ಮಹಾರಾಣಿಗೂ ಇತರ ಮುಖ್ಯ ಪರಿಚಾರಕರಿಗೂ ಗೋಪಾಲನ ವಿಷಯವನ್ನೂ ಅರ್ಹತೆಯನ್ನೂ, ಆತನು ಇಪ್ಪತ್ತು ವರ್ಷಗಳು ತುಂಬಿದ ದಿನವೇ ಬಂದು ಕೆಲಸಕ್ಕೆ ಸೇರಲಿರುವುದನ್ನೂ ತಿಳಿಸಿದನು. ಗೋಪಾಲನ ಸೌಮ್ಯ ಮತ್ತು ಧೀರೋದಾತ್ತ ಮೂರ್ತಿಯನ್ನು ನೋಡಿ ಅವರಿಗೆಲ್ಲಾ ಮನಸ್ಸಿಗೆ ಸಂತೋಷವುಂಟಾಯಿತು.

ಗವಿಯಪ್ಪನು ಈ ಕೆಲಸಗಳನ್ನೆಲ್ಲ ಮುಗಿಸಿಕೊಂಡು, ತನ್ನ ಪ್ರಯತ್ನವು ಸಫಲವಾಯಿತೆಂದು ಹರ್ಷದಿಂದ ಗೋಪಾಲನನ್ನು ಮನೆಗೆ ಕರೆತಂದು ರಾಮಕ್ಕನಿಗೆ ನಡೆದ ಸಂಗತಿಗಳನ್ನು ತಿಳಿಸಿದನು. ರಾಮಕ್ಕನೂ, ಗೋಪಾಲನೂ ಕೃತಜ್ಞತೆಯನ್ನು ಸೂಚಿಸಿದ ಮೇಲೆ ಅವರ ಅನುಮತಿಯನ್ನು ಪಡೆದು ಗವಿಯಪ್ಪನು ರಾಜಾಂತಃಪುರಕ್ಕೆ ಹೊರಟು ಹೋದನು. ರಾಮಕ್ಕನಿಗೆ ತನ್ನ ಮಗನು ಕೆಲಸಕ್ಕೆ ಸೇರಲಿರುವನೆಂದೂ, ಆತನು ಎಲ್ಲರಿಂದಲೂ ಯೋಗ್ಯನೆನಿಸಿಕೊಂಡನೆಂದೂ, ವಂಶಗೌರವವನ್ನು ಕಾಪಾಡುವವನೆಂದೂ, ಬಹಳ ಆನಂದವುಂಟಾಯಿತು. ಗೋಪಾಲನ ಯೋಗ್ಯತೆಯನ್ನು ಆವಳ ಮನ ಮೆಚ್ಚುವಾಗೆಲ್ಲ ಅವನ ಸೌಮ್ಯ ಧೀರ ಮೂರ್ತಿಯನ್ನು ಅವಳು ನೋಡುವಾಗಲೆಲ್ಲ ಆವಳಿಗೆ ಬಹಳ ಕಾಲದ ಹಿಂದೆಯೇ ತೀರಿ ಹೋಗಿದ್ದ ತನ್ನ ಗಂಡನು ನೆನಪಿಗೆ ಬರುತ್ತಿದ್ದನು. ತನ್ನನ್ನೂ, ಚಿಕ್ಕ ಮಗುವನ್ನೂ ಅನಾಥರನ್ನಾಗಿ ಬಿಟ್ಟು ತನ್ನ ಗಂಡನು ತೀರಿಕೊಂಡ ಮೇಲೆ ತಮ್ಮನ್ನು ಕಾಪಾಡಿ ವಂಶವನ್ನು ಉದ್ಧಾರ ಮಾಡಿದ ಭಗವಂತನ ಕೃಪೆಯನ್ನು ಅವಳು ಸದಾ ನೆನೆಯುತ್ತಿದ್ದಳು.

ಮಾರನೆಯ ದಿನವೇ ಗೋಪಾಲನು ಕೆಲಸಕ್ಕೆ ಸೇರಬೇಕಾಗಿತ್ತು. ಆ ದಿನ ಸಾಯಂಕಾಲ ರಾಮಕ್ಕ ಗೋಪಾಲನನ್ನು ವರದಪ್ಪ ಸ್ವಾಮಿಗಳ ಆಶ್ರಮಕ್ಕೆ ಕರೆದು ಕೊಂಡುಹೋದಳು. ಆಶ್ರಮದ ಪ್ರಶಾಂತ ವಾತಾವರಣವು ಗೋಪಾಲನ ಮನಸ್ಸಿಗೆ ಬಹಳ ಶಾಂತಿಪೂರ್ಣವಾದ ಆನಂದವನ್ನುಂಟುಮಾಡಿತು. ವರದಪ್ಪ ಸ್ವಾಮಿಗಳ ಶಾಂತ ಸ್ವಭಾವವೂ, ಅಲ್ಲಿ ಶಿಷ್ಯವರ್ಗದ ಮೃದು ಮಧುರವಾದ ಭಾಷಣ ಪ್ರವರ್ತನೆಗಳೂ ಆತನ ಮನಸ್ಸನ್ನು ಬಹಳ ಸೆಳೆದವು. ಅವು ಆತನ ಸಹಜವಾದ ಸ್ಥೈರ್ಯವನ್ನು ಅಲುಗಾಡಿಸದೆ ಅವ್ಯಕ್ತ ರೀತಿಯಲ್ಲಿ ಉನ್ನತ ಮಟ್ಟಕ್ಕೆ ಏರಿಸಿದವು. ರಾಮಕ್ಕ ಗೋಪಾಲನನ್ನು ಗುರುಗಳ ಹತ್ತಿರಕ್ಕೆ ಕರೆದುಕೊಂಡು ಹೋಗಿ ನಮಸ್ಕಾರ ಮಾಡಿಸಿ ಮಾರನೆಯ ದಿನವೇ ಆತನು ತನ್ನ ವಂಶವೃತ್ತಿಯನ್ನು ಸ್ವೀಕರಿಸುವುದಾಗಿ ತಿಳಿಸಿದಳು. ಅದನ್ನು ಕೇಳಿ ಗುರುಗಳು ಬಹಳ ಸಂತೋಷಪಟ್ಟು ಗೋಪಾಲನನ್ನು ಆಶೀರ್ವದಿಸಿದರು. ಗೋಪಾಲನನ್ನು ಹಿಂದೆಯೇ ಗುರುಗಳು ನೋಡಿದ್ದರು. ಆತನ ಸಹಜ ಶಕ್ತಿ ಸ್ಥೈರ್ಯಗಳು ಅವರಿಗೆ ತಿಳಿದಿದ್ದವು. ಆತನು ಸೈನ್ಯದಲ್ಲಿ ಸೇರದೆ ವಂಶ

ಪಾರಂಪರ್ಯವಾದ ವೃತ್ತಿಯನ್ನು ಸ್ವೀಕರಿಸಲಿರುವುದೇಕೆ ? ಎಂಬುದು ಗುರುಗಳಿಗೆ ಮೊದಲೇ ಗೊತ್ತಿತ್ತು.

ಆಮೇಲೆ ಗುರುಗಳು ಶಿಷ್ಯರಿಗೆ ಪಾಠ ಪ್ರವಚನಗಳನ್ನು ಮಾಡ ತೊಡಗಿದರು. ಕಮಲಮ್ಮನು ಸಹ ಪಾಠ ಕಲಿಯುತ್ತಿದ್ದಳು. ಗುರುಗಳು ಅಭಿಜ್ಞಾನ ಶಾಕುಂತಲದಲ್ಲಿನ ಪಂಚಮಾಂಕವನ್ನು ಹೇಳುತ್ತಿದ್ದರು. ರಾಮುಕನೂ ಗೋಪಾಲನೂ ದೂರದಲ್ಲಿ ಕುಳಿತು ಗುರುಗಳ ಪಾಠ ಪ್ರವಚನಗಳನ್ನು ಕೇಳುತ್ತಿದ್ದರು. ಗುರುಗಳು ಪಾಠ ಹೇಳುತ್ತ ಈ ಕೆಳಗಿನ ಶ್ಲೋಕಕ್ಕೆ ಬಂದರು.

> ಔತ್ಸುಕ್ಯ ಮಾತ್ರ ಮವಸಾದ ಯತಿ ಪ್ರತಿಷ್ಠಾ
> ಕ್ಲಿಶ್ನಾತಿ ಲಬ್ಧ ಪರಿಪಾಲನ ವೃತ್ತಿ ರೇವಂ ।
> ನಾತಿ ಶ್ರಮಾಪ ನಯ ನಾಯ ನಚ ಶ್ರಮಾಯ
> ರಾಜ್ಯಂ ಸ್ವಹಸ್ತ ಧೃತ ದಂಡಮಿವಾತ ಪತ್ರಂ ॥

ಈ ಶ್ಲೋಕವನ್ನು ಗುರುಗಳು ವಿಪುಲವಾಗಿ ವಿವರಿಸಿದರು. ಇದರಲ್ಲಿ "ಆದರ್ಶ ರಾಜನಾದ ದುಷ್ಯಂತನು ರಾಜ್ಯಭಾರಮಾಡುವುದರಲ್ಲಿ ಸುಖವೂ ಇದೆ ಕೆಲಸವೂ ಜವಾಬ್ದಾರಿಯೂ ಇವೆ ಎಂಬ ವಿಷಯವನ್ನು ವಿವರಿಸಲು ಕೊಡೆ ಹಿಡಿದವನ ಉಪಮಾನವನ್ನು ಕೊಟ್ಟಿರುತ್ತಾನೆ. ಕೊಡೆಯನ್ನು ಕಷ್ಟಪಟ್ಟು ಹಿಡಿದುಕೊಂಡಿರುವ ತನಕ ಅದು ಮಾನವನಿಗೆ ನೆರಳನ್ನು ಕೊಡುತ್ತದೆ. ಸೋಮಾರಿಯಾಗಿ ಅದನ್ನು ಎತ್ತಿ ಹಿಡಿಯದಿದ್ದರೆ ಅವನಿಗೆ ನೆರಳಿಲ್ಲ. ಹೀಗೆಯೇ ರಾಜನು ಧರ್ಮಿಷ್ಠನಾಗಿ ಕಷ್ಟಪಟ್ಟು ಪ್ರಜಾ ಪಾಲನವನ್ನು ಮಾಡಿದರೆ ಅವನಿಗೆ ಸುಖವುಂಟು. ತನ್ನ ಕರ್ತವ್ಯವನ್ನು ನಿರ್ವಹಿಸದ, ಪ್ರಜಾ ಕ್ಷೇಮಕ್ಕಾಗಿ ಶ್ರಮಿಸದ ರಾಜನಿಗೆ ಸುಖವೆಲ್ಲಿ ?" ಎಂಬ ಈ ಭಾವಗಳನ್ನು ಗುರುಗಳು ಮನ ಮುಟ್ಟುವಂತೆ ವಿವರಿಸಿದರು. ದೂರದಲ್ಲಿ ಕುಳಿತುಕೊಂಡು ಕೇಳುತ್ತಿದ್ದ ಗೋಪಾಲನಿಗೆ ಛತ್ರದ ಉಪಮಾನದಲ್ಲಿ ವಿಶಿಷ್ಟವಾದ ಆಸಕ್ತಿ ಉಂಟಾದುದು ಸಹಜವೇ. ಆತನು ಕೊಡೆ ಹಿಡಿಯುವ ಕೆಲಸವನ್ನು ತನ್ನ ಮುಂದಿನ ಬಾಳಿನಲ್ಲಿ ಕೊನೆಯ ತನಕ ಮಾಡಲಿರುವವನಾಗಿದ್ದನು. ಆದರೆ ಈತನು ಕೊಡೆ ಹಿಡಿಯುವುದಕ್ಕೂ ದುಷ್ಯಂತನು ಹೇಳಿದ ಉಪಮಾನಕ್ಕೂ ಒಂದು ವ್ಯತ್ಯಾಸವಿತ್ತು. ದುಷ್ಯಂತನು ತಾನು ವಹಿಸಿದ್ದ ರಾಜ್ಯವನ್ನು ಕೊಡೆಗೆ ಹೋಲಿಸಿಕೊಂಡಿದ್ದನು. ಅದನ್ನು ತಾನು ಹಿಡಿದರೆ ತನಗೆ ಅದರಿಂದ ನೆರಳು. ಇದು ಭೂಪಾಲನಾದ

ದುಷ್ಯಂತನಿಗೆ ಹೊಂದಿದ್ದ ಉಪಮಾನ. ಆದರೆ ಭೂಪಾಲನಲ್ಲದ ಗೋಪಾಲನಿಗೆ ಕೊಡೆ ಹಿಡಿಯುವುದಕ್ಕೆ ಇದು ಹೇಗೆ ಅನ್ವಯಿಸಬೇಕು ? ಮಹಾ ಕವಿಗಳ ಉಪಮಾನಗಳು ಒಂದೊಂದು ಸಲ ಅನುದ್ದಿಷ್ಟವಾದ ಒಳ್ಳೆಯ ಅರ್ಥವನ್ನು ಸಹ ಕೊಡಬಲ್ಲವು. ಗೋಪಾಲನು ಹಿಡಿಯಲಿರುವ ಕೊಡೆ ನೆರಳು ಕೊಡಲಿರುವುದು ಆತನಿಗಲ್ಲ; ಆದರೆ ಭೂಪಾಲನಿಗೆ. ತನಗಾಗಿ ಕೊಡೆ ಹಿಡಿಯುವುದಕ್ಕಿಂತಲೂ ಇತರರಿಗೆ ಕೊಡೆ ಹಿಡಿಯುವುದು ಮತ್ತಷ್ಟು ಉತ್ತಮವಾದುದು. ತಾನು ಭೂಪಾಲನಾದರೆ ಕೊಡೆಯನ್ನು ತಾನು ಹಿಡಿದು ಕೊಳ್ಳುವುದಕ್ಕಿಂತಲೂ ಇತರರಿಗೆ ಹಿಡಿಯುವುದು ಒಳ್ಳೆಯದಲ್ಲವೇ ? ಈ ರೀತಿಯಾದ ಭಾವಗಳು ಗೋ ಪಾ ಲ ನ ಮನಸ್ತಂತ್ರಿಯಲ್ಲಿನ ವ್ಯಕ್ತ ನಾದದಲ್ಲಿ ಅಂತರ್ನಾದಗಳಾಗಿ ಅವ್ಯಕ್ತವಾಗಿ ಹೊರಬಿದ್ದು ಅಲ್ಲಿಯೇ ಮಾಯವಾದವು. ಪಾಠ ಪ್ರವಚನವು ಮುಗಿದ ಕೂಡಲೆ ತದೇಕಧ್ಯಾನದಲ್ಲಿದ್ದ ಗೋಪಾಲನು ಒಂದು ನಿಟ್ಟುಸಿರನ್ನು ಬಿಟ್ಟು ಮೇಲಕ್ಕೆದ್ದನು. ರಾಮಕ್ಕನೂ ಮೇಲಕ್ಕೆದ್ದಳು. ಕಮಲಮ್ಮನು ಇವರ ಬಳಿಗೆ ಬಂದಳು. ರಾಮಕ್ಕನ ಮುಖವನ್ನೂ ನೋಡಿದಳು. ಕೆಲಸಕ್ಕೆ ಸೇರಲಿರುವ ಗೋಪಾಲನ ಮುಖವನ್ನೂ ನೋಡಿದಳು. ಗೋಪಾಲನು ಅವಳ ಮುಖವನ್ನು ತದೇಕ ದೃಷ್ಟಿಯಿಂದ ನೋಡಿ ಆ ಕಣ್ಣುಗಳಲ್ಲಿ ತೋರುತ್ತಿದ್ದ ವಿದ್ಯಾ ಪ್ರಭೆಯನ್ನು ತನ್ನೊಳಕ್ಕೆ ಒಂದು ಸಲ ಹೀರಿಕೊಂಡನು. ಕಮಲಮ್ಮನಿಗೆ ಹೇಳಿ ರಾಮಕ್ಕನೂ ಗೋಪಾಲನೂ ಮನೆಯ ಕಡೆಗೆ ಹೊರಟರು.

## 2

ಗಗನ ಮಹಲಿನಲ್ಲಿ ಮಂತ್ರಾಲೋಚನಾ ಮಂದಿರದಲ್ಲಿ ಘನಗಿರಿ ಮಹಾರಾಜನಾದ ರುದ್ರಸಿಂಹನು ಒಬ್ಬನೇ ಆಲೋಚನಾಪರನಾಗಿ ಕುಳಿತಿದ್ದನು. ಆಗ ಸೂರ್ಯೋದಯಾನಂತರ ಸುಮಾರು ಎಂಟು ಗಳಿಗೆಗಳು ಕಳೆದಿದ್ದವು. ಆಲೋಚನಾ ಮಂದಿರದ ಬಾಗಿಲಿನ ಹೊರಗೆ ಒಬ್ಬ ದ್ವಾರಪಾಲಕನೂ ಮತ್ತು ಒಬ್ಬ ಪರಿಚಾರಕನೂ ಮಾತ್ರ ನಿಂತಿದ್ದರು. ರಾಜನು ತನ್ನ ಸಿಂಹಾಸನದ ಪಕ್ಕದಲ್ಲಿ ಒಂದು ಜಾಗಟೆಯನ್ನು ಇಟ್ಟು ಕೊಂಡಿದ್ದನು. ಅದನ್ನು ರಾಜನು ಒಂದು ಸಲ ಬಾರಿಸಿದರೆ ಪರಿಚಾರಕನೂ ಎರಡು ಸಲ ಬಾರಿಸಿದರೆ ದ್ವಾರ

ಪಾಲಕನೂ ಮಂದಿರದೊಳಗೆ ಪ್ರವೇಶ ಮಾಡಿ ರಾಜನ ಹತ್ತಿರಕ್ಕೆ ಬರಬೇಕೆಂದು ಸಂಕೇತವಿತ್ತು. ರಾಜನು ತನ್ನಷ್ಟಕ್ಕೆ ತಾನೇ ಹೇಳಿ ಕಳುಹಿಸುವವರೆಗೂ ಪ್ರಧಾನಿ ಮೊದಲುಗೊಂಡು ಇನ್ನಾರಿಗೂ ಒಳಗಡೆ ಪ್ರವೇಶವಿರಲಿಲ್ಲ. ಆಲೋಚನಾ ಮಂದಿರದೊಳಗೆ ಯಾರೇನು ಮಾತನಾಡಿದರೂ ಹೊರಗೆ ನಿಂತಿದ್ದ ದ್ವಾರಪಾಲಕನಿಗಾಗಲಿ, ಪರಿಚಾರಕನಿಗಾಗಲೀ, ಇನ್ನಾರಿಗಾಗಲಿ ಕೇಳಿಸುತ್ತಿರಲಿಲ್ಲ.

ಪ್ರಧಾನಿ ಬಂದು ಆ ಲೋ ಚ ನಾ ಮಂದಿರದ ಬಾಗಿಲಿನ ಹೊರಗೆ ಕಾದಿದ್ದನು. ಪ್ರಧಾನಿಯು ಆಗಮನವನ್ನು ತಿಳಿಸುವುದಕ್ಕೋಸುಗ ಪರಿಚಾರಕನು ಒಳಗೆ ಹೋಗುವಂತಿರಲಿಲ್ಲ. ರುದ್ರಸಿಂಹನ ಆಜ್ಞೆಯೆಂದರೆ ಅಷ್ಟು ಕಠಿಣವಾದದ್ದು. ಅದನ್ನು ಮೀರಿ ನಡೆದವರಿಗೆ ಕಠಿಣ ಶಿಕ್ಷೆ. ರಾಜನ ಆಜ್ಞೆಯನ್ನು ಪರಿಪಾಲಿಸಿ ಆತನ ಮೆಚ್ಚುಗೆಯನ್ನು ಪಡೆದವರಿಗೆ ರಾಜನ ಮನಸ್ಸಿಗೆ ಬಂದಂತೆ ವಿಪುಲವಾದ ಸಂಭಾವನೆ ಸಿಗುತ್ತಿತ್ತು. ರುದ್ರಸಿಂಹನು ಸತ್ಯಕ್ಕೆ ಹೆಚ್ಚು ಬೆಲೆಯನ್ನು ಕೊಡುತ್ತಿದ್ದನು. ತನ್ನ ವಂಶದ ಅರಸರೆಲ್ಲಾ ಸತ್ಯ ವಾಕ್ಯ ಪರಿಪಾಲನೆಗೆ ಹೆಸರು ವಾಸಿಯಾದವರೆಂದೂ ತಾನು ಸತ್ಯ ವಾಕ್ಯ ಪರಿಪಾಲನೆ ಮಾಡಿ ಆ ಹೆಸರನ್ನು ಉಳಿಸಬೇಕೆಂದೂ ಆತನು ಭಾವಿಸಿದ್ದನು. ಆತನಿಗೆ ಒಳ್ಳೆಯ ವಿವೇಕವಿರಲಿಲ್ಲ. ಆದರೆ ತಾನು ಯಾವುದನ್ನು ಒಳ್ಳೆಯದೆಂದು ಭಾವಿಸಿದರೂ ಅದರಲ್ಲಿ ತೀವ್ರ ನಿಷ್ಠೆಯನ್ನು ತೋರಿಸುತ್ತಿದ್ದನು.

ಹೊರಗೆ ನಿಂತಿದ್ದ ಪ್ರಧಾನಿ ಈ ದಿನ ಮಹಾರಾಜನು ಏಕೆ ಇಷ್ಟು ತಡವಾದರೂ ಜಾಗಟೆಯನ್ನು ಬಾರಿಸದೆ ತನ್ನ ಆಗಮನವನ್ನು ತಿಳಿದುಕೊಳ್ಳದೆ ಇದ್ದಾನೆ ? ಏನೋ ಬಹಳ ಆಲೋಚಿಸುತ್ತಿದ್ದಂತಿದೆ. ಏನಿರಬಹುದು? ಎಂದು ಊಹಾ ಪೋ ಹ ಗ ಳ ಲ್ಲಿ ಅಲೆದಾಡುತ್ತಿದ್ದನು. ರಾಜ ಭಕ್ತನಾದ ಪ್ರಧಾನಿಯು ತಡವಾದಂತೆಲ್ಲ ರಾಜನು ಆರೋಗ್ಯವಂತನಾಗಿ ಇದ್ದಾನಲ್ಲವೆ ? ಆತನು ತಡಮಾಡುವುದಕ್ಕೆ ಆಲೋಚನಾ ಮಗ್ನತೆ ಅಲ್ಲದೆ ಇನ್ನಾವ ಕಾರಣವೂ ಇರಲಾರದಲ್ಲವೇ ? ಎಂಬುದಾಗಿಯೂ ಒಂದು ಕಡೆ ಯೋಚಿಸುತ್ತಿದ್ದನು.

ಕೊನೆಗೆ ಜಾಗಟೆಯ ಶಬ್ದ ಕೇಳಿಬಂತು. ಪರಿಚಾರಕನು ವೇಗವಾಗಿ ರಾಜನ ಸಮೀಪಕ್ಕೆ ಓಡಿ ಹೋದನು. ರಾಜನು ಪರಿಚಾರಕನನ್ನು ಹೊರಗಡೆ ಯಾರಾದರೂ ಕಾದಿರುವರೇ ಎಂದು ಕೇಳಿದನು. ಹೊರಗಡೆ ಪ್ರಧಾನಿ ಕಾದಿರುವನೆಂದು ಪರಿಚಾರಕನು ತಿಳಿಸಿದನು. ಅದಕ್ಕೆ ರುದ್ರಸಿಂಹನು "ಪ್ರಧಾನಿ

ಯೊಂದಿಗೆ ಆಲೋಚನೆ ಮಾಡಲು ಈಗ ಅವಕಾಶವಿಲ್ಲ. ಪುನಃ ಮೆರವಣಿಗೆಯು ಯಾವುದ ಕೊನೆಯ ಭಾಗದಲ್ಲಿ ಬರಬೇಕಾಗಿ ಪ್ರಧಾನಿಗೆ ತಿಳಿಸು. ಎಂದು ಪರಿಚಾರಕನಿಗೆ ಹೇಳಿದನು. ಪರಿಚಾರಕನು ಈ ವಿಷಯವನ್ನು ಪ್ರಧಾನಿಗೆ ತಿಳಿಸಿದನು. ಪ್ರಧಾನಿಯೊಂದಿಗೆ ಮಾತನಾಡಲು ಅವಕಾಶವಿಲ್ಲವೆಂದು ರುದ್ರಸಿಂಹನು ಹೇಳಿದುದು ಇದೇ ಮೊದಲನೆಯ ಬಾರಿ. ಇದರಿಂದ ಪ್ರಧಾನಿಗೆ ಸಂಶಯವೂ, ಅವನ ಮನಸ್ಸಿಗೆ ನೋವೂ ಆದವು. ಆದರೂ ಆತನು ರಾಜನ ಹಿತಚಿಂತಕನಾಗಿದ್ದುದರಿಂದ ತನ್ನ ಮನೋ ವಿಕಾರವನ್ನು ಮುಖದಲ್ಲಿ ತೋರಿಸದೆ "ಪ್ರಭುಗಳ ಅಪ್ಪಣೆ" ಎಂದು ಹೇಳಿ ಹಿಂತಿರುಗಿದನು. ಹಿಂತಿರುಗುವಾಗ ಪ್ರಧಾನಿಯು ತಾನು ಬಾಗಿಲಿನ ಬಳಿ ಬಹಳ ಹೊತ್ತು ಕಾದಿದ್ದನ್ನೂ, ತಾನು ಹಿಂತಿರುಗಿ ಹೋಗುವುದನ್ನೂ, ಗಮನಿಸುತ್ತಾ ನಿಂತಿದ್ದು ತಾನು ಹಿಂತಿರುಗಿದ ಕೂಡಲೇ ರಾಣಿ ವಾಸಕ್ಕೆ ಓಡಿಹೋದ ರಾಣಿಯ ಸಖಿಯೊಬ್ಬಳನ್ನು ಗಮನಿಸಿದನು. ಸೂಕ್ಷ್ಮ ಬುದ್ಧಿಯಾದ ಪ್ರಧಾನಿಗೆ ಇವಳ ಪ್ರವರ್ತನೆ ಸಂದೇಹವನ್ನುಂಟು ಮಾಡಿತು. ಆದರೆ ಅವಳು ಸ್ವಭಾವತಃ ಅಮಾಯಕಳೆಂದೂ, ಯಾರ ಪ್ರೇರೇಪಣೆಯಿಂದಲೋ ಬಂದು ತನ್ನ ಆಗಮನ ನಿರ್ಗಮನಗಳನ್ನು ಗಮನಿಸುತ್ತಿದ್ದು ಓಡಿ ಹೋದವಳೆಂದೂ ಆತನು ಊಹೆ ಪಟ್ಟನು. ತನ್ನ ಮನೆಗೆ ಹೋದ ಕೂಡಲೆ ಅವಳಿಗೆ ಆಪ್ತಳೂ ತನಗೆ ನಂಬಿಕೆಯುಳ್ಳವಳೂ ಆದ ಪರಿಚಾರಿಕೆಯನ್ನೊಬ್ಬಳನ್ನು ಅವಳ ಬಳಿಗೆ ಹೋಗಿ ಉಪಾಯದಿಂದ ಸಮಾಚಾರವನ್ನು ತಿಳಿದುಕೊಂಡು ಬರಬೇಕೆಂದು ಕಳುಹಿಸಿದನು. ಮಧ್ಯಾಹ್ನದ ವೇಳೆಗೆ ಆಕೆಯು ಹಿಂತಿರುಗಿ ಬಂದು ತನಗೆ ಗೊತ್ತಾದ ವಿಷಯಗಳನ್ನು ಪ್ರಧಾನಿಗೆ ಅರಿಕೆ ಮಾಡಿದಳು.

ನಡೆದ ಸಂಗತಿ ಹೀಗಿತ್ತು. ಸೈನ್ಯದಲ್ಲಿ ಕಾಲಾಳುಗಳು, ಕುದುರೆಯ ಸವಾರರು, ಆನೆಯ ಸವಾರರು ಎಂಬ ಮೂರು ತೆರದ ವಿಭಾಗಗಳಿದ್ದುದಲ್ಲದೆ ಒಂದೊಂದು ವಿಭಾಗದಲ್ಲಿಯೂ ಸೈನಿಕ, ನಾಯಕ, ಮಹಾನಾಯಕ, ದಂಡನಾಯಕ, ಎಂಬ ಹುದ್ದೆಗಳು ಇದ್ದವು. ಸೈನ್ಯದಲ್ಲಿ ಕೆಲವರು ಅರಸು ಮನೆತನಕ್ಕೆ ಸೇರಿದವರೂ, ಅರಸು ಬಂಧುಗಳೂ ಇದ್ದರು. ಅಂತಹವರಲ್ಲಿ ಜಯಸಿಂಹನೆಂಬ ಅರಸು ಮನೆತನದವನು ಆನೆಯ ಸವಾರನಾಗಿದ್ದನು. ಆತನ ಹೆಂಡತಿಯ ಹೆಸರು ಗೌರಾಂಬೆ. ಸೈನಿಕರಿಗೆ ಉನ್ನತ ಹುದ್ದೆಗಳಿಗೆ ಬಡ್ತಿಯನ್ನು

ಕೊಡುವ ಅಧಿಕಾರವನ್ನು ಪ್ರಧಾನಿಯೂ, ಸೈನ್ಯಾಧಿಪತಿಯೂ ರಾಜಾಜ್ಞೆಗೆ ಒಳಪಟ್ಟು ನಿರ್ವಹಿಸುತ್ತಿದ್ದರು. ಎರಡು ದಿನಗಳ ಹಿಂದೆ ಪ್ರಧಾನಿಯೂ, ಸೈನ್ಯಾಧಿಪತಿಯೂ ಸೇರಿ ಬಡ್ತಿ ಕೊಡುವುದಕ್ಕೆ ಯೋಗ್ಯರಾದ ಆನೆಯ ಸವಾರರನ್ನು ಪರೀಕ್ಷಿಸಿ ಆಯ್ಕೆ ಮಾಡಿ ಕೆಲವರಿಗೆ ಮಾತ್ರ ಬಡ್ತಿಯನ್ನು ಕೊಟ್ಟಿದ್ದರು. ಅದರಲ್ಲಿ ಜಯಸಿಂಹನಿಗೆ ಬಡ್ತಿ ಕೊಡಲಿಲ್ಲ. ಗೌರಾಂಬೆಯು ತನ್ನ ಗಂಡನಿಗೆ ಬಡ್ತಿ ತಪ್ಪದೆ ಆಗುವುದೆಂದು ಬಹಳ ಆಸೆಯಿಂದಿದ್ದಳು. ಅವಳಿಗೆ ನಿರಾಶೆಯಾದುದಲ್ಲದೆ ಬಡ್ತಿ ಸಿಕ್ಕದ ಇನ್ನೊಬ್ಬ ಆನೆಯ ಸವಾರನ ಹೆಂಡತಿಯು ಇವಳನ್ನು ಪರಿಹಾಸ ಮಾಡಿದಳು. "ಅರಸು ಮನೆತನದವರಿಗೆ ಬಡ್ತಿ ಮೀಸಲಾಗಿಟ್ಟಿಲ್ಲ. ನಮ್ಮ ಯಜಮಾನರು ಅದೃಷ್ಟವಂತರು. ನಿಮ್ಮ ಯಜಮಾನರಿಗೆ ಅದೃಷ್ಟವಿಲ್ಲ." ಎಂದೂ ಆಡಿದಳು. ಅಷ್ಟೇ ಅಲ್ಲದೆ ದುರಾವೇಶದಲ್ಲಿ "ಅದೃಷ್ಟವಿಲ್ಲದಿದ್ದರೆ ಮಹಾರಾಜನೇ ಭಿಕಾರಿಯಾಗುವನು. ಅದೃಷ್ಟವಿದ್ದರೆ ಭಿಕಾರಿಯೇ ಮಹಾರಾಜನಾಗುವನು. ನೀನು ಅರಸುಗಳ ಬಂಧುವೆಂದು ಹೆಸ್ಮೆಪಟ್ಟರೆ ಅದೃಷ್ಟ ಕೈ ಹಿಡಿಯುವುದೇ ?" ಎಂದೂ ಆಡಿದಳು. ಇದು ಗೌರಾಂಬೆಯು ಮನಸ್ಸಿಗೆ ತೀವ್ರಾಘಾತವನ್ನುಂಟುಮಾಡಿತು. ಅವಳು ಪೆಟ್ಟುತಿಂದ ನಾಗರ ಹಾವಿನಂತೆ ಮನಸ್ಸಿನಲ್ಲೇ ರೇಗಿದಳು. ಆದರೆ ಪ್ರತ್ಯುತ್ತರ ಕೊಡಲಾರದೆ ಬಾಯಿ ಮುಚ್ಚಿಕೊಂಡು ಬುಸುಗುಟ್ಟಿದಳು. ಒಂದು ಕ್ಷಣವೂ ಅಲ್ಲಿ ನಿಲ್ಲಲಾರದೆ ನೇರವಾಗಿ ರಾಜಾಂತಃಪುರಕ್ಕೆ ಹೋದಳು. ಅವಳು ಅರಸು ಬಂಧುವಾಗಿದ್ದುದರಿಂದ ಯಾವಾಗಲಾದರೂ ಅವಳಿಗೆ ರಾಣಿಯೊಂದಿಗೆ ಭೇಟಿ ಲಭಿಸುತ್ತಿತ್ತು. ಅವಳು ಹೇಗೋ ರಾಣಿಯನ್ನು ನೋಡಿ ಅವಳಿಗೆ ತನಗೂ ಅರಸು ಮನೆತನಕ್ಕೂ, ಮಹಾರಾಜನಿಗೂ ಅವಮಾನಕರವಾಗಿ ಬಡ್ತಿ ಸಿಕ್ಕಿದ ಸೈನಿಕನ ಹೆಂಡತಿ ಆಡಿದ ಮಾತುಗಳನ್ನೆಲ್ಲಾ ತಿಳಿಸಿದಳು. ಇದರಿಂದ ರಾಣಿಗೆ ಬಹಳ ಕೋಪ ಬಂದಿತು. ಅವಳು ಹಿಂದಿನ ರಾತ್ರಿ ಈ ವಿಷಯವನ್ನು ರುದ್ರಸಿಂಹನಿಗೆ ತಿಳಿಸಿದ್ದಳು. ಆದುದರಿಂದಲೇ ರುದ್ರಸಿಂಹನು ಅಂದಿನ ಬೆಳಿಗ್ಗೆ ಮಂತ್ರಾಲೋಚನಾ ಮಂದಿರದಲ್ಲಿ ಬಹಳ ಹೊತ್ತು ಯೋಚನೆ ಮಾಡುತ್ತಿದ್ದು ಪ್ರಧಾನಿಯೊಂದಿಗೆ ಈ ವಿಷಯವನ್ನು ಚರ್ಚಿಸಲು ಇಷ್ಟವಿಲ್ಲದೆ ಆತನನ್ನು ಹಿಂದಕ್ಕೆ ಕಳುಹಿಸಿದ್ದು.

ರಾಜಭಕ್ತನಾದ ಪ್ರಧಾನಿಯು ರಾಜನ ಮತ್ತು ರಾಣಿಯ ಮನಸ್ಸಿಗೆ ಸಮಾಧಾನ ಮಾಡುವುದಕ್ಕೂ, ಬಡ್ತಿಗಳನ್ನು ಕೊಟ್ಟ ವಿಷಯದಲ್ಲಿ ತನಗೂ ಸೈನ್ಯಾಧಿಪತಿಗೂ ಯಾವ ದೋಷಾರೋಪಣೆ ಬಾರದಿರುವುದಕ್ಕೂ ಏನು ಮಾಡಬೇಕೆಂದು ಯೋಚಿಸ ತೊಡಗಿದನು. ಪ್ರಧಾನಿಯು ರಾಜನ ಅಪ್ಪಣೆಯಂತೆ ಪುನಃ ಮೂರನೆಯ ಯಾಮದ ಕೊನೆಯಲ್ಲಿ ಆಲೋಚನಾಮಂದಿರಕ್ಕೆ ಹೋಗಿ ಬಾಗಿಲಿನ ಬಳಿ ಕಾದಿದ್ದನು. ರಾಜನು ಒಳಗಡೆಯಿಂದ ಜಾಗಟೆಯನ್ನು ಬಾರಿಸಿದನು. ಪರಿಚಾರಕನು ಒಳಕ್ಕೆ ಓಡಿಹೋಗಿ, ಪ್ರಧಾನಿಯು ಬಂದು ಪ್ರಭುಗಳ ಅಪ್ಪಣೆಗಾಗಿ ಕಾದಿರುವರೆಂದು ತಿಳಿಸಿದನು. ಅಷ್ಟು ಹೊತ್ತಿಗಾಗಲೇ ಮನಸ್ಸಿನ ಆವೇಶವು ಸ್ವಲ್ಪ ಕಡಿಮೆಯಾಗಿದ್ದ ರುದ್ರಸಿಂಹನು ಪ್ರಧಾನಿಯನ್ನು ಒಳಕ್ಕೆ ಕರೆಸಿಕೊಂಡನು. ಪ್ರಧಾನಿಯು ರಾಜನನ್ನು ಸಮೀಪಿಸಿದ ಕೂಡಲೇ ರಾಜನು ಥಟ್ಟನೆ ಎದ್ದು "ರಾಣೀವಾಸಕ್ಕೆ ಹೋಗೋಣ ಬನ್ನಿ" ಎಂದು ಸ್ವಲ್ಪ ಕೋಪದಿಂದ ಪ್ರಧಾನಿಗೆ ಹೇಳಿ ಆತನನ್ನು ರಾಣಿವಾಸಕ್ಕೆ ಕರೆದುಕೊಂಡು ಹೋದನು.

ಮಹಾರಾಣಿಯು ಚಿಂತಾಕ್ರಾಂತಳಾಗಿದ್ದಳು. ಅವಳು ಎಂದಿನಂತೆ ಮಹಾರಾಜನನ್ನು ಕರೆದುಕೊಂಡು ಹೋಗುವುದಕ್ಕೆ ಸಂತೋಷದಿಂದ ಎದ್ದು ಬರಲಿಲ್ಲ. ಇವರು ಬರುತ್ತಿರುವುದನ್ನು ಕಂಡು ಸಿಂಹಾಸನದ ಬಳಿಯಲ್ಲಿಯೇ ಎದ್ದು ನಿಂತುಕೊಂಡಳು; ಇವರನ್ನು ಮಾತುಗಳಿಂದ ಸ್ವಾಗತಿಸಲೂ ಇಲ್ಲ. ಪ್ರಧಾನಿಗೆ ನಡೆದ ಸಂಗತಿ ತಿಳಿದಿದ್ದರೂ ಆತನು ಏನೂ ತಿಳಿಯದಿರುವವನಂತೆಯೇ ಪ್ರವರ್ತಿಸಿದನು; ರಾಜನನ್ನೂ, ರಾಣಿಯನ್ನೂ "ಈದಿನ ತಾವಿಬ್ಬರೂ ಅಸಮಾಧಾನ ಚಿತ್ತರಾಗಿರುವುದಕ್ಕೆ ಕಾರಣವೇನೋ ಈ ಹಿತಚಿಂತಕನಿಗೆ ತಿಳಿಯಲಿಲ್ಲವಲ್ಲಾ" ಎಂದು ಬಹಳ ವಿನಯದಿಂದ ಮಾತನಾಡಿಸಿದನು. ಇಬ್ಬರೂ ಪ್ರಧಾನಿಗೆ ನಡೆದ ಸಂಗತಿಯನ್ನು ತಿಳಿಸಿದರು. ಮಾತಾಡುವುದರಲ್ಲಿ ರಾಣಿಯು ರಾಜನಿಗಿಂತಲೂ ಸ್ವಲ್ಪ ನಿದಾರ್ಕ್ಷಿಣ್ಯಳಾಗಿದ್ದಳು. ಅಲ್ಲದೆ ಆಕೆ ಪ್ರಧಾನಿಯನ್ನು ಕುರಿತು "ನೀವು ಬಡ್ತಿಗೆ ಆಯ್ಕೆ ಮಾಡುವುದರಲ್ಲಿ ಅರಸುಬಂಧುಗಳಿಗೆ ತಕ್ಕ ಮರ್ಯಾದೆಯನ್ನು ತೋರಿಸಬೇಕಾಗಿತ್ತು." ಎಂದೂ ನುಡಿದಳು; ಅಲ್ಲದೆ "ಅರಸು ಬಂಧುಗಳೆಲ್ಲರೂ ತೆಲುಗು ಮಾತನಾಡುವವರು. ನೀವು ನನ್ನೊಂದಿಗೆ ತೆಲುಗಿನಲ್ಲೇ ಮಾತನಾಡಿದರೂ ನಿಮ್ಮ ಮನೆ ಭಾಷೆ ತಮಿಳು. ಅರಸು ಮನೆ

ತನದವರ ಮೇಲೆ ನಿಮಗೆ, ಅಭಿಮಾನವು ತಾನೇ ಹೇಗೆ ಇದ್ದೀತು" ಎಂದೂ ಹೇಳಿದಳು. ಅಲ್ಪ ವಿದ್ಯಾವಂತರು ಸ್ವಾರ್ಥಕ್ಕಾಗಿ ಎಬ್ಬಿಸಿದ್ದ ಭಾಷಾದ್ವೇಷ ನೆಂಬ ಬೆಂಕಿಯ ಹೊಗೆಯನ್ನು ಪ್ರಧಾನಿಯು ರಾಣಿಯ ಮಾತುಗಳಲ್ಲಿ ಕಂಡನು. ಪ್ರಧಾನಿಯು ಬಡ್ತಿಯ ಆಯ್ಕೆಯನ್ನು ಮಾಡುವುದಕ್ಕೆ ತಾನೂ, ಸೈನ್ಯಾಧಿ ಪತಿಯೂ, ಸೈನಿಕರನ್ನು ಯಾವ ಯಾವ ವಿಷಯಗಳಲ್ಲಿ ಪರೀಕ್ಷೆ ಮಾಡಿದರೋ ಯಾವ ಯಾವ ಗುಣಾಗುಣಗಳನ್ನು ಗಮನಿಸಿ ಆಯ್ಕೆ ಮಾಡಿದರೋ ಎಲ್ಲವನ್ನು ವಿವರವಾಗಿ ತಿಳಿಸಿ, ತನಗೆ ತಮಿಳು ಮಾತನಾಡುವವರ ಮೇಲೆ ಪ್ರತ್ಯೇಕ ಅಭಿಮಾನವಾಗಲಿ ಇತರ ಭಾಷೆಗಳನ್ನು ಮಾತನಾಡುವವರಲ್ಲಿ ದ್ವೇಷಾಸೂಯೆ ಗಳಾಗಲೀ ಇಲ್ಲವೆಂದು ಹೇಳಿದನು. ಅತಿಯಾಗಿ ಮಾತನಾಡಿದ ಬಡ್ತಿಯಾದ ಸೈನಿಕನ ಹೆಂಡತಿಯನ್ನು ಸೈನ್ಯಾಧ್ಯಕ್ಷರ ಮುಂದೆ ವಿಚಾರಣೆಗೆ ಒಳಪಡಿಸಿ ಅವಳಿಗೆ ತಕ್ಕ ಶಿಕ್ಷೆಯನ್ನು ಮಾಡಿಸುವುದಾಗಿಯೂ ಹೇಳಿದನು. ರುದ್ರಸಿಂಹನು ಇನ್ನು ಮುಂದೆ ಬಡ್ತಿಯ ವಿಚಾರದಲ್ಲಿ ಅರಸು ಬಂಧುಗಳಿಗೆ ಪ್ರತ್ಯೇಕತೆಯನ್ನು ತೋರಿಸುವ ಶಾಸನವನ್ನು ಜಾರಿಗೆ ತರಬೇಕೆಂದು ಆಜ್ಞಾಪಿಸಿದನು. ರಾಜನ ಸ್ವಭಾವವನ್ನರಿತ ಪ್ರಧಾನಿಯು ತನ್ನ ಮನಸ್ಸಿಗೆ ಇಷ್ಟವಿಲ್ಲದಿದ್ದರೂ ಅಂತಹ ಶಾಸನವನ್ನು ಕೂಡಲೇ ಜಾರಿಗೆ ತರುವುದಾಗಿ ಹೇಳಿದನು.

ಇದರಿಂದ ರಾಜನಿಗೂ ರಾಣಿಗೂ ಮನಸ್ಸಿಗೆ ಸಮಾಧಾನವುಂಟಾಯಿತು. ಆ ವೇಳೆಗೆ ಸರಿಯಾಗಿ ಹಿಂದೆಯೇ ಏರ್ಪಾಟಾದಂತೆ ಗೋಪಾಲನು ಕೆಲಸಕ್ಕೆ ಬಂದು, ತನ್ನ ತಂದೆ ಹಿಡಿಯುತ್ತಿದ್ದ ಕೊಡೆಯನ್ನು ತೆಗೆದುಕೊಂಡು ಬಂದು ಕೊಡೆಯನ್ನು ಒಂದು ಕಡೆ ಇಟ್ಟು. ರಾಜನಿಗೂ ರಾಣಿಗೂ ಪ್ರಧಾನಿಗೂ ನಮಸ್ಕಾರ ಮಾಡಿ ಕೊಡೆಯನ್ನು ಬಿಚ್ಚಿ ನಿಲ್ಲಿಸಿ, ತಾನು ರಾಜನ ಮತ್ತು ರಾಣಿಯ ಸೇವೆಗಾಗಿ ಸಿದ್ಧವಾಗಿ ನಿಂತನು. ಪ್ರಧಾನಿಯು ಗೋಪಾಲನು ಯೋಗ್ಯನೆಂದು ತಾನು ಪರೀಕ್ಷಿಸಿ ತಿಳಿದುಕೊಂಡಿರುವನೆಂದು ರಾಜನಿಗೂ ರಾಣಿಗೂ ತಿಳಿಸಿದನು. ಅಲ್ಲಿಂದ ರಾಜನೂ ರಾಣಿಯೂ ಗಗನಮಹಲಿಗೆ ಸ್ವಲ್ಪ ದೂರದಲ್ಲಿ ಉದ್ಯಾನವನದಲ್ಲಿದ್ದ ವಿಹಾರ ಮಂಟಪಕ್ಕೆ ತೆರಳಿದರು. ಪ್ರಧಾನಿಯು ಸ್ವಲ್ಪ ದೂರ ಅವರನ್ನು ಹಿಂಬಾಲಿಸಿದನು. ಗೋಪಾಲನು ಕೊಡೆಯನ್ನು ಹಿಡಿದು ರಾಜ ದಂಪತಿಗಳನ್ನು ವಿಹಾರಮಂಟಪಕ್ಕೆ ಅನುಸರಿಸಿ ತನ್ನ ಕೆಲಸವನ್ನು ಅವರ ಮನಮೆಚ್ಚುವಂತೆ ಮಾಡಿದನು. ವಿಹಾರಮಂಟಪವನ್ನು ಒಳಹೊಕ್ಕು

ರಾಜದಂಪತಿಗಳು ಅಲ್ಲಿ ಕುಳಿತುಕೊಂಡು ಏನೋ ಮಾತನಾಡಿ ಕೊಳ್ಳುತ್ತಿದ್ದರು. ಬಹುಶಃ ಆ ಮಾತುಗಳಲ್ಲಿ ಗೋಪಾಲನ ಧೀರ ರಮ್ಯವಾದ ಮೂರ್ತಿಯ ಮತ್ತು ಕರ್ತವ್ಯ ನಿಷ್ಠೆಯ ಪ್ರಶಂಸೆಯೂ ಸೇರಿರಬಹುದು. ಗೋಪಾಲನೂ, ಇತರ ಪರಿಚಾರಕರೂ ಸ್ವಲ್ಪ ದೂರದಲ್ಲಿ ನಿಂತಿದ್ದರು.

ಸ್ವಲ್ಪ ಹೊತ್ತಿಗೆ ಬಹಳ ಸಂತೋಷದಿಂದ ಪ್ರಧಾನಿಯು ವಿಹಾರ ಮಂಟಪಕ್ಕೆ ಒಬ್ಬ ಗೂಢಚಾರನೊಡನೆ ಬಂದು ರಾಜನ ಅಪ್ಪಣೆ ಪಡೆದು ರಾಜನನ್ನು ಸಂದರ್ಶಿಸಿದನು. ಗೂಢಚಾರನು ಹೇಮಗಿರಿ ರಾಜ್ಯದಿಂದ ಸಮಾಚಾರವನ್ನು ತಂದಿದ್ದನು. ಮುದುಕನಾಗಿದ್ದ ಬಲದೇವನು ಪಟ್ಟದಾನೆಯಿಂದ ಕೆಳಗೆ ಬಿದ್ದನೆಂಬ ಹಾಗೂ ಆತನಿಗೆ ಗಾಯಗಳಾಗಿವೆಯೆಂಬ ವಾರ್ತೆಯನ್ನು ಗೂಢಚಾರನು ರಾಜನಿಗೆ ತಿಳಿಸಿದನು. ರಾಜನು ಇದರಿಂದ ಬಹಳ ಸಂತೋಷಪಟ್ಟು ಗೂಢಚಾರನಿಗೂ, ಗೋಪಾಲನಿಗೂ, ಇತರ ಪರಿಚಾರಕರಿಗೂ ಸಂಭಾವನೆಗಳನ್ನು ಕೊಟ್ಟನು. ಅಲ್ಲದೆ, ಎಷ್ಟೋ ದಿವಸಗಳಿಂದ ದ್ರೋಹಿಯಾದ ಬಲದೇವನ ಉನ್ನತಿಯಿಂದ ಮತ್ತು ಉದ್ಧತಿಯಿಂದ ಮನಸ್ಸಿನಲ್ಲಿ ಚಿಂತಿಸುತ್ತಿದ್ದ ತನಗೆ ಆ ದಿನ ಮೊದಲನೆಯ ಬಾರಿ ಸ್ವಲ್ಪ ಚಿಂತಾ ಪ್ರಶಮನವಾಯಿತೆಂದೂ, ಇದು ಗೋಪಾಲನು ಛತ್ರಧಾರಿಯಾಗಿ ಬಂದ ಕೂಡಲೇ ಆಗಿರುವುದು ಒಂದು ವಿಶೇಷವೆಂದೂ, ಇದು ಹೀಗೆಯೇ ಮುಂದುವರಿದು ತನ್ನ ಚಿರಕಾಲ ವಾಂಛಿತವು ಈಡೇರಲಿರುವ ಸೂಚನೆಯೆಂದೂ ಹೇಳಿದನು. ಅಂದಿನಿಂದ ರಾಜನಿಗೂ ರಾಣಿಗೂ ಮಿಕ್ಕವರಿಗೆಲ್ಲಾ ಗೋಪಾಲನ ಮೇಲೆ ವಿಶೇಷ ಅಭಿಮಾನ ವುಂಟಾಯಿತು.

## ೮

ಕೋಟೆಗೆ ವಾಯುವ್ಯ ದಿಕ್ಕಿನಲ್ಲಿ ವಿಶಾಲವಾದ ಯುದ್ಧಭೂಮಿಯಲ್ಲಿ ಸ್ಪರ್ಧಾರಂಗವು ಏರ್ಪಾಟಾಗಿತ್ತು. ಸುಮಾರು ಇನ್ನೂರು ಅಡಿ ಅಗಲ, ಆರು ನೂರು ಅಡಿ ಉದ್ದ ಇರುವಷ್ಟು ಮೈದಾನವನ್ನು ಸಮತಲಗೊಳಿಸಿ ನೆಲವನ್ನು ಗಟ್ಟಿಮಾಡಿ, ಅದರ ಸುತ್ತಲೂ ತಡಿಕೆಗಳನ್ನು ಕಟ್ಟಿದರು. ಒಳಗಡೆ ಒಂದು ಪಕ್ಕದಲ್ಲಿ ಸ್ಪರ್ಧೆಗಳನ್ನು ವೀಕ್ಷಿಸುವುದಕ್ಕೆ ರಾಜನೂ ಅವರ ಪರಿವಾರವೂ ಕುಳಿತು

ಕೊಳ್ಳಲು ಹಲಗೆಗಳಿಂದ ಒಂದು ಮಂಟಪವನ್ನು ತಯಾರು ಮಾಡಿದ್ದರು. ಹೊರಗಡೆ ಬಣ್ಣ ಬಣ್ಣದ ಡೇರೆಗಳನ್ನು ಹಾಕಿದ್ದರು. ಹಿನ್ನೆಲೆಯಲ್ಲಿ ಕೋಟೆಯ ಮೇಲೆ ರಾಮ ಬುರುಜೂ ಅದರ ಹಿಂದೆ ಎತ್ತರವಾದ ಘನಗಿರಿಯೂ ಕಾಣಿಸುತ್ತಿದ್ದವು. ಸ್ಪರ್ಧಾರಂಗದಲ್ಲಿ ಎಲ್ಲೆಲ್ಲೂ ತಳಿರುತೋರಣಗಳನ್ನೂ ಹೂಮಾಲೆಗಳನ್ನೂ ಕಟ್ಟಿದ್ದರು, ಉತ್ಸಾಹವನ್ನು ತುಂಬುವ ರಣಭೇರಿಗಳನ್ನು ಸಹ ಬಾರಿಸುತ್ತಿದ್ದರು. ಸಾಹಸಿಗಳನ್ನು ಆಯ್ಕೆಮಾಡಿ ಅವರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವುದಕ್ಕೂ ಅವರಿಗೆ ಬಹುಮಾನಗಳನ್ನು ಕೊಡುವುದಕ್ಕೂ ಇಂತಹ ಸ್ಪರ್ಧೆಗಳನ್ನು ನರಸಿಂಹ ಪ್ರಭುವಿನ ಕಾಲದಿಂದಲೂ ಆಗಾಗ್ಗೆ ನಡೆಸಲಾಗುತ್ತಿತ್ತು. ಈ ಸಲ ಏರ್ಪಾಟಾಗಿದ್ದ ಸ್ಪರ್ಧೆಗಳಲ್ಲಿ ಮುಖ್ಯವಾದ ವಿಶೇಷವೆಂದರೆ, ರುದ್ರಸಿಂಹನು ಅಲ್ಲಿ ನೆರೆದಿದ್ದ ಪ್ರಜೆಗಳಿಗೂ ಸಾಹಸಿಗಳಿಗೂ ಹೇಮಗಿರಿ ರಾಜ್ಯವನ್ನು ವಶಪಡಿಸಿಕೊಳ್ಳುವುದಕ್ಕಾಗಿ ತಾನು ತೀವ್ರವಾದ ಸೈನ್ಯಾಭಿವೃದ್ಧಿಯನ್ನು ಮಾಡಲು ಸಂಕಲ್ಪವನ್ನು ಮಾಡಿರುವುದನ್ನು ಪ್ರಕಟಿಸಿದುದು. ಬಲದೇವನು ಆನೆಯಿಂದ ಬಿದ್ದನೆಂಬ ವಾರ್ತೆಯೇ ಈ ಸಂಕಲ್ಪಕ್ಕೆ ಸಮೀಪ ಕಾರಣವಾಗಿತ್ತು.

ಸ್ಪರ್ಧೆಗಳಲ್ಲಿ ಭಾಗವಹಿಸಲು ಘನಗಿರಿ ರಾಜ್ಯದ ಎಲ್ಲ ಭಾಗಗಳಿಂದಲೂ ಶಕ್ತಿವಂತರಾದ ಸಾಹಸಿಗಳು ಬಂದಿದ್ದರು. ಅವರ ಜೊತೆಗೆ ಅವರ ಅಭಿಮಾನಿಗಳೂ, ಸ್ಪರ್ಧೆಗಳಲ್ಲಿ ಜಯಾಪಜಯಗಳ ಮೇಲೆ ಪಣತೊಟ್ಟು ಜೂಜಾಡುವ ಜೂಜುಗಾರರೂ ಇವರನ್ನಾಶ್ರಯಿಸಿದ ವಾರಾಂಗನೆಯರೂ ಎಲ್ಲ ಕಡೆಗಳಿಂದಲೂ ಬಂದಿದ್ದರು. ಅಲ್ಲಿ ನೆರೆದಿದ್ದ ಜನಸಮೂಹವೆಲ್ಲ ಸಂಸ್ಕೃತಿ ಇಲ್ಲದುದರಿಂದ ಸ್ವೇಚ್ಛಾ ಪ್ರವರ್ತಕವಾಗಿತ್ತು. ಎಲ್ಲಿ ನೋಡಿದರೂ ಗ್ರಾಮ್ಯ ಭಾಷೆಯಲ್ಲಿಯೇ ಹೊಗಳಿಕೆಗಳೂ, ತೆಗಳಿಕೆಗಳೂ, ಹಾಸ್ಯವೂ ಕೇಳಿಬರುತ್ತಿದ್ದವು. ಮದ್ಯ ಮಾಂಸಾದಿಗಳ ಮಾರಾಟವೂ ಉಪಯೋಗವೂ ಮಿತಿಮೀರಿ ನಡೆಯುತ್ತಿತ್ತು. ಅಲ್ಲಲ್ಲಿ ಅಲ್ಪ ಕಾರಣಗಳಿಗೆಲ್ಲ ದೊಡ್ಡ ಜಗಳಗಳೂ ಹೊಡೆದಾಟಗಳೂ ನಡೆಯುತ್ತಿದ್ದವು.

ಅಲ್ಪವಿದ್ಯಾವಂತರಾದ ಮೇಧಾವಿಗಳು ಹುಟ್ಟಿಸಿ ಬೆಳೆಸುತ್ತಿದ್ದ ಭಾಷಾ- ಮತ- ಕುಲ ದ್ವೇಷಗಳು ಅಲ್ಲಲ್ಲಿ ಕಾಣುತ್ತಿದ್ದವು. ಬೇರೆ ಬೇರೆ ಭಾಷಾ- ಮತ- ಕುಲಗಳವರು ತಮ್ಮ ತಮ್ಮ ಪಂಗಡಗಳಿಗೆ ಚಿಹ್ನೆಗಳಾಗಿ ಇಟ್ಟಿದ್ದ

ಬಾವುಟಗಳು, ಎಲ್ಲೆಲ್ಲೂ ಕಾಣುತ್ತಿದ್ದವು. ಬಿರುದು ವಾಕ್ಯಗಳೂ, ಜಯ ಘೋಷಗಳೂ ಎಲ್ಲೆಲ್ಲೂ ಕೇಳಿಬರುತ್ತಿದ್ದವು.

ಕುಸ್ತಿ, ಕತ್ತಿಯುದ್ಧ, ಗದಾಯುದ್ಧ, ಚಿರತೆಗಳ ಜೊತೆಯಲ್ಲಿ ಕುಸ್ತಿ "ಉಟ್ಲ ಮಾನು", ಓಟ, ಭಾರಗಳನ್ನು ಎತ್ತುವುದು, ಆನೆ ಸವಾರಿ, ಕುದುರೆ ಸವಾರಿ ಮುಂತಾದ ಅನೇಕ ಸಾಹಸ ಕೃತ್ಯಗಳಲ್ಲಿ ಸ್ಪರ್ಧೆಗಳು ನಡೆದವು. ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೂ, ಯೋಗ್ಯರೆಂದು ಪರಿಗಣಿಸಲ್ಪಟ್ಟವರಿಗೂ ತಕ್ಕ ಬಹುಮಾನಗಳನ್ನು ಕೊಡಲಾಯಿತಲ್ಲದೆ, ಅವರನ್ನು ಸೈನ್ಯಕ್ಕೆ ಸೇರಿಸಿ ಕೊಳ್ಳಲಾಯಿತು.

ಆ ಸ್ಪರ್ಧೆಗಳಲ್ಲಿ ಮಹಾರಾಜನು ಯುದ್ಧಕ್ಕೆ ಸಿದ್ಧತೆಯನ್ನು ಮಾಡುವ ತನ್ನ ಸಂಕಲ್ಪವನ್ನು ಪ್ರಕಟಿಸಿದುದರಿಂದ ಸಾಹಸಿಗಳಿಗೆ ಹಾಗೂ ಅವರನ್ನು ಅವಲಂಬಿಸಿದ್ದ ಕೆಲವರಿಗೆ ಮಾತ್ರ ಸಂತೋಷವಾಯಿತೇ ಹೊರತು ಜನ ಸಾಮಾನ್ಯರಿಗೆ ಭೀತಿಯೂ, ದುಃಖವೂ ಉಂಟಾದವು. ಯುದ್ಧಕ್ಕೆ ರಾಜನು ಸಿದ್ಧನಾಗುವನೆಂದು ಸೂಚನೆ ಬಂದ ಕೂಡಲೆ ತೆರಿಗೆಗಳು ಏರುವುದು ಜನರಿಗೆಲ್ಲ ಅನುಭವವಿದಿತವಾಗಿತ್ತು. ತೆರಿಗೆಗಳನ್ನು ಕೇವಲ ಹಣದ ರೂಪದಲ್ಲಿ ಮಾತ್ರ ವಸೂಲು ಮಾಡುತ್ತಿರಲಿಲ್ಲ. ಪ್ರಜೆಗಳಿಗೆ ಜೀವನಕ್ಕಾಗಿ ಬೇಕಾದ ಮತ್ತು ಶೇಖರಿಸಿಟ್ಟಿದ್ದ ಧಾನ್ಯ, ದವಸ, ಬಟ್ಟೆಗಳು ಮುಂತಾದ ಎಲ್ಲ ವಸ್ತುಗಳನ್ನು ಎಲ್ಲಿದ್ದರೂ ಪತ್ತೆ ಹಚ್ಚಿ ರಾಜಭಟರು ಕೊಳ್ಳೆ ಹೊಡೆಯುತ್ತಿದ್ದರು. ನಿಜವಾಗಿ ಸೈನ್ಯಕ್ಕೆ ಎಷ್ಟು ಬೇಕಾಗಿತ್ತೋ ಅದಕ್ಕೆ ಎರಡು ಮೂರರಷ್ಟಾದರೂ ರಾಜ ಭಟರು ವಸೂಲಿ ಮಾಡಿ, ಅವುಗಳ ಸ್ವಾರ್ಥೋಪಯೋಗವನ್ನು, ದುರುಪಯೋಗ ವನ್ನು ಮಾಡುತ್ತಿದ್ದರು. ಯುದ್ಧದ ನೆವದಿಂದ ರಾಜಭಟರು ನಡೆಸುತ್ತಿದ್ದ ದಬ್ಬಾಳಿಕೆ ಜನರಿಗೆ ಭೀಕರವಾಗಿತ್ತು.

ರಾಜನು ಮಾಡಿದ ಯುದ್ಧಪ್ರಯತ್ನದ ಸಂಕಲ್ಪದ ಘೋಷಣೆಯು ಬಹಳ ಬೇಗ ಘನಗಿರಿ ಪಟ್ಟಣದಿಂದ ಹಳ್ಳಿ ಹಳ್ಳಿಗೂ ವ್ಯಾಪಿಸಿತು. ಜನರು ರಾಜಭಟರ ದಬ್ಬಾಳಿಕೆಯಿಂದ ಧನಧಾನ್ಯಾದಿಗಳನ್ನು ಉಳಿಸಿಕೊಳ್ಳಲು ಏನೇನೋ ಉಪಾಯಗಳನ್ನು ಮಾಡತೊಡಗಿದರು. ನಿರ್ಬಂಧದಿಂದ ಸತ್ಯವಂತರೂ, ಸುಳ್ಳು ಹೇಳಬೇಕಾಗಿ ಬಂತು. ದುಷ್ಟ ಜನರು ತಮಗೆ ವಿರೋಧಿಗಳಾದ ಅಮಾಯ ಕರಮೇಲೆ ನಿಂದಾರೋಪಗಳನ್ನು ಮಾಡತೊಡಗಿದರು. ಕೆಲ ಅಮಾಯ

ಕರು ಇವರಿಂದ ರಾಜದಂಡಕ್ಕೆ ಗುರಿಯಾದರು. ರಾಜ್ಯದಲ್ಲಿ ವಿದ್ಯಾವಿಹೀನತೆಯಿಂದಲೂ ಅಲ್ಪ ವಿದ್ಯಾವಂತರಾದ. ಮೇಧಾವಿಗಳ ಪ್ರಚೋದನೆಗಳಿಂದಲೂ ಕುಲ, ಮತ, ಭಾಷೆಗಳ ಸಂಬಂಧವಾದ ವಿವಾದಗಳು ಆಗಲೇ ಹುಟ್ಟಿದ್ದವು. ಯುದ್ಧ ಪ್ರಯತ್ನದ ಘೋಷಣೆಯು ಈ ವಿವಾದಗಳಿಗೆ ಬೆಂಬಲವನ್ನು ಕೊಟ್ಟಿತು. ಜನರಲ್ಲಿ ಬಹು ಕಾಲದಿಂದ ಕುಲಧರ್ಮದ ಸ್ವರೂಪದಲ್ಲಿ ನೆಲೆಗೊಂಡಿದ್ದ ಸಹಕಾರವು ಅಲ್ಲಲ್ಲಿ ಪೆಟ್ಟುತಿಂದು, ಕುಲಗಳ ನಡುವೆ ಉಚ್ಚ ನೀಚ ಭಾವನೆಗಳೂ ಅಸಹಕಾರವೂ ಈರ್ಷ್ಯಾಸೂಯೆಗಳೂ ಸ್ಪರ್ಧೆಗಳೂ ತಲೆದೋರಿದವು. ಅಲ್ಲದೆ, ಸ್ವಕುಲವೃತ್ತಿಯಿಂದ ತೃಪ್ತರಾಗದೆ ಕೆಲವರು ಪರಕುಲವೃತ್ತಿಯನ್ನು ಅವಲಂಬಿಸಿ, ಇತರ ಕುಲದವರೊಂದಿಗೆ ಸ್ಪರ್ಧೆ ನಡೆಸಿದುದು ಇನ್ನಷ್ಟು ವಿಭೇದಗಳಿಗೆ ಸಹಕಾರಿ ಆಯಿತು. ಇಂತಹ ಸ್ಪರ್ಧೆಯನ್ನು ಕೆಲವರು ಪರಿಸ್ಥಿತಿಯ ಒತ್ತಾಯದಿಂದಲೂ ಮಾಡಬೇಕಾಗಿ ಬಂದಿತು. ತಮ್ಮ ತಮ್ಮ ಮತಗಳ ಪರಮ ಧ್ಯೇಯವನ್ನು ಅರಿಯದೆ ಮೂಢರಾಗಿ ಜನರು ಪರಮತ ದ್ವೇಷವನ್ನೂ ಮಾಡತೊಡಗಿದರು. ಕೇವಲ ಸ್ವಾರ್ಥಿಗಳಾದ ವಾಚಾಳರು ಎಬಿಸಿದ್ದ ಆವೇಶಕ್ಕೊಳಗಾಗಿ ಕೆಲವರು ಪರಭಾಷಾ ದ್ವೇಷವನ್ನೂ ಮಾಡತೊಡಗಿದರು. ಈ ಪರಿಸ್ಥಿತಿಯಲ್ಲಿ ಜನರಲ್ಲಿ ಶಾಂತಿ ಮತ್ತು ಕಾರ್ಯನಿಷ್ಠೆಗಳಿಗೆ ಧಕ್ಕೆಯುಂಟಾಗಿ ದಾರಿದ್ರ್ಯವೂ, ಕ್ಷೋಭೆಯೂ, ಬೆಳೆಯುತ್ತ ಬಂದವು. ನಿಜವಾದ ಜ್ಞಾನಿಗಳ ಮತ್ತು ವಿದ್ಯಾವಂತರ ಉದಾರ ಭಾವಗಳೂ, ಕಲಾಕಾರರ ರಸಭಾವಗಳೂ, ಸತ್ಸಂಪ್ರದಾಯದ ಅಭಯಭಾವವೂ ಜನರಿಗೆ ದುರ್ಲಭವಾದವು.

ಹೀಗೆಯೇ ನಾಲ್ಕೈದು ವರುಷಗಳು ಕಳೆದವು. ರಾಜನು ತನ್ನ ಸೈನ್ಯವನ್ನು ಎಷ್ಟು ಅಭಿವೃದ್ಧಿಪಡಿಸಿದರೂ ಅದು ಹೇಮಗಿರಿ ರಾಜ್ಯದ ಸೈನ್ಯದಷ್ಟಾಗಲಿಲ್ಲ. ಚಾರಚಕ್ಷುಗಳಾದ ಮಂತ್ರಿಗಳೂ, ಪ್ರಧಾನಿಯೂ, ಸೈನ್ಯಾಧಿಪತಿಯೂ, ಘನಗಿರಿ ರಾಜ್ಯದ ಸೈನ್ಯವು ಹೇಮಗಿರಿ ರಾಜ್ಯದ ಸೈನ್ಯದೊಂದಿಗೆ ಯುದ್ಧಮಾಡಿ ಜಯಿಸಬಲ್ಲದೆಂಬ ಭರವಸೆಯನ್ನು ಎಳ್ಳಷ್ಟೂ ಪಡೆಯಲಿಲ್ಲ. ಆನೆಯಿಂದ ಬಿದ್ದ ಬಲದೇವನು ಸ್ವಲ್ಪ ಚೇತರಿಸಿಕೊಂಡು, ತೀರಾ ಮುದುಕನಾದರೂ ರಾಜ್ಯವನ್ನಾಳುತ್ತಿದನು. ಆತನಿಗೆ ಮಂತ್ರಿಗಳ ಮತ್ತು ಸೇನ್ಯಾಧಿಪತಿಯ ಪೂರ್ಣ ಬೆಂಬಲವೂ ಪ್ರಜೆಗಳ ಬೆಂಬಲವೂ ಇತ್ತು. ಆತನಿಗೆ ಮಕ್ಕಳಿರಲಿಲ್ಲ. ಆತನು ಅಷ್ಟು ಮುದುಕನಾದರೂ ತಾನು ಇನ್ನೂ ಬಹುಕಾಲ ಜೀವಿಸವುದಾಗಿ ಧೃಢ

ವಾಗಿ ನಂಬಿಕೊಂಡಿದ್ದನು. ಯಾರನ್ನೂ ಆತನು ಯುವರಾಜನನ್ನಾಗಿ ಆರಿಸಿರ ಲಿಲ್ಲ. ಆತನು ಆನೆಯಿಂದ ಬಿದ್ದ ಮೇಲೆ ಸುಮಾರು ಐದು ವರುಷಗಳ ಕಾಲ ಬದುಕಿದ್ದು ಹಠಾತ್ತನೆ ಒಂದು ದಿನ ಮೃತಪಟ್ಟನು. ಪ್ರಬಲನಾಗಿದ್ದ ಆತನ ಸೈನ್ಯಾಧಿಪತಿಯೇ ರಾಜ್ಯದ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡನು. ಆದರೆ ಪ್ರಧಾನಿಯೂ, ಇತರ ಮಂತ್ರಿಗಳೂ, ಪ್ರಜೆಗಳಲ್ಲಿ ಪ್ರಮುಖರಾದವರು ಸೈನ್ಯಾಧಿಪತಿ ರಾಜನಾಗುವುದನ್ನು ಒಪ್ಪುತ್ತಿರಲಿಲ್ಲ. ಸೈನ್ಯಾಧಿಪತಿಗೆ ತಾನು ರಾಜನಾಗಬೇಕೆಂಬ ಆಸೆಯೂ ಇರಲಿಲ್ಲ. ಸೈನ್ಯಾಧಿಪತಿಗೂ, ಮಂತ್ರಿಗಳಿಗೂ, ಪ್ರಜಾಮುಖ್ಯರಿಗೂ, ಸರ್ವಪ್ರಿಯನಾದ ಯಾರಾದರೊಬ್ಬನು ರಾಜನಾಗ ಬೇಕೆಂಬ ಉದ್ದೇಶವು ಇತ್ತು. ಈ ಉದ್ದೇಶವನ್ನು ಇವರೆಲ್ಲರೂ ಒಂದು ಸಮ್ಮೇಳನದಲ್ಲಿ ಪ್ರಕಟಿಸಿದರು. ಹೀಗೆ ಒಬ್ಬ ಜನಪ್ರಿಯನಾದ ರಾಜನನ್ನು ಆರಿಸಿಕೊಳ್ಳುವವರೆಗೂ ಸೈನ್ಯಾಧಿಪತಿಯೇ ಆಡಳಿತವನ್ನು ನಡೆಸಲು ಎಲ್ಲರೂ ಒಪ್ಪಿಕೊಂಡರು.

## ೯

ಘನಗಿರಿ ರಾಜ್ಯದಲ್ಲಿ ಕಲ್ಯಾಣ ದುರ್ಗವು ಒಂದು ಪ್ರಮುಖ ದುರ್ಗ ವಾಗಿತ್ತು. ಘನಗಿರಿ ಪ್ರಭುಗಳ ಆಜ್ಞೆಗೆ ಒಳಪಟ್ಟು ಅಲ್ಲಿ ತಿಮ್ಮಣ್ಣನಾಯಕ ನೆಂಬ ಒಬ್ಬ ಕನ್ನಡ ಮನೆತನದವನು ಸರ್ವಾಧಿಕಾರಿಯಾಗಿದ್ದನು. ಕಲ್ಯಾಣ ದುರ್ಗಕ್ಕೆ ಹೇಮಗಿರಿ ರಾಜ್ಯದ ಗಡಿಯು ಕೇವಲ ಒಂದು ಯೋಜನದ ದೂರ ದಲ್ಲಿತ್ತು. ಗಡಿಯಿಂದಾಚೆ ಹೇಮಗಿರಿ ರಾಜ್ಯಕ್ಕೆ ಒಳಪಟ್ಟ ಬೇಚಾಪುರವೆಂಬ ಹಳ್ಳಿಯು ತಿಮ್ಮಣ್ಣನಾಯಕನ ಸ್ವಗ್ರಾಮವಾಗಿತ್ತು. ತಿಮ್ಮಣ್ಣನಾಯಕನು ಕನ್ನಡಿಗನಾದುದರಿಂದಲೂ, ಆತನ ಸ್ವಗ್ರಾಮವು ಶತ್ರು ರಾಜ್ಯವಾದ ಹೇಮಗಿರಿ ರಾಜ್ಯದಲ್ಲಿದ್ದು ಅದರಲ್ಲಿ ಆತನ ನೆಂಟರು ಬಹಳ ಜನರು ಇದ್ದಿದ್ದರಿಂದಲೂ ರುದ್ರಸಿಂಹನಿಗೆ ಆತನ ಮೇಲೆ ಸಂಶಯವುಂಟಾಗಿ ಆತನನ್ನು ಮೂಕಳೀ ದುರ್ಗಕ್ಕೆ ಸರ್ವಾಧಿಕಾರಿಯನ್ನಾಗಿ ನೇಮಿಸಿದನು. ಕಲ್ಯಾಣ ದುರ್ಗಕ್ಕೆ ಜಯಸಿಂಹನನ್ನು ಸರ್ವಾಧಿಕಾರಿಯಾಗಿ ನೇಮಿಸಿದನು. ಈ ಆಜ್ಞೆಯನ್ನು ತೆಗೆದುಕೊಂಡು ಜಯಸಿಂಹನು ತನ್ನ ಪತ್ನಿ ಗೌರಾಂಬೆಯೊಡನೆ ಸಂತೋಷದಿಂದಲೂ, ಹೆಮ್ಮೆ ಯಿಂದಲೂ, ತಾನು ಆಂಧ್ರನೆಂಬ ದುರಭಿಮಾನದಿಂದಲೂ ಕಲ್ಯಾಣ ದುರ್ಗಕ್ಕೆ

ಬಂದು ಆಜ್ಞಾ ಪತ್ರವನ್ನು ತಿಮ್ಮಣ್ಣನಾಯಕನಿಗೆ ಕಳುಹಿಸಿಕೊಟ್ಟು, ಆತನು ತಾನು ತಂಗಿರುವ ಬಿಡಾರಕ್ಕೆ ಬಂದು ಅಲ್ಲಿಯೇ ಸರ್ವಾಧಿಕಾರಿಯು ವಶದಲ್ಲಿದ್ದ ಬೀಗ ಮುದ್ರೆಗಳನ್ನೂ, ತಾಮ್ರಶಾಸನಗಳನ್ನೂ, ಇತರ ಶಾಸನ ಪತ್ರಗಳನ್ನೂ, ಇತರ ವಸ್ತುಗಳನ್ನೂ ತನಗೆ ಅರ್ಪಿಸಬೇಕೆಂದು ಹೇಳಿಕಳುಹಿಸಿದನು.

ಇಂತಹ ಸಂದರ್ಭದಲ್ಲಿ ಹೊಸದಾಗಿ ಸರ್ವಾಧಿಕಾರಿಯಾಗಿ ನೇಮಿಸಲ್ಪಟ್ಟವನು, ಹಳೆಯ ಸರ್ವಾಧಿಕಾರಿಯ ಸಮೀಪಕ್ಕೆ ತಾನೇ ಹೋಗಿ ಆತನನು ಗೌರವಿಸಿ ಆತನಿಂದ ಅಧಿಕಾರ ಸಾಮಗ್ರಿಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದು ಸಂಪ್ರದಾಯವಾಗಿತ್ತು. ಆದರೆ ಜಯಸಿಂಹನು ಈ ಸಂಪ್ರದಾಯಕ್ಕೆ ವಿರೋಧವಾಗಿ ತಿಮ್ಮಣ್ಣ ನಾಯಕನ ಮಾನಕ್ಕೆ ಚ್ಯುತಿಯನ್ನುಂಟುಮಾಡುವ ರೀತಿಯಲ್ಲಿ ಪ್ರವರ್ತಿಸಿದನು. ಆದರೆ ಜಯಸಿಂಹನು ರಾಜನ ಬಂಧು ವರ್ಗಕ್ಕೆ ಸೇರಿದ್ದರಿಂದಲೂ, ರಾಜನು ಆಂಧ್ರರಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿದ್ದುದರಿಂದಲೂ ತಿಮ್ಮಣ್ಣನಾಯಕನು ಈ ಅವಮಾನವನ್ನು ಹೇಗೋ ಸಹಿಸಿಕೊಂಡು, ಜಯಸಿಂಹನಿದ್ದ ಬಿಡಾರಕ್ಕೆ ಹೋಗಿ ಅಲ್ಲಿಯೇ ತನ್ನ ಅಧಿಕಾರವನ್ನು ಆತನಿಗೆ ವಶಪಡಿಸಿದನು. ಆದರೆ ತಿಮ್ಮಣ್ಣ ನಾಯಕನ ಮನೆಯವರಿಗೆಲ್ಲ ಈ ಅವಮಾನವು ಅಸಹನೀಯವಾಗಿತ್ತು. ಆ ದಿನ ತಿಮ್ಮಣ್ಣ ನಾಯಕನ ಮನೆಗೆ ಆತನ ಸ್ವಗ್ರಾಮದಿಂದ ನೆಂಟನೊಬ್ಬನು ಬಂದಿದ್ದನು. ಆತನು ಮುಂಗೋಪಿಯೂ, ಕನ್ನಡಿಗರು ಆಂಧ್ರರಿಗಿಂತಲೂ ಉತ್ತಮರೆಂಬ ದುರಭಿಮಾನವುಳ್ಳವನೂ ಆಗಿದ್ದನು. ಆತನು, ಹೊಸ ಸರ್ವಾಧಿಕಾರಿಯಾದ ಜಯಸಿಂಹನು ಸರ್ವಾಧಿಕಾರಿಯ ಚಾವಡಿಗೆ ಬಂದು ಅಲ್ಲಿ ಪೌರ ಮುಖ್ಯರಿಂದ ಗೌರವವನ್ನು ಹೊಂದುತ್ತಿರುವ ಸಮಯದಲ್ಲಿ ಚಾವಡಿಯ ಹೊರಗೆ ನಿಂತು ಜಯಸಿಂಹನ ಕೃತ್ಯವನ್ನು ಪೌರರ ಎದುರಿನಲ್ಲಿ ಆಕ್ಷೇಪಿಸುತ್ತಿದ್ದನು. ಆ ಸಮಯದಲ್ಲಿ ಆತನು ಕೋಪಾವೇಶದಿಂದ ಆಂಧ್ರರೆಲ್ಲರೂ ಗರ್ವಿಷ್ಠರೆಂದು ದೂಷಿಸಿದನು. ಅಲ್ಲದೆ ಆಂಧ್ರರಿಗೆ ಅಧಿಕಾರ ಕೊಟ್ಟರೆ ಅವರಿಗೆ ಬೇರೆಯವರನ್ನು ಮರ್ಯಾದೆಯಿಂದ ನೋಡಿಕೊಳ್ಳುವುದು ಬರುವುದಿಲ್ಲವೆಂದೂ, ಒಬ್ಬ ಆಂಧ್ರ ರಾಜಪುತ್ರನಿಗಿಂತಲೂ ಕನ್ನಡದ ಬಡ ಪೌರನೊಬ್ಬನನ್ನು ರಾಜನನ್ನಾಗಿ ಮಾಡಿದರೆ ಅವನು ಹೆಚ್ಚು ಪ್ರಜಾರಂಜಕನಾಗಿ ರಾಜ್ಯವಾಳುವನೆಂದೂ, ಹೇಮಗಿರಿ ರಾಜ್ಯದಲ್ಲಿ ಮುಂದೆ ಯಾವ ಕನ್ನಡಿಗನನ್ನು ರಾಜನನ್ನಾಗಿ ಮಾಡಿದರೂ ಅವನು ಘನಗಿರಿಯ ರಾಜನಿಗಿಂತಲೂ ಹೆಚ್ಚು

ನ್ಯಾಯವಾಗಿ ರಾಜ್ಯಪಾಲನೆ ಮಾಡುವನೆಂದೂ ಗಟ್ಟಿಯಾಗಿ ಹೇಳುತ್ತಿದ್ದನು. ಆ ನಗರದ ಜನರಲ್ಲಿ ಹೆಚ್ಚು ಮಂದಿ ಕನ್ನಡಿಗರಾಗಿದ್ದುದರಿಂದಲೂ, ಘನಗಿರಿ ರಾಜನ ಮತ್ತು ಜಯಸಿಂಹನ ಪ್ರವರ್ತನೆ ಅವರಿಗೆ ಸರಿ ಬೀಳದೆ ಇದ್ದುದರಿಂದಲೂ ಅವರು ಯಾರೂ ಹೇಮಗಿರಿ ರಾಜ್ಯದವನಿಗೆ ಪ್ರತ್ಯುತ್ತರ ಕೊಡಲಿಲ್ಲ. ಆದರೆ ಈ ವಿಚಾರವು ಎರಡು ಮೂರು ದಿನದಲ್ಲಿ ಗೌರಾಂಬೆಯ ಕಿವಿ ಮುಟ್ಟಿತು; ಅವಳಿಂದ ಜಯಸಿಂಹನಿಗೆ ತಿಳಿಯಿತು. ಆದರೆ ಆ ವೇಳೆಗೆ ಆ ನೆಂಟನು ತನ್ನ ಗ್ರಾಮಕ್ಕೆ ಮರಳಿದ್ದನು. ಆದುದರಿಂದ ಆತನನ್ನು ಹಿಡಿದು ಶಿಕ್ಷಿಸುವುದಕ್ಕೆ ಅವಕಾಶ ಸಿಗಲಿಲ್ಲ. ತಿಮ್ಮಣ್ಣನಾಯಕನೂ ಆತನ ಮನೆಯವರೂ ಕಲ್ಯಾಣ ದುರ್ಗವನ್ನಾಗಲೇ ಬಿಟ್ಟಿದ್ದರು.

ಕೆಲವು ದಿನಗಳಲ್ಲೇ ರುದ್ರಸಿಂಹನು ಕಲ್ಯಾಣ ದುರ್ಗಕ್ಕೆ ರಾಣಿಯೊಡನೆ ಆಗಮಿಸಿದನು. ಅವರಿಬ್ಬರಿಗೂ ಜಯಸಿಂಹನೂ ಗೌರಾಂಬೆಯೂ ಮೇಲಿನ ವಿಚಾರವನ್ನು ತಿಳಿಸಿದರು. ಹೇಮಗಿರಿ ರಾಜ್ಯದ ಹಳ್ಳಿಗನೊಬ್ಬನು ಕಲ್ಯಾಣ ದುರ್ಗದ ಪೌರರ ಎದುರಿನಲ್ಲಿ ಆಂಧ್ರ ರಾಜನಾದ ತನ್ನನ್ನೂ, ಆಂಧ್ರ ರಾಜವಂಶದವರನ್ನೂ ಆಕ್ಷೇಪಿಸಿದ ವಿಷಯವನ್ನು ಕೇಳಿದ ಕೂಡಲೇ ರುದ್ರಸಿಂಹನು ರೌದ್ರ ಮೂರ್ತಿಯಾದನು. ಕೂಡಲೇ ಆತನು ಪೌರರ ಸಭೆಯನ್ನು ಸೇರಿಸಿ ಅದರಲ್ಲಿ ಈ ವಿಷಯವನ್ನು ಕುರಿತು ವಿಚಾರಣೆ ನಡೆಸಿದನು. ವಿಚಾರಣೆಯಲ್ಲಿ ಈ ವಿಷಯ ನಿಜವೆಂದು ತಿಳಿದಾಗ ರುದ್ರಸಿಂಹನು ಬಹಳ ಕೋಪದಿಂದ ಕಲ್ಯಾಣ ದುರ್ಗದ ಪೌರರು ಆ ಹಳ್ಳಿಗನನ್ನು ಪ್ರತಿಭಟಿಸಿ ಶಿಕ್ಷೆಗೆ ಗುರಿಪಡಿಸದಿರುವಿಕೆಯನ್ನು ಆಕ್ಷೇಪಿಸಿದನು.

ಹೇಮಗಿರಿ ರಾಜ್ಯಕ್ಕೆ ಒಬ್ಬ ಬಡ ಕನ್ನಡಿಗನು ರಾಜನಾದರೂ ಅವನು ಆಂಧ್ರ ರಾಜವಂಶದವನಿಗಿಂತಲೂ ಒಳ್ಳೆಯ ಪಾಲಕನಾಗಿರುವನೆಂಬ ಪ್ರತಿಪಾದನೆಯನ್ನು ರುದ್ರಸಿಂಹನು ಕಟುವಾಗಿ ಟೀಕಿಸಿ, ಹೇಮಗಿರಿ ರಾಜ್ಯವು ಹಿಂದಿನಿಂದಲೂ ಘನಗಿರಿ ರಾಜ್ಯಕ್ಕೆ ಸಾಮಂತ ರಾಜ್ಯವಾಗಿದ್ದು ದ್ರೋಹಿಯಾದ ಬಲದೇವನ ಆಳ್ವಿಕೆಯಲ್ಲಿ ಹೇಮಗಿರಿ ರಾಜ್ಯದ ಜನರು ದುರಭಿಮಾನಿಗಳಾಗಿರುವರೆಂದೂ, ಆಂಧ್ರ ರಾಜವಂಶದ ಗೌರವವನ್ನುಳಿಸುವುದು ತನ್ನ ಕರ್ತವ್ಯವೆಂದೂ ಹೇಳುತ್ತಾ ತಾನು ಹೇಮಗಿರಿ ರಾಜ್ಯಕ್ಕೆ ತನ್ನ ವಂಶಕ್ಕೆ ಸಂಬಂಧಿಸದ ಯಾವನಾಗಲಿ ರಾಜನಾಗಲು ಅವಕಾಶ ಕೊಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದನು. ಈ

ಪ್ರತಿಜ್ಞೆಯನ್ನು ನೆರವೇರಿಸಲು ಹೇಮಗಿರಿಯ ಸೈನ್ಯದೊಡನೆ ಯುದ್ಧ ಮಾಡುವುದಕ್ಕೂ ತಾನು ಸಿದ್ಧನೆಂದೂ ತನ್ನ ಪ್ರಾಣವನ್ನಾದರೂ ಅರ್ಪಿಸಿ ಈ ಪ್ರತಿಜ್ಞೆಯನ್ನು ಕಾಪಾಡುವುದಾಗಿಯೂ ಆತನು ಪೌರರ ಸಭೆಯಲ್ಲಿ ಘೋಷಿಸಿದನು.

ಘನಗಿರಿ ರಾಜನ ಜತೆಯಲ್ಲಿ ಸ್ವಲ್ಪ ಪರಿವಾರವು ಕಲ್ಯಾಣ ದುರ್ಗಕ್ಕೆ ಬಂದಿತ್ತು. ರಾಜನಿಗೂ ರಾಣಿಗೂ ಪ್ರೀತಿಪಾತ್ರನಾದ ಗೋಪಾಲನೂ ಅವರೊಂದಿಗೆ ಬಂದಿದ್ದನು. ಅಂದಿನ ರಾತ್ರಿ ರಾಜನ ಶಿಬಿರದಲ್ಲಿ ಊಟದ ಸಮಯದಲ್ಲಿಯೂ ರಾಜನು ತನ್ನ ವಂಶಕ್ಕಾದ ಅವಮಾನವನ್ನೇ ಚಿಂತಿಸುತ್ತಿದ್ದು, ಯಾರೊಡನೆಯೂ ಮಾತನಾಡಲಿಲ್ಲ. ರಾಣಿ ಮೊದಲ್ಗೊಂಡು ಎಲ್ಲರೂ ರಾಜನನ್ನು ಮಾತನಾಡಿಸಲು ಹಿಂಜರಿಯುತ್ತಿದ್ದರು. ಎಲ್ಲರ ಮನಸ್ಸನ್ನೂ ಒಂದು ವಿಧವಾದ ಭೀತಿ ಆವರಿಸಿತ್ತು. ಗೋಪಾಲನ ಮುಖದಲ್ಲಿ ಮಾತ್ರ ಯಾವ ವಿಕಾರವೂ ಕಾಣಿಸುತ್ತಿರಲಿಲ್ಲ. ಇತರರ ಮುಖ ಭಂಗಿಗೂ ಗೋಪಾಲನ ಮುಖ ಭಂಗಿಗೂ ಇದ್ದ ವ್ಯತ್ಯಾಸವನ್ನು ಕಂಡ ರಾಜನ ದೃಷ್ಟಿಯು ಗೋಪಾಲನತ್ತ ಆಕರ್ಷಿತವಾಯಿತು. ಆ ಸಮಯದಲ್ಲಿ ರಾಜನು ಕುಳಿತಿದ್ದ ಶಿಬಿರದ ಕೋಣೆಯಲ್ಲಿ ರಾಣಿಯಲ್ಲದೆ ಇನ್ನಾರೂ ಇರಲಿಲ್ಲ. ಅಷ್ಟು ಹೊತ್ತಿಗೆ ರಾಣಿಯು ರಾಜನ ಪ್ರತಿಜ್ಞೆಯ ತೀವ್ರತೆಯನ್ನೂ ಭಾಧ್ಯತೆಯನ್ನೂ ಕುರಿತು ಸಾಕಷ್ಟು ಊಹಾಪೋಹಗಳನ್ನು ಮಾಡಿದ್ದಳು. ರಾಜನು ಏಕಾಂತದಲ್ಲಿರುವಾಗ ಅವಳು ಈ ವಿಷಯವನ್ನು ತನ್ನ ಪತಿಯೊಡನೆ ಚರ್ಚಿಸುತ್ತಿದ್ದಳು. ಈ ಚರ್ಚೆಯಿಂದ ರಾಜನಿಗೂ ತಾನು ಮಾಡಿದ ಪ್ರತಿಜ್ಞೆಯ ಭೀಕರ ಸ್ವರೂಪವು ಸ್ವಲ್ಪ ಗೋಚರವಾಗಿತ್ತು. ಆದರೆ ಆತನು ಎಂದೆಂದಿಗೂ ಸತ್ಯವಾಕ್ಯ ಪರಿಪಾಲಕನಾಗಿದ್ದನು. ಸುಮಾರು ನಾಲ್ಕು ವರುಷಗಳಿಂದ ಪ್ರಯತ್ನ ಮಾಡುತ್ತಿದ್ದರೂ ತನ್ನ ಸೈನ್ಯವು ಹೇಮಗಿರಿ ರಾಜ್ಯದ ಸೈನ್ಯದಷ್ಟು ಬಲಶಾಲಿಯಾಗಿಲ್ಲವೆಂಬ ವಿಷಯವು ಆತನಿಗೆ ತಿಳಿದಿತ್ತು. ಈ ಪರಿಸ್ಥಿತಿಯಲ್ಲಿ ತನ್ನ ಪ್ರತಿಜ್ಞೆ ಹೇಗೆ ಉಳಿಯುವುದೋ ಎಂಬ ಸಂಶಯವೂ, ಹೇಗಾದರೂ ತನ್ನ ಪ್ರತಿಜ್ಞೆ ಉಳಿದರೆ ಸಾಕೆಂಬ ತೀವ್ರವಾದ ಕೋರಿಕೆಯೂ ಆತನನ್ನು ಬಾಧಿಸುತ್ತಿದ್ದವು. ಈ ಬಾಧೆಯಲ್ಲಿ ನಿರ್ವಿಕಾರವಾದ ಗೋಪಾಲನ ಮುಖವನ್ನು ನೋಡಿದ ರಾಜನಿಗೆ ಒಂದು ವಿಧವಾದ ಬೆಳಕನ್ನು ಕಂಡಂತಾಯಿತು.

# ೧೦

ಮೂರನೆಯ ದಿನ ಬೆಳಿಗ್ಗೆ ಸುಮಾರು 10 ಘಳಿಗೆಗಳ ಹೊತ್ತು ಕಳೆದಿತ್ತು. ಗೌರಾಂಬೆಯು ರಾಜನು ತಂಗಿದ್ದ ಶಿಬಿರಕ್ಕೆ ಬಂದು ರಾಣಿಯ ಸಂದರ್ಶನವನ್ನು ಮಾಡಿದಳು. ಸ್ವಲ್ಪ ಹೊತ್ತಿನಲ್ಲಿಯೇ ರಾಣಿಯು ಗೌರಾಂಬೆಯ ಮನೆಗೆ ಹೋಗುವಳೆಂಬ ಸುದ್ದಿ ಹರಡಿತು. ಗೋಪಾಲನು ಛತ್ರಧಾರಿಯಾಗಿ ರಾಣಿಯನ್ನು ಹಿಂಬಾಲಿಸಿಕೊಂಡು ಹೋಗಬೇಕೆಂದು ಆತನಿಗೆ ಆಜ್ಞೆ ತಲುಪಿತು. ಗೋಪಾಲನು ಕೂಡಲೇ ಸಿದ್ಧನಾದನು. ಅಲ್ಪ ಪರಿವಾರದೊಂದಿಗೆ ರಾಣಿಯು ಗೌರಾಂಬೆಯ ಜೊತೆಯಲ್ಲಿ ಹೊರಟು ಅವಳ ಮನೆಯನ್ನು ತಲುಪಿದಳು. ರಾಣಿಯ ಮುಖದಲ್ಲಿಯೂ ಗೌರಾಂಬೆಯ ಮುಖದಲ್ಲಿಯೂ ಒಂದು ವಿಧವಾದ ಕುತೂಹಲವು ಬೆಳಗುತ್ತಿತ್ತು. ಅವರಿಬ್ಬರೂ ಒಂದೇ ಪಲ್ಲಕ್ಕಿಯಲ್ಲಿ ಕುಳಿತು ಏನೇನೋ ಮಾತಾಡಿಕೊಳ್ಳುತ್ತಿದ್ದರು. ಆಗಾಗ್ಗೆ ಗೌರಾಂಬೆ ವೇಗವಾಗಿ ಹೋಗಬೇಕೆಂದು ಪರಿವಾರದ ತಾತ್ಕಾಲಿಕ ನಾಯಕನಾಗಿದ್ದ ಗೋಪಾಲನಿಗೆಸನ್ನೆ ಮಾಡುತ್ತಿದ್ದಳು. ಎಲ್ಲರೂ ಗೌರಾಂಬೆಯ ಮನೆಯನ್ನು ತಲುಪಿದ ಕೂಡಲೇ ರಾಣಿಯೂ, ಗೌರಾಂಬೆಯೂ, ಪಲ್ಲಕ್ಕಿಯಿಂದಿಳಿದು ಮನೆಯೊಳಕ್ಕೆ ನಡೆದರು. ಗೋಪಾಲನು ಛತ್ರವನ್ನು ಹಿಡಿದು ಸ್ವಲ್ಪ ದೂರ ರಾಣಿಯನ್ನನುಗಮಿಸಿ ಹಿಂತಿರುಗಿ ಬಂದು ಪರಿವಾರದೊಡನೆ ಹೊರಗೆ ನಿಂತಿದ್ದನು. ರಾಣಿ ಅಷ್ಟು ವೇಗವಾಗಿ ಗೌರಾಂಬೆಯ ಮನೆಗೆಬರಲು ಕಾರಣವನ್ನೂ ಹಿಸಲು ಗೋಪಾಲನಿಗಾಗಲೀ ಪರಿವಾರಕ್ಕಾಗಲೀ ಸಾಧ್ಯವಾಗಲಿಲ್ಲ.

ಸುಮಾರು ಎರಡು ಘಳಿಗೆಗಳ ಕಾಲ ಕಳೆಯಿತು. ದೂರದಿಂದ ವಯಸ್ಸಾದ ಬ್ರಾಹ್ಮಣನೊಬ್ಬನು ಗೌರಾಂಬೆಯ ಮನೆಯ ಕಡೆ ಉದ್ವೇಗದಿಂದ ಓಡಿ ಬರುತ್ತಿದ್ದನು. ಓಡಲು ಶಕ್ತಿಯಿಲ್ಲದ ವಯಸ್ಸಾದುದರಿಂದ ಆತನು ವೇಗವಾಗಿ ಉಸಿರಾಡುತ್ತಿದ್ದನು. ಆತನು ಅಲ್ಲಲ್ಲಿ ಸ್ವಲ್ಪ ನಿಂತು ಚೇತರಿಸಿಕೊಂಡು ಬರುತ್ತಿದ್ದನು. ಹಣೆಯಿಂದ ಬೆವರಿನ ಹನಿಗಳು ನೆಲದ ಮೇಲೆ ಬೀಳುತ್ತಿದ್ದವು. ರಾಣಿಯ ಪರಿವಾರವನ್ನು ಸಮೀಪಿಸಿ ಆತನು ಆರ್ತ ಗದ್ಗದ ಕಂಠದಿಂದ "ಅಪ್ಪಾ, ನನ್ನ ಮಗನಿಲ್ಲಿಗೆ ಬಂದಿದ್ದಾನೆ. ನನ್ನ ಸೊಸೆಗೆ ಪ್ರಾಣಾಪಾಯ ಒದಗಿದೆ. ತಕ್ಷಣ ಅವನಿಗೆ ತಿಳಿಸಿ ಪುಣ್ಯ ಕಟ್ಟಿಕೊಳ್ಳಿ" ಎಂದು ಕೇಳಿಕೊಂಡನು. ಗೋಪಾಲನು ಮುಂದಕ್ಕೆ

ಬಂದು ಕುಸಿದು ಬೀಳಲಿದ್ದ ಆತನನ್ನು ಹಿಡಿದುಕೊಂಡು ನೆರಳಿನಲ್ಲಿ ಕುಳ್ಳಿರಿಸಿ ಗಾಳಿಬೀಸಿ "ಸ್ವಲ್ಪ ಸುಧಾರಿಸಿಕೊಳ್ಳಿ. ಭಗವಂತನೊಳ್ಳೆಯದನ್ನು ಮಾಡುವನು. ನಿಮ್ಮ ಮಗನು ಯಾರು? ಆತನ ಹೆಸರೇನು?" ಎಂದು ಕೇಳಿದನು. ಆತನು ತನ್ನ ಮಗನು ಮಾಂತ್ರಿಕನೆಂದೂ, ತನ್ನವಿದ್ಯೆಯನ್ನು ಸರ್ವಾಧಿಕಾರಿಯ ಮನೆಯವರಿಗೆ ತೋರಿಸಬೇಕೆಂದು ಅಲ್ಲಿಗೆ ಬಂದಿರುವನೆಂದೂ ಆತನ ಹೆಸರು ಕೃಷ್ಣ ಭಟ್ಟನೆಂದೂ ಹೇಳಿದನು. ಗೋಪಾಲನಿಗೆ ರಾಣಿ ಅಲ್ಲಿಗೆ ಬರಲು ಕಾರಣ ಆಗ ಸ್ಫುರಿಸಿತು. ಕೂಡಲೇ ಗೋಪಾಲನು ಮನೆಯೊಳಗೆ ಪ್ರವೇಶಿಸಿ ಮಾಂತ್ರಿಕನಿಗೆ ಈ ಸಮಾಚಾರ ವನ್ನುತಿಳಿಸಬೇಕೆಂದು ಪ್ರಯತ್ನ ಪಟ್ಟನು. ಆದರೆ ಮಾಂತ್ರಿಕನಿದ್ದ ಒಂದು ವಿಶಾಲ ವಾದ ಕೋಣೆಯ ಬಾಗಿಲುಗಳು ಒಳಗಡೆಯಿಂದ ಮುಚ್ಚಲ್ಪಟ್ಟಿದ್ದವು. ಹೊರಗಿನ ಸೇವಕರಿಗೆ ಈ ಬಾಗಿಲುಗಳು ತೆಗೆಯುವವರೆಗೂ ಯಾರನ್ನೂ ಒಳಕ್ಕೆ ಬಿಡಬಾರ ದೆಂದು ಕಟ್ಟಪ್ಪಣೆಯನ್ನು ಮಾಡಲಾಗಿತ್ತು. ಗೋಪಾಲನು ಹೊರಗಡೆ ಮುಚ್ಚಿದ ಬಾಗಿಲುಗಳ ಸಂದಿಗಳಲ್ಲಿ ನೋಡುತ್ತ ಅತ್ತಿತ್ತ ಸುಳಿಯುತ್ತ ಏನೇನೋ ಪ್ರಯತ್ನ ಪಡುತ್ತಿದ್ದನು. ಒಂದು ಸಲ ಒಳಗೆ ನೆರೆದಿದ್ದ ಹೆಂಗಸರೆಲ್ಲಾ "ಆಶ್ಚರ್ಯ, ಆಶ್ಚರ್ಯ" ಎಂದು ಒಟ್ಟಾಗಿ ಹೇಳಿದ ಧ್ವನಿ ಕೇಳಿ ಬಂತು. ಸ್ವಲ್ಪ ಹೊತ್ತಿಗೆ ಒಂದು ಬಾಗಿಲು ಸ್ವಲ್ಪ ತೆರೆದು ಒಬ್ಬಳು ಒಂದು ಆಡನ್ನು ತಕ್ಷಣ ತರಬೇಕೆಂದು ಗಾಭರಿಯಿಂದ ಸೇವಕರಿಗೆ ಆಜ್ಞೆಯಿತ್ತಳು. ಇಬ್ಬರು ಸೇವಕರು ಆಡನ್ನು ತರಲು ಓಡಿದರು. ಗೋಪಾಲನು ಆ ಹೆಂಗಸನ್ನು ಹೊರಗೆ ಕರೆದು ಮಾಂತ್ರಿಕನ ಹೆಂಡತಿಗೆ ಪ್ರಾಣಾಪಾಯ ಒದಗಿದೆಯೆಂದೂ ಈ ವಿಷಯ ಮಾಂತ್ರಿಕನಿಗೆ ತಿಳಿಸಬೇಕೆಂದೂ ಗಾಭರಿಯಿಂದ ಹೇಳಿದನು. ಅವಳು ತಲೆ ಚಚ್ಚಿಕೊಳ್ಳುತ್ತಾ, "ಇದು ಅವರಿಗೆ ಆಗಲೇ ತಿಳಿದಿದೆಯಪ್ಪಾ, ತಂತ್ರದಲ್ಲಿ ಏನೋ ಲೋಪ ಒದಗಿದೆ. ಅದಕ್ಕೇ ಈಗ ತಕ್ಷಣ ಆಡನ್ನು ಬಲಿ ಕೊಡಬೇಕು, ಅವರು ಕಾದಿದ್ದಾರೆ" ಎಂದು ಬೇಗ ಬೇಗ ನುಡಿದಳು. ಗೋಪಾಲನ ಹೃದಯದಲ್ಲಿ ಜುಗುಪ್ಸೆ ಮತ್ತು ಕರುಣೆಯಿಂದ ಕೂಡಿದ ಕೋಪವು ತಲೆ ದೋರಿತು. ಆತನು ಕಿಂಕರ್ತವ್ಯ ಮೂಢನಾಗಿ ನಿಂತು ಬಿಟ್ಟನು. ಅಷ್ಟರೊಳಗೆ ಸೇವಕರು ಆಡನ್ನು ಹಿಡಿದು ತಂದರು. ಬಾಗಿಲನ್ನು ಪೂರ್ತಿ ತೆಗೆದು ಸೇವಕರು ಆಡನ್ನು ಮಾಂತ್ರಿಕನ ಸಮೀಪಕ್ಕೆ ತೆಗೆದುಕೊಂಡು ಹೋದರು. ಮಾಂತ್ರಿಕನ ಮುಖದಲ್ಲಿ ದುಃಖವೂ, ಆತುರವೂ, ಆತನ ಸ್ಥೈರ್ಯದ ಮರ್ಯಾದೆಯನ್ನು

ಮೀರಿ ಹೊರ ಕಾಣಿಸುತ್ತಿದ್ದವು. ಮಾಂತ್ರಿಕನು ಆಡನ್ನು ಆತುರನಾಗಿ ಪರೀಕ್ಷಿಸಿ "ಛೀ, ಇದು ಬಲಿಕೊಡಲು ಯೋಗ್ಯವಲ್ಲ. ಆದರೆ ಬೇರೆ ಆಡು ತರುವವರೆಗೂ ದೇವಿ ಕಾಯುವ ಹಾಗಿಲ್ಲ. ಎಂತಹ ಪರಿಸ್ಥಿತಿ ಒದಗಿತು" ಎಂದು ಹೇಳುತ್ತ ನಡುಗುತ್ತಿರುವ ಕೈಗಳಿಂದ ಬೇಗ ಬೇಗ ಆಡನ್ನು ಅಲಂಕರಿಸಿ ಕೊನೆಯದಾಗಿ ತನ್ನಲ್ಲಿ ಉಳಿದ ಸ್ಥೈರ್ಯವನ್ನೆಲ್ಲಾ ಶೇಖರಿಸಿಕೊಂಡು ಎದ್ದು ಅಲ್ಲಿ ನಿಲ್ಲಿಸಿದ್ದ ದೇವಿಯ ವಿಗ್ರಹಕ್ಕೆ ಕತ್ತಿಯನ್ನು ತೋರಿಸಿ "ಜೈ ಮಹಾಕಾಳೀ, ಭೈರವೀ, ತೆಗೆದುಕೋ ಬಲಿ" ಎಂದು ಗಟ್ಟಿಯಾಗಿ ಕೂಗಿ ಕತ್ತಿಯಿಂದ ಆಡಿನ ಕತ್ತನ್ನು ಹೊಡೆದನು. ರಕ್ತವು ಮೇಲಕ್ಕೆ ಚಿಮ್ಮಿ ಆತನ ಮುಖಕ್ಕೆ ಹೊಡೆಯಿತು. ಆತನ ಕೈಯಿಂದ ಕತ್ತಿ ಜಾರಿ ನೆಲಕ್ಕೆ ಬಿದ್ದಿತು. ದೇವಿಯ ವಿಗ್ರಹವು ಗಡಗಡ ನಡುಗಿತು. ದೇವಿಯ ಮೇಲಿದ್ದ ಹೂಗಳು ಕೆಲವು ಮೇಲಕ್ಕೆ ಹಾರಿ ಕೆಳಕ್ಕೆ ಬಿದ್ದವು. ಮಾಂತ್ರಿಕನು ಧೊಪ್ಪೆಂದು ಕೆಳಕ್ಕೆ ಬಿದ್ದನು. ಆಡನ್ನು ತರಿಸಿದ್ದ ಹೆಂಗಸು "ಅಯ್ಯೋ, ಅಯ್ಯೋ" ಎಂದು ಕಿರಿಚಿಕೊಳ್ಳುತ್ತ ಗಟ್ಟಿಯಾಗಿ ಅಳತೊಡಗಿದಳು. ಸೇವಕರೂ ರಾಣಿಯಾದಿಯಾಗಿ ಅಲ್ಲಿ ನೆರೆದಿದ್ದ ಹೆಂಗಸರೆಲ್ಲರೂ ಗಾಬರಿಯಿಂದ ಕಿರಿಚಿಕೊಂಡರು. ಗೌರಾಂಬೆಯ ಮುಖ ಕಳಾವಿಹೀನವಾಯಿತು. ಅವಳು ರಾಣಿಯನ್ನು ಕೈ ಹಿಡಿದು ಹೊರಕ್ಕೆ ಕರೆದುಕೊಂಡು ಬಂದು ಶಿಬಿರಕ್ಕೆ ಕರೆದುಕೊಂಡು ಹೋಗಬೇಕೆಂದು ಪರಿವಾರಕ್ಕೆ ಆಜ್ಞೆ ಮಾಡಿದಳು. ಅಷ್ಟರೊಳಗೆ ಗೋಪಾಲನು ವೃದ್ಧ ಬ್ರಾಹ್ಮಣನನ್ನು ಹೊರಗಿನಿಂದ ಅಲ್ಲಿಗೆ ಕರೆದುಕೊಂಡು ಬಂದಿದ್ದನು. ಆ ಬ್ರಾಹ್ಮಣನು ತನ್ನ ಮಗನನ್ನು ಸಮೀಪಿಸಿ ಅವನ ಶರೀರದ ಮೇಲೆ ಬಿದ್ದು "ಅಯ್ಯೋ, ಅಯ್ಯೋ ಏನು ಗತಿ. ಎಂಥಾ ಆಪತ್ತೊದಗಿತು. ಯಾರಾದರೂ ಇವನಿಗೆ ಸ್ಮೃಹೆ ಬರುವ ಹಾಗೆ ಮಾಡಿ. ಈ ಊರಿನಲ್ಲಿ ಬೇರೆ ಮಾಂತ್ರಿಕರು ಯಾರಾದರೂ ಇದ್ದರೆ ಕರೆ ತನ್ನಿ. ಪುಣ್ಯಾತ್ಮರಾರಾದರೂ ನನ್ನ ಮನೆಗೆ ಓಡಿ ಹೋಗಿ ನನ್ನ ಸೊಸೆಯ ಪ್ರಾಣವನ್ನುಳಿಸಿ." ಎಂದು ದೈನ್ಯದಿಂದ ಅಳುತ್ತಾ ಕೇಳಿಕೊಳ್ಳುತ್ತಿದ್ದನು. ಗೋಪಾಲನು ತಕ್ಷಣ ಹೊರಡಲಿದ್ದ ರಾಣಿಯನ್ನು ಸಮೀಪಿಸಿ ವಿನಯದಿಂದ ತಾನು ಅಲ್ಲಿಯೇ ಇದ್ದು ಮಾಂತ್ರಿಕನನ್ನೂ ಅವನ ಸಂಸಾರವನ್ನೂ ಉಳಿಸಲು ಪ್ರಯತ್ನ ಪಡಲು ಅನುಮತಿಯನ್ನು ಪಡೆದು ಮಾಂತ್ರಿಕನ ಸಮೀಪಕ್ಕೆ ಬಂದನು. ರಾಣಿಯು ಶಿಬಿರಕ್ಕೆ ಹೊರಟಳು.

ಗೋಪಾಲನು ಮಾಂತ್ರಿಕನಿಗೆ ಶೈತ್ಯೋಪಚಾರ ಮಾಡಿ ಆತನ ದೇಹ

ವನ್ನು ಪರೀಕ್ಷಿಸಿ ಅವನ ತಂದೆಗೆ ಧೈರ್ಯ ಹೇಳಿ ಅಡು ಕರಿಸಿದ ಹೆಂಗಸಿನ ಜೊತೆಯಲ್ಲಿ ಮಾಂತ್ರಿಕನ ಮನೆಗೆ ಓಡಿ ಹೋದನು. ಇಬ್ಬರೂ ಮನೆಯೊಳಕ್ಕೆ ನುಗ್ಗಿ ರಕ್ತವನ್ನು ವಾಂತಿ ಮಾಡಿದ ಮಾಂತ್ರಿಕನ ಪತ್ನಿಯ ಶರೀರವನ್ನು ಕಂಡು ನಿಶ್ಚೇಷ್ಟರಾದರು. ಹೆಂಗಸು ಆ ದೇಹವನ್ನು ಪರೀಕ್ಷಿಸಿ ಪ್ರಾಣವಿಲ್ಲವೆಂದು ಹೇಳಿದಳು. ಗೋಪಾಲನು ಅವಳನ್ನಲ್ಲಿಯೇ ಇರಿಸಿ ಸರ್ವಾಧಿಕಾರಿಯ ಮನೆಗೆ ಓಡಿ ಹೋದನು. ಅಷ್ಟು ಹೊತ್ತಿಗೆ ಸರ್ವಾಧಿಕಾರಿ ಮಾಂತ್ರಿಕನಿದ್ದ ಕೋಣೆಗೆ ಬಂದು ಒಂದು ಆಸನದ ಮೇಲೆ ದೀನವಾಗಿ ಕುಳಿತಿದ್ದನು. ಸ್ವಲ್ಪ ಹೊತ್ತಿಗೆ ಮಾಂತ್ರಿಕನಿಗೆ ಸ್ಮೃತಿ ಬಂದು, ಆತನು ಕಣ್ಣು ತೆರೆದು ತಂದೆಯ ಮುಖವನ್ನು ನೋಡಿದನು. ಕೂಡಲೇ ಆತನ ಕಣ್ಣುಗಳು ಮುಚ್ಚಿಕೊಂಡವು. ತಂದೆ ಮಕ್ಕಳ ಕಣ್ಣುಗಳೆರಡರಲ್ಲೂ ನೀರುಕ್ಕಿ ಬಂದಿತು. ಗೋಪಾಲನಾದಿಯಾಗಿ ಕೆಲವರ ಕಣ್ಣುಗಳಲ್ಲೆಲ್ಲಾ ನೀರುಕ್ಕಿ ಬಂದಿತು. ಸ್ವಲ್ಪ ಹೊತ್ತಿಗೆ ಮಾಂತ್ರಿಕನನ್ನು ಆತನ ತಂದೆ ಎಬ್ಬಿಸಿ ಕುಳ್ಳಿರಿಸಿದನು. ತಂದೆಯ ಶೀತಲ ಕರಸ್ಪರ್ಶದಿಂದ ಮಾಂತ್ರಿಕನಿಗೆ ಸ್ವಲ್ಪ ಚೈತನ್ಯವು ಬಂತು. ಆತನು ಅಳುತ್ತಾ "ಅತ್ಯಾತ್ಮೆಯಿಂದ ನಿಮ್ಮ ಸೊಸೆಯನ್ನು ಕೊಂದ ಪಾಪಿ ನಾನು. ನನ್ನನ್ನು ಕ್ಷಮಿಸಿ" ಎಂದು ತಂದೆಯನ್ನು ಬೇಡಿಕೊಂಡನು. ಕೂಡಲೇ ಇಬ್ಬರ ದೃಷ್ಟಿಗಳೂ ದೂರದಲ್ಲಿ ಕುಳಿತಿದ್ದ ಸರ್ವಾಧಿಕಾರಿಯತ್ತ ಮರಳಿ ಹಿಂತಿರುಗಿದವು. ತಂದೆ ಮಗನನ್ನು ಸಮಾಧಾನ ಪಡಿಸುತ್ತಾ "ನಿನ್ನದೇನೂ ತಪ್ಪಿಲ್ಲ. ನಾವೆಲ್ಲರೂ ಯಾವ ಜನ್ಮದಲ್ಲಿ ಏನು ಪಾಪ ಮಾಡಿದ್ದೆವೋ. ಈಗ ದೇವಿಯ ಕ್ರೂರ ದೃಷ್ಟಿಗೆ ನಾವು ಗುರಿಯಾಗಿ ಬಿಟ್ಟೆವು. ಕರ್ಮ ಫಲವನ್ನು ಎಂಥವರಾದರೂ ಅನುಭವಿಸಲೇಬೇಕು. ಇಲ್ಲಿಂದ ಮನೆಗೆ ನಡೆ" ಎಂದು ಹೇಳಿದನು. ಗೋಪಾಲನು ಇವರಿಬ್ಬರನ್ನೂ ಹಿಡಿದು ಎಬ್ಬಿಸಿ ಅವರ ಮನೆಗೆ ಕರೆದುಕೊಂಡು ಹೋದನು. ಮಾಂತ್ರಿಕನ ಹೆಂಡತಿಯ ದಹನ ಸಂಸ್ಕಾರಕ್ಕೂ, ಮಾಂತ್ರಿಕನಿಗೆ ತಾತ್ಕಾಲಿಕವಾದ ಉಪಶಮನಕ್ಕೂ ಸರ್ವಾಧಿಕಾರಿ ಸ್ವಲ್ಪ ಹಣವನ್ನು ಕಳುಹಿಸಿದನು.

ಮಹಾರಾಜನು ಇನ್ನೂ ಸ್ವಲ್ಪ ದಿನ ಅಲ್ಲಿಯೇ ಇದ್ದು ರಾಜ ಕಾರ್ಯಗಳನ್ನು ನೋಡಿಕೊಳ್ಳುವನೆಂದು ಎಲ್ಲರಿಗೂ ತಿಳಿಯಿತು. ಎರಡು ದಿನಗಳಾದ ಮೇಲೆ ಗೋಪಾಲನು ಮಾಂತ್ರಿಕನ ಮನೆಗೆ ಹೋದನು. ಮಾಂತ್ರಿಕನ ತಂದೆ ಆತನನ್ನು ಆದರದಿಂದ ಒಳಗೆ ಕರೆದುಕೊಂಡು ಹೋಗಿ ಹತ್ತಿರದಲ್ಲಿ ಕುಳ್ಳಿರಿಸಿ

ಕೊಂಡನು. ಮಾಂತ್ರಿಕನೂ ಆತನ ತಂದೆಯೂ ಗೃಹಿಣೀ ಮರಣದ ವ್ಯಥೆಯನ್ನು ಸ್ವಲ್ಪ ಹೊತ್ತು ತೋಡಿಕೊಂಡ ಮೇಲೆ ಪಂಡಿತನೂ ವೃದ್ಧನೂ ಆಗಿದ್ದ ಮಾಂತ್ರಿಕ ಜನಕನು ಈ ಆಪತ್ತಿಗೆ ಮೂಲ ಕಾರಣಗಳನ್ನು ಗೋಪಾಲನಿಗೆ ವಿವರಿಸಬೇಕೆಂಬ ಉದ್ದೇಶದಿಂದ ಹೀಗೆ ಹೇಳತೊಡಗಿದನು.

"ನಾವು ಶುದ್ಧ ವೈದಿಕ ಬ್ರಾಹ್ಮಣರು. ನಮ್ಮ ವಂಶದವರೆಲ್ಲಾ ಶ್ರೌತ ಸ್ಮಾರ್ತ ನಿತ್ಯಕರ್ಮಾನುಷ್ಠಾನಪರರು. ಅಂದರೆ ನಿನಗೆ ಹೇಗೆ ತಿಳಿದೀತು. ಸೃಷ್ಟಿ ಮಾಡಿದ ಭಗವಂತನು ಮಾನವರ ಹಿತಕ್ಕಾಗಿ ಅವರಲ್ಲಿ ವರ್ಣಾಶ್ರಮ ಧರ್ಮವೆಂಬ ಒಂದು ವ್ಯವಸ್ಥೆಯನ್ನು ಮಾಡಿದ್ದಾನೆ."

ಗೋಪಾಲ—"ಈ ವಿಷಯ ನನಗೆ ಗೊತ್ತು ಸ್ವಾಮೀ. ನಾನು ಶೂದ್ರ, ನನಗೆ ಓದು ಬರಹಗಳು ಬರುವುದಿಲ್ಲ. ನಾನು ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡಲಿಲ್ಲ. ಆದರೂ ಅವರವರ ವರ್ಣಧರ್ಮವನ್ನೂ, ಕುಲಧರ್ಮವನ್ನೂ, ಅವರವರು ಪರಿಪಾಲಿಸಬೇಕೆಂದೂ ಒಂದು ವರ್ಣದವರೂ, ಕುಲದವರೂ, ಮತ್ತೊಂದು ವರ್ಣದವರೊಂದಿಗೆ ಮತ್ತು ಕುಲದವರೊಂದಿಗೆ ಸ್ಪರ್ಧಿಸಬಾರದೆಂದೂ ನನಗೆ ತಿಳಿದಿರುವುದು. ಈ ವಿಷಯವನ್ನು ನಮ್ಮ ತಾಯಿಯವರು ನನಗೆ ಕುಡಿಸಿದ ಹಾಲಿನೊಂದಿಗೆ ಕಲಿಸಿದ್ದಾರೆ ಸ್ವಾಮೀ; ಅಲ್ಲದೆ ವೈದಿಕ ಧರ್ಮವು ವೇದಗಳಲ್ಲಿಯೂ, ಸ್ಮೃತಿಗಳಲ್ಲಿಯೂ, ಶಾಸ್ತ್ರಗಳಲ್ಲಿಯೂ, ಪುರಾಣಗಳು, ಇತಿಹಾಸಗಳು, ಕಾವ್ಯಗಳು ಮೊದಲಾದವುಗಳಲ್ಲೂ ಪ್ರಕಟವಾಗಿದೆಯೆಂದೂ ನನಗೆ ಗೊತ್ತು. ನಮ್ಮೂರಿನ ಬಳಿ ವರದಪ್ಪ ಸ್ವಾಮಿಗಳೆಂಬ ಗುರುಗಳು ಇದ್ದಾರೆ. ನಮ್ಮ ಬಂಧು ವರ್ಗಕ್ಕೆ ಸೇರಿದ ಕಮಲಮ್ಮನೆಂಬ ಹುಡುಗಿ ಅವರ ಆಶ್ರಮದಲ್ಲಿ ಸೇವೆ ಮಾಡುತ್ತಿದ್ದಾಳೆ. ಅವಳಿಗೆ ವರದಪ್ಪಸ್ವಾಮಿಗಳು ಕಾವ್ಯ ಶಾಸ್ತ್ರಗಳನ್ನು ಹೇಳಿಕೊಡುತ್ತಿದ್ದಾರೆ. ಅವಳು ಈ ವಿಚಾರವೆಲ್ಲಾ ನನಗೆ ಅಲ್ಪ ಸ್ವಲ್ಪ ತಿಳಿಸಿದ್ದಾಳೆ. ಆದರೆ ಮಾಂತ್ರಿಕರ ವಿದ್ಯೆಯ ವಿಚಾರ ನನಗೆ ಏನೂ ತಿಳಿಯದು ಸ್ವಾಮೀ."

ಬ್ರಾಹ್ಮಣ—"ಗೋಪಾಲಾ, ನೀನು ಶೂದ್ರನಾಗಿದ್ದರೂ ಜ್ಞಾನಾಸಕ್ತನಾಗಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ. ನಮ್ಮ ಶಾಸ್ತ್ರಗಳು ವೇದಾಧಿಕಾರವನ್ನು ಶೂದ್ರರಿಗೆ ಕೊಡದಿದ್ದರೂ ಅವರಿಗೆ ಪೂರ್ಣವಾದ ಜ್ಞಾನಾಧಿಕಾರವನ್ನು ಕೊಟ್ಟಿವೆ. ಜ್ಞಾನವು ಎಲ್ಲಾ ಮಾನವರಿಗೂ ಬೇಕು.

ಸೃಷ್ಟಿಯಲ್ಲಿರುವ ಅನೇಕ ಮತ್ತು ನಾನಾ ರೀತಿಯ ವಿದ್ಯೆಗಳಿಗೆ ಅಧಿಕಾರಬೇಕು. ವಿದ್ಯೆಗಳಲ್ಲಿ ಉತ್ತಮ ಮಧ್ಯಮ ಅಧಮ ಎಂಬ ತಾರತಮ್ಯವಿದೆ. ಅಲ್ಲದೆ ಸಾತ್ವಿಕ ರಾಜಸ ತಾಮಸ ವಿಭಾಗಗಳೂ ಇವೆ. ಆದರೆ ಈ ಎಲ್ಲಾ ವಿದ್ಯೆಗಳ ಸಾರಾಂಶವಾದ ಜ್ಞಾನವನ್ನು ಹೊಂದಲು ಎಲ್ಲ ಜನರಿಗೂ ಅಧಿಕಾರವೂ ಅವಶ್ಯಕತೆಯೂ ಇವೆ. ನಾನೂ, ನನ್ನ ಮಗನೂ ಬ್ರಾಹ್ಮಣೋಚಿತವಾದ ವಿದ್ಯೆಯನ್ನು ಕಲಿತಿದ್ದೇವೆ. ಆದರೇನಾಯಿತು. ಅಜ್ಞಾನದಿಂದ ಬ್ರಾಹ್ಮಣ ಧರ್ಮವನ್ನು ಬಿಟ್ಟು ಪತಿತರಾಗಿದ್ದೇವೆ. ಘೋರ ಸಂಕಟವನ್ನು ಪಡೆದಿದ್ದೇವೆ."

ಹೀಗೆ ಗದ್ಗದ ಕಂಠದಿಂದ ಮುದುಕನಾದ ತಂದೆ ಹೇಳುತ್ತಿರುವಾಗಲೇ ಆತನ ಕಣ್ಣುಗಳಿಂದ ಅಶ್ರುಗಳು ಜಾರಿ ಬಂದವು. ಆತನು ತನ್ನ ಉತ್ತರೀಯದಿಂದ ಕಣ್ಣೀರೊರಿಸಿಕೊಳ್ಳುತ್ತ ಮುಖವನ್ನು ಮುಚ್ಚಿಕೊಂಡನು.

ಪಕ್ಕದಲ್ಲಿ ತಲೆ ಬಾಗಿಸಿಕೊಂಡು ಮೌನದಿಂದ ಕುಳಿತುಕೊಂಡು ಅಳುತ್ತಿದ್ದ ಕೃಷ್ಣಭಟ್ಟನು ಹಲ್ಲುಕಚ್ಚಿ ಬಲಗೈಯಿಂದ ತಲೆ ಚಚ್ಚಿಕೊಂಡು ಹೀಗೆ ಆಕ್ರೋಶಿಸಿದನು:—

"ನಾನು ಕೇವಲ ಪತಿತನಲ್ಲ. ಘೋರ ಪಾತಕಿಯಾಗಿದ್ದೇನೆ. ಸ್ತ್ರೀ ಘಾತುಕನಾದೆ. ಅಯ್ಯೋ. ಕೇವಲ ಸ್ತ್ರೀಯನ್ನಲ್ಲ, ಕೇವಲ ಧರ್ಮ ಪತ್ನಿಯನ್ನೂ ಅಲ್ಲ. ಮುಗ್ಧಳನ್ನೂ, ಅಶಕ್ತಳನ್ನೂ ನನ್ನ ನೀಚ ವೃತ್ತಿಗೆ ತನುಮನಗಳನ್ನರ್ಪಿಸಿದವಳನ್ನೂ ದುರಾಶೆಯಿಂದ ಕೊಂದೆ. ಅಯ್ಯೋ, ಎಂತಹ ಪಾಪಿ ನಾನು. ತಂದೆಯೇ, ನೀವು ಹೇಳಿದ ವಿವೇಕವನ್ನು ಕೇಳದ ದ್ರೋಹಿ ನಾನು. ನಿಮ್ಮ ಉಪದೇಶವನ್ನು ಕೇಳಿ ನಾನು ಮಂತ್ರ ವಿದ್ಯೆಗೆ ಕೈ ಹಾಕದಿದ್ದರೆ ಈ ಘೋರ ಸಂಕಟವಿಂದು ನಮಗೆ ಪ್ರಾಪ್ತವಾಗುತ್ತಿರಲಿಲ್ಲವಲ್ಲಾ. ಇದಕ್ಕೆಲ್ಲಾ ನಾನೇ ಕಾರಣ. ತಂದೆಯೇ ನೀವು ಪತಿತರಲ್ಲ. ನೀವು ಅಜ್ಞಾನಿಗಳಲ್ಲ. ಅಸಹಾಯಕರಾದ ನಿಮ್ಮನ್ನೂ ನನ್ನ ಹೆಂಡತಿಯನ್ನೂ ದುರ್ಗತಿಗೆ ತಂದ ಪಾಪಿ ನಾನೇ."

ಗೋಪಾಲನು ತುಳುಕಲಿರವ ಕಣ್ಣೀರನ್ನು ಕಣ್ಣುಗಳಲ್ಲಿಯೇ ಅಡಗಿಸಿಕೊಂಡನು. ಸ್ವಲ್ಪ ಹೊತ್ತು ಎಲ್ಲರೂ ಸುಮ್ಮನಿದ್ದರು. ನಂತರ ಗೋಪಾಲನು ಹೇಳಿದನು — "ಜ್ಞಾನಿಗಳು ಗತಕ್ಕೆ ದುಃಖ ಪಡುವುದಿಲ್ಲವೆಂದು ಕೇಳಿದ್ದೇನೆ. ನೀವು ದುಃಖ ಬಿಟ್ಟು ಮುಂದಿನ ಕಾರ್ಯದಲ್ಲಿ ತೊಡಗಿ."

ಬ್ರಾಹ್ಮಣನು ಗೋಪಾಲನ ಮುಖವನ್ನು ಸ್ವಲ್ಪ ಕಾಲ ತದೇಕ ದೃಷ್ಟಿಯಿಂದ ನೋಡಿದನು.

ಬ್ರಾಹ್ಮಣ—"ಹೌದು. ಎಂತಹ ಪರಿಸ್ಥಿತಿಯಲ್ಲೂ ಜ್ಞಾನವೊಂದೇ ಸರಿಯಾದ ದಾರಿಯನ್ನು ತೋರಿಸಬಲ್ಲದು. ಕೃಷ್ಣಾ, ನೀನೂ ಶೋಕವನ್ನು ಬಿಡು. ಪಶ್ಚಾತ್ತಾಪದಿಂದ ನೀನು ಪಾಪದ ಬಹು ಭಾಗವನ್ನು ತೊರೆದಿದ್ದೀಯೆ. ಇನ್ನು ಮುಂದೆ ಪ್ರಾಣಾಪಾಯ ಸಮಯದಲ್ಲೂ ಬ್ರಾಹ್ಮಣ ಧರ್ಮವನ್ನು ಬಿಡುವುದಿಲ್ಲವೆಂದು ತೀವ್ರವಾದ ಸಂಕಲ್ಪವನ್ನು ನಾವಿಬ್ಬರೂ ಮಾಡೋಣ. ಆದರಿಂದ ಉಳಿದ ಪಾಪ ಬಹು ಮಟ್ಟಿಗೆ ಶಾಂತವಾಗುವುದು. ಪ್ರಾಯಶ್ಚಿತ್ತದಿಂದ ಉಳಿದ ಪಾಪದ ಶಾಂತಿಗೆ ಪ್ರಯತ್ನಿಸೋಣ.

"ಪತಿತನಾದ ಬ್ರಾಹ್ಮಣನು ಪತಿತನಾದ ಶೂದ್ರನಿಗಿಂತಲೂ ಹೀನನಾಗುವನು. ನೀನು ಕೇವಲ ಪತಿತನಲ್ಲದೆ ಪಾಪಿಯೂ ಆದೆ. ಪ್ರಾಯಶ್ಚಿತ್ತದ ವಿಧಿಯನ್ನು ಪ್ರಾರಂಭಿಸುವುದಕ್ಕೆ ಅರ್ಹತೆಯನ್ನು ನೀನು ಮೊದಲು ಪಡೆಯಬೇಕು. ಈ ಸಚ್ಛೂದ್ರನ ಪಾದಗಳನ್ನು ಮುಟ್ಟಿ ನಮಸ್ಕಾರ ಮಾಡು."

ಹೀಗೆ ಹೇಳುತ್ತ ಬ್ರಾಹ್ಮಣನು ಗೋಪಾಲನ ಪಾದಗಳನ್ನು ತೋರಿಸಿದನು.

ಗೋಪಾಲನು ಥಟ್ಟನೆ ಎದ್ದು ನಿಂತು "ಸ್ವಾಮೀ, ಇದಕ್ಕೆ ನಾನು ಒಪ್ಪಲಾರೆ. ಇದೆಂತಹ ಕಾರ್ಯ? ಎಲ್ಲಿಯಾದರೂ ಉಂಟೇ? ನನಗೆ ಅಪ್ಪಣೆ ಕೊಡಿ. ನಾನು ಹೋಗಿ ಬರುತ್ತೇನೆ." ಎಂದು ಹೇಳುತ್ತ ಹಿಂಜರಿದನು. ಬ್ರಾಹ್ಮಣನು ತೇಜೋಮಯ ದೃಷ್ಟಿಯಿಂದ ಗೋಪಾಲನ ಮುಖವನ್ನು ನೋಡಿ ಆತನ ಕಡೆಗೆ ಕೈ ಚಾಚಿ ಹೇಳಿದನು.—

"ಇದು ಬ್ರಾಹ್ಮಣ ವಾಕ್ಯ, ಇದು ಧರ್ಮ ವಾಕ್ಯ. ಇದಕ್ಕೆ ಒಪ್ಪುವುದು ನಿನ್ನ ಕರ್ತವ್ಯ. ಶೂದ್ರ ವರ್ಣವು ವಿರಾಟ್ಪುರುಷನ ಪಾದಗಳಲ್ಲಿ ಗಂಗೆಯ ಜೊತೆಯಲ್ಲಿ ಹುಟ್ಟಿದ್ದು. ಭಗವಂತನ ಅಂಶವು ಕಲ್ಪಿಸಿಕೊಂಡ ಜಡ ಮೂರ್ತಿಗಳಿಗಿಂತ ಸಚೇತನ ಮೂರ್ತಿಗಳಲ್ಲಿ ಹೆಚ್ಚಾಗಿರುದು. ಗೋವುಗಳೂ, ಬ್ರಾಹ್ಮಣರೂ, ಸಾಧು ಪುರುಷರೂ, ಭಗವದಂಶವುಳ್ಳವರು."

ಗೋಪಾಲನ ಭಾವವು ಭಗವಂತನ ನಾಮವನ್ನು ಕೇಳಿದ ಕೂಡಲೇ ನಿರ್ವಿಕಾರ ಗಂಭೀರವಾಯಿತು. ಒಂದು ಕ್ಷಣ ಆತನು ಭಾವಸಮಾಧಿಮಗ್ನ

ನಾದನು. ಕೃಷ್ಣಭಟ್ಟನು ತಂದೆಯ ಆಜ್ಞೆಯನ್ನು ಅತಿ ಶೀಘ್ರನಾಗಿ ಅತ್ಯಾಸಕ್ತಿಯಿಂದ ಪರಿಪಾಲಿಸಿದನು. ಗೋಪಾಲನ ಪಾದಸ್ಪರ್ಶದಿಂದ ಆತನ ಅಂತರಾತ್ಮವು ಬಹಳ ಹಗುರವಾಯಿತು. ಆತನು ಪರಿಶುದ್ಧನಾದನು. ಆತನಲ್ಲಿ ಒಂದು ಹೊಸ ತೇಜಸ್ಸು ಹುಟ್ಟಿತು.

ಕೃಷ್ಣಭಟ್ಟನು ಚೈತನ್ಯಪೂರ್ಣ ಗಂಭೀರ ಧ್ವನಿಯಿಂದ ಹೇಳಿದನು—"ಇಂದಿನಿಂದ ನಾನು ಪುನಃ ತ್ರಿಕರಣ ಶುದ್ಧಿಯಿಂದ ಶಾಸ್ತ್ರೋಕ್ತ ರೀತಿಯಲ್ಲಿ ಬ್ರಾಹ್ಮಣ ಧರ್ಮವನ್ನು ಆಚರಿಸುತ್ತೇನೆ. ಸಾತ್ವಿಕವಲ್ಲದುದನ್ನು ತ್ರಿಕರಣಗಳಿಂದ ವರ್ಜಿಸುತ್ತೇನೆ. ಎಂತಹ ಆಪತ್ತು ಒದಗಿದರೂ ಈ ಧರ್ಮವನ್ನು ಮತ್ತೆ ನಿಯಮವನ್ನು ಬಿಡುವುದಿಲ್ಲ. ನನಗೆ ಸಾತ್ವಿಕ ಮಾರ್ಗದಲ್ಲಿ ಶ್ರದ್ಧೆಯನ್ನೂ ಶಕ್ತಿಯನ್ನೂ ಕೊಡಲು ಭಗವಂತನನ್ನು ಸದಾ ಪ್ರಾರ್ಥಿಸುತ್ತೇನೆ."

ಬ್ರಾಹ್ಮಣನು ಎದ್ದು ನಿಂತನು. ಒಂದು ಸಲ ಮನಸ್ಸನ್ನು ಭೂತ ವರ್ತಮಾನ ಭವಿಷ್ಯಗಳ ಮೇಲೆ ಒಂದು ಕೊನೆಯಿಂದ ಇನ್ನೊಂದು ಕೊನೆಯವರೆಗೂ ಓಡಿಸಿದನು. ಬಾಹ್ಯದಲ್ಲಿ ಇಂದ್ರಿಯಗೋಚರವಾದ ಜಗತ್ತಿನ ಎಲ್ಲಾ ಎಲ್ಲೆಗಳ ಕಡೆಗೂ ಓಡಿಸಿದನು. ತಾನು ಗಳಿಸಿದ್ದ ವೈದಿಕ ಜ್ಞಾನದ ನಾನಾ ಮುಖಗಳ ಸೌಷ್ಠವದ ಭಂಗಿಗಳಲ್ಲಿ ನಾಟ್ಯ ಮಾಡಿಸಿದನು. ಎಲ್ಲ ಕಡೆಗಳಲ್ಲೂ "ಏಕಮೇವಾದ್ವಿತೀಯಂಬ್ರಹ್ಮ" ಎಂಬ ತತ್ವವಾತನಿಗೆ ಗೋಚರಿಸಿತು.

ಆತನು ಹೇಳಿದನು—"ಒಂದು ವಿಷಯವನ್ನು ಮಾತ್ರ ನಿರ್ಧರಿಸಬೇಕಾಗಿದೆ. ಇನ್ನು ಮುಂದೆ ಬ್ರಾಹ್ಮಣಯೋಗ್ಯವಾದ ಯಾವ ಜೀವನ ವೃತ್ತಿಯನ್ನನುಸರಿಸಬೇಕೆಂಬುದನ್ನು ತೀರ್ಮಾನ ಮಾಡಿಕೊಳ್ಳಬೇಕು."

ಕೃಷ್ಣಭಟ್ಟನು ಹೇಳಿದನು—"ನಮಗೆ ಜೀವನಾಧಾರವಾಗಿದ್ದ ಮಾನ್ಯವನ್ನು ರಾಜನು ಕಿತ್ತುಕೊಂಡನು. ರಾಜನ ವಿದ್ಯಾದ್ವೇಷದಿಂದ ಜನರಲ್ಲಿ ಬ್ರಾಹ್ಮಣರನ್ನು ಆದರಿಸುವುದು ಬಹಳ ಕಡಿಮೆಯಾಯಿತು. ಕಷ್ಟ ಜೀವನಕ್ಕೆ ಹೆದರಿ ನಾನು ತಾಂತ್ರಿಕ ವೃತ್ತಿಯನ್ನು ಅವಲಂಬಿಸಿದೆ. ತಾಂತ್ರಿಕ ಶಕ್ತಿಯಿಂದ ಜನರು ಬೆರಗಾಗುತ್ತಿದ್ದರು. ಅಂತಹ ಶಕ್ತಿಯಿರುವವರಿಗೆ ಧನವನ್ನು ಕೊಡುತ್ತಿದ್ದರು. ಧನದಾಶೆಯಿಂದ ನಮ್ಮ ತಂದೆಯ ಹಿತೋಕ್ತಿಯನ್ನು ಕೇಳದೆ ನಾನು ತಾಂತ್ರಿಕ ವಿದ್ಯೆಗೆ ಕೈಹಾಕಿದೆನು. ಶಕ್ತಿ ಕೈಗೆ ಸಿಕ್ಕಿತು. ಆದರೆ ಅದು ಅನಂತವಾದ ಬ್ರಹ್ಮ ಶಕ್ತಿಯಲ್ಲ; ಅಫಿತ್ಯವಾದ, ಅಲ್ಪವಾದ ತಂತ್ರ ಶಕ್ತಿ. ಅದಕ್ಕೆ ಬಲಿ ಬೇಕು.

ರಕ್ತ, ಮಾಂಸ, ಮೇದಸ್ಸು, ವೀರ್ಯ ಮುಂತಾದವುಗಳನ್ನು ಹೀರಿ ಪ್ರಜ್ವಲಿಸುವ ಶಕ್ತಿಯದು. ಇದಕ್ಕೆ ಪತಿವ್ರತೆಯಾದ ನನ್ನ ಹೆಂಡತಿಯು ನೆರವಾದಳು. ತಂತ್ರ ಶಕ್ತಿಯನ್ನು ಪ್ರಯೋಗಿಸುವಾಗಲೂ, ಪ್ರಕಟಿಸುವಾಗಲೂ ಅದಕ್ಕೆ ಬೇಕಾದ ಪುಷ್ಟಿಯನ್ನು ನನ್ನ ಶರೀರದಿಂದಲ್ಲದೆ ನನ್ನ ಹೆಂಡತಿಯ ಶರೀರದಿಂದಲೂ ಹೀರ ಬೇಕಾಗಿತ್ತು. ಅವಳು ದೂರದಲ್ಲಿದ್ದರೂ ಇದು ಸಾಧ್ಯವಾಗಿತ್ತು. ಧನ ಕೊಡುವ ಅಲ್ಪವಾದ ಇಂದ್ರಿಯ ಸುಖದ ಪ್ರಲೋಭನದ ಬಲೆಗೆ ಸಿಕ್ಕಿ ನಾನು ತಂತ್ರ ಶಕ್ತಿಯ ಅನಿಯತ ಪ್ರಯೋಗದಿಂದ ಸ್ತ್ರೀ ಹತ್ಯಾ ಪಾತಕವನ್ನು ಕಟ್ಟಿಕೊಂಡೆ. ಇನ್ನು ಮುಂದೆ ರಾಜನ ಆದರಕ್ಕೂ ಜನರ ಆದರಕ್ಕೂ ಆಶಿಸದೆ ಯದೃಚ್ಛಾಲಾಭ ಸಂತುಷ್ಟನಾಗಿ ಶುದ್ಧ ವೈದಿಕ ವೃತ್ತಿಯಲ್ಲೇ ಜೀವಿಸುತ್ತೇನೆ. ತಾಂತ್ರಿಕ ವೃತ್ತಿಯನ್ನವಲಂಬಿಸುವುದೂ, ಇತರ ವರ್ಣದವರ ವೃತ್ತಿಯನ್ನವಲಂಬಿಸಿ ಅವರೊಂದಿಗೆ ಸ್ಪರ್ಧಿಸುವುದೂ ಬ್ರಾಹ್ಮಣನಿಗೆ ಧರ್ಮವಲ್ಲ. ಆಪತ್ಕಾಲದಲ್ಲಿ ಕೃಷಿವಾಣಿಜ್ಯಗಳನ್ನು ಮಾಡಬಹುದಾದರೂ ಗೃಹಿಣಿಗಳಿಲ್ಲದ ನಮಗೆ ಆ ಗೋಡವೆಯೇಕೆ? ಸ್ಥಿರ ಚಿತ್ತವಿದ್ದರೆ ನಿಯಮಪಾಲನೆ ಅಸಾಧ್ಯವಾಗಲಾರದು. ಬ್ರಾಹ್ಮಣನು ಸತ್ಕರ್ಮವನ್ನು ತ್ರಿಕರಣ ಶುದ್ಧಿಯಿಂದ ಶಾಸ್ತ್ರೋಕ್ತವಾದ ರೀತಿಯಲ್ಲಿ ಆಚರಿಸುತ್ತಿದ್ದರೆ ದೇವತೆಗಳು ತೃಪ್ತರಾಗಿ ಲೋಕ ಕಲ್ಯಾಣ ಮಾಡುವರು. ಆದುದರಿಂದ ಬ್ರಾಹ್ಮಣನನ್ನು ಪೋಷಣೆ ಮಾಡುವುದು ಲೋಕಕ್ಕೆ ಹಿತಕರ, ಅದು ಅದರ ಕರ್ತವ್ಯ. ಪೋಷಣೆ ಎಷ್ಟು ಲಭಿಸಿದರೂ ತೃಪ್ತಿಯಿಂದ ಜೀವನ ನಡೆಸುವುದು ಬ್ರಾಹ್ಮಣನ ಕರ್ತವ್ಯ."

ಸ್ತಬ್ಧನಾಗಿ ನಿಂತಿದ್ದ ಗೋಪಾಲನು ಶಿರವನ್ನು ಸ್ವಲ್ಪ ಬಗ್ಗಿಸಿದನು.

"ಅಪ್ಪಣೆ ಕೊಡಿ ಸ್ವಾಮೀ. ನಾನು ಹೊರಡುತ್ತೇನೆ" ಎಂದು ಹೇಳಿ ಆತನು ಬ್ರಾಹ್ಮಣನ ಪಾದಗಳಿಗೆ ನಮಸ್ಕರಿಸಿದನು. ಆತನು "ಒಳ್ಳೆಯದು ಮಗೂ" ಎಂದು ಗೋಪಾಲನನ್ನು ಹರಸಿ ಕಳುಹಿಸಿದನು.

## ೧೧

ಘನಗಿರಿ ಪಟ್ಟಣದ ಕೋಟೆಯ ಮೇಲೆ ವಾಯುವ್ಯ ದಿಕ್ಕಿನಲ್ಲಿದ್ದ ರಾಮ ಬುರುಜು ಸೈನಿಕರು ಶತ್ರು ಸೈನ್ಯದ ಬರುವಿಕೆಯನ್ನು ದೂರದಿಂದ ನಿರೀಕ್ಷಿಸು

ವೃಷಕ್ಕಾಗಿ ಕಟ್ಟಿದ್ದ ಒಂದು ಎತ್ತರವಾದ ವರ್ತುಲಾಕಾರದ ಸಣ್ಣ ಕಟ್ಟಡ. ಅದರ ಒಳಗಿನಿಂದ ನಾಲ್ಕು ಕಡೆ ನೋಡಲು ವರ್ತುಲಾಕಾರದ ಗೋಡೆಯಲ್ಲಿ ಗವಾಕ್ಷಿಗಳಿದ್ದವು. ಮೆಟ್ಟಿಲುಗಳನ್ನು ಹತ್ತಿ ಮೇಲ್ಛಾವಣಿಯನ್ನು ಸೇರಿ ವರ್ತುಲಾಕಾರದ ಒಪ್ಪಾರದ ಮೇಲೆ ನಿಂತುಕೊಂಡರೆ ಬೆಟ್ಟವಿರುವ ನೈರುತ್ಯ ದಿಕ್ಕನ್ನು ಬಿಟ್ಟು ಉಳಿದ ಎಲ್ಲ ದಿಕ್ಕುಗಳಲ್ಲೂ ಬಹು ದೂರದವರೆಗೂ ನೋಡಲು ಅವಕಾಶವಿದ್ದಿತು. ಒಪ್ಪಾರದ ಉತ್ತರ ಭಾಗದಲ್ಲಿ ನಿಂತು ನೇರವಾಗಿ ಕೆಳಗಡೆ ನೋಡಿದರೆ ಆಳದಲ್ಲಿ ಕೋಟೆಯ ಹೊರ ಪಕ್ಕದಿಂದ ಬೆಟ್ಟದ ಪಕ್ಕದಲ್ಲಿ ಹೋಗುತ್ತಿದ್ದ ರಥ ಮಾರ್ಗವು ಕಂಡು ಬರುತ್ತಿತ್ತು.

ಆ ದಿನ ಬೆಳಿಗ್ಗೆ ಎರಡನೆಯ ಯಾಮವು ಪ್ರಾರಂಭವಾಗಿತ್ತು. ಭಾಗ್ಯಲಕ್ಷ್ಮಿಯು ವೀರ ತರುಣಿಯ ವೇಷವನ್ನು ಧರಿಸಿ ರಾಮ ಬುರುಜಿನ ಹೊರಗಡೆ ಎತ್ತರವಾದ ಒಂದು ನೆಲದಲ್ಲಿ ಅಲಂಕೃತವಾದ ಒಂದು ಕುದುರೆಯ ಮೇಲೆ ಪ್ರಾಙ್ಮುಖಿಯಾಗಿ ಕುಳಿತಿದ್ದಳು. ಅವಳ ಎದುರಿನಲ್ಲಿ ಸ್ವಲ್ಪ ತಗ್ಗು ನೆಲದಲ್ಲಿ ಒಂದು ಪಕ್ಕಕ್ಕೆ ಸೈನಿಕರ ಒಂದು ತಂಡವೂ, ಮತ್ತೊಂದು ಪಕ್ಕಕ್ಕೆ ವೀರ ತರುಣಿಯರ ಇನ್ನೊಂದು ತಂಡವೂ ನಿಂತಿದ್ದವು. ಅವರೆಲ್ಲರೂ ಆಯುಧಗಳನ್ನು ಧರಿಸಿದ್ದರು. ಭಾಗ್ಯಲಕ್ಷ್ಮಿಯು ತನ್ನ ವೀರ ವಾಕ್ಯಗಳಿಂದ, ಹೇಮಗಿರಿ ಸೈನ್ಯದ ಮೇಲೆ ಯುದ್ಧ ಮಾಡುವ ಉತ್ಸಾಹವನ್ನೂ, ನಿಶ್ಚಯವನ್ನೂ ಅವರಲ್ಲಿ ಬಲಗೊಳಿಸುತ್ತಿದ್ದಳು.

ಆ ವೇಳೆಗೆ ರಂಗಯ್ಯನು ತನ್ನ ಕುದುರೆಯ ಮೇಲೆ ಕುಳಿತು ಇಬ್ಬರು ಅನುಚರರೊಡನೆ ಅಲ್ಲಿಗೆ ಬಂದು ಸ್ವಲ್ಪ ದೂರದಲ್ಲಿ ಕುದುರೆಯನ್ನು ನಿಲ್ಲಿಸಿ ಅದರ ಮೇಲಿಂದ ಭಾಗ್ಯಲಕ್ಷ್ಮಿಯನ್ನು ನೋಡುತ್ತಿದ್ದನು. ಭಾಗ್ಯಲಕ್ಷ್ಮಿ ತನ್ನ ಉದ್ಬೋಧವನ್ನು ಮುಗಿಸಿ ಸೈನಿಕರನ್ನೂ ವೀರ ತರುಣಿಯರನ್ನೂ ಕಳುಹಿಸಿ ಕೊಟ್ಟು ರಂಗಯ್ಯನನ್ನು ಸಮೀಪಿಸಿದಳು. ರಂಗಯ್ಯನು ಕುದುರೆಯಿಂದಿಳಿದನು. ಭಾಗ್ಯಲಕ್ಷ್ಮಿಯೂ ಕುದುರೆಯಿಂದಿಳಿದಳು. ರಂಗಯ್ಯನು, "ಏನು ಭಾಗ್ಯಲಕ್ಷ್ಮೀ, ಈ ಹೊಸ ವೇಷ? ನಿನ್ನ ಸ್ವಾಭಾವಿಕವಾದ ವೀರ್ಯ ಮತ್ತು ದರ್ಪಕ್ಕೆ ಈ ವೇಷವು ಶೋಭೆಯನ್ನೊದಗಿಸುತ್ತಿದೆ. ನಿನ್ನ ವೀರವಾಕ್ಯಗಳು ಕಾಕಲೀ ಸ್ವರದಲ್ಲಿ ಹೊರಬಂದರೂ ಅವುಗಳಲ್ಲಿ ಸಿಂಹಿಣೀ ಗರ್ಜನೆ ಕೇಳಿ ಬರುತ್ತಿತ್ತು" ಎಂದು ಹೊಗಳಿದನು. ಮಾನಿನಿಯಾದ ಭಾಗ್ಯಲಕ್ಷ್ಮಿ ಈ

ಹೊಗಳಿಕೆಯನ್ನು ಮುಗುಳ್ನಗೆಯಿಂದ ಅಂಗೀಕರಿಸಿದಳು. ಇಬ್ಬರೂ ರಾಜ ಬುರುಜಿನ ದ್ವಾರದ ಕಡೆ ಹೊರಟು, ದ್ವಾರವನ್ನು ಸಮೀಪಿಸಿದ ಕೂಡಲೇ ನಿಂತು ಪರಸ್ಪರ ಮಾತಾಡತೊಡಗಿದರು.

ಭಾಗ್ಯಲಕ್ಷ್ಮಿ—"ಭಾವಾ, ನಿನಗೆ ರುದ್ರಸಿಂಹ ಪ್ರಭುಗಳ ಪ್ರತಿಜ್ಞೆ ತಿಳಿಯಿತಾ ?"

ರಂಗಯ್ಯ—"ತಿಳಿಯಿತು ಭಾಗ್ಯಲಕ್ಷ್ಮೀ. ನಾವೆಲ್ಲರೂ ರಾಜಸೇವಕರಾಗಿರುವುದರಿಂದ ಹೇಗಾದರೂ ಆತನ ಪ್ರತಿಜ್ಞೆಗೆ ಭಂಗ ಬಾರದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ."

ಭಾಗ್ಯಲಕ್ಷ್ಮಿ—"ಹೌದು. ಆದುದರಿಂದಲೇ ನಮ್ಮ ತಂದೆಯವರು ನನ್ನ ಸೈನ್ಯದಲ್ಲಿಯೂ. ವೀರಾಂಗನೆಯರಲ್ಲಿಯೂ, ನಾಡಿನ ಪ್ರಜೆಗಳಲ್ಲಿಯೂ ನಮ್ಮ ಸೈನ್ಯವು ಹೇಮಗಿರಿಯ ಸೈನ್ಯವನ್ನು ಗೆಲ್ಲುವುದಕ್ಕೆ ಬೇಕಾದ ಉತ್ಸಾಹ ತ್ಯಾಗಗಳನ್ನು ತುಂಬುವುದಕ್ಕೆ ತಕ್ಕ ಪ್ರಚಾರ ಮಾಡುವ ಉದ್ಯೋಗವನ್ನು ಕೊಟ್ಟಿದ್ದಾರೆ. ಆದುದರಿಂದಲೇ ಮನೆಯಲ್ಲಿಯೇ ಇರಬೇಕಾದ ವಯಸ್ಸಿನಲ್ಲಿರುವ ನಾನು ಈ ವೇಷದಲ್ಲಿ ಹೊರಗಡೆ ತಿರುಗಾಡಲು ಅವಕಾಶವಾಗಿರುವುದು. ನಮ್ಮ ತಂದೆಯ ಸ್ವಾಮಿಭಕ್ತಿಯನ್ನು ನೀನು ಬಲ್ಲೆ ; ದೇಶವೆಲ್ಲಾ ಬಲ್ಲುದು. ಮಹಾರಾಜರು ತಮ್ಮ ಕಠೋರ ಪ್ರತಿಜ್ಞೆಯನ್ನು ನೆರವೇರಿಸಿಕೊಳ್ಳಲು ನಮ್ಮ ತಂದೆಯವರೊಬ್ಬರೇ ಅವರಿಗೆ ಆಸರ ; ಅವರಲ್ಲೇ ಮಹಾರಾಜರು ಪೂರ್ಣ ಭರವಸೆಯನ್ನಿಟ್ಟುಕೊಂಡಿದ್ದಾರೆ. ನಮ್ಮ ತಂದೆಗೆ ಇದರಿಂದ ಉಂಟಾದ ಜವಾಬ್ದಾರಿ ಎಷ್ಟೆಂದು ನೀನೇ ಊಹಿಸಿಕೋ. ಅವರು ನಾನಾ ರೀತಿಗಳಲ್ಲಿ ಸೈನ್ಯ ಶಕ್ತಿಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ. ಅವರಿಗೆ ಗಂಡು ಮಕ್ಕಳಿದ್ದಿದ್ದರೆ ಈ ಸಮಯದಲ್ಲಿ ಬಹಳ ನೆರವಾಗುತ್ತಿತ್ತು. ಆದರೆ ಅವರಿಗೆ ಆ ಭಾಗ್ಯವಿಲ್ಲ. ಆದುದರಿಂದ ಏಕೈಕ ಪುತ್ರಿಯಾದ ನನಗೆ ಪ್ರಚಾರಿಣಿಯ ಕೆಲಸವನ್ನು ವಹಿಸಿದ್ದಾರೆ. ಸೈನಿಕರಲ್ಲಿ ಉತ್ಸಾಹ ತುಂಬುವುದು ಸೈನ್ಯಾಧಿಪತಿಯಾದ ತಾನೂ ತನ್ನ ಪುತ್ರರೂ ಮುನ್ನುಗ್ಗಿದರೆ ತಾನೆ ? ಈ ಸ್ಥಿತಿಯಲ್ಲಿ ನಾವಿಬ್ಬರೂ ಹಗಲೂ ರಾತ್ರಿಯೂ ದುಡಿಯಬೇಕಾಗಿದೆ."

ರಂಗಯ್ಯ—"ಮಹಾರಾಜರ ಸಂಕಲ್ಪಕ್ಕೆ ಹಗಲೂ ರಾತ್ರಿಯೂ ಶ್ರಮಿಸಬೇಕಾದುದು ನಮ್ಮ ತಂದೆಯ ಮತ್ತು ನನ್ನ ಕರ್ತವ್ಯವೂ ಆಗಿದೆ. ಮಹಾ

ರಾಜರಿಗೆ ನನ್ನ ತಂದೆಯ ನೆರವೂ ಬೇಕು. ನನ್ನ ತಂದೆಯವರೂ ಈ ವಿಷಯದಲ್ಲಿ ಸಾಕಷ್ಟು ಆಸಕ್ತಿ ವಹಿಸಿದ್ದಾರೆ. ವಿದ್ಯೆಗಳನ್ನು ಅಲಕ್ಷ್ಯ ಮಾಡಿರುವುದರಿಂದ ಜನರಲ್ಲಿ ನೀತಿನಿಯಮಗಳಿಗೂ ಸತ್ಯಧರ್ಮಗಳಿಗೂ ಕುಂದು ಬಂದಿದೆ. ಸೈನ್ಯವನ್ನು ಪೋಷಿಸುವುದಕ್ಕೆ ರಾಜಭಟರು ಮಾಡುವ ಧನಸಂಚಯ ದಲ್ಲಿ ಅರ್ಧಕ್ಕೂ ಹೆಚ್ಚು ಧನ ಕಪಟಿಗಳಿಂದ ಅಪಹೃತವಾಗುತ್ತಿದೆ. ಧನ ಸಂಚಯದ ಮೇಲುಸ್ತುವಾರಿ ನಮ್ಮ ತಂದೆಗಳಿಗೆ ಸೇರಿದ್ದು. ಇದರಲ್ಲಿ ಅವರ ಏಕೈಕ ಪುತ್ರನಾದ ನಾನೂ ಅವರಿಗೆ ನೆರವಾಗಿದ್ದೇನೆ. ನಾವಿಬ್ಬರೂ ಅಹೋ ರಾತ್ರಿ ಶ್ರಮಿಸಬೇಕಾಗಿದೆ."

ಭಾಗ್ಯಲಕ್ಷ್ಮಿ—ಈ ಸಮಯದಲ್ಲಿ ನನಗೆ ಎಲ್ಲರ ಸಹಕಾರವೂ ಬೇಕು. ನೀನು ಈ ವಿಷಯದಲ್ಲಿ ಎಷ್ಟು ಸಹಕರಿಸಿದರೆ ಅಷ್ಟು ನಾನು ನಿನಗೆ ಕೃತಜ್ಞ ಳಾಗಿರುತ್ತೇನೆ.

ರಂಗಯ್ಯ—ಭಾಗ್ಯಲಕ್ಷ್ಮೀ, ಈ ವಿಷಯದಲ್ಲೇ ಅಲ್ಲ. ನಿನಗೆ ಇಷ್ಟ ವಾಗುವ ಪ್ರತಿ ವಿಷಯದಲ್ಲೂ ನಾನು ನಿನ್ನೊಂದಿಗೆ ಸಹಕರಿಸಲು ಸದಾ ಸಿದ್ಧನಾಗಿದ್ದೇನೆ. ನೀನೇ ಒಂದು ವಿಧವಾಗಿ ಅದಕ್ಕೆ ಅವಕಾಶ ಕೊಡುತ್ತಿಲ್ಲ. ನಿಮ್ಮ ತಂದೆತಾಯಿಗಳಿಗೆ ಪೂರ್ತಿ ಇಷ್ಟವಿದ್ದರೂ ನೀನು ನನ್ನನ್ನು ಮದುವೆ ಮಾಡಿಕೊಳ್ಳಲು ಇನ್ನೂ ಒಪ್ಪಿಗೆಯನ್ನು ಕೊಟ್ಟಿಲ್ಲವೆಂದು ತಿಳಿಯಿತು.

ಭಾಗ್ಯಲಕ್ಷ್ಮಿ ಸ್ವಲ್ಪ ನಾಚಿಕೆಯಿಂದ ತಲೆತಗ್ಗಿಸಿ ಹೇಳಿದಳು "ಅದು ನನ್ನ ಮನಸ್ಸಿಗೆ ಸಂಬಂಧಿಸಿದ ವಿಷಯ. ನಾನು ಮನಃಪೂರ್ತಿಯಾಗಿ ಮೆಚ್ಚ ದವರಿಗೂ ಯಾರನ್ನೂ ಮದುವೆಯಾಗಲು ನನಗೆ ಇಷ್ಟವಿಲ್ಲ. ನಮ್ಮ ತಂದೆ ಯವರಿಗೆ ಈ ವಿಷಯವನ್ನು ತಿಳಿಸಿದ್ದೇನೆ. ಅವರೂ ಇದನ್ನು ಅಂಗೀಕರಿಸಿ ದ್ದಾರೆ. ಆದರೆ ಅವರು ತನ್ನ ಕುಲಕ್ಕೆ ಮತ್ತು ಅಂತಸ್ತಿಗೆ ತಕ್ಕವರನ್ನಲ್ಲದೆ ಬೇರೆ ಯಾರನ್ನೂ ವರಿಸಕೂಡದೆಂದು ನನಗೆ ಹಿತವಚನ ಹೇಳಿದ್ದಾರೆ. ಅದನ್ನು ನಾನೂ ಅಂಗೀಕರಿಸಿದ್ದೇನೆ."

ರಂಗಯ್ಯ ನಿಟ್ಟುಸಿರು ಬಿಟ್ಟು ಹೇಳಿದನು—

"ನಮ್ಮ ತಂದೆತಾಯಿಗಳ ಅನುಮತಿ ಇಲ್ಲದೆ ನಾನೂ ಯಾರನ್ನೂ ವರಿಸು ವುದಿಲ್ಲ. ನಮ್ಮ ತಂದೆತಾಯಿಗಳಿಗೂ ನಿಮ್ಮ ತಂದೆತಾಯಿಗಳಿಗೂ ನಮ್ಮಿಬ್ಬರ

ಮನುವೆ ಇಷ್ಟವಾಗಿರುವುದರಿಂದ ಈ ವಿಷಯವನ್ನು ಪ್ರಸ್ತಾಪಿಸಿದೆ. ಅಷ್ಟೇ, ಇದು ನನ್ನ ಮನಸ್ಸಿಗೂ ಸಂಬಂಧಿಸಿದ ವಿಷಯವೇ."

ಭಾಗ್ಯಲಕ್ಷ್ಮಿ—ನನ್ನ ಮಾತಿನಿಂದ ಸಿಟ್ಟಾಗಬೇಡ ಭಾವಾ. ಮೊದಲಿನ ಮಾತು ಹೇಗಿದ್ದರೂ ಈಗ ನಮ್ಮಿಬ್ಬರ ಕರ್ತವ್ಯದಲ್ಲಿ ಒಬ್ಬರಿಗೊಬ್ಬರ ನೆರವು ಅವಶ್ಯವಾಗಿದೆ.

ರಂಗಯ್ಯ—ನನಗೇನು ಸಿಟ್ಟಿಲ್ಲ ಭಾಗ್ಯಲಕ್ಷ್ಮೀ. ನನಗೆ ನೀನು ಅಭಿಲಾಷಿಸುವಷ್ಟು ದೇಹ ದಾರ್ಢ್ಯವಿಲ್ಲದಿದ್ದರೂ ಮನೋದಾರ್ಢ್ಯಕ್ಕೆ ಯಾವ ಲೋಪವೂ ಇಲ್ಲ. ರಾಜನ ಸಂಕಲ್ಪ ಸಿದ್ಧಿಗೆ ಪರಸ್ಪರ ಸಹಕರಿಸುವುದು ನಮ್ಮಿಬ್ಬರ ಕರ್ತವ್ಯವೂ ಹೌದು.

ಭಾಗ್ಯಲಕ್ಷ್ಮಿಯು ಮುಖವನ್ನೆತ್ತಿ ರಂಗಯ್ಯನನ್ನು ನೋಡಿದಳು.

ರಂಗಯ್ಯ ಮತ್ತೆ ಹೇಳಿದನು—"ಭಾಗ್ಯಲಕ್ಷ್ಮಿ, ನಿನ್ನ ವೀರತ್ವದ ಭಾವಕ್ಕೆ ನನ್ನ ವಿದ್ಯೆಯಿಂದ ಅಂದರೆ ನಾನು ವ್ಯಾಸಂಗ ಮಾಡಿದ ಸಾಹಿತ್ಯದಿಂದ ರೂಪವನ್ನು ಕೊಡುತ್ತೇನೆ. ನಾನು ನಿನಗೆ ಬೇಕಾದ ಉದ್ಬೋಧ ಗೀತೆಗಳನ್ನು ರಚಿಸಿ ಕೊಡುತ್ತೇನೆ. ನೀನು ಅವುಗಳನ್ನು ಮುಕ್ತ ಕಂಠದಿಂದ ಹಾಡು. ನಿನ್ನ ಅನುಚರರಿಂದ ಹಾಡಿಸು. ಅವು ಜನರ ಹೃದಯಗಳಲ್ಲಿ ಪ್ರತಿಧ್ವನಿತವಾಗುವುವು. ಅದರ ಪ್ರಭಾವವನ್ನು ನೋಡು."

ಭಾಗ್ಯಲಕ್ಷ್ಮಿ—"ಹಾಗೆಯೇ ಮಾಡೋಣ ಭಾವಾ" ಎಂದು ಹೇಳಿ ರಾಮಬುರುಜಿನ ಒಳಕ್ಕೆ ಪ್ರವೇಶಿಸಿ, ಮೆಟ್ಟಲುಗಳನ್ನು ಹತ್ತಿ ಮೇಲಿನ ಒಪ್ಪಾರಕ್ಕೆ ಹೋಗಿ ನಿಂತಳು. ರಂಗಯ್ಯನಿಗೆ ಮೇಲಿನ ಒಪ್ಪಾರದ ಮೇಲೆ ನಿಂತು ಕೆಳಗೆ ನೋಡಿದರೆ ತಲೆ ತಿರುಗುವಂತಾಗುತ್ತಿತ್ತು. ಆದುದರಿಂದ ಆತನು ಹೊರಗಡೆ ತನ್ನ ಕುದುರೆಯ ಹತ್ತಿರಕ್ಕೆ ಬಂದುಬಿಟ್ಟನು. ಭಾಗ್ಯಲಕ್ಷ್ಮಿ ನಿರ್ಭಯವಾಗಿ ಬುರುಜಿನ ಒಪ್ಪಾರದ ಮೇಲೆ ನಿಂತು ಕೆಳಗೆ ನೋಡಿದಳು. ಕೆಳಗಿನ ರಥದ ಹಾದಿಯಲ್ಲಿ ಗೋಪಾಲನು ಶರವೇಗದಿಂದ ಬೆಟ್ಟದ ಅಂಚಿಗೆ ಓಡಿಹೋದುದನ್ನು ಕಂಡಳು. ಆತನು ಭಾಗ್ಯಲಕ್ಷ್ಮಿ ನೋಡುತ್ತಿದ್ದಂತೆಯೇ ಬೆಟ್ಟವನ್ನು ಹತ್ತಿ ಎಲ್ಲಿಯೋ ಮಾಯವಾದನು. ಆ ವೇಗಕ್ಕೆ, ಆ ಶಕ್ತಿಗೆ ಭಾಗ್ಯಲಕ್ಷ್ಮಿ ಬೆರಗಾದಳು. ಅವನಲ್ಲಿ ಮೋಹಗೊಂಡಳು.

## ೧೨

ಭಾಗ್ಯಲಕ್ಷ್ಮಿಯ ವಯಸ್ಸೇ ಕಮಲಮ್ಮನ ವಯಸ್ಸಾಗಿತ್ತು. ಒಂದು ದಿನ ರಾಮಕ್ಕ ಕಮಲಮ್ಮನ ಜಡೆ ತುಂಬ ಮಲ್ಲಿಗೆ ಮೊಗ್ಗುಗಳನ್ನು ಪೋಣಿಸಿ ಅಲಂಕಾರ ಮಾಡಿದಳು. ಹತ್ತೊಂಭತ್ತು ವರ್ಷ ಪ್ರಾಯದ ಕಮಲಮ್ಮನಿಗೆ ಮಲ್ಲಿಗೆ ಮೊಗ್ಗುಗಳ ಅಲಂಕಾರವೂ ಅಲಂಕಾರಕ್ಕೆ ಕಮಲಮ್ಮನ ಯೌವನ ವಿಲಾಸವೂ ಪರಸ್ಪರ ಸೌಂದರ್ಯಪೋಷಕವಾಗಿದ್ದುವು. ಇವೆರಡರ ಮೇಲೆ ಅವಳ ವಿದ್ಯಾ ತೇಜಸ್ಸು ಅಧಿಕಾರ ಮುದ್ರೆಯನ್ನು ತೋರಿಸುತ್ತಿತ್ತು. ಅಲಂಕೃತಳಾದ ಅವಳು ಗೋಪಾಲನನ್ನು ಸಮೀಪಿಸಿ "ಗೋಪಾಲಾ, ಮೊಗ್ಗುಗಳ ಜಡೆ ಅಂದವಾಗಿದೆಯೇ ?" ಎಂದು ಕಲಕಂಠದಿಂದ ಕೇಳಿದಳು. ಆಗ ಅವಳ ಯೌವನದ ವಿಕಾಸವು ಮೊದಲ ಬಾರಿ ಅವನ ಮನಸ್ಸನ್ನು ಮುಗ್ಧಗೊಳಿಸಿತು. ಅವನು "ವಿದ್ಯಾವತಿಗೆ ಮಾಡಿದ ಯಾವ ಅಲಂಕಾರವು ತಾನೇ ಶೋಭಿಸುವುದಿಲ್ಲ ?" ಎಂದು ಪ್ರತ್ಯುತ್ತರವನ್ನು ಕೊಟ್ಟನು. ಧೀರ ವೀರ ಮೂರ್ತಿಯಾದ ಗೋಪಾಲನ ಪ್ರತ್ಯುತ್ತರದ ಮಧುರ ಧ್ವನಿಗಳೊಂದಿಗೆ ಅವನ ಅಪೂರ್ವ ಯೌವನವಿಲಾಸವೂ ಕಮಲಮ್ಮನ ಮನಸ್ಸೆಳೆಯಿತು. ಅವಳು ನಾಚಿಕೆಯನ್ನು ತೋರುತ್ತ ರಾಮಕ್ಕನ ಕಡೆಗೆ ಮರಳಿ ಬಂದಳು. ಇದನ್ನು ಗಮನಿಸಿದ ರಾಮಕ್ಕನ ಮನಸ್ಸಿನಲ್ಲಿ ಇವರಿಬ್ಬರು ದಂಪತಿಗಳಾದರೆ ಎಷ್ಟು ಚಂದ ಎಂದೆನಿಸಿತು.

ಸ್ವಲ್ಪ ಕಾಲ ಬಿಟ್ಟು ರಾಮಕ್ಕ ಗೋಪಾಲನನ್ನು ಮನೆಯಲ್ಲಿರಲು ಹೇಳಿ, ಕಮಲಮ್ಮನನ್ನು ಕರೆದುಕೊಂಡು ಕೋಟೆಯಲ್ಲೇ ಸ್ವಲ್ಪ ದೂರದಲ್ಲಿರುವ ತನ್ನ ನೆಂಟರೊಬ್ಬರ ಮನೆಗೆ ಹೊರಟಳು. ಕೋಟೆಯ ಒಂದು ಬೀದಿಯಲ್ಲಿ ಹೋಗುತ್ತಿರುವಾಗ ಭಾಗ್ಯಲಕ್ಷ್ಮಿಯೂ ಇಬ್ಬರು ಪರಿಚಾರಕರೂ ಕುದುರೆ ಸವಾರರಾಗಿ ಇವರಿಗೆ ಎದುರಾದರು. ವೀರ ತರುಣಿಯ ವೇಷದಲ್ಲಿದ್ದ ಭಾಗ್ಯಲಕ್ಷ್ಮಿಯು ಕಮಲಮ್ಮನನ್ನು ಗುರ್ತಿಸಿ ಕುದುರೆಯನ್ನು ನಿಲ್ಲಿಸಿ ಅದರಿಂದಿಳಿದು ಇವರ ಸಮೀಪಕ್ಕೆ ಬಂದಳು. ಭಾಗ್ಯಲಕ್ಷ್ಮಿ ಸಮೀಪಕ್ಕೆ ಬಂದ ಮೇಲೆ ಕಮಲಮ್ಮ ಅವಳನ್ನು ಗುರುತಿಸಿದಳು. ಕೂಡಲೇ ಮುಂದೆ ಬಂದು "ಏನಕ್ಕಾ ಚೆನ್ನಾಗಿದ್ದೀರಾ ?" ಎಂದು ಮಾತನಾಡಿಸಿದಳು. ಭಾಗ್ಯಲಕ್ಷ್ಮಿಯು ಪ್ರೀತಿ

ಯಿಂದ ತಂಗಿಯ ಯೌವನ ರೂಪವನ್ನೂ ಅಲಂಕಾರವನ್ನೂ ನೋಡಿ ಅವಳಿಗೆ ಹೀಗೆ ಪ್ರತ್ಯುತ್ತರವನ್ನು ಕೊಟ್ಟಳು : "ನಾನು ಚೆನ್ನಾಗಿದ್ದೇನೆ ಕಮಲಾ, ನೀನು ಚೆನ್ನಾಗಿದ್ದೀಯಲ್ಲಾ."

ಕಮಲಮ್ಮ ರಾಮಕ್ಕನನ್ನು ಭಾಗ್ಯಲಕ್ಷ್ಮಿಗೆ ತೋರಿಸಿ "ಇವರು ನನ್ನ ತಾಯಿ. ಅಲ್ಲ, ನನ್ನನ್ನು ತಾಯಿಯಂತೆ ಸಲಹಿದವರು. ರಾಮಕ್ಕನವರು ಗೋಪಾಲನ ತಾಯಿ" ಎಂದು ತೋರಿಸಿದಳು. ಆಗಲೇ ಅವಳು ಭಾಗ್ಯಲಕ್ಷ್ಮಿ ಯೆಂದರಿತಿದ್ದ ರಾಮಕ್ಕ ಭಾಗ್ಯಲಕ್ಷ್ಮಿಯನ್ನು ಕುರಿತು "ಏನಮ್ಮಾ, ಭಾಗ್ಯ ಲಕ್ಷ್ಮಮ್ಮಾ, ನಿನ್ನನ್ನು ನಾನು ಸಣ್ಣ ಮಗುವಾಗಿದ್ದಾಗ ನೋಡಿದ್ದವಳು ಪುನಃ ಇಂದು ನೋಡುತ್ತಿದ್ದೇನೆ. ಎಷ್ಟೆತ್ತರ ಬೆಳೆದಿದ್ದೀಯೇ ! ಯೌವನದ ಸೂರ್ಯನಿಂದ ಕಮಲದಂತೆ ಅರಳಿದ್ದೀಯೆ. ನನಗೆ ಬಹಳ ಸಂತೋಷ. ಒಂದು ಸಲ ನಮ್ಮ ಮನೆಗೆ ಬಾ ತಾಯೀ" ಎಂದು ಹೇಳಿದಳು. ಕಮಲಮ್ಮನು ಭಾಗ್ಯಲಕ್ಷ್ಮಿಯು ತನ್ನ ಒಡಹುಟ್ಟಿದವಳೆಂಬ ನೈಜವಾದ ಪ್ರೇಮದ ಆವೇಶ ದಿಂದ "ಅಮ್ಮಾ, ಒಂದು ಸಲ ಬೇಡ. ಈಗಲೇ ನಮ್ಮ ಅಕ್ಕ ನಮ್ಮ ಮನೆಗೆ ಬರಲಿ......ಅಕ್ಕಾ, ಈಗಲೇ ನಮ್ಮ ಮನೆಗೆ ಹೋಗೋಣ ಬನ್ನಿ" ಎಂದು ಹೇಳಿದಳು. ಭಾಗ್ಯಲಕ್ಷ್ಮಿಯು ತನ್ನ ಪರಿಚಾರಕರನ್ನು ಅಲ್ಲಿಯೇ ಇರಲು ಹೇಳಿ, ಪಾದಚಾರಿಣಿಯಾಗಿ ರಾಮಕ್ಕ ಮತ್ತು ಕಮಲಮ್ಮನ ಜೊತೆಯಲ್ಲಿ ಅವರ ಮನೆಗೆ ಹೋದಳು.

ಪ್ರಚಾರಿಣಿಯ ಕೆಲಸ ಪ್ರಾರಂಭಿಸಿದ ಲಾಗಾಯಿತು ಭಾಗ್ಯಲಕ್ಷ್ಮಿಗೆ ಬಡವರ ಕೇರಿಗಳಲ್ಲಿ ತಿರುಗುವುದೂ, ಬಡವರ ಮನೆಗಳಿಗೆ ಪ್ರವೇಶಿಸುವುದೂ ರೂಢಿಯಾಗಿತ್ತು. ಇದರಿಂದ ಅವಳಲ್ಲಿ ಹಿಂದೆ ಇದ್ದ ಔನ್ನತ್ಯಾಭಿಮಾನವು ಸ್ವಲ್ಪ ಕಡಿಮೆಯಾಗಿತ್ತು. ಲೋಕದಲ್ಲಿ ಭಿನ್ನ ಭಿನ್ನ ಸ್ತ್ರೀ ಪುರುಷರ ಸ್ವಭಾವ ಭೇದಗಳ ಪರಿಚಯವೂ ಆಗಲಾರಂಭಿಸಿತ್ತು. ಆದುದರಿಂದ ಭಾಗ್ಯಲಕ್ಷ್ಮಿಯು ರಾಮಕ್ಕನ ಮನೆಯಲ್ಲಿ ಹೊಂದಿಕೊಂಡು ಪ್ರೀತಿಯಿಂದ ಎಲ್ಲರೊಂದಿಗೆ ಮಾತಾಡಿ ದಳು. ರಾಮಕ್ಕ ಮನೆಗೆ ಬಂದ ಕೂಡಲೇ ಅಂಗಡಿಯಿಂದ ಕೆಲವು ವಸ್ತು ಗಳನ್ನು ತರಲು ಗೋಪಾಲನನ್ನು ಕಳುಹಿಸಿಕೊಟ್ಟಳು. ಭಾಗ್ಯಲಕ್ಷ್ಮಿಯ ಬರುವಿಕೆಯನ್ನು ತಿಳಿದು ಅಕ್ಕ ಪಕ್ಕದ ಮನೆಗಳ ಹೆಂಗಸರೆಲ್ಲರೂ ರಾಮಕ್ಕನ ಮನೆಯಲ್ಲಿ ಸೇರಿದರು. ಭಾಗ್ಯಲಕ್ಷ್ಮಿಯ ಮತ್ತು ಕಮಲಮ್ಮನ ಹುಟ್ಟುವಿಕೆ

ಮೊದಲಾಗಿ ಅವರ ಚರಿತ್ರೆಯ ಆಕಾಂಕ್ಷೆ ಪ್ರತ್ಯುತ್ತರಗಳು ಸೇರಿದ ಸ್ತ್ರೀ ಸಮೂಹದಲ್ಲಿ ಆಸಕ್ತಿಯಿಂದ ನಡೆದವು. ಭಾಗ್ಯಲಕ್ಷ್ಮಿ ಪ್ರಚಾರಿಣಿಯ ಕೆಲಸ ಮಾಡುವುದಕ್ಕೆ ಕಾರಣವೂ. ಭಾಗ್ಯಲಕ್ಷ್ಮಿಯಿಂದ ಸ್ತ್ರೀಸಮೂಹದಲ್ಲಿ ಸ್ವಸ್ತ್ಯ ದೋಹದದ ಪ್ರಚಾರವೂ ಬಂದು ಹೋದವು. ಕೊನೆಗೆ ಕಮಲಮ್ಮನ ಮತ್ತು ಭಾಗ್ಯಲಕ್ಷ್ಮಿಯ ಮದುವೆಯ ವಿಚಾರವೂ ಪ್ರಸ್ತಾಪವಾಯಿತು. ಆಗ ಇವರಿಬ್ಬರಲ್ಲಿ ಯಾರ ವಿವಾಹವು ಮೊದಲು ನಡೆಯಬೇಕು, ಯಾರು ಹಿರಿಯರು?–ಎಂಬ ಪ್ರಶ್ನೆಯೂ ಬಂತು. ಇಬ್ಬರೂ ಆವಳಿ ಮಕ್ಕಳಾದರೂ ಭಾಗ್ಯಲಕ್ಷ್ಮಿಯೇ ದೊಡ್ಡವಳೆಂದು ಹಿಂದೆ ನಿರ್ಧಾರವಾಗಿತ್ತೆಂದೂ, ಭಾಗ್ಯಲಕ್ಷ್ಮಿಯ ಮದುವೆಯೇ ಮೊದಲಾಗಬೇಕೆಂದೂ, ಆದಾದ ಮೇಲೆ ತಾನು ಕಮಲಮ್ಮನ ಮದುವೆಗಾಗಿ ಪ್ರಯತ್ನಿಸುವುದಾಗಿಯೂ ರಾಮಕ್ಕ ಹೇಳಿದಳು.

ಗೋಪಾಲನು ಮನೆಗೆ ಬಂದ ಕೂಡಲೇ ಆಕ್ಕ ಪಕ್ಕದ ಹೆಂಗಸರೆಲ್ಲರೂ ಕಮಲಮ್ಮನಿಂದ ಬೇಗ ಬೇಗ ಕುಂಕುಮ ತಾಂಬೂಲಗಳನ್ನು ಪಡೆದು ಮನೆಗಳಿಗೆ ಹೊರಟರು. ಭಾಗ್ಯಲಕ್ಷ್ಮಿಯು ಅಭ್ಯಾಗತರ ಸತ್ಕಾರದಲ್ಲೂ ಮನೆಯ ಕೆಲಸಗಳಲ್ಲೂ ಪರಸ್ಪರ ನೆರವಾದ ಗೋಪಾಲನ ಮತ್ತು ಕಮಲಮ್ಮನ ಅನುರೂಪ ತಾರುಣ್ಯವನ್ನು ನೋಡಿ, ಕಮಲಮ್ಮ ಬೀದಿಯಲ್ಲಿ ಹೇಳಿದ "ಇವರು ನನ್ನ ತಾಯಿ, ಅಲ್ಲ, ನನ್ನನ್ನು ತಾಯಿಯಂತೆ ಸಲಹಿದವರು, ಗೋಪಾಲನ ತಾಯಿ" ಎಂಬ ಮಾತುಗಳನ್ನು ಸ್ಮರಿಸಿದಳು. ಅವಳಿಗೆ ಕಮಲಮ್ಮ ತನ್ನ ಭಾವದ ಅಂತರಾಳದಲ್ಲಿ ಗೋಪಾಲನನ್ನು ವರಿಸಿರುವುದು ಭಾಸವಾಯಿತು. ಆದರೆ ಗೋಪಾಲನ ಮುಖದಲ್ಲಿಯಾಗಲಿ, ಮಾತುಗಳಲ್ಲಾಗಲಿ, ಚೇಷ್ಟೆಗಳಲ್ಲಾಗಲಿ ಅವಳಿಗೆ ಆತನ ಅಂತರಂಗವೇನೂ ಗೋಚರಿಸಲಿಲ್ಲ. ಅವಳು ಅವಕಾಶ ಸಿಕ್ಕಿದಾಗೆಲ್ಲ ಎಷ್ಟು ನೋಡಿದರೂ ಅವನಲ್ಲಿ ಧೀರತೆಯಲ್ಲದೆ ಬೇರೆ ಯಾವ ವಿಕಾರವೂ ಅವಳಿಗೆ ಗೋಚರಿಸಲಿಲ್ಲ. ತಂಗಿಯಿಂದ ಸತ್ಕಾರ ಪಡೆದು ಅವಳು ಬಾಂಧವ್ಯವನ್ನು ಹೊತ್ತು ತನ್ನ ಮನೆಗೆ ತೆರಳಿದಳು. ಹೆಂಗಸಾದುದರಿಂದ ಅವಳನ್ನು ಪರಿಚಾರಕರು ನಿರೀಕ್ಷಿಸುತ್ತಿದ್ದ ಪ್ರದೇಶದವರೆಗೂ ಗೋಪಾಲನು ಕರೆದೊಯ್ದನು. ಅವಳು ಕೊನೆಯ ಸಲ ಗೋಪಾಲನ ಮೂರ್ತಿಯನ್ನು ಸತೃಷ್ಣ ದೃಷ್ಟಿಯಿಂದ ನೋಡುತ್ತ "ಹೋಗಿ ಬರುತ್ತೇನೆ" ಎಂದು ಹೇಳಿ ಬೀಳ್ಕೊಂಡಳು.

## ೧೩

ಆ ವರ್ಷ ಮಳೆಗಾಲ ಕಳೆದ ಮೇಲೆ ರುದ್ರಸಿಂಹನು ರಾಣಿಯೊಂದಿಗೂ ಸ್ವಲ್ಪ ಸೈನ್ಯ ಮತ್ತು ಇತರ ಪರಿವಾರದೊಂದಿಗೂ ಸಂಚಾರ ಹೊರಟನು. ರಾಜನು ದೇಶಸಂಚಾರಕ್ಕೆ ಹೊರಟಾಗೆಲ್ಲ ಆತನಿಗೆ ಪ್ರೀತಿ ಪಾತ್ರನಾದ ಗೋಪಾಲನು ಆತನನ್ನು ತಪ್ಪದೆ ಅನುಸರಿಸುತ್ತಿದ್ದನು. ಆದುದರಿಂದ ಗೋಪಾಲನೂ ರಾಜ ಪರಿವಾರದೊಂದಿಗೆ ಪ್ರವಾಸ ಹೊರಟನು. ಎಲ್ಲರೂ ನಾಗಲಾಪುರದ ಬಳಿ ಶಿಬಿರಗಳನ್ನು ಹಾಕಿ ಸ್ವಲ್ಪ ದಿನಗಳ ಕಾಲ ಅಲ್ಲಿ ತಂಗಿದ್ದರು. ಅಂದು ವಿಕಾರಿ ಸಂವತ್ಸರದ ಆಶ್ವಯುಜ ಶುದ್ಧ ಪೂರ್ಣಿಮೆಯಾಗಿತ್ತು. ಅಂದು ಸಾಯಂಕಾಲದಿಂದ ಮರುದಿನ ಸಾಯಂಕಾಲದವರೆಗೂ ಗೋಪಾಲನಿಗೆ ತನ್ನ ನಿತ್ಯ ವೃತ್ತಿಯಲ್ಲಿ ಬಿಡುವು ದೊರಕಿತ್ತು. ಬಿಡುವು ದೊರೆತಾಗೆಲ್ಲ ಆತನು ಇತರ ರಾಜಭಟರು ಮತ್ತು ಸೈನಿಕರಂತೆ ತಿನ್ನುವುದು, ಕುಡಿಯುವುದು, ಜೂಜಾಡುವುದು, ವಾರಕಾಂತೆಯರನ್ನು ಹುಡುಕಿಕೊಂಡು ಹೋಗುವುದು ಮುಂತಾದ ಕೆಲಸಗಳಲ್ಲಿ ಮಗ್ನನಾಗದೆ ಏಕಾಂತವಾಗಿ ನೈಸರ್ಗಿಕ ದೃಶ್ಯಗಳನ್ನು ನೋಡುವುದಕ್ಕಾಗಲಿ, ಜನಜೀವನವನ್ನು ಪರಿಶೀಲಿಸುವುದಕ್ಕಾಗಲಿ ಹೊರಡು ತ್ತಿದ್ದನು. ಅಂದು ಸಾಯಂಕಾಲ ಆತನು ನಾಗಲಾಪುರದ ಸಮೀಪದಲ್ಲಿ ಹರಿಯುತ್ತಿದ್ದ ವಿಲಾಸಿನಿ ಎಂಬ ಹಳ್ಳದ ದಡದಲ್ಲಿಯೇ ನಡೆಯಲಾರಂಭಿಸಿದನು. ಆ ಹಳ್ಳವು ಮಳೆಗಾಲದಲ್ಲಿ ಮಾತ್ರ ಹರಿಯುತ್ತಿತ್ತು. ಕೆಲವು ದಿನಗಳ ಹಿಂದೆ ಮೇಲೆ ಚೆನ್ನಾಗಿ ಮಳೆಯಾಗಿ ನೀರು ದಡಗಳನ್ನು ಮುಟ್ಟಿ ಹರಿದಿದ್ದು ಅಂದಿಗೆ ಪೂರ್ತಿ ಹಿಮ್ಮೆಟ್ಟಿ ಹಳ್ಳದ ಮಧ್ಯದಲ್ಲಿ ಮಾತ್ರ ಕೃಶವಾಗಿ ಹರಿಯುತ್ತಿತ್ತು. ಅದರಲ್ಲಿನ ಜಲವು ಸ್ವಚ್ಛತೆಯನ್ನು ಹೊಂದಿತ್ತು. ತೆಳುವಾಗಿ ಹರಿಯುತ್ತಿದ್ದ ಸ್ವಚ್ಛ ಜಲದ ಮಾರ್ಗವು ಇಬ್ಬದಿಗಳಲ್ಲಿನ ನುಣ್ಣಗಿದ್ದ ಸೈಕತ ಸ್ಥಲಿಗಳ ನಡುವೆ ವಿಲಾಸ ಭಂಗಿಯಲ್ಲಿ ಏರ್ಪಟ್ಟಿತ್ತು. ಸ್ವಚ್ಛ ಜಲದ ವಿಲಾಸಯುತ ಪ್ರವಾಹ ಭಂಗಿಯನ್ನೇ ಗಮನಿಸುತ್ತ ಗೋಪಾಲನು ಹಳ್ಳದ ದಡದಲ್ಲಿ ಬಹು ದೂರ ನಡೆದನು. ಹಳ್ಳದ ಜಲದ ಮಂದ ಪ್ರವಾಹದಲ್ಲಿನ ತಿರುವು ಮುರುವು ಗಳಲ್ಲೂ, ನಿಮ್ನೋನ್ನತಗಳಲ್ಲೂ, ವ್ಯಾಪ್ತಿ ಸಂಕೋಚಗಳಲ್ಲೂ ಆತನಿಗೆ ಒಂದು ಅಪೂರ್ವ ನಾಟ್ಯದ ವಿಲಾಸವು ಗೋಚರಿಸುತ್ತಿತ್ತು. ಪ್ರವಾಹದ ಮೃದು

ರಮ್ಯ ಧ್ವನಿಯಲ್ಲಿ ಆತನಿಗೆ ರಮ್ಯ ಸಂಗೀತವು ಕೇಳಿ ಬರುತ್ತಿತ್ತು. ಹೀಗೆ ಪ್ರಕೃತಿಯಲ್ಲಿ ಅಭಿವ್ಯಕ್ತವಾಗುತ್ತಿದ್ದ ಸಂಗೀತ ನಾಟ್ಯ ಕಲೆಗಳಲ್ಲಿ ಮನಸ್ಸನ್ನು ಲಯಮಾಡಿ ನಡೆಯುತ್ತಿದ್ದ ಆ ಭಾವುಕನ ರಸಾಸ್ವಾದಕ್ಕೆ ಆಕಸ್ಮಿಕವಾಗಿ ವಿರಾಮ ಒದಗಿತು. ಅಷ್ಟು ಹೊತ್ತಿಗಾಗಲೇ ಸೂರ್ಯಾಸ್ತಮಯವಾಗಿ ಚಂದ್ರನು ಸ್ವಲ್ಪ ಏರಿ ಬಂದಿದ್ದನು. ಗೋಪಾಲನು ನೋಡುತ್ತಿದ್ದ ಹಾಗೆಯೇ ಭೂಮಿಯ ಸ್ವಭಾವವೇ ಬದಲಾಯಿಸಿತ್ತು. ಭೂಮಿ ತನ್ನ ಮೃದುತ್ವವನ್ನು ಬಿಟ್ಟು ಕಠಿನವಾದ ಮತ್ತು ನಿಸ್ಸಾರವಾದ ಸುಣ್ಣದ ಕಲ್ಲನ್ನು ತೋರುತ್ತಿತ್ತು. ಹಳ್ಳದ ಪ್ರವಾಹವು ಎಲ್ಲಿಯೋ ಮಾಯವಾಗಿ ಬಿಟ್ಟಿತ್ತು. ಸುಣ್ಣದ ಕಲ್ಲಿನ ಭಾಗದಾಚೆ ಒಂದು ಒಣಗಿದ ಬೆಟ್ಟ ಕಾಣುತ್ತಿತ್ತು. ಗೋಪಾಲನು ಮನಸ್ಸಿನಲ್ಲಿಯೇ "ರಮ್ಯವಾದ ಹಳ್ಳದ ಪ್ರವಾಹವೆಲ್ಲಿ ಅಡಗಿತು? ಇದ್ದಕ್ಕಿದ್ದಂತೆಯೇ ಇದು ಎಲ್ಲಿ ಮಾಯವಾಯಿತು? ಈ ನಿಸ್ಸಾರಕಠೋರ ಪ್ರದೇಶವು ಅದನ್ನು ಹೀರಿಬಿಟ್ಟಿತೇ? ರಮ್ಯ ಪ್ರವಾಹವಿಲ್ಲಿಗೇ ಕೊನೆಯಾಯಿತೇ? ಮುನ್ಮುಂದೆ ಹರಿದು ಇನ್ನೊಂದು ಪ್ರವಾಹದೊಂದಿಗೆ ಸೇರಿ ಅದು ಇನ್ನೊಂದು ಪ್ರವಾಹದೊಂದಿಗೆ ಸೇರಿ ಹೀಗೆಯೇ ಮುಂದುವರಿಯುತ್ತಾ ಮಹಾನದಿಯನ್ನು ಸೇರಿ ಸಮುದ್ರವನ್ನು ಸೇರುವ ಗತಿ ಈ ಹಳ್ಳಕ್ಕೆ ಇಲ್ಲದಂತಾಯಿತಲ್ಲಾ? ಅಥವಾ ಒಂದು ತಟಾಕದಲ್ಲಾದರೂ ನಿಂತು ಲೋಕೋಪಕಾರದಲ್ಲಿ ಪರಿಣಮಿಸುವ ಭಾಗ್ಯವು ಇದಕ್ಕೆ ಇಲ್ಲದಂತಾಯಿತಲ್ಲಾ?" ಎಂದು ನಾನಾ ರೀತಿಗಳಲ್ಲಿ ಆಲೋಚನೆ ಮಾಡುತ್ತಾ ಮುಂದುವರಿದು ಒಂದು ಸಣ್ಣ ಪಟ್ಟಣವನ್ನು ಸಮೀಪಿಸಿದನು.

ಅಷ್ಟು ಹೊತ್ತಿಗೆ ಆ ಪಟ್ಟಣದಲ್ಲಿ ಜನಸಂಚಾರವು ಪೂರ್ತಿ ನಿಂತು ಹೋಗಿತ್ತು. ಅಂಗಡಿಗಳ ಬಾಗಿಲುಗಳು ಬಹುಮಟ್ಟಿಗೆ ಮುಚ್ಚಲ್ಪಟ್ಟಿದ್ದವು. ಕಳ್ಳರ ಹೆದರಿಕೆಯಿಂದ ಮನೆಗಳ ಹೊರ ಬಾಗಿಲುಗಳೂ ಮುಚ್ಚಲ್ಪಟ್ಟಿದ್ದವು. ಸಂದಿಗೊಂದಿಗಳಲ್ಲಿ ಎಲ್ಲಿಯಾದರೂ ಒಬ್ಬ ಜಾರನೋ, ಚೋರನೋ ಕಾಣಿಸುತ್ತಿದ್ದನು. ಹುಣ್ಣಿಮೆಯ ಬೆಳದಿಂಗಳು ಇವರ ಸುಳಿದಾಟವನ್ನು ತಡೆಗಟ್ಟಿತ್ತು. ಗೋಪಾಲನು ಪಟ್ಟಣವನ್ನು ಪ್ರವೇಶಿಸಿ ನಾಲ್ಕಾರು ವೀಧಿಗಳನ್ನು ಸುತ್ತುಹಾಕಿದನು. ರಾಜಭೃತ್ಯನ ಉಡುಪುಗಳನ್ನು ಧರಿಸಿದ್ದ ಈತನನ್ನು ನೋಡಿ ಚೋರರು ಕತ್ತಲಿನಲ್ಲಿ ಅಡಗಿಕೊಳ್ಳುತ್ತಿದ್ದರು. ಆದರೆ ಕೆಲವರು

ವೇಶ್ಯೋಪಜೀವಿಗಳು ಮಾತ್ರ ಈತನ ಇಂಗಿತವನ್ನರಿಯಲು ವಿವಿಧ [illegible]ಗಳನ್ನು ಮಾಡುತ್ತಿದ್ದರು. ಅವರಲ್ಲಿ ಕೆಲವರು ತಮ್ಮ ಪುಟ್ಟ ಅಂಗಡಿಗಳ[illegible] ತೆರೆಯುಕೊಂಡಿದ್ದರು. ಅಲ್ಲಿ ಸಿಹಿ ತಿನಿಸುಗಳೂ, ತಾಂಬೂಲವೂ, ನಾನಾ ಪದಾರ್ಥಗಳೂ ಸಿಗುತ್ತಿದ್ದವು. ಆ ಪಟ್ಟಣದ ಉಸ್ತುವಾರಿ ಭಟರು ಅಂತಹ ಅಂಗಡಿಗಳ ಮುಂದೆ ನಿಂತು ಮಾತಾಡುತ್ತಿದ್ದರು. ಗೋಪಾಲನು ಅನೇಕ ಪಟ್ಟಣಗಳಲ್ಲಿ ರಾತ್ರಿ ಹಗಲು ಸುಳಿದಾಡಿ ಜನರ ವೃತ್ತಿ ಪ್ರವೃತ್ತಿಗಳನ್ನು ಅರಿತವನಾದುದರಿಂದ ಈ ದೃಶ್ಯಗಳು ಆತನಿಗೆ ಹೊಸದಾಗಿರಲಿಲ್ಲ. ಆದರೆ ಆತನು ಆ ದೃಶ್ಯಗಳಲ್ಲಿ ವಿದ್ಯಾವಿರೋಧದಿಂದಾದ ನೈತಿಕ ಪತನವನ್ನು ಗಮನಿಸಿ ಚಿಂತಿಸುತ್ತಿದ್ದನು. ಆತನು ಒಂದು ಅಂಗಡಿಯ ಮುಂಭಾಗದಲ್ಲಿ ನಿಂತಿದ್ದ ಒಬ್ಬ ಪಟ್ಟಣಾಧಿಕಾರಿಯ ಭೃತ್ಯನನ್ನು ಕೇಳಿ ತನಗೆ ಆ ರಾತ್ರಿಗೆ ಊಟ ಮಾಡುವುದಕ್ಕೂ ಮಲಗಿರುವುದಕ್ಕೂ ಯೋಗ್ಯವಾದ ಸ್ಥಳಗಳನ್ನು ಅರಿತುಕೊಂಡನು. ಆತನ ಬಳಿ ಸ್ವಲ್ಪ ಹಣವೂ ಇತ್ತು. ಆದುದರಿಂದ ಆತನಿಗೆ ಊಟಕ್ಕೆ ಯಾವ ತೊಂದರೆಯೂ ಆಗಲಿಲ್ಲ. ಆದರೆ ಪರಿಚಿತರಿಲ್ಲದಿದ್ದರೆ, ಹಣವಿರುವವರು ಸುಖಶಯನಕ್ಕೆ ವಾರಾಂಗನೆಯರ ಗೃಹಗಳಿಗೇ ಹೋಗಬೇಕಾಗಿತ್ತು. ಹಣ ವೆಚ್ಚ ಮಾಡುವುದಕ್ಕೆ ಸಿದ್ಧವಿದ್ದರೂ ಮರ್ಯಾದಸ್ಥರಿಗೆ ಬೇರೆ ಯಾವ ಜಾಗವೂ ಸಿಗುವ ಏರ್ಪಾಟಿರಲಿಲ್ಲ. ಅಂತಹವರು ನಿರ್ಗತಿಕರ ಜೊತೆಯಲ್ಲಿ ಎಲ್ಲಿಯಾದರೂ ಒಂದು ದೇವಾಲಯದ ಮಂಟಪದಲ್ಲಿ ಮಲಗಬೇಕಾಗಿತ್ತು. ಗೋಪಾಲನು ಅಂತಹ ಒಂದು ಮಂಟಪಕ್ಕೆ ಹೋಗಿ ನೆಲದ ಮೇಲೆ ಮಲಗಿಕೊಂಡನು. ಆ ಮಂಟಪದಲ್ಲಿಯೇ ಸ್ವಲ್ಪ ದೂರದಲ್ಲಿ ಕೆಲವರು ಅನಾಥರೂ ಮಲಗಿದ್ದರು. ಗೋಪಾಲನಿಗೆ ಆ ದಿನ ಮಲಗಿದ ಕೂಡಲೇ ನಿದ್ರೆ ಹತ್ತಲಿಲ್ಲ. ಸ್ವಲ್ಪ ಹೊತ್ತಿಗೆ ಅಲ್ಲಿಗೆ ಒಬ್ಬ ಮುದುಕಿ ಮೆಲ್ಲನೆ ಬಂದು ಆ ಮಲಗಿದ್ದ ನಿರ್ಗತಿಕರನ್ನು ಸಮೀಪಿಸಿ "ವಿಲಾಸಿನೀ, ವಿಲಾಸಿನೀ," ಎಂದು ಮೃದು ಧ್ವನಿಯಲ್ಲಿ ಕರೆದಳು. ಆದರೆ ಯಾರೂ ಅವಳಿಗೆ ಉತ್ತರ ಕೊಡಲಿಲ್ಲ. ಅವಳು ಇನ್ನೂ ಗಟ್ಟಿಯಾಗಿ ಕರೆಯತೊಡಗಿದಳು. ಆಗ ಅಲ್ಲಿ ಮಲಗಿದ್ದವನೊಬ್ಬನು ಎದ್ದು "ಇಲ್ಲಿ ನೀನು ಕೂಗುವವಳು ಯಾರೂ ಇಲ್ಲ. ನಮ್ಮ ನಿದ್ರೆ ಏಕೆ ಕೆಡಿಸುತ್ತೀಯೆ. ಇಲ್ಲಿಂದ ಹೊರಟುಹೋಗು" ಎಂದು ಗದರಿಸಿದನು. ಆ ಮುದುಕಿ ಆರ್ತನಾದದಿಂದ "ಗದರಿಸಬೇಡಪ್ಪಾ. ನನ್ನ ಮಗಳನ್ನು ಹುಡುಕುತ್ತಾ ಇದ್ದೇನೆ" ಎಂದು ಸ್ವಲ್ಪ

ಮುಂದೆ ಗೋಪಾಲನು ಮಲಗಿದ್ದ ಜಾಗಕ್ಕೆ ಬಂದು ಪುನಃ "ವಿಲಾಸಿನೀ, ವಿಲಾಸಿನೀ," ಎಂದು ಕೂಗಿದಳು. ಈ ಆರ್ತನಾದವನ್ನು ಕೇಳಿದ ಗೋಪಾಲನು ಕೂಡಲೇ ಎದ್ದು "ಯಾರು ತಾಯೀ ನೀನು? ಯಾರನ್ನು ಹುಡುಕುತ್ತಿದ್ದೀಯೆ?" ಎಂದು ಆ ಮುದುಕಿಯನ್ನು ಉಪಚಾರದ ಧ್ವನಿಯಲ್ಲಿ ಕೇಳಿದನು. ಆ ಮುದುಕಿ "ನೀನು ಯಾರೋ ಒಳ್ಳೆಯವನಂತೆ ಕಾಣುತ್ತೀಯೆ. ಎಷ್ಟು ಹೊತ್ತಿನಿಂದ ನನ್ನ ಮಗಳನ್ನು ಎಲ್ಲೆಲ್ಲಿ ಹುಡುಕಿದರೂ ಸಿಗಲಿಲ್ಲ. ಎಲ್ಲಿ ಹೋಗಿಬಿಟ್ಟಳೋ ಹುಚ್ಚಿ. ಬೆಳಗ್ಗಿನಿಂದ ಮನೆಗೆ ಬರಲಿಲ್ಲ. ಊಟ ಮಾಡಲಿಲ್ಲ. ಆಹಾರವಿಲ್ಲದೆ ಎಲ್ಲಿ ಸೊರಗಿ ಬಿದ್ದಳೋ ? ಯಾವ ಪುಂಡರು ಅವಳಿಗೆ ಏನು ಕೇಡನ್ನು ಮಾಡಿದರೋ ? ಬದುಕಿದ್ದಾಳೆಯೋ ಇಲ್ಲವೊ ?" ಎಂದು ಅಳತೊಡಗಿದಳು. ಅವಳ ಹೀನ ಸ್ಥಿತಿಗೆ ಮರುಗಿ ಗೋಪಾಲನು ವಿಲಾಸಿನಿಯನ್ನು ತಾನು ಹುಡುಕಿಕೊಡುವುದಾಗಿ ಭರವಸೆಯನ್ನು ಕೊಟ್ಟು ಅವಳನ್ನು ಕರೆದುಕೊಂಡು ಒಂದು ಅಂಗಡಿಯ ಮುಂದೆ ನಿಂತಿದ್ದ ಪುರಭೃತ್ಯನೊಬ್ಬನ ಬಳಿಗೆ ಬಂದು, ವಿಲಾಸಿನಿಯನ್ನು ಪತ್ತೆ ಮಾಡುವುದರಲ್ಲಿ ಮುದುಕಿಗೆ ಸಹಾಯ ಮಾಡಬೇಕೆಂದು ಕೇಳಿದನು. ಅವನು ಅಟ್ಟಹಾಸದಿಂದ "ಅವಳೋ ಹುಚ್ಚಿ, ಪಾಪ, ಎಲ್ಲಿ ಹೋದಳೋ. ಈ ರಾತ್ರಿಯಲ್ಲಿ ಹುಡುಕುವವರು ಯಾರು ? ನಿನ್ನ ಮಗಳಲ್ಲವೇ ಅವಳು ? ನೀನು ಹಿಂದೆ ಮಾಡಿದ ಹಾಗೆಯೇ ಅವಳೂ ಯಾವನ ಜೊತೆಯಲ್ಲೋ ಮಲಗಿರಬಹುದು. ಆವನು ಊಟಗೀಟ ಕೊಡಿಸಿರಬೇಕು. ಇಲ್ಲದಿದ್ದರೆ ಇಷ್ಟು ಹೊತ್ತಾದರೂ ಮನೆಗೆ ಬರದೇ ಇರುತ್ತಾಳೆಯೇ ? ಒಳ್ಳೇದೇ ಆಯಿತು, ಬಿಡು. ವಯಸ್ಸಿನಲ್ಲಿದ್ದ ಹಠಮಾರಿ ಹುಡಿಗಿಗೆ ಸ್ವಲ್ಪ ಯಾವ ಧೀರನಿಂದಾದರೂ ಮಾನ ಇಳಿದರೆ—ತಿಳಿಯಿತೋ ನಾನು ಹೇಳುವುದರ ಅರ್ಥ? —ಹುಚ್ಚೂ ಅದಷ್ಟಕ್ಕದೇ ಇಳಿಯುತ್ತೆ. ನಾಳೆ ಮನೆಗೆ ಬಾರದಿದ್ದರೆ ನೋಡೋಣ ಹೋಗು. ನೀನು ಮುದುಕಿ, ಯಾಕೆ ಒದ್ದಾಡುತ್ತೀಯೆ. ಮಲಗಿಕೋ ಹೋಗು" ಎಂದು ಹೇಳಿದನು. ಇದನ್ನು ಕೇಳಿದ ಗೋಪಾಲನ ಮನಸ್ಸಿಗೆ ಬಹಳ ನೋವಾಯಿತು. ಆದರೆ ಆತನು ಆ ಭೃತ್ಯನ ಮೇಲೆ ಕೋಪಗೊಳ್ಳಲಿಲ್ಲ. ಆತನು ಅವನ ಅಸಂಸ್ಕೃತಿಯ ಮತ್ತೆ ಅನಾರ್ಯತೆಯ ರೋಗದ ನಿದಾನವನ್ನರಿತಿದ್ದನು. ಕೂಡಲೇ ಆತನು ಮುದುಕಿಯನ್ನು ಕೈಹಿಡಿದುಕೊಂಡು ನಿರ್ಗತಿಕರಿದ್ದ ಎಲ್ಲ ಸ್ಥಳಗಳಲ್ಲಿಯೂ ಹುಡುಕಲಾರಂಭಿಸಿದನು.

ಕಡೆಗೆ ಒಂದು ನಿರ್ಜನವಾದ ಪ್ರದೇಶದಲ್ಲಿ ಒಂದು ಹಾಳು ಮಂಟಪದ ಜಗುಲಿಯ ಮೇಲೆ ಬಿದ್ದಿದ್ದ ವಿಲಾಸಿನಿಯನ್ನು ಗೋಪಾಲನು ಪತ್ತೆ ಹಚ್ಚಿದನು. ಅವಳ ತಾಯಿ ಬಂದು ಅವಳನ್ನು ಎಬ್ಬಿಸಿ ತಬ್ಬಿಕೊಂಡು ಅಳತೊಡಗಿದಳು. ಅವಳು ಜೀವಚ್ಛವದಂತೆ ನಿರ್ವಿಕಾರ ಮೌನ ಮುದ್ರೆಯನ್ನು ವಹಿಸಿದ್ದಳು. ಆಹಾರವಿಲ್ಲದುದರಿಂದ ಅವಳ ಅಂಗಾಗಗಳು ಸೋತುಹೋಗಿದ್ದವು. ಅವಳ ಪರಿಸ್ಥಿತಿಯನ್ನು ನೋಡಿ ಗೋಪಾಲನು ಅವಳನ್ನು ಎತ್ತಿಕೊಂಡು ಬಂದು ಮನೆ ಸೇರಿಸಲು ತಾನು ಸಿದ್ಧನಾಗಿರುವುದಾಗಿ ಮುದುಕಿಗೆ ತಿಳಿಸಿದನು. ಮುದುಕಿಯು "ಹಾಗೇ ಮಾಡಪ್ಪಾ. ನಿನಗೆ ದೇವರು ಒಳ್ಳೆಯದನ್ನು ಮಾಡುತ್ತಾನೆ." ಎಂದು ಹೇಳಿ ಒಪ್ಪಿಕೊಂಡಳು. ಗೋಪಾಲನು ವಿಲಾಸಿನಿಯನ್ನು ಎತ್ತಿಕೊಳ್ಳಲು ಹೋದಾಗ ವಿಲಾಸಿನಿ ಆತನ ಕಡೆ ಹುಚ್ಚಿಯ ದೃಷ್ಟಿಯನ್ನು ಬೀರಿ ಕೈ ಸನ್ನೆಯಿಂದ ತನ್ನನ್ನು ಮುಟ್ಟಬಾರದೆಂದು ಸೂಚಿಸಿ ಎದ್ದುನಿಂತಳು. ಮುದುಕಿ ಅವಳನ್ನು ಕೈಹಿಡಿದು ಮೆಲ್ಲನೆ ನಡೆಯಿಸಿಕೊಂಡು ಬಹಳ ಹೊತ್ತಿಗೆ ಮನೆಯನ್ನು ತಲುಪಿದಳು. ಗೋಪಾಲನೂ ಅವರ ಜೊತೆಯಲ್ಲಿ ಮುದುಕಿಯ ಮನೆಗೆ ಬಂದು 'ಹೋಗಿ ಬರುತ್ತೇನೆ' ಎಂದು ಹೇಳಿದನು. ಆದರೆ ಮುದುಕಿಯು ಆತನನ್ನು ಆ ಅರ್ಧರಾತ್ರಿಯಲ್ಲಿ ಮಂಟಪದಲ್ಲಿ ಮಲಗಲು ಬಿಡಲಿಲ್ಲ. "ನೀನು ಬಹಳ ಒಳ್ಳೆಯ ಮನುಷ್ಯ. ನಮ್ಮ ಪಾಲಿಗೆ ದೇವರು ಬಂದ ಹಾಗೆ ಬಂದೆ. ಇಷ್ಟು ಅಗಲವಾದ ನಮ್ಮ ಮನೆಯಲ್ಲಿ ನಿನ್ನಂತಹ ಪುಣ್ಯಾತ್ಮನಿಗೆ ಒಂದು ರಾತ್ರಿ ಮಲಗಲು ಜಾಗವಿಲ್ಲವೇ ? ನೀನು ಮಂಟಪದಲ್ಲಿ ಏಕೆ ಮಲಗಬೇಕು? ಇಲ್ಲಿಯೇ ಮಲಗಿಕೋ. ನಾಳೆ ಬೆಳಿಗ್ಗೆ ನಮ್ಮ ಮನೆಯಲ್ಲಿ ಊಟಮಾಡಿಕೊಂಡು ನಿನ್ನ ದಾರಿ ನೀನು ಹಿಡಿಯುವಿಯಂತೆ." ಎಂದು ಅವಳು ಆತನನ್ನು ನಿಲ್ಲಿಸಿದಳು. ಮನೆಯ ಹೊರಗಿನ ಒಂದು ಕೋಣೆಯಲ್ಲಿ ಗೋಪಾಲನು ಆ ರಾತ್ರಿಯನ್ನು ಕಳೆದನು. ಅಕಾಲವಾದುದರಿಂದ ಒಬ್ಬರೊಬ್ಬರ ಪೂರ್ವ ಚರಿತ್ರೆಯನ್ನು ಆ ರಾತ್ರಿ ಕೇಳಲಿಲ್ಲ. ಗೋಪಾಲನಿಗೆ ರಾತ್ರಿಯೆಲ್ಲಾ ನಿದ್ರೆ ಬರಲಿಲ್ಲ. "ವಿಲಾಸಿನಿ ಆ ಹಳ್ಳದಂತೆ ಸಂಗೀತ ನಾಟ್ಯಕಳಾ ವಿಲಾಸಿನಿಯಾಗಿ ಮೆರೆದು ಈ ನಡು ವಯಸ್ಸಿನಲ್ಲಿಯೇ ಆ ಹಳ್ಳದಂತೆ ಈ ಸ್ಥಿತಿಗೆ ಬಂದಿರುವಳೇ ?" ಎಂಬ ಭಾವವೂ ಆತನ ಹೃದಯದ ಅಂತರಾಳದಲ್ಲಿ ಮಿಡಿಯುತ್ತಿತ್ತು.

ಬೆಳಗಾದ ಮೇಲೆ ಪುನಃ ಮುದುಕಿಯು ಗೋಪಾಲನನ್ನು ತನ್ನ ಮನೆಯಲ್ಲಿ ಊಟ ಮಾಡಿಕೊಂಡು ಹೋಗಬೇಕೆಂದು ಪ್ರಾರ್ಥಿಸಿದಳು. ಗೋಪಾಲನು ಅದನ್ನು ಅಂಗೀಕರಿಸಿ, ತಾನು ಮಾಂಸಾಹಾರವನ್ನು ತಿನ್ನುವುದಿಲ್ಲವೆಂದು ಅವಳಿಗೆ ತಿಳಿಸಿದನು. ಮುದುಕಿಯು ಮನೆಯ ಕೆಲಸವನ್ನು ಅತ್ಯಾಸಕ್ತಿಯಿಂದಲೂ ಸಡಗರದಿಂದಲೂ ಮಾಡುತ್ತಿದ್ದಳು. ವಿಲಾಸಿನಿ ಮಾತ್ರ ಒಂದು ಕೋಣೆಯಲ್ಲಿ ಮಂಚದ ಮೇಲೆ ಸುಮ್ಮನೆ ಕುಳಿತಿದ್ದಳು. ಅವಳು ಬಹುಕಾಲದ ದೀರ್ಘಾಲೋಚನೆಯಲ್ಲಿ ಮುಳುಗಿ, ಆಗಾಗ್ಗೆ ನಿಟ್ಟುಸಿರು ಬಿಡುತ್ತಿದ್ದಳು. ಗೋಪಾಲನು ಕೋಣೆಯ ಬಾಗಿಲ ಬಳಿ ಹೋಗಿ ನಿಂತುಕೊಂಡು "ನಿನ್ನ ದೇಹಸ್ಥಿತಿ ಈಗ ಹೇಗಿದೆ ತಾಯೀ?" ಎಂದು ಪ್ರಶ್ನಿಸಿದನು. ವಿಲಾಸಿನಿ ಥಟ್ಟನೆ ಆತನ ಕಡೆ ತಿರುಗಿ ನೋಡಿದಳು. ಒಂದು ಕ್ಷಣ ಆತನ ಧೀರ ಸೌಮ್ಯ ಮೂರ್ತಿಗೂ, ಮಾತಿನ ವಿನಯಕ್ಕೂ ಮುಗ್ಧಳಾದಳು. ಮರುಕ್ಷಣವೇ ಕರ್ತವ್ಯಮೂಢನಾದವನು ತನ್ನ ಕರ್ತವ್ಯವನ್ನು ಸ್ಮರಿಸಿದ ಕೂಡಲೇ ಹೊಂದುವ ಎಚ್ಚರವನ್ನು ಹೊಂದಿ ಗೋಪಾಲನತ್ತ ಕೈ ತೋರಿಸಿ ಹುಚ್ಚಿಯಂತೆ ನಕ್ಕು "ಹೋಗಪ್ಪಾ, ಹೋಗು. ನಿನ್ನ ಊರಿಗೆ ಹೊರಟು ಹೋಗು. ಮಗೂ, ಹೊರಟುಹೋಗು. ಇದೇ ನಿನ್ನ ತಾಯಿಯ ಆಜ್ಞೆ" ಎಂದು ತಲೆ ಅಲ್ಲಾಡಿಸುತ್ತಾ ಹೇಳಿದಳು. ಸೂಕ್ಷ್ಮ ಬುದ್ಧಿಯಾದ ಗೋಪಾಲನಿಗೆ ಅವಳ ಚೇಷ್ಟೆಗಳು ನಟನೆಯೆಂದೂ ಅವಳು ನಿಜವಾದ ಹುಚ್ಚಿ ಅಲ್ಲವೆಂದೂ ತೋಚಿತು. ಕೂಡಲೇ ಆತನು ಮನೆಯೊಳಗಿದ್ದ ಮುದುಕಿಯನ್ನು ಸಮೀಪಿಸಿ "ಗಾಬರಿಪಡಬೇಡ ಅಜ್ಜೀ, ನಿನ್ನ ಮಗಳು ಹುಚ್ಚಿಯಲ್ಲ. ಹುಚ್ಚಿಯಂತೆ ನಟನೆ ಮಾಡುತ್ತಿದ್ದಾಳೆಂದು ನನಗೆ ತೋರುತ್ತದೆ. ನೀನು ಯೋಚಿಸಬೇಡ. ಎಂದಿನಿಂದ ಇದು ಪ್ರಾರಂಭವಾಯಿತು? ಕಾರಣವೇನು? ನನಗೆ ತಿಳಿಸು. ಇದಕ್ಕೆ ಏನಾದರೂ ಮಾಡಿ ಇವಳನ್ನು ಸರಿ ಪಡಿಸೋಣ" ಎಂದು ಹೇಳಿದನು. ಮುದುಕಿಯು ಅತ್ಯಾಸಕ್ತಿಯಿಂದ ಗೋಪಾಲನನ್ನು ಹರಸುತ್ತಾ, "ಏನಾದರೂ ಮಾಡಿ ವಿಲಾಸಿನಿಯನ್ನು ಸರಿಪಡಿಸಪ್ಪಾ. ಇದರಿಂದ ನಿನಗೆ ಬಹಳ ಪುಣ್ಯ ಬರುತ್ತದೆ. ನಾನು ಈಗ ನೀರು ತರಲು ಕೆರೆಗೆ ಹೋಗುತ್ತಿದ್ದೇನೆ. ನೀನೂ ನನ್ನ ಜತೆಯಲ್ಲಿ ಬಾ. ನಿನಗೆ ದಾರಿಯಲ್ಲಿ ಕಥೆಯನ್ನೆಲ್ಲಾ ತಿಳಿಸುತ್ತೇನೆ" ಎಂದು ಹೇಳಿ ಆತನನ್ನು ಕರೆದುಕೊಂಡು ಮಗಳಿಗೆ ಹೇಳಿ, ನೆರೆಮನೆಯಾಕೆಗೆ ಮನೆಯ ಮೇಲೂ ಮಗಳ

ಮೇಲೂ ಸ್ವಲ್ಪ ಗಮನ ಇಟ್ಟುಕೊಂಡಿರಬೇಕೆಂದು ಹೇಳಿ ಕೆರೆಗೆ ಹೊರಟಳು. ಗೋಪಾಲನೂ ಅವಳ ಮಗನಂತೆ ಎರಡು ಕೊಡಗಳನ್ನು ಕೈಗಳಲ್ಲಿ ಹಿಡಿದು ಕೊಂಡು ಅವಳ ಜೊತೆಯಲ್ಲಿ ನಡೆದನು. ದಾರಿಯಲ್ಲಿ ಮುದುಕಿ ಹೇಳತೊಡಗಿದಳು.

"ವಿಲಾಸಿನಿ ನನ್ನ ಮಗಳು. ನಾನು ದೇವದಾಸಿ ಜಾತಿಗೆ ಸೇರಿದವಳು. ಚಿಕ್ಕಂದಿನಿಂದ ತಕ್ಕಮಟ್ಟಿಗೆ ಸಾಹಿತ್ಯವನ್ನೂ ಸಾಧ್ಯವಾದಷ್ಟು ಸಂಗೀತ ನಾಟ್ಯ ಕಲೆಗಳನ್ನೂ ಅಭ್ಯಾಸಮಾಡಿ, ದೇವರ ಉತ್ಸವದ ಸಮಯದಲ್ಲೂ, ಊರಿನಲ್ಲಿ ನಡೆಯುವ ಇತರ ಹಬ್ಬಗಳಲ್ಲೂ, ಉತ್ಸವಗಳಲ್ಲೂ ಸಂಗೀತ ನಾಟ್ಯಕಲೆಗಳಿಂದ ಎಲ್ಲರನ್ನೂ ಆನಂದಪಡಿಸುವುದು ನಮ್ಮ ಕುಲವೃತ್ತಿ. ನಮಗೆ ಸುಖಜೀವನ ನಡೆಯಲು ರಾಜನು ಕೊಟ್ಟ ಮಾನ್ಯವಿತ್ತು. ಊರಿನ ಜನರೂ ಆಗಾಗ್ಗೆ ನಮ್ಮ ವಿದ್ಯೆಯನ್ನು ಮೆಚ್ಚಿ ಬಹುಮಾನಗಳನ್ನು ಕೊಡುತ್ತಿದ್ದರು. ನಮ್ಮ ವೃತ್ತಿಯಲ್ಲಿರುವವರಿಗೆ ಕುಲಸ್ತ್ರೀಯರಿಗಿರುವಷ್ಟು ನಿರ್ಬಂಧವಿಲ್ಲ. ನಮಗೆ ಮದುವೆಯಿಲ್ಲ. ಆದರೆ ನಮಗೆ ಮನಸ್ಸಿಗೆ ಹಿಡಿಸುವ ಒಬ್ಬನ ಜೊತೆಯಲ್ಲಿ ಸಂಸಾರ ನಡೆಸುವುದು ಸಂಪ್ರದಾಯ. ಅವನನ್ನೇ ಗಂಡನಂತೆ ಭಾವಿಸಿಕೊಂಡು ಕುಲಸ್ತ್ರೀಯು ಪತಿಯಲ್ಲಿ ತೋರಿಸುವ ಸಹಜವಾದ ಪ್ರೇಮವನ್ನು ತೋರಿಸುತ್ತ ಚಿರಕಾಲ ಅವನೊಂದಿಗೆ ಸಂಸಾರ ನಡೆಸುವುದು ಹಿಂದಿನಿಂದ ಬಂದ ಸಂಪ್ರದಾಯವಾಗಿತ್ತು. ಆದರೆ "ಪ್ರಸೂತ್ಯಂತಂತು ಯೌವನಂ" ಎಂಬ ಮಾತಿನಂತೆ ನಮ್ಮ ಯೌವನಕ್ಕೆ ಭಂಗತರುವುದು ನಮ್ಮ ವೃತ್ತಿಗೆ ಹಾನಿಕರವಾದುದರಿಂದ ಪಾಪವಲ್ಲದ ಗರ್ಭ ನಿರೋಧನವನ್ನೂ ನಾವು ಮಾಡಿಕೊಳ್ಳಬಹುದಾಗಿತ್ತು. ಇದರ ಕೆಲವು ತಂತ್ರಗಳೂ ನಮಗೆ ವಂಶಪಾರಂಪರ್ಯವಾಗಿ ತಿಳಿಸಲ್ಪಡುತ್ತವೆ. ಕೂಡಿಕೊಂಡವನು ಪಾಪಿಯಾದರೂ, ನಮ್ಮನ್ನು ಪೋಷಿಸುವುದಕ್ಕೆ ಶಕ್ತಿಹೀನನಾದರೂ, ನಮ್ಮ ಕಲೆಗಳನ್ನು ಪೋಷಿಸುವುದಕ್ಕೆ ಹಿತವಾದ ಪಕ್ಷದಲ್ಲಿ ಅವನನ್ನು ಬಿಟ್ಟು ಬೇರೊಬ್ಬನನ್ನು ಕೂಡಿಕೊಂಡರೂ ನಮಗೆ ತಪ್ಪಿಲ್ಲ. ಈ ವಿಚಾರದಲ್ಲಿ ನಮ್ಮಲ್ಲಿಯೇ ಬಹುಕಾಲದಿಂದ ಬಂದ ರೂಢಿಯ ಮೇಲೆ ಆಧಾರಪಟ್ಟ ಧರ್ಮವೊಂದಿದೆ. ನಾವು ಆ ಧರ್ಮವನ್ನು ಬಿಟ್ಟರೆ ಶಿಕ್ಷೆಗೆ ಗುರಿಯಾಗಬೇಕು. ಆ ಧರ್ಮವನ್ನು ಪರಿಪಾಲಿಸುತ್ತಿರುವವರೆಗೂ ನಾವು ಮಾನ್ಯರೇ.

"ಆದರೆ ನಮ್ಮ ಮಾನ್ಯವನ್ನು ಹಿಂದಿನ ರಾಜರು ಕಿತ್ತುಕೊಂಡರು".

ಗೋಪಾಲ—"ಅದು ನನಗೆ ತಿಳಿಯುವುದಮ್ಮಾ. ಅದರ ಕಥೆಯೆಲ್ಲಾ ನನಗೆ ಗೊತ್ತು. ವಿಲಾಸಿನಿಯ ವಿಚಾರವನ್ನು ತಿಳಿಸಿ".

ಮುದುಕಿ—ನಾನೂ ತಕ್ಕಮಟ್ಟಿಗೆ ಸಾಹಿತ್ಯವನ್ನೂ ಸಂಗೀತ ನಾಟ್ಯಗಳನ್ನೂ ಕಲಿತಿದ್ದೇನೆ. ನಾನು ಒಬ್ಬ ಶ್ರೇಷ್ಠ ರಸಿಕನನ್ನು ಕೂಡಿಕೊಂಡು ಬಹುಕಾಲ ಸಂಸಾರ ನಡೆಸಿದ ಮೇಲೆ ಆತನಿಗೆ ಈ ವಿಲಾಸಿನಿ ಜನಿಸಿದಳು. ಅವಳಿಗೆ ನಾನು ತಕ್ಕಮಟ್ಟಿಗೆ ಸಾಹಿತ್ಯವನ್ನೂ ಸಂಗೀತ ನಾಟ್ಯಗಳನ್ನೂ ಅಭ್ಯಾಸಮಾಡಿಸಿದೆನು. ಸಂಗೀತ ನಾಟ್ಯಗಳಲ್ಲಿ ಅವಳಿಗೆ ಪೂರ್ವಜನ್ಮಸಂಸ್ಕಾರದಿಂದ ಬಂದ ಅಪೂರ್ವ ಪ್ರತಿಭೆಯಿದೆ. ರಾಜರ ವಿದ್ಯಾದ್ವೇಷದಲ್ಲಿ ಅದನ್ನು ಕೇಳುವವರಾರು? ಇವಳು ಪ್ರಾಪ್ತವಯಸ್ಕಳಾಗುವ ವೇಳೆಗೇ ಈ ಕಲೆಗಳಲ್ಲಿ ಸ್ವಪ್ರತಿಭೆಯಿಂದ ಎಷ್ಟೋ ಮುಂದುವರಿದಿದ್ದಳು. ದೈವವಶದಿಂದ ನನ್ನ ಯಜಮಾನನು ತೀರಿಕೊಂಡನು. ಆತನಿರುವವರೆಗೂ ನೀನು ನೋಡಿದ ನನ್ನ ಆ ದೊಡ್ಡ ಮನೆ ವೈಭವದಿಂದ ಮೆರೆಯುತ್ತಿತ್ತು. ಆತನು ತೀರಿಕೊಂಡ ಮೇಲೆ ನಾವು ನಿರಾಶ್ರಿತರಾದೆವು. ಮಾನ್ಯವಿಲ್ಲ. ದೇವಸ್ಥಾನಗಳಲ್ಲಿ ದೇವರಿಗೆ ಉತ್ಸವಗಳಿಲ್ಲ. ಜನರಲ್ಲಿ ರಸಿಕತೆ ಕಡಿಮೆಯಾಗಿ ನಮ್ಮನ್ನು ಸಂತೋಷ ಸಮಯಗಳಲ್ಲಿ ಸೇವೆಗಾಗಿ ಕರೆಯುವುದೂ ಬಹುಮಾನಿಸುವುದೂ ತೀರಾ ಕಡಿಮೆ ಆಯಿತು. ನನ್ನಲ್ಲಿದ್ದ ಒಡವೆ ವಸ್ತ್ರಗಳನ್ನು ಮಾರಲಾರಂಭಿಸಿದೆನು. ಆಗಲೇ ವಯಸ್ಸಿಗೆ ಬಂದಿದ್ದ ನನ್ನ ಮಗಳನ್ನು ಯೋಗ್ಯನಾದ ಒಬ್ಬನಿಗೆ ಕೂಡಿಸಿ ಭಾರ ಕಳೆದುಕೊಳ್ಳೋಣವೆಂದರೆ, ಒಂದು ಕಡೆ ಅಂತಹ ಯೋಗ್ಯನು ಸಿಕ್ಕುವುದು ಕಷ್ಟವಾದರೆ, ಇನ್ನೊಂದು ಕಡೆ ನಾಟ್ಯಕಲೆಯಲ್ಲಿ ಅತ್ಯಾಸಕ್ತಿಯುಳ್ಳ ನನ್ನ ಮಗಳು ತನ್ನ ಶರೀರ ಸೌಂದರ್ಯರಕ್ಷಣೆಗಾಗಿ ಇನ್ನೂ ಕೆಲವು ವರ್ಷಗಳತನಕ ತಾನು ಕನ್ಯೆಯಾಗಿಯೇ ಇರಬೇಕೆಂದು ಹಠ ಹಿಡಿದು ಕುಳಿತಳು. ಒಡವೆ ಬಟ್ಟೆಗಳನ್ನು ಮಾರಿ ಕೆಲವು ವರ್ಷ ಜೀವನ ನಡೆಸಿದ್ದಾಯಿತು. ಅರಸಿಕರಾದ ಪುಂಡರ ಮತ್ತು ರಾಜಭಟರ ಕಣ್ಣು ಸುಂದರಾಂಗಿಯಾದ ನನ್ನ ಮಗಳ ಮೇಲೆ ಬಿತ್ತು. ಅವರಿಂದ ನನ್ನ ಮಗಳನ್ನು ಕಾಪಾಡುವುದು ನನಗೆ ಬಹಳ ಕಷ್ಟವಾಗಿ ಪರಿಣಮಿಸಿತು. ನನ್ನ ಚಿಕ್ಕಂದಿನಲ್ಲಿ ನಾನು ನೋಡುತ್ತಿದ್ದ, ದೀರ್ಘಕಾಲದಿಂದ ಬಂದ, ಮಾನ್ಯ ಸಂಪ್ರದಾಯಗಳೂ ಮಾನ್ಯಗಳೂ ಹೋದುದರಿಂದಲೂ ಜನರಲ್ಲಿ ನೀತಿ ನಿಯಮಗಳು ಸಡಿಲವಾಗುತ್ತ ಬಂದುದರಿಂದಲೂ ಜೀವಿತಪರ್ಯಂತವೂ

ಅಥವಾ ಹತ್ತಾರು ವರ್ಷಗಳಕಾಲ ಒಬ್ಬನನ್ನೇ ಕೂಡಿಕೊಂಡಿರುವ ಸತ್ಸಂಪ್ರದಾಯವು ನಶಿಸಿಹೋಗಿ, ಹೊಟ್ಟೆಪಾಡಿಗಾಗಿ ಇಂದು ನಮ್ಮ ಕುಲದವರು ನಡೆಸುತ್ತಿರುವ ಪಣ್ಯವೃತ್ತಿಯು ರೂಢಿಗೆ ಬಂತು. ಎಂತಹ ಕುರೂಪಿಯಾಗಲಿ, ಅರಸಿಕನಾಗಲಿ, ಅನಾಗರಿಕನಾಗಲಿ, ಪಾಪಿಯಾಗಲಿ ಬಾಗಿಲಿಗೆ ಬಂದರೆ ಅವನ ಕಾಮ ತೃಪ್ತಿಯನ್ನು ಮಾಡಿ ಆದರಿಂದ ಬಂದ ಹಣದಿಂದ ಜೀವನ ನಡೆಸಬೇಕಾದ ಹೀನಸ್ಥಿತಿ ದೇವದಾಸಿಯರಿಗೆ ಬಂತು. ಸಮಾಜದಲ್ಲಿ ಇವರು ಹೀನರಾದರು. ಮರ್ಯಾದಸ್ಥರೂ, ರಸಿಕರೂ ಇವರನ್ನು ಕೂಡಿಕೆ ಮಾಡಿಕೊಳ್ಳುವುದಕ್ಕೆ ಹಿಂಜರಿಯುವುದು ಸಹಜವಾಯಿತು.

ಇದನ್ನು ಕೇಳುತ್ತ ಕೇಳುತ್ತ ಗೋಪಾಲನು ನಿಟ್ಟುಸಿರು ಬಿಟ್ಟನು.

ಮುದುಕಿ—"ನಾನು ಜೀವನದ ಭಾರವನ್ನು ಹೊರಲಾರದೆ ಹೋದೆನು. ವಿಲಾಸಿನಿಗೆ ಪಣ್ಯ ವೃತ್ತಿಯನ್ನು ಬಿಟ್ಟರೆ ಬೇರೆ ಜೀವನೋಪಾಯವಿಲ್ಲವೆಂದು ನಾನು ತೀರ್ಮಾನಿಸಿದೆನು. ನಾವುದಿಂದ ಅವಳನ್ನು ಈ ವೃತ್ತಿಗೆ ಪ್ರಚೋದಿಸಿದೆನು. ಅವಳು ವಿರೋಧಿಸಿದಳು. ಹಣದ ಪ್ರಲೋಭವು ಅವಳ ಸ್ವಭಾವಕ್ಕೆ ಹೊಸದು. ಒಂದು ದಿನ ನಾನು ಬೇಸತ್ತು ಬಲಾತ್ಕಾರವೇ ಇದಕ್ಕೆ ತಕ್ಕ ಉಪಾಯವೆಂದು ಯೋಚಿಸಿ ಅವಳ ರೂಪದಿಂದ ಮೋಹಿತನಾದ ಒಬ್ಬ ಧನಿಕನನ್ನು ನನ್ನ ಮನೆಗೆ ಕರೆಸಿ, ಅವನನ್ನು ಕೂಡಬೇಕೆಂದು ನಿರ್ಬಂಧಿಸಿ ಇಬ್ಬರನ್ನೂ ಶಯ್ಯಾಗೃಹದಲ್ಲಿ ಬಿಟ್ಟು ಈಚೆ ಬಂದು ಬೀಗ ಹಾಕಿಬಿಟ್ಟೆ. ಸ್ವಲ್ಪ ಹೊತ್ತಿಗೆ ಆ ಧನಿಕನೇ ಕೈಗಳಿಂದ ದಬ ದಬ ಬಾಗಿಲನ್ನು ತಟ್ಟುತ್ತಾ ಗಟ್ಟಿಯಾಗಿ ನನ್ನನ್ನು ಕೂಗಿದ. ಬಾಗಿಲು ತೆಗೆದ ಕೂಡಲೇ ಅವನು ಈಚೆ ಬಂದು "ಅಯ್ಯೋ, ಮುದುಕೀ, ನನಗೆ ಎಂತಹುದನ್ನು ಗಂಟು ಹಾಕಿದೆ? ದುಡ್ಡು ತೆಗೆದುಕೊಂಡು ಹುಚ್ಚಿಯನ್ನು ಕಳುಹಿಸಿದ್ದೀಯಲ್ಲಾ. ನನ್ನ ದುಡ್ಡು ನನಗೆ ವಾಪಸು ಕೊಡು" ಎಂದು ಗಲಾಟೆ ಮಾಡಿದನು. ನನ್ನ ಮಗಳು ಹುಚ್ಚಿಯಾಗಿದ್ದುದನ್ನು ನೋಡಿ ನಾನು ಗೊಳೋ ಎಂದು ಅಳತೊಡಗಿದೆನು. ಅವನ ಹಣ ಪೂರ್ತಿ ವಾಪಸು ಕೊಡುವುದಕ್ಕೆ ನನ್ನಲ್ಲಿರಲಿಲ್ಲ. ನನ್ನ ಮಗಳ ಅಲಂಕಾರಾದಿಗಳಿಗೆ ಸ್ವಲ್ಪ ವೆಚ್ಚ ಮಾಡಿದ್ದೆ. ಅವನಿಗೆ ಇದೆಲ್ಲಾ ಹೇಳಿ ಅವನನ್ನು ಪ್ರಾರ್ಥಿಸಿಕೊಂಡು ಉಳಿದ ಹಣವನ್ನು ಮಾತ್ರ ಅವನಿಗೆ ಕೊಟ್ಟು ತಪ್ಪಿಸಿಕೊಂಡೆ. ಅಂದಿನಿಂದ ನನ್ನ ಮಗಳು ಹುಚ್ಚಿಯಂತಿದ್ದಾಳೆ. ಇಷ್ಟು ದಿನಗಳಿಗೆ

ಈ ದಿನ ಪುಣ್ಯಾತ್ಮನಾದ ನೀನು ಇದು ಹುಚ್ಚಲ್ಲ, ನಟನೆಯೆಂದು ಹೇಳಿದೆ. ನನ್ನ ಮನಸ್ಸು ಸ್ವಲ್ಪ ಹಗುರವಾಯಿತು. ಇನ್ನು ಮುಂದೆ ಅವಳನ್ನು ಉದ್ಧಾರ ಮಾಡುವುದು ನಿನ್ನ ಕೆಲಸ" ಎಂದು ಸುಮ್ಮನಾದಳು.

ಇಬ್ಬರೂ ನೀರು ಹೊತ್ತುಕೊಂಡು ಮನೆಗೆ ಬಂದ ಮೇಲೆ ಮುದುಕಿ ಗೋಪಾಲನನ್ನು ಪಡಸಾಲೆಯಲ್ಲಿ ಕುಳ್ಳಿರಿಸಿ ವಿಲಾಸಿನಿಯನ್ನು ಅಲ್ಲಿಗೆ ಕರೆತಂದು ತಾನೂ ಅವಳೂ ಕುಳಿತುಕೊಂಡರು. ವಿಲಾಸಿನಿಗೆ ತಾನು ಸಾಹಸದಿಂದ ಮಾಡಿದ ಬಲಾತ್ಕಾರಕ್ಕೆ ಬಹಳ ಪಶ್ಚಾತ್ತಾಪವಾಗಿದೆಯೆಂದೂ, ಇನ್ನೆಂದಿಗೂ ಅವಳನ್ನು ಪಣ್ಯ ವೃತ್ತಿಯನ್ನು ಮಾಡಲು ಬಲಾತ್ಕರಿಸುವುದಿಲ್ಲವೆಂದೂ ಮುದುಕಿ ಮಾತುಕೊಟ್ಟಳು. ಅವಳು ಮಾಡುತ್ತಿರುವುದು ನಟನೆಯೆಂದೂ ಅವಳು ನಿಜವಾಗಿ ಹುಚ್ಚಿ ಅಲ್ಲವೆಂದೂ ಗೋಪಾಲನು ಪತ್ತೆ ಮಾಡಿದ್ದಾನೆಂದೂ, ಆತನು ಅವಳ ಉದ್ಧಾರಕ್ಕಾಗಿ ಶ್ರಮಿಸಲು ಸಿದ್ಧನಾಗಿರುವನೆಂದೂ ಅವಳಿಗೆ ಮನ ಮುಟ್ಟುವಂತೆ ಹೇಳಿದಳು. ವಿಲಾಸಿನಿ ಗೋಪಾಲನ ಸೂಕ್ಷ್ಮ ಭಾವಗ್ರಹಣಶಕ್ತಿಗೆ ಬೆರಗಾಗಿ ಅವನ ಮುಖವನ್ನು ನೋಡಿದಳು. ಆತನ ಮುಖದಲ್ಲಿನ ಧೀರ ಶಾಂತತೆಯಲ್ಲಿ ಅವಳಿಗೆ ಉದ್ಧಾರದ ಬೆಳಕು ಕಂಡುಬಂತು. ಅವಳು ಗೋಪಾಲನಿಗೆ ಕೈ ಮುಗಿದು "ಧೀರೋತ್ತಮನೇ, ನಾನು ನಿನ್ನನ್ನು ಇತರರಂತೆ ಕಡೆಗಣಿಸಿದ್ದಕ್ಕೆ ನನ್ನನ್ನು ಕ್ಷಮಿಸು. ನಾನು ಅಬಲೆ, ನನ್ನ ಪರಿಸ್ಥಿತಿ ಪೂರ್ತಿಯಾಗಿ ನನ್ನ ತಾಯಿಯಿಂದ ತಿಳಿದಿರಬಹುದು. ನಿನ್ನೆಯ ದಿನ ಬೆಳಗ್ಗೆ ಒಬ್ಬ ಮನುಷ್ಯನ ಕಾಮದೃಷ್ಟಿಗೆ ಗುರಿಯಾದ ನಾನು ಅವನ ಕಣ್ಣಿಗೆ ಬಿದ್ದರೆ ಪ್ರಮಾದವಾಗುವುದೆಂಬ ಭೀತಿಯಿಂದ ಊಟಕ್ಕೆ ಸಹ ಮನೆಗೆ ಬಾರದೆ ತಲೆ ತಪ್ಪಿಸಿಕೊಂಡು ಯಾರ ಕಣ್ಣಿಗೂ ಬೀಳದ ಪ್ರದೇಶದಲ್ಲಿ ಬಿದ್ದಿದ್ದೆ. ನನ್ನನ್ನು ಪತ್ತೆ ಹಚ್ಚಲು ನಿನಗೆ ಬಹಳ ಶ್ರಮವಾಯಿತು. ನಿನ್ನಿಂದಾದರೂ ಈ ಹೀನ ಜಾತಿಯವಳ ಉದ್ಧಾರವಾದೀತೆಂಬ ಭರವಸೆ ನನ್ನಲ್ಲಿ ಮೂಡುತ್ತಿದೆ" ಎಂದು ಹೇಳುತ್ತ ಕಣ್ಣೀರು ತುಂಬಿದಳು.

ಗೋಪಾಲನ ಕಣ್ಣುಗಳಲ್ಲೂ ನೀರೂರಿತು. ಆತನು "ಭಗವಂತನ ಕೃಪೆಯಿದ್ದರೆ ಆಗಬೇಕಾದುದು ಹೀನ ಜಾತಿಯವಳೆಂದು ಭಾವಿಸುವ ನಿನ್ನ ಉದ್ಧಾರವೊಂದೇ ಅಲ್ಲ. ಸಂಗೀತ ನಾಟ್ಯ ಕಲೆಗಳ ಉದ್ಧಾರವೂ ಆಗಬೇಕು" ಎಂದು ಹೇಳಿದನು. ಈ ಮಾತುಗಳು ವಿಲಾಸಿನಿಯ ತಪ್ತ ಹೃದಯಕ್ಕೆ

ಅಮೃತ ಸೇಚನದಂತಿದ್ದವು. ಅವಳು "ನೀನು ಒಳ್ಳೆಯ ರಸಿಕನಾಗಿರುವುದು ನನ್ನ ಭಾಗ್ಯ. ನಿನ್ನ ಮಾತುಗಳನ್ನು ಕೇಳಿದರೆ ನೀನು ಸಾಹಿತ್ಯವನ್ನು ಕಲಿತ ಹಾಗಿಲ್ಲವಲ್ಲಾ" ಎಂದು ಹೇಳಿದಳು. ಅದಕ್ಕೆ ಗೋಪಾಲನು "ನನಗೆ ಸಾಹಿತ್ಯವೇ ಅಲ್ಲ. ಓದು ಬರಹವೂ ಬರುವುದಿಲ್ಲ. ನಮ್ಮ ಬಂಧುವರ್ಗದ ಕಮಲಮ್ಮ ಎಂಬ ಹುಡುಗಿಯು ಸಂಸ್ಕೃತ ಸಾಹಿತ್ಯವನ್ನು ಬಹಳ ಚೆನ್ನಾಗಿ ಅಧ್ಯಯನ ಮಾಡಿದ್ದಾಳೆ. ಅವಳು ಸಂಗೀತವನ್ನೂ ನಾಟ್ಯವನ್ನೂ ಕುರಿತು ಮಹಾಕವಿಗಳು ಹೇಳಿರುವ ವಿಷಯಗಳನ್ನು ನನಗೆ ಆಗಾಗ್ಗೆ ಹೇಳುತ್ತಿರುತ್ತಾಳೆ; ಆದರಿಂದ ನನಗೆ ಸಂಗೀತ ನಾಟ್ಯಗಳಲ್ಲಿ ಹೆಚ್ಚು ಅಭಿರುಚಿಯೂ ಗೌರವವೂ ಉಂಟಾಗಿದೆ. ನಿನ್ನೆ ನಾನು ನಾಗಲಾಪುರದಿಂದ ಈ ಊರಿನ ಸಮೀಪದವರೆಗೂ ಹರಿದುಬಂದ ಒಂದು ಸುಂದರವಾದ ಹಳ್ಳದ ಪ್ರವಾಹದಿಂದ ಸಂಗೀತನಾಟ್ಯ ವಿಲಾಸವನ್ನು ಅರಿಯುತ್ತಾ ಆ ಪ್ರವಾಹದ ಜೊತೆಯಲ್ಲೇ ಬಂದೆ, ಆ ಹಳ್ಳದ ಹೆಸರೇನೋ ಗೊತ್ತಿಲ್ಲ" ಎಂದನು,

ಪ್ರಕೃತಿಯ ಚಲನವಲನಗಳಲ್ಲಿನ ಸಂಗೀತ ನಾಟ್ಯವನ್ನರಿಯುವ ಸುಮನಸನಾದ ಗೋಪಾಲನನ್ನು ವಿಲಾಸಿನಿ ಮನಸ್ಸಿನಲ್ಲೇ ಕೊಂಡಾಡಿದಳು.

ಗೋಪಾಲನು ಹೀಗೆಂದು ಹೇಳತೊಡಗಿದನು :—

"ಆ ಹಳ್ಳದ ಪ್ರವಾಹವು ಒಂದು ಅಪಾರವಾದ ಮತ್ತು ಕಠಿಣವಾದ ಪ್ರದೇಶಕ್ಕೆ ಬಂದು ಮಾಯವಾಗಿತ್ತು. ಅದು ಎಲ್ಲಿಗೆ ಹೋಯಿತೋ ರಾತ್ರಿಯಾಗಿದ್ದುದರಿಂದ ಪರಿಶೀಲಿಸಲು ನನಗೆ ಶಕ್ಯವಾಗಲಿಲ್ಲ. ವಿಲಾಸನೀ, ನಿನ್ನ ಕಥೆಯೂ ಆ ಹಳ್ಳದ ಪ್ರವಾಹದಂತಿದೆ. ನೀನು ಕಲಿತ ಸಂಗೀತ ನಾಟ್ಯಗಳ ವಿಲಾಸವು ನಿನ್ನ ಈ ಪ್ರಾಯದಲ್ಲೇ ಮಾಯವಾದವಲ್ಲಾ. ಇದು ನನ್ನ ಮನಸ್ಸಿನಲ್ಲಿ ಯಾವುದೋ ಒಂದು ಹೇಳಲಾರದ ಬಾಧೆಯನ್ನು ಹುಟ್ಟಿಸುತ್ತಿದೆ. ಆ ಹಳ್ಳದ ನೀರು ಎಲ್ಲಿ ಮಾಯವಾಯಿತು? ಬಹುಶಃ ಭೂಮಿಯಲ್ಲಿ ಅಡಗಿರಬೇಕು."

ಮುದುಕಿ ಹೇಳಿದಳು :—"ಆ ಹಳ್ಳದ ಹೆಸರೂ 'ವಿಲಾಸಿನಿ' ಎಂದು. ಅದು ನೀನು ಹೇಳಿದ ಬೆಟ್ಟದ ಬಳಿ ಭೂಮಿಯೊಳಕ್ಕೆ ಹೋಗಿ ಭೂಮಿಯಲ್ಲೇ ಗುಪ್ತಗಾಮಿನಿಯಾಗಿ ಹರಿದು ಈ ಊರಿಗೆ ಹತ್ತು ಕ್ರೋಶಗಳ ದೂರದಲ್ಲಿರುವ

ತಿಮ್ಮನಹಳ್ಳಿಯ ಬಳಿ ಹೊರಬರುತ್ತದೆ. ಅಲ್ಲಿಂದ ಸ್ವಲ್ಪ ದೂರ ಹರಿದು ಅದು ಪಿನಾಕಿನಿಯಲ್ಲಿ ಸೇರುತ್ತದೆ."

"ಗೋಪಾಲ:—"ಪಿನಾಕಿನಿಯನ್ನು ಸೇರಿದ ಮೇಲೆ ಅದರ ನೀರು ಸಮುದ್ರದವರೆಗೂ ಹರಿದಂತಾಯಿತು. ವಿಲಾಸಿನೀ, ಏನು ಆಶ್ಚರ್ಯವಿದು ? ನಿನ್ನ ಹೆಸರೂ ಆ ನದಿಯ ಹೆಸರೂ ಒಂದೇ. ಬಾಲ್ಯದಿಂದ ನಿನ್ನಲ್ಲಿ ಪ್ರಕಟವಾದ ಸಂಗೀತನಾಟ್ಯಕಲೆಗಳು ವೃದ್ಧಿಯನ್ನು ಹೊಂದುತ್ತ ಬಂದು ಆ ನದಿಯ ಜಲದಂತೆ ಒಳಗೆ ಅಡಗಿಕೊಂಡಿವೆ. ಅವುಗಳ ಪ್ರವಾಹ ಪುನಃ ಹೊರಬರಲಿ, ಲೋಕವನ್ನು ತಣಿಸಲಿ, ಭಕ್ತಿ ಪ್ರವಾಹವನ್ನು ಸೇರಲಿ. ಜ್ಞಾನಸಮುದ್ರಕ್ಕೆ ಹರಿಯಲಿ."

ಗೋಪಾಲನು ಸುಮ್ಮನಾದನು. ವಿಲಾಸಿನಿಯ ಮುಖವರಳಿತು. ಅವಳಲ್ಲಿ ಆಶಾಜ್ಯೋತಿ ಬೆಳಗಿತು. ಅವಳ ಹೃದಯದಲ್ಲಿ ಕಲೋತ್ಸಾಹವುಕ್ಕಿತು. ಆದರೆ ಅದು ಸಂಗೀತ ನಾಟ್ಯಗಳ ರೂಪದಲ್ಲಿ ಹೊರಕ್ಕೆ ಬರಲಿಲ್ಲ.

ಗೋಪಾಲನು ಮುಂದುವರಿದು ಹೀಗೆ ಹೇಳಿದನು. "ನಾಟ್ಯ ಕಲೆಯಲ್ಲಿ ಎಲ್ಲ ಕಲೆಗಳೂ ಸೇರಿಕೊಂಡಿವೆ. ಅದು ಬೇರೆ ಬೇರೆ ರುಚಿಗಳುಳ್ಳ ಜನರನ್ನೆಲ್ಲಾ ತಣಿಸುವ ಮಹಾ ಕಲೆ. ಅದು ದೇವತೆಗಳಿಗೆ ಬಹಳ ಇಷ್ಟವಾದುದಂತೆ. ಅದರಿಂದ ದೇವತೆಗಳನ್ನು ಸಂತೋಷಪಡಿಸಬಹುದಂತೆ. ಲೋಕಕ್ಕೆ ತಾಯಿ ತಂದೆಗಳಾದ ಪಾರ್ವತೀ ಪರಮೇಶ್ವರರೇ ನಾಟ್ಯ ಮಾಡುವರಲ್ಲವೇ ? ಈ ವಿಷಯಗಳೆಲ್ಲಾ ನಮ್ಮ ಕಮಲಮ್ಮ ನನಗೆ ಹಿಂದೆ ತಿಳಿಸಿದ್ದಳು."

ಈ ಮಾತುಗಳು ಕೇಳುತ್ತ ಕೇಳುತ್ತ ವಿಲಾಸಿನಿಯು ಕಾಳಿದಾಸ ಮಹಾ
ಕವಿಯ "ದೇವಾನಾಮಿದಮಾಮನನ್ತಿ ಮುನಯಃಕಾಂತಂಕ್ರತುಂಚಾ
ಕ್ಷುಷಂ ರುದ್ರೇಣೇದಮುಮಾಕೃತವ್ಯತಿಕರೇ ಸ್ವಾಂಗೇ ವಿಭಕ್ತಂ
ದ್ವಿಧಾತ್ರೈಗುಣ್ಯೋದ್ಭವ ಮತ್ರಲೋಕ ಚರಿತಂ ನಾನರಸಂ ದೃಶ್ಯತೇ—
ನಾಟ್ಯಂ ಭಿನ್ನ ರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ"

ಎಂಬ ಶ್ಲೋಕವನ್ನು ಅಪ್ರಯತ್ನವಾಗಿ ಹಾಡತೊಡಗಿದಳು. ಅವಳು ಏನು ಮಾಡುತ್ತಿರುವುದೂ ಅವಳಿಗೇ ತಿಳಿಯುತ್ತಿರಲಿಲ್ಲ. ಬಿಗಿ ಹಿಡಿದ ಅತಿ ಮೃದು ಧ್ವನಿಯಿಂದ ಹಾಡಲಾರಂಭವಾದ ಶ್ಲೋಕವು ಮತ್ತೆ ಮತ್ತೆ ಪುನರಾವೃತ್ತವಾಯಿತು. ಅದರಲ್ಲಿ ಅವಳು ಮುಕ್ತಕಂಠದಿಂದ ನಾನಾ ಸಂಗೀತ ರೀತಿಗಳನ್ನು

ತೋರಿಸಿದಳು. ಅವಳು ಮೆಲ್ಲನೆ ಎದ್ದು ನಿಂತಳು. ಚರಣಗಳೂ, ಕೈಗಳೂ, ಶಿರವೂ, ಮುಖವೂ, ಅಂಗಾಂಗಗಳೂ ಪರಸ್ಪರ ಸಹಕಾರಿಗಳಾಗಿ ನಾಟ್ಯವನ್ನು ಮಾಡತೊಡಗಿದವು. ಅವುಗಳಲ್ಲಿ ಶ್ಲೋಕದಲ್ಲಿನ ಭಾವಗಳು ಪ್ರಕಟಿಸಲ್ಪಡುತ್ತಿದ್ದವು. ಅಪ್ರಯತ್ನವಾಗಿ ಅವಳಲ್ಲಿ ಹಿಂದಿನ ಕಲಾ ಪ್ರವಾಹವುಕ್ಕಿಬಂದಿತ್ತು. ಅವಳಿಗದರ ಸ್ಪೃಹೆಯೇ ಇರಲಿಲ್ಲ. ಎಚ್ಚರಿಕೆಯೇ ಇರಲಿಲ್ಲ. ಬಹುಕಾಲ ಎಚ್ಚರದಿಂದ ಹುಚ್ಚಿಯಂತೆ ನಟಿಸಿದ ಅವಳು ಈಗ ಕಲೋನ್ಮತ್ತಳಾಗಿದ್ದಳು. ಅವಳ ತಾಯಿಗೂ ಗೋಪಾಲನಿಗೂ ಬಹಳ ಆನಂದವಾಯಿತು. ಸ್ವಲ್ಪ ಹೊತ್ತಿಗೆ ಅವಳಿಗೆ ಎಚ್ಚರಿಕೆಯಾಯಿತು. ನಾಟ್ಯ ಗೀತೆಗಳನ್ನು ನಿಲ್ಲಿಸಿ ಅವಳು ನಾಚಿಕೆಯಿಂದ ತಲೆಬಾಗಿಸಿಕೊಂಡು ಕೋಣೆಯೊಳಕ್ಕೆ ಓಡಿಹೋದಳು.

ಎಲ್ಲರೂ ಊಟ ಮಾಡಿದ ಮೇಲೆ ಗೋಪಾಲನು ವಿಲಾಸಿನಿಯನ್ನು ತನ್ನ ತಂಗಿಯಂತೆ ನೋಡಿಕೊಳ್ಳುವುದಾಗಿಯೂ, ಅವಳನ್ನು ವರದಪ್ಪ ಸ್ವಾಮಿಗಳ ಆಶ್ರಮದಲ್ಲಿ ಬಿಡುವುದಾಗಿಯೂ, ಇದರಿಂದ ಅವಳು ಶುದ್ಧ ಜೀವನವನ್ನು ನಡೆಸುತ್ತ ಕಲೋಪಾಸನೆ ಮಾಡುವುದಕ್ಕೆ ಅನುಕೂಲವಾಗುವುದೆಂದೂ ಅವಳ ತಾಯಿಗೆ ಭರವಸೆಯನ್ನು ಕೊಟ್ಟು, ಅವಳನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋಗುವುದಕ್ಕೆ ಅವಳ ಅನುಮತಿಯನ್ನು ಪಡೆದನು. ವಿಲಾಸಿನಿಯು ತಾನು ಕನ್ನೆಯಾಗಿಯೇ ಉಳಿದ ಜೀವನವನ್ನೆಲ್ಲ ಕಳೆಯಬೇಕೆಂಬ ತನ್ನ ಸಂಕಲ್ಪವನ್ನು ಪ್ರಕಟಿಸಿದಳು. ಅವಳು ಪುನಃ ಹುಚ್ಚಿಯ ವೇಷವನ್ನು ಧರಿಸಿ ಹುಚ್ಚಿಯಂತೆ ನಟಿಸುತ್ತ ಗೋಪಾಲನ ಜೊತೆಯಲ್ಲಿ ಶಿಬಿರಕ್ಕೆ ತೆರಳಿದಳು.

## ೧೪

ಪುಷ್ಯ ಶುದ್ಧ ಸಪ್ತಮಿಯ ದಿನ ಮಹಾರಾಜನ ಸೇವೆಯನ್ನು ತೀರಿಸಿಕೊಂಡು ಮಧ್ಯಾಹ್ನದ ಸಮಯದಲ್ಲಿ ಗೋಪಾಲನು ರಾಜಾಂತಃಪುರದಿಂದ ಮನೆಗೆ ಹೋಗುತ್ತಿದ್ದನು. ಕೋಟೆಯೊಳಗಿನ ರಾಜಮಾರ್ಗದಲ್ಲಿ ತಾನು ಬರುತ್ತಿರಲು ಅಶ್ವಾರೂಢಳಾಗಿ ಸ್ವಲ್ಪ ಪರಿವಾರದೊಂದಿಗೆ ಭಾಗ್ಯಲಕ್ಷ್ಮಿಯು ಎದುರು ಬಂದಳು. ಗೋಪಾಲನನ್ನು ನೋಡಿದ ಕೂಡಲೇ ವೀರ ತರುಣಿಯ ವೇಷದಲ್ಲಿದ್ದ ಭಾಗ್ಯಲಕ್ಷ್ಮಿ ಕುದುರೆಯಿಂದಿಳಿದು ಗೋಪಾಲನನ್ನು ಸಮೀಪಿಸಿ

ದಳು. ಗೋಪಾಲನು ಭಾಗ್ಯಲಕ್ಷ್ಮಿಯನ್ನು "ಭಾಗ್ಯಲಕ್ಷ್ಮಮ್ಮನವರೇ—ನೀವು ಕ್ಷೇಮವೇ? ನಿಮ್ಮ ತಂದೆ ತಾಯಿ ಕ್ಷೇಮವೇ" ಎಂದು ಕೇಳಿದನು. ಭಾಗ ಲಕ್ಷ್ಮಿ ಯೌವನದ ವಿಲಾಸವನ್ನು ಬೀರುವ ದೃಷ್ಟಿಯಿಂದ ಗೋಪಾಲನ ಮುಖ ವನ್ನು ನೋಡುತ್ತಾ—"ಏನುಗೋಪಾಲಾ, ನೀನು ನನಗಿಂತಲೂ ದೊಡ್ಡವನಾಗಿ ನನ್ನನ್ನು ಬಹುವಚನದಲ್ಲಿ ಮಾತಾಡಿಸುವುದು ನನ್ನನ್ನು ಅಪಹಾಸ್ಯ ಮಾಡು ವುದಕ್ಕೋ? ಆರೇಳು ವರ್ಷಗಳ ಹಿಂದೆ ನಿನ್ನ ಪರಿಚಯ ನನಗಾದ ಹೊಸದರಲ್ಲಿ ನನ್ನನ್ನು ನೀನು ಏಕವಚನದಲ್ಲಿಯಲ್ಲವೇ ಮಾತಾಡಿಸುತ್ತಿದ್ದದ್ದು? ನಾನೂ ನಿನ್ನನ್ನು ಏಕವಚನದಲ್ಲಿಯೇ ಮಾತಾಡಿಸುತ್ತಿದ್ದೆನಲ್ಲವೇ? ಪುನಃ ನಾವಿಬ್ಬರೂ ಪರಸ್ಪರ ಮಾತಾಡುತ್ತಿರುವುದು ಈ ದಿನವೇ. ಈಗ ಮಾತಿನಲ್ಲಿ ಈ ಬದಲಾವಣೆ ಏಕೆ? ನೀನು ನನ್ನ ತಂಗಿ ಕಮಲಮ್ಮನನ್ನು ಹೀಗೆಯೇ ಮಾತಾಡಿಸುತ್ತೀಯಾ?" ಎಂದು ಕೇಳಿದಳು.

ಅದಕ್ಕೆ ಗೋಪಾಲನು "ಐದಾರು ವರ್ಷಗಳ ಹಿಂದೆ ನೀನು ಹುಡುಗಿ ಯಂತೆ ತೋರುತ್ತಿದ್ದೆ. ಆದುದರಿಂದ ಹಾಗೆ ಮಾತಾಡಿಸುತ್ತಿದ್ದೆ. ಈಗ ನಿನ್ನ ವಯಸ್ಸು, ಅಂತಸ್ತು, ಮೇಲೆ ಈ ವೀರ ತರುಣಿಯ ಹುದ್ದೆಯ ಗೌರವ ಎಲ್ಲ ನೋಡಿ ಕೊಂಡಲ್ಲವೇ ನಾನು ಮಾತಾಡಬೇಕಾದುದು? ನನಗೂ ಕಮಲಮ್ಮ ನಿಗೂ ಯಾವ ವ್ಯತ್ಯಾಸವೂ ಇಲ್ಲದಿರುವುದರಿಂದ ನಮ್ಮಿಬ್ಬರ ಮಾತಿನ ರೀತಿಯೇ ಬೇರೆ" ಎಂದನು.

ಭಾಗ್ಯಲಕ್ಷ್ಮಿಯು ಅಸೂಯೆಯನ್ನು ಸೂಚಿಸುವ ದೃಷ್ಟಿಯಿಂದ ಗೋಪಾಲ ನನ್ನು ನೋಡುತ್ತ ಹೀಗೆ ಹೇಳಿದಳು. "ನೀವಿಬ್ಬರೂ ಮಾತಾಡಿಕೊಳ್ಳುವ ವಿಷಯಗಳಿಗಿಂತ ಹೆಚ್ಚಿನ ವಿಷಯಗಳನ್ನು ನಾವಿಬ್ಬರೂ ಮಾತಾಡಬೇಕಾಗಿದೆ, ಗೋಪಾಲಾ. ಇದು ಕೇವಲ ನನ್ನ ಕೋರಿಕೆ ಮಾತ್ರವಲ್ಲ. ನಮ್ಮ ಮಹಾ ರಾಜರ ಮತ್ತು ದೇಶದ ಗೌರವವನ್ನು ಉಳಿಸಲು ನಮ್ಮಿಬ್ಬರ ಕರ್ತವ್ಯವೂ ಆಗಿದೆ. ನಾನು ಈ ವೀರ ತರುಣಿಯ ದೀಕ್ಷೆಯಲ್ಲಿ ಮಾಡುತ್ತಿರುವ ಪ್ರಚಾರವು ನಿನಗೆ ತಿಳಿಯದಿರುವುದೇ? ನನ್ನ ಈ ಪ್ರಯತ್ನದಲ್ಲಿ ನಿನ್ನ ಸಹಕಾರವೂ ನನಗೆ ಬೇಕಾಗಿದೆ."

ಗೋಪಾಲನು "ಭಾಗ್ಯಲಕ್ಷ್ಮೀ, ನನಗೆ ನೀನು ಮಾಡುತ್ತಿರುವ ಪ್ರಚಾರದ ವಿಷಯವೂ ತಿಳಿಯುವುದು. ಈ ವಿಷಯದಲ್ಲಿ ರಂಗಯ್ಯ ನಿನಗೆ ವೀರಗೀತೆ

ಗಳನ್ನು ರಚಿಸಿಕೊಡುತ್ತಿರುವುದೂ ಗೊತ್ತು. ನಾನು ಕವಿಯಲ್ಲ. ಸೈನಿಕನೂ ಅಲ್ಲ. ನನ್ನಿಂದ ನಿನಗೆ ಯಾವ ನೆರವು ಸಿಕ್ಕೀತು?" ಎಂದು ಹೇಳಿದನು.

ಭಾಗ್ಯಲಕ್ಷ್ಮಿ :—"ಹಾಗೆನ್ನಬೇಡ ಗೋಪಾಲಾ, ಈ ವಿಷಯದಲ್ಲಿ ನಾನು ನಿನ್ನೊಂದಿಗೆ ಎಷ್ಟೋ ವಿಚಾರಗಳನ್ನು ಕುರಿತು ಮಾತಾಡಬೇಕಾಗಿದೆ. ಸ್ವಲ್ಪ ಈ ಪಕ್ಕದಲ್ಲಿರುವ ದೇವಾಲಯಕ್ಕೆ ಹೋಗೋಣ ಬಾ. ಅಲ್ಲಿ ಕೆಲವು ವಿಷಯಗಳನ್ನು ಕುರಿತು ಮಾತನಾಡಬೇಕಾಗಿದೆ. ನನಗೆ ನಿನ್ನ ಪೂರ್ಣ ಸಹಕಾರ ಬೇಕು." ಎಂದು ಹೇಳಿ ಗೋಪಾಲನ ಜೊತೆಯಲ್ಲಿ ದೇವಾಲಯವನ್ನು ಪ್ರವೇಶಿಸಿದಳು. ಅಲ್ಲಿ ಭಾಗ್ಯಲಕ್ಷ್ಮಿ ಹೇಳಲಾರಂಭಿಸಿದಳು— "ಗೋಪಾಲಾ, ನೀನು ಸಾಮಾನ್ಯ ಪುರುಷರಂತಲ್ಲ. ನಿನ್ನ ಶಕ್ತಿ ಸಾಮರ್ಥ್ಯಗಳು, ಬುದ್ಧಿ ಕುಶಲತೆ, ಜ್ಞಾಪಕಶಕ್ತಿ, ಇವೆಲ್ಲಾ ಎಂತಹವರನ್ನಾದರೂ ಮುಗ್ಧಗೊಳಿಸುತ್ತವೆ. ಅಂತಹ ನಿನ್ನ ನೆರವನ್ನು ನಾನು ಅಪೇಕ್ಷಿಸುವುದರಲ್ಲಿ ಆಶ್ಚರ್ಯವೇನು? ನೋಡು, ಈ ಭೃತ್ಯನ ವೇಷ ನಿನಗೆ ಯೋಗ್ಯವಲ್ಲ. ನೀನು ಮನಸ್ಸು ಮಾಡಿದರೆ ಕೂಡಲೇ ಒಬ್ಬ ದಂಡನಾಯಕನಾಗುವ ಯೋಗ್ಯತೆ ನಿನ್ನಲ್ಲಿದೆ. ನಾನು ಅದಕ್ಕೆ ನೀನೇನು ಮಾಡಬೇಕೆಂಬುದನ್ನು ಹೇಳಿಕೊಡುತ್ತೇನೆ. ನಮ್ಮ ತಂದೆಗೆ ನಾನು ಒಬ್ಬಳೇ ಮಗಳು. ನೀನೊಪ್ಪಿದರೆ ನಮ್ಮ ತಂದೆಯವರೂ ಇದಕ್ಕೆ ನೆರವಾಗಿ ದಂಡನಾಯಕನಾದ ನಿನಗೆ ನನ್ನನ್ನು ಕೊಟ್ಟು ವಿವಾಹ ಮಾಡುವರು. ನಿನ್ನ ಶಕ್ತಿಗಳನ್ನೆಲ್ಲಾ ಮಹಾರಾಜರ ಮತ್ತು ದೇಶದ ಗೌರವವನ್ನು ಕಾಪಾಡುವುದಕ್ಕೆ ಉಪಯೋಗಿಸಬಹುದು. ಹೀಗೆ ಮಾಡುವುದು ನನಗೆ ಜೀವಿತಪರ್ಯಂತ ನೆರವಾಗಿರುವುದಲ್ಲವೇ? ನನಗೆ ಇದಕ್ಕಿಂತಲೂ ಹೆಚ್ಚಿನ ನೆರವಾವುದು ಬೇಕು?"

ಈ ಮಾತಿಗೆ ಗೋಪಾಲನು ಸ್ವಲ್ಪ ಹೊತ್ತು ಪ್ರತ್ಯುತ್ತರ ಕೊಡಲಿಲ್ಲ. ಸ್ವಲ್ಪ ಹೊತ್ತಿಗೆ "ನನಗೆ ಮದುವೆಯ ಆಸೆ ಇಲ್ಲ, ಭಾಗ್ಯಲಕ್ಷ್ಮೀ, ಉನ್ನತ ಪದವಿಯ ಆಸೆಯೂ ಇಲ್ಲ. ಇವೆರಡೂ ಬಿಟ್ಟು ಬೇರೆ ಯಾವ ವಿಚಾರವನ್ನಾದರೂ ಮಾತಾಡೋಣ." ಎಂದು ಉತ್ತರ ಕೊಟ್ಟನು. ಭಾಗ್ಯಲಕ್ಷ್ಮಿ ಸ್ವಲ್ಪ ಹೊತ್ತು ಮೌನ ತಾಳಿದಳು. ಮುಂದೆ ಏನು ವಿಷಯವನ್ನು ಮಾತಾಡುವುದಕ್ಕೂ ಆವಳಿಗೆ ತೋಚಲಿಲ್ಲ. ಅಷ್ಟರಲ್ಲಿ ರಂಗಯ್ಯನು ಅಲ್ಲಿಗೆ ಬಂದು "ಏನು

ಭಾಗ್ಯಲಕ್ಷ್ಮೀ, ನಿನಗಾಗಿ ಎಲ್ಲೆಲ್ಲಿಯೋ ಹುಡುಕಿದೆ." ಎಂದು ಗೋಪಾಲನನ್ನು ಅಸೂಯಾ ದೃಷ್ಟಿಯಿಂದ ನೋಡುತ್ತಾ ಹೇಳಿದನು.

ಭಾಗ್ಯಲಕ್ಷ್ಮಿ—ರಾಜನ ಮತ್ತು ದೇಶದ ಕಾರ್ಯದಲ್ಲಿ ನಾನಿಲ್ಲಿಗೆ ಬಂದೆ ಭಾವಾ, ನಮ್ಮ ಗೋಪಾಲನಿಗೆ ನೀನಾದರೂ ಹೇಳು, ಸೈನ್ಯವನ್ನು ಸೇರಬೇಕೆಂದು. ಮೊದಲೇ ಬಹು ದೊಡ್ಡ ಹುದ್ದೆ ಸಿಕ್ಕಬಹುದು. ಗೋಪಾಲನು ಸೈನ್ಯವನ್ನು ನಡೆಸಿದರೆ ನಮ್ಮ ಸೈನ್ಯಕ್ಕೆ ಅಪಜಯವುಂಟೇ?"

ರಂಗಯ್ಯ ಗೋಪಾಲನನ್ನು ಆಪಾದ ಮಸ್ತಕ ನೋಡಿ, ಒಂದು ನಿಟ್ಟುಸಿರು ಬಿಟ್ಟು, "ಭಾಗ್ಯಹೀನನಲ್ಲದಿದ್ದರೆ ಭಾಗ್ಯಲಕ್ಷ್ಮಿ ಕೊಡಲಿರುವ ಇಂತಹ ವರವನ್ನು ತಿರಸ್ಕಾರ ಮಾಡುತ್ತಾನೆಯೇ ಗೋಪಾಲ?" ಎಂದನು. ಗೋಪಾಲನು ಏನೂ ಮಾತಾಡಲಿಲ್ಲ. ಆತನ ಮುಖದಲ್ಲಿ ಯಾವ ವಿಕಾರವೂ ತೋರಲಿಲ್ಲ.

ಇಷ್ಟರಲ್ಲಿ ಆಕಸ್ಮಿಕವಾಗಿ ಕುಮಾರನಲ್ಲಿಗೆ ಬಂದನು. ಗೋಪಾಲನು ಕುಮಾರನನ್ನು ಎದುರ್ಗೊಂಡು ಆತನ ಹೆಗಲ ಮೇಲೆ ಕೈ ಹಾಕಿಕೊಂಡು ಕರೆದುಕೊಂಡು ಬಂದು ಭಾಗ್ಯಲಕ್ಷ್ಮಿಗೂ ರಂಗಯ್ಯನಿಗೂ ಆತನ ವಿಚಾರವನ್ನು ತಿಳಿಸಿದನು. ಆತನಿಗೆ ಭಾಗ್ಯಲಕ್ಷ್ಮಿ ಮತ್ತೆ ರಂಗಯ್ಯನ ಪರಿಚಯವನ್ನು ಮಾಡಿಕೊಟ್ಟನು.

ಕುಮಾರನು ಗೋಪಾಲನನ್ನು ಕುರಿತು ಹೀಗೆ ಹೇಳಿದ. "ಗೋಪಾಲಾ ನಿನ್ನಿಂದ ನನಗೆ ಒಂದು ಸಹಾಯ ಬೇಕಾಗಿದೆ. ನಾನು ನಾಡಿನಲ್ಲಿ ನಷ್ಟವಾಗುತ್ತಿರುವ ಓಲೆಗರಿಯ ಪುಸ್ತಕಗಳನ್ನು ಸಿಕ್ಕಿದಷ್ಟು ಸಂಗ್ರಹಿಸಿ ನಮ್ಮ ಗುರುಗಳಾದ ವರದಪ್ಪಸ್ವಾಮಿಗಳ ಆಶ್ರಮದಲ್ಲಿ ಇಟ್ಟು ಕಾಪಾಡಬೇಕೆಂದು ಸಂಕಲ್ಪ ಮಾಡಿದ್ದೇನೆ; ಇಡುವುದೊಂದೇ ಅಲ್ಲ, ಓದಬೇಕೆಂದೂ ಸಂಕಲ್ಪವಿದೆ. ನೀನು ಮಹಾರಾಜರ ಜತೆಯಲ್ಲಿ ನಾಡೆಲ್ಲ ಸುತ್ತಿದ್ದೀಯೆ. ನಿನ್ನ ಗಮನಕ್ಕೆ ಬಂದ ಹಾಗೆ ಗ್ರಂಥಗಳು ಯಾವ ಯಾವ ಊರಿನಲ್ಲಿ ಯಾರ ಯಾರ ಮನೆಯಲ್ಲಿ ಉಳಿದಿವೆ ? ನನಗೆ ತಿಳಿಸು." ಎಂದು ಕೇಳಿದನು.

ಗೋಪಾಲನು ಅನೇಕ ಗ್ರಾಮಗಳ ಹೆಸರುಗಳನ್ನೂ ಅವುಗಳಲ್ಲಿ ಯಾವ ಪ್ರೋತ್ಸಾಹವೂ ಇಲ್ಲದೆ ಬೂದಿ ಮುಚ್ಚಿದ ಕೆಂಡದಂತಿರುವ ಪ್ರತಿಭಾವಂತರಾದ ವಿದ್ಯಾವಂತರ ಮತ್ತು ವಿದ್ಯಾಸಕ್ತರ ಹೆಸರುಗಳನ್ನೂ, ಅವರು ಯಾವ ಯಾವ

ವಿಷಯಗಳನ್ನು ಉತ್ಪಾದಿಸುತ್ತಿರುವುದನ್ನೂ ಕುಮಾರನಿಗೆ ಹೇಳಿದ. ಕುಮಾರನು ವಿಶೇಷ ಚಿತ್ತದಿಂದ ಅವುಗಳನ್ನೆಲ್ಲಾ ಕೇಳಿ ಜ್ಞಾಪಕವಿಟ್ಟುಕೊಂಡ.

ಇದೆಲ್ಲವೂ ಪಕ್ಕದಲ್ಲಿ ನಿಂತು ನೋಡುತ್ತಿದ್ದ ರಂಗಯ್ಯನಿಗೂ, ಭಾಗ್ಯಲಕ್ಷ್ಮಿಗೂ ಆಶ್ಚರ್ಯಕರವಾಗಿತ್ತು. ಅವರಿಬ್ಬರೂ ಗೋಪಾಲನ ಪರಿಶೀಲನಾ ಶಕ್ತಿಗೂ ಸ್ಮರಣಶಕ್ತಿಗೂ ಬೆರಗಾದರು. ಅವರಿಗೆ ಹಿಂದೆಯೇ ಇವರ ಪರಿಚಯ ಸ್ವಲ್ಪ ಇತ್ತು. ಆದರೆ ಕುಮಾರನು ಇದನ್ನೆಲ್ಲ ಬರೆದುಕೊಳ್ಳದೇ ಜ್ಞಾಪಕ ವಿಟ್ಟುಕೊಳ್ಳುವನೇ ಎಂಬ ಸಂಶಯ ಅವರಿಗೆ ಉಂಟಾಯಿತು. ರಂಗಯ್ಯ ಕುಮಾರನನ್ನು "ಕುಮಾರಾ, ನೀನು ಗೋಪಾಲನು ಹೇಳಿದ ವಿಷಯಗಳನ್ನೆಲ್ಲ ಬರೆದಿಟ್ಟುಕೊಳ್ಳಲಿಲ್ಲವಲ್ಲಾ. ಇದು ನಿನಗೆ ನೆನಪಿರುತ್ತದೆಯೇ ?" ಎಂದು ಕೇಳಿದ. ಕುಮಾರನು "ನೆನಪಿರುತ್ತೆ" ಎಂದು ಉತ್ತರ ಕೊಟ್ಟ. ಆದರೂ ರಂಗಯ್ಯನಿಗೆ ನಂಬಿಕೆ ಬರಲಿಲ್ಲ. ಆತನು ಕುಮಾರನನ್ನು "ಹಾಗಾದರೆ ಗೋಪಾಲನು ಈಗ ಹೇಳಿದ ವಿಷಯವನ್ನೆಲ್ಲಾ ನೀನು ಹೇಳು ನೋಡೋಣ." ಎಂದು ಕೇಳಿದ. ಕುಮಾರನು ಎಲ್ಲ ವಿಷಯವನ್ನೂ ಗೋಪಾಲನು ಹೇಳಿದ ಕ್ರಮದಲ್ಲೇ ಒಪ್ಪಿಸಿಬಿಟ್ಟ. ಇದು ನೋಡಿ ರಂಗಯ್ಯನಿಗೂ ಭಾಗ್ಯಲಕ್ಷ್ಮಿಗೂ ಬಹಳ ಆಶ್ಚರ್ಯವಾಯಿತು. ರಂಗಯ್ಯನಿಗೆ ಈರ್ಷ್ಯೆಯೂ ಆಯಿತು.

ಗೋಪಾಲನು ಪುನಃ ಇಂತಿಂತಹವರ ಮನೆಗಳಲ್ಲಿ ಓಲೆಗರಿಯ ಪುಸ್ತಕಗಳು ಅಲಕ್ಷ್ಯದಿಂದ ಹಾಳಾಗುತ್ತಿರಬಹುದೆಂದೂ ವಿವರ ಕೊಟ್ಟನು. ಇದೆಲ್ಲವನ್ನೂ ಕೇಳುತ್ತಿದ್ದ ಭಾಗ್ಯಲಕ್ಷ್ಮಿಗೆ ತಾನೂ ನಾಡಿನಲ್ಲೆಲ್ಲಾ ಸಂಚಾರ ಮಾಡಿ ಪ್ರಚಾರ ಮಾಡಿದರೆ ಎಷ್ಟು ಚೆನ್ನಾಗಿರುವುದು ಎನಿಸಿತು. ಅವಳು ಗೋಪಾಲನನ್ನು ಕುರಿತು "ನೀನು ಈ ಸಲ ಮಹಾರಾಜರ ಜೊತೆಯಲ್ಲಿ ನಾಡಿನ ಸಂಚಾರಕ್ಕೆ ಹೊರಟಾಗ ನನಗೆ ತಿಳಿಸು. ನಾನೂ ಬರಬೇಕೆಂದಿದ್ದೇನೆ. ನನ್ನ ತಂದೆಯನ್ನು ಕೇಳುತ್ತೇನೆ. ರಾಣೀವಾಸದ ಹೆಂಗಸರೆಲ್ಲಾ ಬರುತ್ತಾರಲ್ಲಾ. ನಾನು ಅವರ ಜೊತೆಯಲ್ಲಿರುತ್ತೇನೆ. ನನ್ನ ಸಂಗಾತಿಗಳಾದ ವೀರ ತರುಣಿಯರನ್ನೂ ಕರೆ ತರುತ್ತೇನೆ. ನಾಡಿನ ಮೂಲೆ ಮೂಲೆಗಳಲ್ಲಿ ಪ್ರಚಾರ ಮಾಡುವುದಕ್ಕೆ ಇದು ಒಳ್ಳೆಯ ಉಪಾಯ" ಎಂದು ಹೇಳಿದಳು.

ಇದನ್ನು ಕೇಳಿ ರಂಗಯ್ಯನು ತಾನೂ ದೇಶಸಂಚಾರಕ್ಕೆ ಬರುವುದಾಗಿಯೂ ರಾಜರು ಹೊರಡುವ ಕಾಲವನ್ನು ತನಗೂ ತಿಳಿಸಬೇಕೆಂದೂ, ರಾಜಧಾನಿ

ಸಂಚಯದಲ್ಲಿ ಮಾಂಡಲಿಕಾಧಿಕಾರಿಗಳು ಮಾಡುತ್ತಿರುವ ಅಪಹಾರವನ್ನು ಪತ್ತೆ ಹಚ್ಚುವುದಕ್ಕೆ ಇದು ಅನುಕೂಲವಾಗುವುದೆಂದೂ ಹೇಳಿದನು. ಗೋಪಾಲನು ತನಗೆ ರಾಜನ ಪ್ರವಾಸ ತಿಳಿದಕೂಡಲೇ ತಿಳಿಸುವುದಾಗಿ ಹೇಳಿ ಕುಮಾರನನ್ನು ಜೊತೆಯಲ್ಲಿ ಕರೆದುಕೊಂಡು ಮನೆಗೆ ಹೋದನು.

## ೧೫

ಮಾರನೆಯ ದಿನ ಬೆಳಿಗ್ಗೆ ಎರಡನೆಯ ಯಾಮದಲ್ಲಿ ಗಗನ ಮಹಲಿನ ಕೆಳಗಿನ ಅಂತಸ್ತಿನಲ್ಲಿ ಮಹಾರಾಜ ರುದ್ರಸಿಂಹನ ಒಡ್ಡೋಲಗವು ಪ್ರಾರಂಭವಾಯಿತು. ಮಹಾರಾಜನು ಎತ್ತರವಾದ ಸುಂದರ ವೇದಿಕೆಯ ಮೇಲೆ ರತ್ನ ಖಚಿತ ಸಿಂಹಾಸನದಲ್ಲಿ ಕುಳಿತುಕೊಂಡಿದ್ದನು. ಆತನಿಗೆ ಅತ್ಯಂತ ಸಮೀಪದಲ್ಲಿದ್ದವನು ಛತ್ರಧಾರಿ ಗೋಪಾಲನು. ಆತನ ಎರಡು ಪಕ್ಕದಲ್ಲೂ ನಿಂತು ವ್ಯಜನಧಾರಿಗಳು ಚಾಮರಗಳಿಂದ ಬೀಸುತ್ತಿದ್ದರು. ಪ್ರಧಾನಿ, ಇತರ ಮಂತ್ರಿಗಳು, ಸೈನ್ಯಾಧಿಪತಿ, ಕೋಶಾಧಿಕಾರಿ ಹಾಗೂ ದಂಡನಾಯಕರೂ, ಇತರ ಮುಖ್ಯಾಧಿಕಾರಿಗಳೂ, ಪ್ರಮುಖರೂ ಆಸ್ಥಾನವನ್ನಲಂಕರಿಸಿ ರಾಜನ ಮುಖವನ್ನೇ ಕುತೂಹಲಿಗಳಾಗಿ ನೋಡುತ್ತಿದ್ದರು. ಸಭಾಂಗಣವು ವಿವಿಧವರ್ಣಗಳ ಪಟಗಳಿಂದಲೂ ತೋರಣಗಳಿಂದಲೂ, ಸಿಂಹ ಶಾರ್ದೂಲಾದಿ ಚಿತ್ರಗಳಿಂದಲೂ, ವೀರಪುರುಷರ ಚಿತ್ರಗಳಿಂದಲೂ ಅಲಂಕೃತವಾಗಿತ್ತು. ದೊಡ್ಡ ಪ್ರಮಾಣದ ಬಿಲ್ಲುಗಳು, ಬಾಣಗಳು, ಕತ್ತಿ–ಕಠಾರಿಗಳು ಮುಂತಾದ ಆಯುಧಗಳನ್ನು ಗೋಡೆಗಳಿಗೂ ಸ್ತಂಭಗಳಿಗೂ ತಗುಲಿಹಾಕಿದ್ದರು. ಮಾಂಸವನ್ನು ತೆಗೆದು ಒಣಗಿಸಿ ಹುಲ್ಲು ತುಂಬಿದ ಆನೆಯ, ಚಿರತೆಗಳ ಮತ್ತು ಕಾಡೆಮ್ಮೆಗಳ ತಲೆಗಳನ್ನು ಅಲ್ಲಲ್ಲಿ ಗೋಡೆಗಳ ಮೇಲೆ ನೆಟ್ಟಿದ್ದರು.

ಮಹಾರಾಜನ ಅಪ್ಪಣೆಯಂತೆ ಪ್ರಧಾತಿಯು ಸಭ್ಯರಿಗೆಲ್ಲರಿಗೂ ರಾಜನ ಪ್ರತಿಜ್ಞೆಯನ್ನೂ ಸಂಕಲ್ಪವನ್ನೂ ಜ್ಞಾಪಿಸಿ, ಅಂದು ತಿಳಿಸಬೇಕಾದ ವಿಷಯವನ್ನು ಹೀಗೆಂದು ಹೇಳಿದನು.

“ಮಹಾರಾಜರು ಮಾಡಿದ ಪ್ರತಿಜ್ಞೆಯನ್ನೂ ಅವರ ಸಂಕಲ್ಪವನ್ನೂ ದೂತರ ಮುಖಾಂತರ ಹೇಮಗಿರಿ ಸೈನ್ಯಾಧಿಕಾರಿಗೆ ಹೇಳಿ ಕಳುಹಿಸಿತ್ತು. ಆತನು

ಕೂಡಲೇ ಪ್ರತ್ಯುತ್ತರ ಕೊಡಲಾಗುವುದಿಲ್ಲವೆಂದೂ, ಪ್ರಧಾನಿಯನ್ನೂ ಮಂತ್ರಿಗಳನ್ನೂ ಪ್ರಜಾಪ್ರಮುಖರನ್ನೂ ಸೇರಿಸಿ ಅವರೆಲ್ಲರ ಅಭಿಪ್ರಾಯದ ಮೇಲೆ ಒಂದು ತೀರ್ಮಾನಕ್ಕೆ ಬಂದು ಪ್ರತ್ಯುತ್ತರವನ್ನು ಕೊಡುವುದಾಗಿಯೂ, ಇದಕ್ಕೆ ಸ್ವಲ್ಪ ಕಾಲ ಹಿಡಿಯುವುದೆಂದೂ ಹೇಳಿಕಳುಹಿಸಿದ್ದನು. ನಮಗೂ ಸೈನ್ಯಾಭಿವೃದ್ಧಿ ಮಾಡಿಕೊಳ್ಳಲು ಅವಕಾಶ ಬೇಕಾಗಿದುದರಿಂದ ನಾವು ಪುನಃ ದೂತನನ್ನು ಕಳುಹಿಸಲಿಲ್ಲ. ಆದರೆ ನಮ್ಮ ಚಾರರು ಆ ದೇಶದಲ್ಲಿನ ಸಮಾಚಾರವನ್ನು ಮಹಾರಾಜರಿಗೆ ಆಗಿಂದಾಗ್ಗೆ ತಿಳಿಸುತ್ತಲೇ ಇದ್ದಾರೆ. ಹೇಮಗಿರಿ ರಾಜ್ಯಕ್ಕೆ ರಾಜನಾಗಬೇಕಾದವನನ್ನು ಇನ್ನೂ ಆರಿಸಿಕೊಂಡಿಲ್ಲ. ಆದರೆ ಆ ದೇಶದ ಸೈನ್ಯಾಧಿಪತಿಗೆ ನಮ್ಮ ಮಹಾರಾಜರ ಪ್ರತಿಜ್ಞಾನಿಷ್ಠೆ ತಿಳಿದಿರುವುದರಿಂದ, ಆತನು ಯುದ್ಧವಾಗಬಹುದೆಂದು ಊಹಿಸಿ ತನ್ನ ಸೈನ್ಯವನ್ನು ಬಲಗೊಳ್ಳಿಸುವ ಪ್ರಯತ್ನಗಳನ್ನು ಅಂದಿನಿಂದ ಇಂದಿನವರೆಗೂ ಅನೇಕ ರೀತಿಗಳಲ್ಲಿ ಮಾಡುತ್ತಿರುವನೆಂದು ತಿಳಿದುಬಂದಿದೆ. ಆತನು ಪ್ರತ್ಯುತ್ತರ ಕೊಡದೆ ಕಾಲಯಾಪನೆ ಮಾಡಿದುದು ಕೇವಲ ಸೈನ್ಯಾಭಿವೃದ್ಧಿಯನ್ನು ಮಾಡಿಕೊಳ್ಳುವ ಉದ್ದೇಶದಿಂದಲೇ ಹೊರತು ನಮ್ಮ ಮಹಾರಾಜರ ಉದ್ದೇಶವನ್ನು ಪರಿಶೀಲಿಸುವುದಕ್ಕಲ್ಲವೆಂದೂ, ಇದು ಒಂದು ಯುಕ್ತಿಯೆಂದೂ ತಿಳಿದುಬಂದಿದೆ. ನಮ್ಮ ಮಹಾರಾಜರ ಅಭಿಲಾಷೆಯನ್ನೂ ಪ್ರತಿಜ್ಞೆಯನ್ನೂ ಲಕ್ಷಿಸದೆ ತಮಗೆ ಇಷ್ಟವಾದ ಯಾವನಾದರೊಬ್ಬನನ್ನು ರಾಜನನ್ನಾಗಿ ಮಾಡಿಕೊಳ್ಳಬೇಕೆಂಬುದೇ ಸೈನ್ಯಾಧಿಪತಿಯ ಮತ್ತು ಇತರ ಪ್ರಮುಖರ ಉದ್ದೇಶವೆಂದೂ ತಿಳಿದುಬಂದಿದೆ. ಹೀಗಿರುವಲ್ಲಿ ನಮ್ಮ ಮಹಾರಾಜರ ಪ್ರತಿಜ್ಞೆಯನ್ನು ಕಾಪಾಡುವುದಕ್ಕಾಗಿ ನಾವೆಲ್ಲರೂ ಸೈನ್ಯಾಭಿವೃದ್ಧಿಗೆ ಇನ್ನೂ ಹೆಚ್ಚಿನ ಪ್ರಯತ್ನವನ್ನು ನಡೆಸಬೇಕಾಗಿದೆ. ಹೀಗೆಂದು ಪ್ರಭುಗಳವರೂ ಅಪ್ಪಣೆ ಕೊಟ್ಟಿರುತ್ತಾರೆ. ಸೈನ್ಯಾಭಿವೃದ್ಧಿಗೆ ಮಾಡಬೇಕಾದ ಕೆಲಸಗಳು ಎರಡು. ಮೊದಲನೆಯದು, ಸೈನ್ಯ ಪೋಷಣೆಗಾಗಿ ಅಪಾರವಾಗಿ ಧನಧಾನ್ಯಗಳನ್ನು ಶೇಖರಿಸುವುದು; ಎರಡನೆಯದು, ನಾಡಿನಲ್ಲಿ ಮೂಲೆ ಮೂಲೆಯಲ್ಲಿರುವ ವೀರಪುರುಷರನ್ನು ಸೈನ್ಯಕ್ಕೆ ಸೇರುವಂತೆ ಪ್ರಲೋಭಿಸಿ ಪ್ರಚೋದಿಸುವುದು. ಈ ಎರಡು ವಿಷಯಗಳಲ್ಲೂ ಇಷ್ಟು ದಿವಸ ಮಾಡುತ್ತಿರುವ ಪ್ರಯತ್ನಕ್ಕಿಂತಲೂ ಬಹಳ ಹೆಚ್ಚಿನ ಪ್ರಯತ್ನ ಕೂಡಲೇ ಮಾಡಬೇಕಾಗಿದೆ. ಹೇಮಗಿರಿಯ ಅಧಿಕಾರಿಗಳನ್ನಾಗಲಿ ಪ್ರಜೆಗಳನ್ನಾಗಲಿ ನಂಬುವುದಕ್ಕೆ ಆಗುವು

ದಿಲ್ಲ. ಅವರು ಕುತಂತ್ರಿಗಳು. ಅಲಕ್ಷ್ಯವಿಲ್ಲದೆ ನಮ್ಮ ಬಲವನ್ನು ಬೆಳಸಿ ಬಲದ ತೋರಿಕೆಯಿಂದಾಗಲೀ ಕೊನೆಗೆ ಯುದ್ಧ ಮಾಡಿಯಾಗಲಿ ಹೇಮಗಿರಿ ರಾಜ್ಯವನ್ನು ನಮ್ಮ ಮಹಾರಾಜರ ಅಧೀನಕ್ಕೆ ತರಬೇಕಾದುದು ನಮ್ಮೆಲ್ಲರ ಮುಖ್ಯ ಕರ್ತವ್ಯವಾಗಿದೆ. ಆದುದರಿಂದ ಈ ನಗರದಲ್ಲೂ ನಾಡಿನ ನಾಲ್ಕು ಕಡೆಗಳಲ್ಲಿನ ಮುಖ್ಯ ಪಟ್ಟಣಗಳಲ್ಲೂ ವೀರಪುರುಷರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲು ಪ್ರೋತ್ಸಾಹ ಪ್ರದರ್ಶನಗಳನ್ನು ಏರ್ಪಾಟು ಮಾಡಬೇಕೆಂದೂ ಇವುಗಳಲ್ಲಿ ಮಹಾರಾಜರು ಸ್ವತಃ ಅಧ್ಯಕ್ಷರಾಗಿರುವರೆಂದೂ ಅವರ ಅಭಿಪ್ರಾಯ ನಿಮಗೆಲ್ಲರಿಗೂ ತಿಳಿಸಬೇಕೆಂದು ಅಪ್ಪಣೆಯಾಗಿದೆ. ಅಲ್ಲದೆ ಮುಖ್ಯ ಪಟ್ಟಣಗಳಿಗೆ ಮಹಾರಾಜರು ಭೇಟಿಯನ್ನಿತ್ತಾಗ ಸುತ್ತ ಮುತ್ತಲಿನ ಪ್ರದೇಶಗಳಲ್ಲೆಲ್ಲಾ ಅಧಿಕಾರಿಗಳಿಂದ ತೀವ್ರವಾಗಿ ಧನ ಧಾನ್ಯ ಸಂಚಯ ನಡೆಯಬೇಕು. ಈ ವರ್ಷ ಮಳೆ ಬೆಳೆಗಳು ಸಮರ್ಪಕವಾಗಿಲ್ಲ; ಇದು ಸುಗ್ಗಿಯ ಕಾಲವಾದುದರಿಂದ ಈಗ ಬಿಟ್ಟರೆ ಮುಂದೆ ಏನೂ ಸಿಗುವ ಸಂಭವವಿಲ್ಲ. ಯುದ್ಧ ಯಾವ ಮುಹೂರ್ತದಲ್ಲಿ ನಡೆಯಲಿದೆಯೋ ಗೊತ್ತಿಲ್ಲ. ಅದಕ್ಕೆ ಇಂದಿನಿಂದ ಸಿದ್ಧವಾಗದಿದ್ದರೆ ಜಯಿಸುವುದು ಕಷ್ಟ. ಯುದ್ಧಕ್ಕೆ ಹೋಗಿ ಜಯಿಸದಿದ್ದರೆ ಅದರಿಂದ ನಮ್ಮ ನಾಡಿಗಾಗುವ ಅನರ್ಥ ಅಷ್ಟಿಷ್ಟಲ್ಲ. ಆದುದರಿಂದ ಪ್ರಜೆಗಳಿಗೆ ಕಷ್ಟವೆನಿಸಿದರೂ ಈಗಲೇ ಆ ಕಷ್ಟವನ್ನೆಲ್ಲ ಸಹಿಸಿಕೊಂಡು ಸೈನ್ಯಾಭಿವೃದ್ಧಿಗೆ ಧನಧಾನ್ಯಗಳನ್ನು ನೀಡುವುದು ಒಟ್ಟಿನಲ್ಲಿ ಎಲ್ಲರಿಗೂ ಕ್ಷೇಮಕರ. ಇಲ್ಲದಿದ್ದರೆ ನಾಡಿನ ಜನರಿಗೆಲ್ಲಾ ಮಹಾಭಯಂಕರವಾದ ತೊಂದರೆ ಬರುವ ಸಂಭವವಿದೆ. ನೀವೆಲ್ಲರೂ ಈ ಅಂಶವನ್ನು ನಾಡಿನಲ್ಲೆಲ್ಲಾ ಪ್ರಚಾರ ಮಾಡಿ ಯುದ್ಧ ಸಿದ್ಧತೆಗೆ ಪ್ರಜೆಗಳನ್ನು ಹುರಿದುಂಬಿಸಬೇಕು. ಇದು ಪ್ರಭುಗಳ ಆಜ್ಞೆ." ಹೀಗೆ ಹೇಳಿ ಪ್ರಧಾನಿ ತನ್ನ ಆಸನದ ಮೇಲೆ ಕುಳಿತುಕೊಂಡನು.

ರುದ್ರಸಿಂಹನೂ ಸಿಂಹಾಸನದ ಮೇಲೆ ಕುಳಿತುಕೊಂಡು ಬಹಳ ಆವೇಶಪೂರಿತವಾಕ್ಯಗಳಿಂದ ಆ ವಿಚಾರವನ್ನೇ ಸಭ್ಯರಿಗೆ ಮತ್ತೆ ಒತ್ತಿ ಹೇಳಿದನು. ಸಭ್ಯರೆಲ್ಲರೂ "ರುದ್ರಸಿಂಹ ಮಹಾರಾಜರಿಗೆ ಜಯವಾಗಲಿ. ರುದ್ರಸಿಂಹ ಮಹಾರಾಜರಿಗೆ ಜಯವಾಗಲಿ" ಎಂದು ತಮ್ಮ ಅನುಮೋದವನ್ನು ಸೂಚಿಸಿದರು.

ಅಷ್ಟರಲ್ಲಿ ಮಹಾರಾಜನ ಅಪ್ಪಣೆಯನ್ನು ಪಡೆದು ಕೆಲವರು ಪೌರರು ಆಸ್ಥಾನದಲ್ಲಿ ಪ್ರವೇಶಿಸಿ ಸಾಷ್ಟಾಂಗ ನಮಸ್ಕಾರ ಮಾಡಿ "ಮಹಾಪ್ರಭೂ,

ಹತ್ತು ಹನ್ನೆರಡು ದಿನಗಳಿಂದ ಒಬ್ಬ ಕಳ್ಳನು ಈ ಊರಿನಲ್ಲಿ ಪ್ರತಿ ರಾತ್ರಿಯೂ ಒಂದೊಂದು ಕಡೆ ಒಂದು ಮನೆಯ ಮಾಳಿಗೆಯಿಂದ ಇನ್ನೊಂದು ಮನೆಯ ಮಾಳಿಗೆಗೆ ಹಾರುತ್ತಾ ಭಯಂಕರವಾದ ಒಂದು ಶಬ್ದವನ್ನು ಮಾಡುತ್ತ ಜನರನ್ನು ಹೆದರಿಸಿ ಕಳ್ಳತನ ಮಾಡುತ್ತಿದ್ದಾನೆ. ಅವನನ್ನು ಹಿಡಿಯಲು ಜನರ ಕೈಲಾಗಲಿ ಪಟ್ಟಣದ ರಕ್ಷಕರ ಕೈಲಾಗಲಿ ಆಗಲಿಲ್ಲ. ತಾವು ಏನಾದರೂ ಮಾಡಿ ಅವನನ್ನು ಹಿಡಿಸಿ ನಮ್ಮನ್ನೆಲ್ಲಾ ಕಾಪಾಡಬೇಕು." ಎಂದು ಮೊರೆಯಿಟ್ಟರು. ಇದನ್ನು ಕೇಳಿದ ಕೂಡಲೇ ಮಹಾರಾಜರಿಗೆ ವಿಪರೀತ ಕೋಪ ಬಂತು. ಆತನು "ನನ್ನ ರಾಜ್ಯದಲ್ಲಿ ಇಂತಹ ಕಳ್ಳನೇ? ರಕ್ಷಕ ಭಟರಿಗೂ ಅವನನ್ನು ಹಿಡಿಯಲು ಸಾಧ್ಯವಿಲ್ಲವೇ? ಮಂತ್ರಿಗಳೇ, ಈ ಕಳ್ಳನನ್ನು ಯಾರು ಹಿಡಿಯುವರೋ ಅವನಿಗೆ ಮಹಾರಾಜರು ತಕ್ಕ ಪಾರಿತೋಷಕವನ್ನು ಕೊಡುವರೆಂದು ಡಂಗೂರ ಬಾರಿಸಿ. ನಮ್ಮ ಪಟ್ಟಣದಲ್ಲಿ ಯಾರು ವೀರ ಶ್ರೇಷ್ಠನೋ ನಮಗೆ ತಿಳಿಯುವುದು. ಇದರಿಂದ ನನ್ನ ಉದ್ದೇಶಕ್ಕೂ ಅನುಕೂಲವಾಗುವುದು." ಎಂದು ಹೇಳಿದನು. ಪೌರರು ಸಂತುಷ್ಟರಾಗಿ ಹೊರಟು ಹೋದರು.

ಕೂಡಲೇ ಮಹಾರಾಜನು ಮಂತ್ರಿಗಳಿಗೆ—ನಾನು ಮಾಘ ಶುದ್ಧ ಬಿದಿಗೆಯ ದಿನ—ಈ ಪಟ್ಟಣವನ್ನು ಬಿಟ್ಟು ನಾಲ್ಕು ದಿಕ್ಕಿಗಳಲ್ಲಿನ ಮುಖ್ಯ ಪಟ್ಟಣಗಳಿಗೆ ಭೇಟಿ ಕೊಡುತ್ತೇನೆ. ಇದಕ್ಕೆ ತಕ್ಕ ಏರ್ಪಾಟುಗಳನ್ನು ಮಾಡಿ. ನಾನು ಒಂದು ಪಟ್ಟಣವನ್ನು ಸೇರುವಷ್ಟರಲ್ಲಿ ನಮ್ಮ ಅಧಿಕಾರಿಗಳು ಆ ಪಟ್ಟಣದ ವ್ಯಾಪ್ತಿಗೆ ಸೇರಿದ ಎಲ್ಲಾ ಗ್ರಾಮಗಳಲ್ಲಿಯೂ ಧನ ಧಾನ್ಯಗಳನ್ನು ಸೈನ್ಯ ಪೋಷಣೆಗಾಗಿ ಶೇಖರಿಸಿ ಆ ಪಟ್ಟಣಕ್ಕೆ ತರಿಸಿ ನನಗೆ ಅರ್ಪಿಸಬೇಕು. ಈ ಆಜ್ಞೆಯನ್ನು ಪಟ್ಟಣಾಧಿಕಾರಿಗಳಿಗೆಲ್ಲಾ ತಿಳಿಸಿ" ಎಂದು ಆಜ್ಞೆಯಿತ್ತು ಸಿಂಹಾಸನದಿಂದ್ದನು.

೧೬

ಆ ದಿನವೇ ಮಧ್ಯಾಹ್ನ ಊಟ ಮಾಡುವಾಗ ವೀರಪ್ಪ ತನ್ನ ಮಗಳಿಗೆ ರಾಜನ ಆ ದೇಶಗಳನ್ನು ತಿಳಿಸಿದನು. ಆಶಾ ಜ್ಯೋತಿಯಿಂದ ಭಾಗ್ಯಲಕ್ಷ್ಮಿಯ ಮುಖವರಳಿತು. ಅವಳ ಎದೆ ಹಿಗ್ಗಿತು. ಅವಳು ಬೇಗ ಬೇಗ ಊಟ ಮುಗಿಸಿ

ವೀರ ತರುಣಿಯ ವೇಷವನ್ನು ಧರಿಸಿ ಸಂಗಾತಿಗಳೊಡನೆ ಗೋಪಾಲನ ಮನೆಗೆ ಹೊರಟಳು. ಅವರೆಲ್ಲರೂ ಗೋಪಾಲನ ಮನೆ ತಲುಪಿದ ಕೂಡಲೇ ಕುದುರೆಗಳಿಂದಿಳಿದರು. ಭಾಗ್ಯಲಕ್ಷ್ಮಿ ಮನೆಯೊಳಗೆ ಪ್ರವೇಶಿಸಿದಳು. ರಾಮಕ್ಕ ಭಾಗ್ಯಲಕ್ಷ್ಮಿಯನ್ನು ಸ್ವಾಗತಿಸಿ ಉಪಚರಿಸಿದಳು. ಅಲ್ಲಿ ಗೋಪಾಲನಿರಲಿಲ್ಲ. ಭಾಗ್ಯಲಕ್ಷ್ಮಿ ರಾಮಕ್ಕನಿಗೆ ರಾಜನ ಆಜ್ಞೆಗಳ ವಿಚಾರ ತಿಳಿಸಿ ಗೋಪಾಲನಿಗೆ ಇದು ಒಳ್ಳೆಯ ಅವಕಾಶವೆಂದೂ ಆತನು ಕಳ್ಳನನ್ನು ಹಿಡಿದರೆ ಆತನಿಗೆ ಬಹುಮಾನ ದೊರೆಯುವುದಲ್ಲದೆ ಆತನು ಪಟ್ಟಣದಲ್ಲೆಲ್ಲಾ ಪ್ರಖ್ಯಾತನೆನಿಸಿಕೊಳ್ಳುವನೆಂದೂ, ಆತನು ಸೈನ್ಯವನ್ನು ಸೇರಲು ಒಪ್ಪಿದರೆ ನೇರವಾಗಿ ಒಂದು ಉನ್ನತಾಧಿಕಾರವೇ ಲಭಿಸುವುದೆಂದೂ ಹೇಳಿ, ಗೋಪಾಲನಿಗೆ ಇದಕ್ಕೆ ಪ್ರಯತ್ನ ಮಾಡುವಂತೆ ಹೇಳಬೇಕೆಂದು ಅವಳನ್ನು ಬೇಡಿಕೊಂಡಳು. ರಾಮಕ್ಕನಿಂದ ಗೋಪಾಲನು ವರದಪ್ಪಸ್ವಾಮಿಗಳ ಆಶ್ರಮಕ್ಕೆ ಹೋಗಿರುವನೆಂದು ತಿಳಿದು ಭಾಗ್ಯಲಕ್ಷ್ಮಿಯು ತಾನೂ ತನ್ನ ಸಂಗಾತಿಯರೊಡನೆ ಅಲ್ಲಿಗೆ ಹೊರಟಳು.

ಆಶ್ರಮದಲ್ಲಿ ಗುಂಪಾಗಿದ್ದ ಕೆಲವು ವೃಕ್ಷಗಳ ನೆರಳಿನಲ್ಲಿ ಹಸಿರು ಹುಲ್ಲಿನ ಮೇಲೆ ಕಮಲಮ್ಮನೂ ಗೋಪಾಲನೂ ಇನ್ನೊಬ್ಬ ಸುಂದರಿಯೂ ಕುಳಿತಿದ್ದರು. ಎಲ್ಲರೂ ಏನೋ ವಿಚಾರವನ್ನು ಮಾತಾಡುತ್ತಿದ್ದರು. ವೀರ ತರುಣಿಯರ ಆಗಮನವನ್ನು ಗೋಪಾಲನು ದೂರದಿಂದಲೇ ನೋಡಿ ಆ ಹೊಸಬಳಿಗೆ ಭಾಗ್ಯಲಕ್ಷ್ಮಿಯ ವಿಚಾರವನ್ನು ಸೂಕ್ಷ್ಮವಾಗಿ ಹೇಳಿದ. ಆ ಹೊಸ ತರುಣಿ ವಿಲಾಸಿನಿ. ಅವಳ ಮುಖದಲ್ಲಿ ಗಂಭೀರವಾದ ಪ್ರಶಾಂತತೆ ಕಾಣುತ್ತಿತ್ತು. ಗೋಪಾಲನು ಒಂದೊಂದು ಸಲ ಹೇಳುವ ಹಾಸ್ಯೋಕ್ತಿಗಳಿಂದ ಆ ಪ್ರಶಾಂತತೆ ಮಾಯವಾಗಿ ತೀವ್ರವಾದ ಹಾಸ್ಯ ರಸಾನುಭವವು ಅವಳ ಮುಖದಲ್ಲಿ ಕಂಡುಬರುತ್ತಿತ್ತು. ಅವಳ ಮನಸ್ಸಿನಲ್ಲಿ ಯಾವ ರಸ ತಲೆದೋರಿದರೆ ಅದನ್ನು ಅವಳ ಮುಖ ಕನ್ನಡಿಯಂತೆ ಪ್ರತಿಬಿಂಬಿಸುತ್ತಿತ್ತು.

ಭಾಗ್ಯಲಕ್ಷ್ಮಿ ತಾವಿರುವೆಡೆಯನ್ನು ಸಮೀಪಿಸಿದ ಕೂಡಲೇ ಎಲ್ಲರೂ ಎದ್ದು ನಿಂತು ಅವಳನ್ನು ಸ್ವಾಗತಿಸಿದರು. ಭಾಗ್ಯಲಕ್ಷ್ಮಿಯ ಸಂಗಾತಿಗಳು ದೂರದಲ್ಲಿಯೇ ನಿಂತುಬಿಟ್ಟರು. ಎಲ್ಲರೂ ಹಸಿರು ಹುಲ್ಲಿನ ಮೇಲೆ ಕುಳಿತು ಮಾತಾಡತೊಡಗಿದರು. ಪರಿಚಯ ವಾಕ್ಯಗಳಾದ ಮೇಲೆ ಭಾಗ್ಯಲಕ್ಷ್ಮಿಯು ವಿಲಾಸಿನಿಯನ್ನು ಹಾಡು ಹೇಳಬೇಕೆಂದು ಕೇಳಿದಳು. ವಿಲಾಸಿನಿ ಮೃದು

ಮಧುರ ಕಂಠದಿಂದ ಒಂದು ದೇವರ ನಾಮವನ್ನು ಹಾಡಿದಳು. ಕಮಲಮ್ಮ —"ನಮ್ಮ ಅಕ್ಕನಿಗೆ ನಿನ್ನ ನಾಟ್ಯ ವಿಲಾಸವನ್ನೂ ಸ್ವಲ್ಪ ತೋರಿಸು ವಿಲಾಸಿನೀ" ಎಂದು ಹೇಳಿದಳು. ವಿಲಾಸಿನಿ ಅದೇ ದೇವರ ನಾಮವನ್ನು ಹಾಡುತ್ತ ನಾಟ್ಯದಲ್ಲೂ ಅದರ ಭಾವವನ್ನು ತೋರಿಸಿದಳು. ಅಮಾಯಕಳೂ ಮುಗ್ಧಳೂ ಆದ ಭಾಗ್ಯಲಕ್ಷ್ಮಿಗೆ ಬಹಳ ಆನಂದವಾಯಿತು. ಅವಳು ಇಂತಹ ಶಾಂತ ಸ್ವಚ್ಛಂದತೆಯನ್ನು ಹಿಂದೆ ಅನುಭವಿಸಿರಲಿಲ್ಲ. ಉನ್ನತಾಧಿಕಾರಿ ವರ್ಗದ ಜನರ ನಡುವೆಯೇ ಜಂಭದಿಂದ ಮೆರೆಯುತ್ತಿದ್ದ ಭಾಗ್ಯಲಕ್ಷ್ಮಿಗೆ ಈ ಅನುಭವ ಹೊಸದಾಗಿತ್ತು. ಅವಳು ಸಾಮಾನ್ಯ ಜನರ ಜೀವನದಲ್ಲಿದ್ದ ಕ್ಲೇಶಗಳನ್ನು ಆಗಲೇ ಸ್ವಲ್ಪ ನೋಡಿದ್ದಳು. ಮೊದಲಬಾರಿಗೆ ಅದರಲ್ಲಿದ್ದ ಆನಂದಮಯ ಸನ್ನಿವೇಶಗಳ ಪರಿಚಯ ಅವಳಿಗಾಯಿತು. ಅವಳು ಸ್ವಲ್ಪ ಹೊತ್ತು ತಾನು ಬಂದ ಉದ್ದೇಶವನ್ನೇ ಮರೆತುಬಿಟ್ಟಳು.

ಕಮಲಮ್ಮ ಹೇಳಿದಳು—"ಅಕ್ಕಾ ಈ ಬಿಸಿಲಿನಲ್ಲಿ ಏನು ಇಷ್ಟು ದೂರ ಬಂದಿರಿ ?"

ಭಾಗ್ಯಲಕ್ಷ್ಮಿಯು "ನಿಮ್ಮನ್ನೆಲ್ಲಾ ನೋಡಬೇಕೆಂದರೆ ನನಗೆ ಬಹಳ ಆಸೆ. ಅಲ್ಲದೆ ಗೋಪಾಲನಿಗೆ ಒಳ್ಳೆಯ ಅವಕಾಶ ಸಿಕ್ಕಿದೆ. ಆತನ ದೇಹಶಕ್ತಿ, ಬುದ್ಧಿ ಶಕ್ತಿ ಇವುಗಳನ್ನು ತೋರಿಸಿ ಮಹಾರಾಜರ ಮೆಚ್ಚುಗೆಯನ್ನು ಗಳಿಸಲು ಈಗ ಒಳ್ಳೆಯ ಅವಕಾಶ ಒದಗಿ ಬಂದಿದೆ." ಎಂದು ಹೇಳಿ, ಕಳ್ಳನ ವಿಷಯವನ್ನೂ ಕಳ್ಳನನ್ನು ಹಿಡಿದವನು ಪಟ್ಟಣದ ವೀರಾಗ್ರಣಿಯೆಂಬ ಸನ್ಮಾನವನ್ನೂ ರಾಜನು ಕೊಡಲಿರುವ ಬಹುಮಾನವನ್ನೂ ಪಡೆಯಬಹುದಾದ ಅವಕಾಶವನ್ನೂ ವಿವರಿಸಿ ಹೇಳಿದಳು. ಬಳಿಕ, ಗೋಪಾಲನನ್ನು ಕುರಿತು ಈಗಲಾದರೂ ನನ್ನ ಮಾತನ್ನು ಕೇಳು. ನಿನ್ನ ವೈರಾಗ್ಯವನ್ನು ಸ್ವಲ್ಪ ಬಿಡು. ಎಂದು ಹೇಳಿದಳು. ಗೋಪಾಲನು ಏನೂ ಮಾತನಾಡಲಿಲ್ಲ. ಭಾಗ್ಯಲಕ್ಷ್ಮಿ ಮಾತನ್ನು ಮುಂದುವರಿಸಿ "ನಿನ್ನ ಶ್ರೇಯಸ್ಸಿಗಲ್ಲದಿದ್ದರೂ ಪುರಜನರ ಶ್ರೇಯಸ್ಸಿಗಾಗಿಯಾದರೂ ನೀನು ಕಳ್ಳನನ್ನು ಹಿಡಿಯುವ ಪ್ರಯತ್ನ ಮಾಡಬಹುದಲ್ಲಾ. ಒಳ್ಳೆಯ ಧೈರ್ಯಶಾಲಿಗಳಾದ ಸೈನಿಕರನ್ನು ಕೆಲವರನ್ನು ಬೇಕಾದರೆ ನಿನ್ನ ನೆರವಿಗೆ ಕಳುಹಿಸುತ್ತೇನೆ" ಎಂದು ಹೇಳಿದಳು. ಗೋಪಾಲನು ಈಗ ಪ್ರತ್ಯುತ್ತರ ಕೊಡಲೇ ಬೇಕಾಯಿತು. ಆತ ಹೇಳಿದ—"ಪುರ ಜನರ ಹಿತಕ್ಕಾಗಿ ನಾನು ಕಳ್ಳನನ್ನು ಹಿಡಿಯಲು ಪ್ರಯತ್ನಿಸು

ತ್ತೇನೆ. ನನಗೆ ಬಹುಮಾನದ ಆಸೆಯೂ, ಕೀರ್ತಿಯ ಆಸೆಯೂ, ಉನ್ನತಾಧಿಕಾರದ ಆಸೆಯೂ ಇಲ್ಲ.

ಆತನ ಮಾತಿನಿಂದ ಭಾಗ್ಯಲಕ್ಷ್ಮಿಗೆ ಸ್ವಲ್ಪ ಸಂತೃಪ್ತಿ ಉಂಟಾಯಿತು. ಕಮಲಮ್ಮನನ್ನೂ ವಿಲಾಸಿನಿಯನ್ನೂ ನೋಡುತ್ತ ಅವಳು "ಗೋಪಾಲನನ್ನು ಇಷ್ಟುಮಟ್ಟಿಗಾದರೂ ಒಪ್ಪಿಸಲು ಸಾಧ್ಯವಾಯಿತಲ್ಲಾ" ಎಂದು ನುಡಿದಳು. ಅವರಿಬ್ಬರೂ ಗೋಪಾಲನ ಮುಖವನ್ನು ನೋಡಿದರು. "ನನಗೆ ಸೈನಿಕರ ನೆರವೇನೂ ಬೇಡ. ಈ ದಿನ ರಾತ್ರಿ ಕಳ್ಳನನ್ನು ಹಿಡಿಯಲು ಪ್ರಯತ್ನಿಸುತ್ತೇನೆ. ಅದು ಸಾಧ್ಯವಾಗದೆ, ಸೈನಿಕರ ಸಹಾಯ ಬೇಕಾಗಿದ್ದರೆ ನಾನೇ ಹೇಳುತ್ತೇನೆ" ಎಂದು ಹೇಳಿದ.

ಆಶ್ರಮದ ಒಂದು ಕುಟೀರದಲ್ಲಿ ಕುಮಾರನು ಅನೇಕ ತಾಳಪತ್ರ ಗ್ರಂಥಗಳನ್ನು ಸುತ್ತಲೂ ಹರಡಿಕೊಂಡು ಏನೋ ಓದಿಕೊಳ್ಳುತ್ತಿದ್ದನು. ಅವನು ಆಗಾಗ್ಗೆ ಪಶ್ಚಿಮ ದಿಕ್ಕಿನಲ್ಲಿ ಕಂಡು ಬರುತ್ತಿದ್ದ ಬೆಟ್ಟವನ್ನೂ, ಕೋಟೆಯನ್ನೂ ಪಕ್ಕದಲ್ಲಿ ವಿಶಾಲವಾಗಿ ಹರಡಿದ್ದ ಪಟ್ಟಣವನ್ನೂ ನೋಡುತ್ತಿದ್ದ.

ಇವರೆಲ್ಲರೂ ಕುಮಾರನಿದ್ದ ಕುಟೀರಕ್ಕೆ ಹೋದರು. ಗೋಪಾಲ ಹೇಳಿದ : "ಏನು ಕುಮಾರಾ, ಯಾವ ಯಾವ ಶಾಸ್ತ್ರಗಳನ್ನು ಓದುತ್ತಿದ್ದೀ ?" ಕುಮಾರ ಹೇಳಿದ : "ಶಾಸ್ತ್ರಗಳನ್ನಲ್ಲ ಗೋಪಾಲಾ. ಕಾವ್ಯ ನಾಟಕಗಳನ್ನು ಪರಿಶೀಲಿಸುತ್ತಿದ್ದೇನೆ. ರಾಜ ತರಂಗಿಣಿ ಎಂಬ ಒಂದು ಕಾವ್ಯವಿದೆ. ಅದರಲ್ಲಿ ಕಾಶ್ಮೀರದೇಶದ ರಾಜರ ಚರಿತ್ರೆ ಇದೆ. ಅದನ್ನು ಓದಿದ ಲಾಗಾಯಿತು ನನಗೆ ಕಾವ್ಯದಲ್ಲಿ ಕಂಡು ಬರುವ ಐತಿಹಾಸಿಕಾಂಶಗಳನ್ನೆಲ್ಲಾ ಕ್ರೋಡೀಕರಿಸಬೇಕೆಂಬ ಆಸೆ ಉಂಟಾಗಿದೆ. ಈಆಶ್ರಮದಲ್ಲಿರುವ ಕಾವ್ಯಗಳಲ್ಲಿ ಸಿಕ್ಕುವಅಂಶಗಳು ಅತ್ಯಲ್ಪ. ಒಂದಕ್ಕೊಂದು ಅನ್ವಯಿಸಿ ರಾಜರ ಇತಿಹಾಸವನ್ನು ಅವುಗಳಿಂದ ಉದ್ಧಾರ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇನ್ನೂ ಸಾವಿರಾರು ಕಾವ್ಯಗಳನ್ನು ಪರಿಶೀಲಿಸಿದರೆ ಬಹು ಮಟ್ಟಿಗೆ ಪೂರ್ವಾಪರ ಸಂಬಂಧ ತೋರಿಸುವ ಘಟನೆಗಳು ವಿದಿತವಾಗಬಹುದು. ಆದುದರಿಂದಲೇ ನಾನು ಪುಸ್ತಕಗಳ ವಿಚಾರವಾಗಿ ನಿನ್ನಿಂದ ವಾರ್ತೆಯನ್ನು ಸಂಗ್ರಹಿಸಿದ್ದು. ಆದರೆ ನಾನು ದೇಶ ಸಂಚಾರ ಮಾಡುವುದಕ್ಕೆ ನನ್ನ ಬಳಿ ಧನವೆಲ್ಲಿದೆ ? ನನಗೆ ಅದಕ್ಕೆ ಬೇಕಾದ ಅನುಕೂಲಗಳೆಲ್ಲಿವೆ ?" ಎಂದು ಹೇಳಿದನು. ಇದನ್ನು ಕೇಳುತ್ತಿದ್ದ ಭಾಗ್ಯಲಕ್ಷ್ಮಿ "ನೀನು

ನಾಳೆ ನಮ್ಮ ಮನೆಗೆ ಬಾ. ನಾನು ರಂಗಯ್ಯನೊಂದಿಗೆ ಮಾತಾಡಿ ನಿನಗೆ ಏನಾದರೂ ಒಂದು ಮಾರ್ಗವನ್ನು ತೋರಿಸುತ್ತೇನೆ." ಎಂದು ಕುಮಾರನಿಗೆ ಹೇಳಿದಳು. ಭಾಗ್ಯಲಕ್ಷ್ಮಿಯ ಉದಾರತೆಯನ್ನು ಅಲ್ಲಿ ನೆರೆದಿದ್ದ ಎಲ್ಲರೂ ಕೊಂಡಾಡಿದರು. ಗೋಪಾಲನೂ ಮೆಚ್ಚಿಕೊಂಡನು. ನಂತರ ಭಾಗ್ಯಲಕ್ಷ್ಮಿ ಎಲ್ಲರನ್ನೂ ಬೀಳ್ಕೊಂಡು ಮನೆಗೆ ತೆರಳಿದಳು.

## ೧೭

ಕೂಡಲೇ ಗೋಪಾಲನು ಕರ್ತವ್ಯ ದೀಕ್ಷೆಯಿಂದ ಮುಖ್ಯ ಪುರ ರಕ್ಷಕನನ್ನು ಸಮೀಪಿಸಿ ತಾನು ಆ ರಾತ್ರಿ ಕಳ್ಳನನ್ನು ಹಿಡಿಯಲು ಪ್ರಯತ್ನಿಸುವುದಾಗಿ ಹೇಳಿದನು. ಮುಖ್ಯ ಪುರ ರಕ್ಷಕ ರಕ್ಷಕನ ಭಟರಿಗೆಲ್ಲಾ ಗೋಪಾಲನಿಗೆ ಈ ಪ್ರಯತ್ನದಲ್ಲಿ ನೆರವು ನೀಡಬೇಕೆಂದು ಆಜ್ಞೆಯಿತ್ತನು. ಗೋಪಾಲನು ಅವರಿಗೆಲ್ಲಾ "ನೀವು ಪ್ರತಿ ದಿವಸ ಮಾಡುವಂತೆ ಕಳ್ಳನನ್ನು ಹಿಡಿಯಲು ಗುಂಪು ಗುಂಪಾಗಿ ಪ್ರಯತ್ನ ಮಾಡಬೇಡಿ." ಎಂದು ಹೇಳಿ ಯಾರಾರು ಯಾವ ಯಾವ ಸ್ಥಳಗಳಲ್ಲಿ ಗೋಪಾಲನಿಗೆ ಬೇಕಾದ ಹಗ್ಗಗಳು, ಕೋಲುಗಳು, ಬಿಲ್ಲು ಬಾಣಗಳು ಮುಂತಾದ ಆಯುಧಗಳೊಂದಿಗೆ ಇರಬೇಕೆಂದು ಆದೇಶವನ್ನು ಕೊಟ್ಟನು. ಕಳ್ಳನು ಪ್ರತಿ ದಿನ ಅರ್ಧ ರಾತ್ರಿಯ ಮೇಲೆ ಒಂದು ವಿಧವಾದ ಭಯಂಕರ ಶಬ್ದವನ್ನು ಮಾಡುತ್ತ ಒಂದು ಮನೆಯ ಮಾಳಿಗೆಯಿಂದ ಇನ್ನೊಂದು ಮನೆಯ ಮಾಳಿಗೆಗೆ ಅತಿ ವೇಗವಾಗಿ ಹಾರುತ್ತ ಜನರಿಗೆ ನಿದ್ರಾಭಂಗ ಮಾಡುವುದಲ್ಲದೆ ಅವರಿಗೆ ಅತ್ಯಂತ ಭಯವನ್ನುಂಟು ಮಾಡುತ್ತಿದ್ದನು. ಇದು ಪ್ರತಿ ದಿನವೂ ನಡೆಯುತ್ತಿದ್ದುದರಿಂದ ದೂರದಲ್ಲಿ ಕಳ್ಳನ ಧ್ವನಿಯನ್ನು ಕೇಳಿದ ಕೂಡಲೇ ಜನರು ಭಯಪಡುತ್ತಿದ್ದರು. ಕೆಲವರು ಹೆಂಗಸರೂ ಮಕ್ಕಳೂ ಕಿರಿಚಿಕೊಳ್ಳುತ್ತಿದ್ದರು. ರಕ್ಷಕ ಭಟರು ಎಷ್ಟು ಪ್ರಯತ್ನ ಮಾಡಿದರೂ ಅವನನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಅಲ್ಲದೆ ಅವನು ಅಮಾವಾಸ್ಯೆಗೆ ಸ್ವಲ್ಪ ದಿನಗಳು ಮುಂಚಿತವಾಗಿ ಬಂದಿದ್ದರಿಂದ ರಾತ್ರಿ ಅವನು ಬಂದ ಹೊತ್ತಿನಲ್ಲಿ ತಿಂಗಳ ಬೆಳಕಿಲ್ಲದ್ದರಿಂದ ಅವನನ್ನು ಹಿಡಿಯುವುದು ಬಹಳ ಕಷ್ಟವಾಗಿತ್ತು. ಅವನು ಕತ್ತಲಿನಲ್ಲಿ ಚೆನ್ನಾಗಿ ನೋಡುವ ಶಕ್ತಿಯನ್ನುಗಳಿಸಿದ್ದನು. ಆ ದಿನ ಗೋಪಾ

ಲನು ರಕ್ಷಕ ಭಟರ ಮುಖಾಂತರ ರಹಸ್ಯವಾಗಿ ಸಾಧ್ಯವಾದಷ್ಟು ಜನರಿಗೆ ಕಳ್ಳನು ಬಂದರೂ ಹೆದರದೆ ತಾಳ್ಮೆಯಿಂದಿರಬೇಕೆಂದೂ ರಾತ್ರಿಯಾರೂ ಬೀದಿಗಳಿಗೆ ಬರಬಾರದೆಂದೂ ಬೀದಿಗಳಲ್ಲಿ ಜನ ಸಂಚಾರವಿರಬಾರದೆಂದೂ ಇದರಿಂದ ತನಗೆ ಕಳ್ಳನನ್ನು ಹಿಡಿಯಲು ಅನುಕೂಲವಾಗುವುದೆಂದೂ ಹೇಳಿಸಿದ.

ಗೋಪಾಲನು ರಾತ್ರಿ ಅಲ್ಪಾಹಾರವನ್ನು ತೆಗೆದುಕೊಂಡು ಮುಂಚಿತವಾಗಿಯೇ ಕೋಟೆಯಿಂದ ಪಟ್ಟಣಕ್ಕೆ ಬಂದು ಅಲ್ಲಿ ಎತ್ತರವಾದ ಮನೆಗಳನ್ನು ಹತ್ತಿ ಪಟ್ಟಣದಲ್ಲೆಲ್ಲಾ ಮಾಳಿಗೆಗಳ ನಿಮ್ನೋನ್ನತಗಳು ಹೇಗಿದೆಯೆಂಬುದನ್ನೂ ಸಂದಿಗಳ ಅಗಲಗಳು ಎಲ್ಲೆಲ್ಲಿ ಎಷ್ಟೆಷ್ಟಿವೆಯೆಂಬುದನ್ನೂ ಸೂಕ್ಷ್ಮವಾಗಿ ಗಮನಿಸಿದ. ಅಲ್ಲದೆ ಬೀದಿಗಳೂ ಸಂದಿಗಳೂ ಎಲ್ಲೆಲ್ಲಿ ಹೇಗೆ ಹೇಗೆ ಇವೆಯೆಂದೂ ಗಮನಿಸಿದ. ಕೊನೆಗೆ ಒಂದು ಎತ್ತರವಾದ ಮನೆಯ ಮಾಳಿಗೆಯ ಮೇಲೆ ಒಂದು ಬುಟ್ಟಿಯನ್ನು ಮುಚ್ಚಿಕೊಂಡು ಕುಳಿತು ಕಳ್ಳನ ಆಗಮನವನ್ನು ಪ್ರತೀಕ್ಷಿಸುತ್ತಿದ್ದ.

ಅರ್ಧರಾತ್ರಿಯಾದ ಮೇಲೆ ಕಳ್ಳನ ಭಯಂಕರವಾದ ಕೂಗು ದೂರದಲ್ಲಿ ಉತ್ತರ ದಿಕ್ಕಿನ ಮನೆಗಳ ಮಾಳಿಗೆಗಳ ಮೇಲೆ ಕೇಳಿಸಿತು. ಕಳ್ಳನು ಒಂದು ಮನೆಯ ಮಾಳಿಗೆಯಿಂದ ಇನ್ನೊಂದು ಮನೆಯ ಮಾಳಿಗೆಗೆ ಹಾರುತ್ತಿರುವುದನ್ನೂ ಗೋಪಾಲನು ದೂರದಿಂದ ಗಮನಿಸಿದ. ಮನುಷ್ಯನು ಹೀಗೆ ಹಾರುವುದಕ್ಕೆ ಹೇಗೆ ಸಾಧ್ಯವೆಂಬುದು ಗೋಪಾಲನಿಗೆ ಅರಿವಾಗದೆ ಆತನು ಬಹಳ ಆಶ್ಚರ್ಯಪಟ್ಟ. ಗೋಪಾಲನು ಆತುರ ಪಡದೆ ಕಳ್ಳನ ಆಟವನ್ನು ಸ್ವಲ್ಪ ಹೊತ್ತು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದ. ದೂರಕ್ಕೆ ಅವನ ಮನುಷ್ಯಾಕಾರವೂ ಸರಿಯಾಗಿ ಕಾಣಿಸುತ್ತಿರಲಿಲ್ಲ. ಒಂದು ಎತ್ತರವಾದ ಬಿಲ್ಲಿಗೆ ಏನೋ ಒಂದು ಕಪ್ಪು ಗೊಂಬೆಯನ್ನು ಕಟ್ಟಿದ ಹಾಗೆಯೂ ಆ ಗೊಂಬೆಯೂ ಆ ಬಿಲ್ಲೂ ಒಂದು ಮಾಳಿಗೆಯಿಂದ ಇನ್ನೊಂದು ಮಾಳಿಗೆಯ ಮೇಲಕ್ಕೆ ಅತಿ ವೇಗವಾಗಿ ಹಾರುತ್ತಿದ್ದಂತೆಯೂ ಕಾಣಿಸಿತು. ಆ ಕಳ್ಳನು ಜನರಾರೂ ಹೆದರಿಕೆರಚಿಕೊಂಡು ಬೀದಿಗಳಲ್ಲಿ ಓಡದಿರುವುದರಿಂದ ಅವರನ್ನು ಹಾಗೆ ಮಾಡಿಸಬೇಕೆಂದುಉತ್ತರ ದಿಕ್ಕಿನಿಂದ ದಕ್ಷಿಣ ದಿಕ್ಕಿನವರೆಗೂ ಮಾಳಿಗೆಗಳ ಮೇಲೆ ಹಾರಿಕೊಳ್ಳುತ್ತಾ ಕೂಗುತ್ತ ಬಂದ. ಸ್ವಲ್ಪ ಹತ್ತಿರಕ್ಕೆ ಬರುವ ವೇಳೆಗೆ ಅವನಿಗೆ ಕಾಣಿಸಿಕೊಳ್ಳಬಾರದೆಂದು ಗೋಪಾಲನು ಬುಟ್ಟಿಯನ್ನು ಮುಚ್ಚಿಕೊಂಡು ಅದರಲ್ಲಿನ ರಂಧ್ರಗಳಿಂದ ಅವ

ನನ್ನು ನೋಡುತ್ತಿದ್ದ. ಕಳ್ಳನು ಬಹು ವೇಗವಾಗಿ ಮಾಳಿಗೆಗಳ ಮೇಲೆ ಹಾರುತ್ತ ಗೋಪಾಲನ ಸಮೀಪದಲ್ಲಿಯೇ ಹಾರಿ ಹೋದ. ಗೋಪಾಲನು ಅವನ ಸ್ವರೂಪವನ್ನು ಚೆನ್ನಾಗಿ ನೋಡಿಕೊಂಡ. ತಿಂಗಳ ಬೆಳಕಿನ್ನೂ ಇತ್ತು. ಅವನು ಬೇರೆ ಮುಖವಾಗಿ ಹೋದ ಕೂಡಲೇ ಗೋಪಾಲನು ಸದ್ದಿಲ್ಲದೆ ಕೆಳಕ್ಕಿಳಿದು ಅಲ್ಲಿ ಬಚ್ಚಿಟ್ಟುಕೊಂಡಿದ್ದ ರಕ್ಷಕ ಭಟನಿಗೆ "ನೀನು ರಹಸ್ಯವಾಗಿ ಹೋಗಿ ರಾಮ ದೇವಸ್ಥಾನದ ಬೀದಿಯಲ್ಲಿ ಮನೆಗಳಿಂದ ಕೆಲವರು ಗಂಡಸರನ್ನೂ ಹೆಂಗಸರನ್ನೂ ಮಕ್ಕಳನ್ನೂ ಕಳ್ಳನು ಆ ಬೀದಿಯನ್ನು ಸಮೀಪಿಸಿ ಕೂಗಿದ ಕೂಡಲೇ ಭಯ ಪಟ್ಟವರಂತೆ ಹೊರಗೆ ಬಂದು ಆ ಬೀದಿಯಲ್ಲೇ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಮತ್ತು ಅಲ್ಲಿಂದ ಹಿಂದಕ್ಕೆ ಕಳ್ಳನು ಅಟ್ಟಿಸಿದಂತೆಲ್ಲಾ ಕೂಗಿಕೊಳ್ಳುತ್ತ ಓಡುವ ಹಾಗೆ ಅವರಿಗೆ ಹೇಳಿ ಮಾಡಿಸು ಎಂದು ಹೇಳಿದನು. ಅವನು ಹಾಗೆ ಮಾಡಲು ಹೊರಟು ಹೋದನು. ಕೂಡಲೇ ಗೋಪಾಲನು ಮಾಳಿಗೆಯಿಂದಿಳಿದು, ಕಳ್ಳನು ಆ ಪ್ರಾಂತಕ್ಕೆ ಬಂದ ಕೂಡಲೇ ಭಯ ಪಟ್ಟವನಂತೆ ಬೀದಿಯಲ್ಲಿ ಕಿರಿಚಿಕೊಳ್ಳುತ್ತಾ ಓಡಲಾರಂಭಿಸಿದನು. ಕಳ್ಳನಿಗೆ ಇದೇ ಮೊದಲ ಬಾರಿಗೆ ಕಿರಿಚಿಕೊಂಡು ಓಡಿಹೋಗುವವನು ಸಿಕ್ಕಿದುದರಿಂದ ಅವನು ಕುತೂಹಲದಿಂದ ಅವನನ್ನು ಇನ್ನಷ್ಟು ಹೆದರಿಸಬೇಕೆಂದು ಮಾಳಿಗೆಗಳ ಮೇಲೆ ಹಾರುತ್ತ ಅವನನ್ನೇ ಅಟ್ಟಿಸಿಕೊಂಡು ಹೋದನು. ಗೋಪಾಲನು ಹೀಗೆ ನಟಿಸುತ್ತ ರಾಮ ದೇವಸ್ಥಾನದ ಬೀದಿಯನ್ನು ತಲುಪಿದನು. ಅಲ್ಲಿ ಕೆಲವರು ಪೌರರೂ, ಹೆಂಗಸರೂ ಮಕ್ಕಳೂ ಗೋಪಾಲನು ಹೇಳಿ ಕಳುಹಿಸಿದಂತೆ ಬೀದಿಗೆ ಬಂದು ಕಿರುಚಿಕೊಳ್ಳುತ್ತಾ ಓಡಲಾರಂಭಿಸಿದರು. ಕಳ್ಳನ ಕುತೂಹಲ ಕೆರಳಿತು. ಅವನು ಅದೇ ಬೀದಿಯಲ್ಲೇ ಜನರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಟ್ಟಿಸಿಕೊಂಡು ಹೋಗಲಾರಂಭಿಸಿದ. ಅಷ್ಟರೊಳಗೆ ಗೋಪಾಲನು ಒಂದು ಎತ್ತರವಾದ ಮಾಳಿಗೆಯ ಮೇಲೆ ಉದ್ದವಾದ ಒಂದು ಹಗ್ಗಕ್ಕೆ ದೊಡ್ಡ ಕುಣಿಕೆ ಹಾಕಿ ಅದನ್ನಿಟ್ಟುಕೊಂಡು ಕಳ್ಳನ ಕಣ್ಣಿಗೆ ಬೀಳದಂತೆ ಕುಳಿತು ಕಳ್ಳನನ್ನು ಹಿಡಿಯಲು ಹೊಂಚುಹಾಕಿದ್ದ. ಕಳ್ಳನಿಗೆ ಇದರ ಅರಿವೇ ಇರಲಿಲ್ಲ. ಪ್ರತಿನಿತ್ಯದಂತೆ ಆತನನ್ನು ಹಿಡಿಯಲು ರಕ್ಷಕ ಭಟರು ಮಾಡುತ್ತಿದ್ದ ಪ್ರಯತ್ನವೂ ಅಂದು ಇಲ್ಲದಿರುವುದರಿಂದ ಕಳ್ಳನು ತನ್ನ ಚೇಷ್ಟೆಗಳನ್ನು ಸ್ವೇಚ್ಛೆಯಿಂದ ಮಾಡುತ್ತ ತನ್ನ ರಕ್ಷಣೆಯಲ್ಲಿ ಮೈಮರೆತಿದ್ದನು. ಇದನ್ನರಿತ ಗೋಪಾಲನು

ಸಮಯ ನೋಡಿ ಕಳ್ಳನು ತಾನು ಹೊಂಚಿ ಕೂತಿದ್ದ ಮಾಳಿಗೆಯ ಮೇಲೆ ಬಂದ ಕೂಡಲೇ ಗುರಿಯಿಟ್ಟು ಹಗ್ಗವನ್ನು ಬೀಸಿ ಕಳ್ಳನನ್ನು ಅದರ ಕುಣಿಕೆಗೆ ಸಿಕ್ಕಿಸಿ ಹಗ್ಗವನ್ನು ಬಲವಾಗಿ ಎಳೆದು ಕೈಯಿಂದ ಹಿಡಿದುಕೊಂಡನು. ತಪ್ಪಿಸಿಕೊಳ್ಳಲು ಕಳ್ಳನು ಏನೇನು ಮಾಡಿದರೂ ಸಾಧ್ಯವಾಗಲಿಲ್ಲ. ಗೋಪಾಲನು ಕಳ್ಳನ ಕೈಕಾಲುಗಳನ್ನು ಹಗ್ಗದಿಂದ ಕಟ್ಟಿ ಆತನನ್ನೂ, ಆತನಿಗಿಂತ ದೊಡ್ಡದಾಗಿದ್ದ ಬಿಲ್ಲನ್ನೂ ಹೊತ್ತುಕೊಂಡು ತನ್ನ ಮನೆಗೆ ಹೊರಟನು. ಕಳ್ಳನು ತಾನು ಕಳ್ಳನಲ್ಲನೆಂದೂ, ಯಾರ ಮನೆಯಲ್ಲಿಯೂ ಕಳ್ಳತನ ಮಾಡಲಿಲ್ಲನೆಂದೂ ತಾನು ಹೀಗೆ ಮಾಡುತ್ತಿರುವುದಕ್ಕೆ ಕಾರಣವನ್ನು ಏಕಾಂತವಾಗಿ ತಿಳಿಸುವುದಾಗಿಯೂ ನಿರ್ಭಯವಾಗಿ ಹೇಳಿದನು. ಇದರಿಂದ ಅವನ ಸ್ವಭಾವವನ್ನು ಗೋಪಾಲನು ಅರಿತು ಅವನನ್ನು ರಕ್ಷಕ ಭಟರಿಗೊಪ್ಪಿಸದೆ ತನ್ನ ಮನೆಗೆ ಹೊತ್ತುಕೊಂಡು ಹೋದನು. ಮರುದಿನ ಬೆಳಿಗ್ಗೆ ಅವನನ್ನು ತಂದು ರಾಜನ ಮುಂದೆ ಒಪ್ಪಿಸುವುದಾಗಿ ರಕ್ಷಕ ಭಟರಿಗೆ ಮಾತು ಕೊಟ್ಟನು.

ಕಳ್ಳನು ನಿಜವಾಗಿಯೂ ಕಳ್ಳನಾಗಿರಲಿಲ್ಲ. ಆತನು ದೂರ ದೇಶದಿಂದ ಬಂದಿದ್ದನು. ಆತನು ಸುಮಾರು ನಾಲ್ಕಡಿ ಎತ್ತರದವನಾಗಿದ್ದು ತೆಳುವಾಗಿಯೂ ಬಹಳ ಹಗುರವಾಗಿಯೂ ಇದ್ದನು. ಆದರೆ ಆತನಿಗೆ ಅಮಿತವಾದ ದೇಹಶಕ್ತಿ ಇತ್ತು. ಆತನು ಒಂದು ದೊಡ್ಡ ಬಿಲ್ಲನ್ನು ತನ್ನ ಅಪಾರ ದೇಹ ಶಕ್ತಿಯಿಂದ ಬಾಗಿಸಿ ಸಡಿಲ ಬಿಟ್ಟಾಗ ಬರುವ ಪುಟ ನೆಗೆಯುವ ಶಕ್ತಿಯನ್ನು ತನ್ನ ದೇಹದಲ್ಲಿನ ಹಾರುವ ಶಕ್ತಿಗೆ ನೆರವಾಗಿ ಮಾಡಿಕೊಂಡು ಬಿಲ್ಲಿನ ಸಮೇತ ಒಂದು ಮಾಳಿಗೆಯಿಂದ ಇನ್ನೊಂದು ಮಾಳಿಗೆಗೆ ನೆಗೆಯುವ ಶಕ್ತಿಯನ್ನೂ, ಅಭ್ಯಾಸವನ್ನೂ ಪಡೆದಿದ್ದನು. ಅಲ್ಲದೆ ಜನರಿಗೆ ಭೀತಿ ಉಂಟಾಗುವಂತೆ ಚಿತ್ರವಿಚಿತ್ರವಾಗಿ ಕೂಗುವುದನ್ನೂ ಅಭ್ಯಾಸ ಮಾಡಿದ್ದನು. ಆತನ ಹೆಸರು ಛಲಚ್ಛಲ.

ಗೋಪಾಲನು ಛಲಚ್ಛಲನೊಂದಿಗೆ ಬಹಳ ಹೊತ್ತು ಮಾತಾಡುತ್ತ, ಆತನು ಒಳ್ಳೆಯವನೆಂದೂ, ಎಲ್ಲಿಯೂ ಕಳ್ಳತನ ಮಾಡಿಲ್ಲವೆಂದೂ ಘನಗಿರಿಯ ಮಹಾರಾಜನು ಸಾಹಸ ಪ್ರಿಯನಾಗಿದ್ದುದರಿಂದ ಆತನಿಗೆ ತನ್ನ ಸಾಹಸವನ್ನು ತೋರಿಸಿ ಬಹುಮಾನ ಪಡೆಯಲು ಬಂದಿರುವನೆಂದೂ ಅರಿತನು. ಆದರೂ ಗೋಪಾಲನು ಪೌರರನ್ನು ವಿಚಾರಿಸಿ ಮಹಾರಾಜನು ಯಾರ ಮನೆಯಲ್ಲಿಯೂ ಕಳುವಾಗಿಲ್ಲವೆಂದು ತೀರ್ಮಾನಿಸುವವರೆಗೂ ಛಲಚ್ಛಲನನ್ನು ಬಂಧನದಿಂದ

ಬಿಡುಗಡೆ ಮಾಡುವುದಿಲ್ಲವೆಂದು ಹೇಳಿದನು. ಛಲಚ್ಛಲನು ಬಿಡುಗಡೆಗಾಗಿ ಅವನನ್ನು ಪುನಃ ಕೇಳಲೇ ಇಲ್ಲ.

ಮಾರನೆಯ ದಿನ ಬೆಳಗಾದ ಕೂಡಲೇ ಗೋಪಾಲನ ಮನೆಗೆ ಮೊದಲು ಬಂದವಳು ಭಾಗ್ಯಲಕ್ಷ್ಮಿ. ರಾತ್ರಿಯೇ ಅವಳು ಗೋಪಾಲನು ಕಳ್ಳನನ್ನು ಹಿಡಿದ ವಿಷಯವನ್ನು ರಕ್ಷಕ ಭಟರನ್ನು ಕೇಳಿ ತಿಳಿದುಕೊಂಡಿದ್ದಳು. ಅವಳು ಬಂದು ಗೋಪಾಲನನ್ನು ಆತನ ತಾಯಿಯ ಮುಂದೆ ಬಹಳವಾಗಿ ಕೊಂಡಾಡಿದಳು. ಅನಂತರವೇ ಪಟ್ಟಣದ ಮೂಲೆ ಮೂಲೆಗಳಿಂದ ಕಳ್ಳನನ್ನು ನೋಡಬೇಕೆಂದು ಗುಂಪು ಗುಂಪಾಗಿ ಜನರು ಬಂದರು. ಗೋಪಾಲನು ಎಲ್ಲರಿಗೂ ರಾಜಸಭೆಯ ಸಮೀಪದಲ್ಲಿ ಪೌರರು ನೆರೆದಿರುವುದಕ್ಕೆ ಏರ್ಪಾಟು ಮಾಡಿದ್ದ ಪ್ರದೇಶದಲ್ಲಿರಬೇಕೆಂದೂ, ತಾನು ಜಾಗ್ರತೆಯಾಗಿ ಕಳ್ಳನನ್ನು ಅಲ್ಲಿಗೆ ತಂದು ಎಲ್ಲರಿಗೂ ತೋರಿಸುವುದಾಗಿಯೂ ಹೇಳಿ ಅವರನ್ನು ಕಳುಹಿಸಿಕೊಟ್ಟನು. ರಾಮಕ್ಕನು ಭಾಗ್ಯಲಕ್ಷ್ಮಿಗೂ ಛಲಚ್ಛಲನಿಗೂ ಗೋಪಾಲನಿಗೂ ಉಪಹಾರವನ್ನು ಕೊಟ್ಟು ಉಪಚರಿಸಿದಳು. ಭಾಗ್ಯಲಕ್ಷ್ಮಿಯು ಛಲಚ್ಛಲನೊಂದಿಗೆ ಮಾತಾಡಿ ಎಲ್ಲ ವಿಷಯವನ್ನೂ ತಿಳಿದುಕೊಂಡಳು. ಆತನ ಸಾಹಸವನ್ನು ಮೆಚ್ಚಿಕೊಂಡಳು. ಆತನಿಗೂ ಗೋಪಾಲನಿಗೂ ಮಹಾರಾಜರಿಂದ ಒಳ್ಳೆಯ ಬಹುಮಾನಗಳು ಲಭಿಸುವವೆಂದೂ ಹೇಳಿದಳು. ಗೋಪಾಲನಿಗೆ ಮಹಾರಾಜರ ಮೆಚ್ಚಿಗೆಯಿಂದ ಉನ್ನತ ಪದವಿಗಳು ಸಿಗುವುದಕ್ಕೆ ಭಗವಂತನು ದಾರಿ ತೋರಿಸಿದನೆಂದೂ ಸಂತೋಷದಿಂದ ಹೇಳಿದಳು.

## ೧೮

ಅನಂತರ ಗೋಪಾಲನು ಛಲಚ್ಛಲನನ್ನು ಒಂದು ಕುದುರೆಯ ಗಾಡಿಯಲ್ಲಿ ಕುಳ್ಳಿರಿಸಿಕೊಂಡು ರಾಜಭವನದ ಕಡೆಗೆ ತೆರಳಿದನು. ಛಲಚ್ಛಲನು ಜನರ ಕಣ್ಣಿಗೆ ಬಿದ್ದರೆ ಜನರೆಲ್ಲರೂ ಗುಂಪು ಗುಂಪಾಗಿ ನೋಡಲು ಬರುವರೆಂದು ಊಹಿಸಿ ಗಾಡಿಯ ಮುಂಭಾಗದಲ್ಲೂ, ಹಿಂಭಾಗದಲ್ಲೂ ಬಟ್ಟೆಗಳನ್ನು ಅಡ್ಡವಾಗಿ ಕಟ್ಟಿದ್ದನು. ಗೋಪಾಲನು ನಿರ್ದೇಶಿಸಿದಂತೆ ಜನರೆಲ್ಲರೂ ರಾಜಭವನದ ಹೊರಗೆ

ನೆರೆದರು. ಗಾಡಿಯನ್ನು ಅಲ್ಲಿಗೆ ತಂದು ನಿಲ್ಲಿಸಲಾಯಿತು. ಗೋಪಾಲನು ಗಾಡಿಯಿಂದಿಳಿದು ಛಲಚ್ಛಲನನ್ನು ಹೆಗಲ ಮೇಲೆ ಏರಿಸಿಕೊಂಡು ಒಂದು ಎತ್ತರವಾದ ಮಂಟಪದ ಮೇಲೆ ಹತ್ತಿ ಎಲ್ಲರಿಗೂ ಕಾಣುವಂತೆ ನಿಂತುಕೊಂಡನು. ಛಲಚ್ಛಲನು ಕೈಯಲ್ಲಿ ಬಿಲ್ಲನ್ನು ಹಿಡಿದುಕೊಂಡಿದ್ದನು. ಅವನು ನಾನಾ ರೀತಿಯ ಕಪಿ ಚೇಷ್ಟೆಗಳನ್ನು ಮಾಡುತ್ತ ತನ್ನ ಸ್ವರೂಪವನ್ನು ನೋಡಿ ಆಶ್ಚರ್ಯ ಪಟ್ಟಿದ್ದ ಜನರಿಗೆ ಆಹ್ಲಾದವನ್ನುಂಟು ಮಾಡಿದನು. ಹಠಾತ್ತಾಗಿ ಅವನು ಗೋಪಾಲನ ಹೆಗಲ ಮೇಲಿನಿಂದ ಚೆಂಡು ಪುಟ ನೆಗೆಯುವಂತೆ ಮೇಲಕ್ಕೆ ಹಾರಿ ಭಯಂಕರವಾದ ಧ್ವನಿ ಮಾಡಿ ಗೋಪಾಲನ ಹೆಗಲ ಮೇಲೆ ಬಿದ್ದು ಮೊದಲಿನಂತೆಯೇ ಕುಳಿತನು. ಇದರಿಂದ ಜನರು ಗಾಬರಿಯನ್ನೂ, ಆಶ್ಚರ್ಯವನ್ನೂ ಹೊಂದಿದರು. ಒಬ್ಬರು ಇನ್ನೊಬ್ಬರ ಮುಖವನ್ನು ನೋಡಿ ಆಶ್ಚರ್ಯವನ್ನು ವ್ಯಕ್ತಪಡಿಸಿದರು. ಛಲಚ್ಛಲನ ಅದ್ಭುತ ಕ್ರಿಯೆಗಳನ್ನೂ ಗೋಪಾಲನ ಶಕ್ತಿ ಸಾಮರ್ಥ್ಯಗಳನ್ನೂ ಒಬ್ಬರಿಗೊಬ್ಬರು ಹೇಳಿಕೊಂಡರು; ಆ ವೇಳೆಗೆ ವೀರ ತರುಣಿಯರೂ, ಭಾಗ್ಯಲಕ್ಷ್ಮಿಯೂ ಕುದುರೆಗಳ ಮೇಲೆ ಅಲ್ಲಿಗೆ ಬಂದರು. ಭಾಗ್ಯಲಕ್ಷ್ಮಿಯು ಮಂಟಪದ ಮೇಲೆ ನಿಂತು ಜನರನ್ನಾಕರ್ಷಿಸುತ್ತಿದ್ದ ಗೋಪಾಲನ ವೀರ ಮೂರ್ತಿಯನ್ನು ಕಂಡು ಆವೇಶ ಪರವಶಳಾಗಿ "ಕಳ್ಳನನ್ನು ಹಿಡಿದ ಗೋಪಾಲನಿಗೆ ಜಯವಾಗಲಿ" ಎಂದು ಕೈ ಬೀಸುತ್ತ ಕೂಗಿದಳು. ವೀರ ತರುಣಿಯರು ಅವಳನ್ನನುಕರಿಸಿದರು. ಜನರೆಲ್ಲರೂ "ಗೋಪಾಲನಿಗೆ ಜಯವಾಗಲಿ" ಎಂದು ಒಕ್ಕೊರಲಿನಿಂದ ಘೋಷಿಸಿದರು.

ಮಹಾರಾಜರು ಆಸ್ಥಾನಕ್ಕೆ ಬರುವುದನ್ನು ಸೂಚಿಸುವ ತುತ್ತೂರಿಯ ಧ್ವನಿ ಕೇಳಿ ಬಂದ ಕೂಡಲೇ ಜನರಲ್ಲಿ ನಿಶ್ಯಬ್ದತೆ ಮೂಡಿತು. ಗೋಪಾಲನು ಕೂಡಲೇ ಮಂಟಪದಿಂದಿಳಿದು ಛಲಚ್ಛಲನ ಕೈಗಳನ್ನು ಹಗ್ಗದಿಂದ ಕಟ್ಟಿ ಹಗ್ಗವನ್ನು ಹಿಡಿದು ಅವನೊಂದಿಗೆ ರಾಜನ ಆಸ್ಥಾನವನ್ನು ಪ್ರವೇಶಿಸಿದನು. ಪಟ್ಟಣದ ಮುಖ್ಯ ರಕ್ಷಕನು ಗೋಪಾಲನಿಂದ ನಡೆದ ವಿಷಯವನ್ನೆಲ್ಲಾ ತಿಳಿದುಕೊಂಡನು. ಮಹಾರಾಜನು ಸ್ತೋತ್ರ ಪಾಠಗಳು ಮುಗಿದ ಕೂಡಲೇ ಕಳ್ಳನ ವಿಚಾರಣೆಯನ್ನು ಆರಂಭಿಸಬೇಕೆಂದು ಒಬ್ಬ ಮಂತ್ರಿಗೆ ಆಜ್ಞೆಯಿತ್ತನು. ಗೋಪಾಲನು ಛಲಚ್ಛಲನನ್ನು ಹಿಡಿದು ತಂದು ಅಪಾದಿತರು ನಿಲ್ಲಬೇಕಾದ ಸ್ಥಳದಲ್ಲಿ ನಿಲ್ಲಿಸಿದನು. ಛಲಚ್ಛಲನು ವಿನಯದಿಂದ ಮಹಾರಾಜರಿಗೆ ನಮಸ್ಕರಿಸಿ

ದನು. ಮಂತ್ರಿಯು ತನ್ನ ಮೇಲೆ ಆರೋಪಿಸಿದ ಕಳ್ಳತನದ ಅಪಾದನೆಗೆ ಪ್ರತ್ಯುತ್ತರವಾಗಿ ಅವನು ವಿನಯದಿಂದ ತನ್ನ ಹೆಸರನ್ನೂ ಇತರ ವಿಷಯಗಳನ್ನೂ ಹೇಳಿ, ತಾನು ಕಳ್ಳತನವನ್ನು ಮಾಡಲಿಲ್ಲವೆಂದೂ, ಮಹಾರಾಜನ ಸಾಹಸ ಪ್ರಿಯತೆಯು ತಾನಿದ್ದ ದೂರ ದೇಶದವರೆಗೂ ಹರಡಿ ಆ ದೇಶದ ಜನರೆಲ್ಲರೂ ಅವನ್ನು ಕೊಂಡಾಡುತ್ತಿರುವುದನ್ನು ನೋಡಿ ತಾನು ಸಾಹಸಿಯಾದ್ದರಿಂದ ತನ್ನ ಶಕ್ತಿ ಸಾಮರ್ಥ್ಯಗಳನ್ನು ಮಹಾರಾಜರಿಗೆ ತೋರಿಸಿ ಬಹುಮಾನವನ್ನು ಪಡೆಯ ಬೇಕೆಂದು ಬಂದಿರುವುದಾಗಿಯೂ, ತನ್ನ ಶಕ್ತಿ ಸಾಮರ್ಥ್ಯಗಳನ್ನು ಅದ್ಭುತ ವಾದ ರೀತಿಯಲ್ಲಿ ಮಹಾರಾಜರಿಗೆ ವ್ಯಕ್ತ ಮಾಡುವ ಆಸೆಯಿಂದ ರಾತ್ರಿಯಲ್ಲಿ ಮಾಳಿಗೆಯಿಂದ ಮಾಳಿಗೆಗೆ ಹಾರುತ್ತ ಭಯಂಕರ ಧ್ವನಿಯನ್ನು ಮಾಡುತ್ತಾ ಪುರ ರಕ್ಷಕರಿಗೆ ಸಿಕ್ಕದೆ ಅವರನ್ನು ಕಾಡಿಸಿದುದಾಗಿಯೂ ವಿವರಿಸಿದನು. ಅದರೆ ಗೋಪಾಲನಂತಹ ಶಕ್ತಿ ಕುಶಲತೆಗಳುಳ್ಳ ಧೀರನಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲವೆಂದೂ, ತಾನು ಯಾವ ಕಳ್ಳತನವನ್ನೂ ಮಾಡಲಿಲ್ಲವೆಂಬುದು ಮಹಾರಾಜರ ಗಮನಕ್ಕೆ ಬಂದರೆ ಅವರು ತನ್ನ ಶಕ್ತಿ ಸಾಮರ್ಥ್ಯಗಳನ್ನು ಪರೀ ಕ್ಷಿಸಿ ತಕ್ಕ ಬಹುಮಾನವನ್ನು ಕೊಡುವರೆಂಬ ಆಸೆ ತನಗಿದೆಯೆಂದೂ ಛಲಚ್ಛಲ ಹೇಳಿದನು. ಮಂತ್ರಿಯು, ಈತನು ಯಾರ ಮಾಲನ್ನಾಗಲೀ ಕಳವು ಮಾಡಿರುವುದಾದರೆ ತಕ್ಷಣ ಮುಂದೆ ಬಂದು ಹೇಳಬೇಕೆಂದು ಆಸ್ಥಾನದಲ್ಲಿ ಮತ್ತು ಹೊರಗಡೆ ನೆರೆದಿದ್ದ ಪೌರರಿಗೆಲ್ಲಾ ಘೋಷಿಸಿದನು. ಮಹಾರಾಜನೂ, ಇತರ ಮಂತ್ರಿಗಳೂ ಛಲಚ್ಛಲನ ಮುಖ ಭಂಗಿಯನ್ನೂ, ಚೇಷ್ಟೆಗಳನ್ನೂ ಸೂಕ್ಷ್ಮ ದೃಷ್ಟಿಯಿಂದ ನೋಡುತ್ತಿದ್ದರು. ಅವರಿಗೆ ಆತನಲ್ಲಿ ದುಷ್ಟತನದ ಅಥವಾ ಅಪರಾಧದ ಸೂಚನೆಗಳು ಕಂಡುಬರಲಿಲ್ಲ. ಕಳ್ಳತನವಾಗಿದೆಯೆಂದು ಹೇಳಲು ಪೌರರಲ್ಲಿ ಯಾರೂ ಮುಂದೆ ಬರಲಿಲ್ಲ. ಸ್ವಲ್ಪ ಹೊತ್ತು ಕಾದು ಮಂತ್ರಿಯು ಪುನಃ ಪೌರರನ್ನು ಕೇಳಿದನು. ಪೌರರೆಲ್ಲರೂ ಯಾರ ಮನೆಯಲ್ಲೂ ಕಳುವಾಗಿಲ್ಲವೆಂದೂ, ಬಂದವನು ಕಳ್ಳನಲ್ಲವೆಂದೂ ಸ್ಪಷ್ಟವಾಗಿ ಹೇಳಿದರು. ಮಂತ್ರಿಯು ಗೋಪಾಲನ ಅಭಿಪ್ರಾಯವನ್ನು ಕೇಳಿದನು. ಆತನು ಜನರ ಅಭಿಪ್ರಾಯವನ್ನು ಅನುಮೋದಿಸಿದನು. ಮಂತ್ರಿಯು ಕಳ್ಳತನದ ಆಪಾದನೆ ರುಜುವಾಗಲಿಲ್ಲವೆಂದು ಮಹಾರಾಜನಿಗೆ ಅರಿಕೆ ಮಾಡಿ, ಧರ್ಮ ಪ್ರಭುಗಳು ತೀರ್ಮಾನ ಕೊಡಬೇಕೆಂದು ಪ್ರಾರ್ಥಿಸಿದನು. ಮಹಾರಾಜನು ಉದಾರಿ

ಆಗಿದ್ದುದರಿಂದ, ಅಪರಾಧಿತನು ತಪ್ಪು ಮಾಡಲಿಲ್ಲವೆಂದು ತನ್ನ ತೀರ್ಮಾನವನ್ನು ಹೇಳಿ, ದೂರ ದೇಶದಲ್ಲಿ ತನ್ನ ಕೀರ್ತಿಯನ್ನು ಕೇಳಿ ಬಹುಮಾನದ ಆಸೆಯಿಂದ ಬಂದಿರುವ ಆತನನ್ನು ತಾನು ಸ್ಪರ್ಧೆಯಲ್ಲಿ ಪರೀಕ್ಷಿಸಿ ಉಚಿತ ಬಹುಮಾನವನ್ನು ಕೊಡುವುದಾಗಿ ಹೇಳಿದನು. ಮಾರನೆಯ ದಿನ ಸ್ಪರ್ಧೆಯನ್ನು ಏರ್ಪಾಡು ಮಾಡಬೇಕೆಂದು ಆಜ್ಞಾಪಿಸಿದನು. ಛಲಚ್ಛಲನು ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತ, ಮಹಾರಾಜನನ್ನು ಹೊಗಳುವ ಗೀತೆಯೊಂದನ್ನು ತನ್ನ ರಮ್ಯ ಕಂಠದಿಂದ ಒಳ್ಳೆಯ ರಾಗದಲ್ಲಿ ಹಾಡಿದನು. ಅದನ್ನು ಕೇಳಿ ಮಹಾರಾಜನು ಸಂತೋಷಪಟ್ಟನು. ಅದರ ಸಾಹಿತ್ಯವೂ ಆತನಿಗೆ ರಮ್ಯವಾಗಿತ್ತು. ಆತನು ತನ್ನ ಪಟ್ಟಣದವರು ಈ ಗೀತೆಯನ್ನು ಕಲಿತುಕೊಂಡು ಹಾಡಬಹುದೆಂದೂ ಸೂಚಿಸಿದನು. ಛಲಚ್ಛಲನ ಗೀತರಚನಾ ಶಕ್ತಿಯು, ಗಾನ ಕಲೆಯೂ ಜನರನ್ನು ಅಚ್ಚರಿಗೊಳಿಸಿದವು. ಮಹಾರಾಜನು ತನಗೆ ಪ್ರಿಯನಾಗಿ ಯಾವಾಗಲೂ ತನ್ನ ಸೇವೆಯನ್ನು ಮಾಡುತ್ತಿರುವ ಗೋಪಾಲನು ಛಲಚ್ಛಲನನ್ನು ಹಿಡಿಯುವಷ್ಟು ಶಕ್ತನಾಗಿರುವುದನ್ನು ನೋಡಿ ತನಗೆ ಬಹಳ ಸಂತೋಷವಾಗಿದೆಯೆಂದೂ, ಸ್ಪರ್ಧೆಯನಂತರ ಛಲಚ್ಛಲನಿಗೂ ಗೋಪಾಲನಿಗೂ ಒಟ್ಟಿಗೆ ತಕ್ಕ ಬಹುಮಾನಗಳನ್ನು ಕೊಡಲಾಗುವುದೆಂದೂ ಹೇಳಿ, ಛಲಚ್ಛಲನನ್ನೂ ಗೋಪಾಲನನ್ನೂ ನೆರೆದ ಜನರನ್ನೂ ಕಳುಹಿಸಿಕೊಟ್ಟನು.

ಆ ದಿನ ಮಧ್ಯಾಹ್ನವೇ ಭಾಗ್ಯಲಕ್ಷ್ಮಿಯು ಗೋಪಾಲನ ಮನೆಗೆ ಬಂದು ಛಲಚ್ಛಲನು ಆಸ್ಥಾನದಲ್ಲಿ ಹಾಡಿದ ಗೀತೆಯನ್ನು ಅವನಿಂದಲೇ ಪುನಃ ಹಾಡಿಸಿ ಕೇಳಿದಳು. ಅದನ್ನು ಕೇಳುತ್ತಿರುವಾಗ ಭಾಗ್ಯಲಕ್ಷ್ಮಿಯ ಮನಸ್ಸಿನಲ್ಲಿ ಒಂದು ಊಹೆ ಬಂತು. ಈ ಗೀತೆಯನ್ನು ವೀರ ತರುಣಿಯರ ತಂಡದಿಂದ ಮಹಾರಾಜನ ಎದುರಿಗೆ ಹಾಡಿಸಬೇಕೆಂದು. ಅದಕ್ಕೆ ಅವಕಾಶವೆಲ್ಲಿ ಎಂದು ಯೋಚಿಸಿದಾಗ ಅವಳಿಗೆ ಮಾರನೆಯ ದಿನ ಏರ್ಪಾಟಾಗಲಿರುವ ಸ್ಪರ್ಧೆ ನೆನಪಿಗೆ ಬಂತು. ಆ ವೇಳೆಗೆ ಸರಿಯಾಗಿ ವರದಪ್ಪ ಸ್ವಾಮಿಗಳ ಆಶ್ರಮದಿಂದ ಕಮಲಮ್ಮನೂ, ವಿಲಾಸಿನಿಯೂ, ಕೆಲವರು ಶಿಷ್ಯರೂ ಗೋಪಾಲನು ಕಳ್ಳನನ್ನು ಹಿಡಿದ ಸಮಾಚಾರ ತಿಳಿದು ಗೋಪಾಲನನ್ನೂ ಕಳ್ಳನನ್ನೂ ನೋಡಲು ಗೋಪಾಲನ ಮನೆಗೆ ಬಂದರು. ನಡೆದ ಸಮಾಚಾರವನ್ನೆಲ್ಲ ಭಾಗ್ಯಲಕ್ಷ್ಮಿ ಅವರಿಗೆ ವಿವರಿಸಿದಳು. ಕೊನೆಗೆ ಅವರ ಎದುರಿಗೆ ಛಲಚ್ಛಲನಿಂದ ಮತ್ತೊಂದು

ಹಲ ಗೀತೆಯನ್ನು ಹಾಡಿಸಿದಳು. ವಿಲಾಸಿನಿಯ ಗಾನಮಾಧುರ್ಯವನ್ನು ಸವಿದಿದ್ದ ಭಾಗ್ಯಲಕ್ಷ್ಮಿಯು ವಿಲಾಸಿನಿಯಿಂದಲೂ ಆ ಗೀತೆಯನ್ನು ಹಾಡಿಸಿ ಕೇಳಿದಳು. ವಿಲಾಸಿನಿಯು ತಾರಸ್ಥಾಯಿಯಲ್ಲಿ ಹಾಡಿದ ಗೀತೆಯ ಕೆಲವು ನುಡಿಗಳು ಗೀತೆ ಮುಗಿದ ಮೇಲೂ ಎಲ್ಲರ ಮನಸ್ಸುಗಳಲ್ಲೂ ಪ್ರತಿಧ್ವನಿಸುತ್ತಿರು ವಂತಿದ್ದವು. ಭಾಗ್ಯಲಕ್ಷ್ಮಿಯು ವಿಲಾಸಿನಿಯನ್ನು ಆ ದಿನ ತನ್ನ ಮನೆಗೆ ಬಂದು ನೀರ ತರುಣಿಯರಿಗೆ ಗೀತೆಯನ್ನು ಕಲಿಸಬೇಕೆಂದೂ ಮಾರನೆಯ ದಿನ ತನ್ನ ಜೊತೆಯಲ್ಲಿ ಸ್ಪರ್ಧೆ ನಡೆಯುವ ಸ್ಥಳಕ್ಕೆ ಬಂದು ಅಲ್ಲಿ ಮಹಾರಾಜರ ಸಮಕ್ಷಮ ದಲ್ಲಿ ಗೀತೆಯನ್ನು ಹಾಡಬೇಕೆಂದೂ ಕೇಳಿದಳು. ಈ ವಿಷಯದಲ್ಲಿ ವಿಲಾ ಸಿನಿಯು ಕಮಲಮ್ಮನನ್ನೂ ಗೋಪಾಲನನ್ನೂ ಕೇಳಿದಳು. ಅವರು ಸಮ್ಮತಿಸಿ ದರು. ಸ್ವಲ್ಪ ಹೊತ್ತು ಛಲಚ್ಛಲನು ತನ್ನ ಕಪಿಚೇಷ್ಟೆಗಳಿಂದಲೂ, ವಾಕ್ಚಾ ತುರ್ಯದಿಂದಲೂ ಎಲ್ಲರಿಗೂ ವಿನೋದವನ್ನುಂಟುಮಾಡಿದನು. ಅನಂತರ ಭಾಗ್ಯಲಕ್ಷ್ಮಿಯು ಗೋಪಾಲನನ್ನು ಹೊಗಳಿ ಆತನಿಗೆ ಮಹಾರಾಜರ ಕೃಪೆ ಯಿಂದ ಉನ್ನತ ಪದವಿಗಳು ಸಿಕ್ಕುವುವೆಂಬ ಆಸೆಯನ್ನು ವ್ಯಕ್ತ ಪಡಿಸಿ ವಿಲಾ ಸಿನಿಯನ್ನು ಕರೆದುಕೊಂಡು ಮನೆಗೆ ಹೊರಟಳು.

## ೧೪

ಮಾರನೆಯ ದಿನ ಮಧ್ಯಾಹ್ನ ವರದಪ್ಪ ಸ್ವಾಮಿಗಳ ಆಶ್ರಮದಲ್ಲಿ ಎಲ್ಲರೂ ಊಟ ಮಾಡುತ್ತಿದ್ದರು. ಆದರೆ ಕಮಲಮ್ಮ ಮಾತ್ರ ಊಟ ಮಾಡಲಿಲ್ಲ. ಒಂದು ಮರದ ಕೆಳಗೆ ನಿಂತು ವಿಲಾಸಿನಿಯ ಬರುವಿಕೆಯನ್ನು ಕಾಯುತ್ತಿದ್ದಳು; ಸ್ವಲ್ಪ ಹೊತ್ತಿಗೆ ವಿಲಾಸಿನಿ ಆಶ್ರಮದ ಕಡೆಗೆ ಬರುತ್ತಿರು ವುದನ್ನು ಕಂಡು ಅವಳ ಕಡೆ ಹೊರಟಳು. ಇಬ್ಬರೂ ಆಶ್ರಮಕ್ಕೆ ಸ್ವಲ್ಪ ದೂರದಲ್ಲಿ ಸಂಧಿಸಿದರು. ಆದಿನ ನಡೆದ ಸ್ಪರ್ಧೆಯ ಸಮಾಚಾರವನ್ನು ಕುರಿತು ಮಾತನಾಡುತ್ತ ಇಬ್ಬರೂ ಆಶ್ರಮಕ್ಕೆ ಬಂದರು.

ವಿಲಾಸಿನಿ—ನಿಜವಾಗಿಯೂ ಗೋಪಾಲನ ಶಕ್ತಿಯು ಮನುಷ್ಯರ ಶಕ್ತಿ ಯನ್ನು ಮೀರಿದ್ದು.

ಕಮಲಮ್ಮ—ಸ್ಪರ್ಧೆಯಲ್ಲಿ ಗೋಪಾಲನೂ ಭಾಗವಹಿಸಿದ್ದನೇ? ಗೆದ್ದನೇ?

ವಿಲಾ—ಹೌದು. ಛಲಚ್ಛಲನು ತನ್ನ ಬಿಲ್ಲೂರಿಕೊಂಡು ಹಾರುವ ವಿದ್ಯೆಯನ್ನು ಮಹಾರಾಜರ ಮುಂದೆ ಪ್ರದರ್ಶಿಸಿ, ಓಡಿ ಬಂದು ತನ್ನನ್ನು ಹಿಡಿಯುಕೊಳ್ಳಲು ಸಮರ್ಥರಿದ್ದರೆ ಬರಬಹುದೆಂದು ಸವಾಲು ಹಾಕಿದನು. ಆದಕ್ಕೆ ಮಹಾರಾಜರು ತನಗೆ ಪರಿಚಿತರಾದ ಸೈನ್ಯದಲ್ಲಿನ ಓಟಗಾರರನ್ನು ಹುರಿದುಂಬಿಸಿ ಕಳುಹಿಸಿದನು. ಛಲಚ್ಛಲನು ಬಿಲ್ಲಿನ ಸಹಾಯದಿಂದ ಜಿಂಕೆ ಹಾರಿದ ಹಾಗೆ ಹಾರಿಕೊಂಡು ಹೋಗುತ್ತಿದ್ದರೆ ಓಡಿಹೋಗಿ ಅವನನ್ನು ಹಿಡಿಯಲು ಯಾರಿಗೂ ಸಾಧ್ಯವಾಗಲಿಲ್ಲ. ಆಗ ಗೋಪಾಲನು ಮಹಾರಾಜರ ಹಿಂದೆ ಛತ್ರವನ್ನು ಹಿಡಿದುಕೊಂಡು ನಿಂತಿದ್ದನು. ಮಹಾರಾಜರೇ ಹಿಂದಕ್ಕೆ ತಿರುಗಿ ಗೋಪಾಲನನ್ನು ಕುರಿತು "ಈಗ ನಮ್ಮ ಘನಗಿರಿಯ ವೀರರ ಶಕ್ತಿಗೆ ಸವಾಲು ಬಂದಿದೆ. ಘನಗಿರಿಯ ಕೀರ್ತಿಯನ್ನುಳಿಸಲು ನೀನಲ್ಲದೆ ಇನ್ನಾರಿಗೂ ಸಾಧ್ಯವಿಲ್ಲ" ಎಂದು ಹುರಿದುಂಬಿಸಿದನು. ಮಹಾರಾಜರ ಪಾದಗಳಿಗೆರಗಿ ಗೋಪಾಲನು ಸ್ಪರ್ಧೆಗಿಳಿದು ಕೊನೆಗೂ ಛಲಚ್ಛಲನನ್ನು ಹಿಡಿದೇ ಬಿಟ್ಟನು. ಗೋಪಾಲನಿಂದ ಘನಗಿರಿಯ ಗೌರವವುಳಿಯಿತು. ಮಹಾರಾಜರಿಗೆ ಬಹಳ ಸಂತೋಷವಾಯಿತು.

ಕಮಲಮ್ಮ—ಇದು ನಮ್ಮೆಲ್ಲರಿಗೂ ಬಹಳ ಸಂತೋಷಕರವಾದ ವಿಷಯ. ನಮ್ಮ ಅತ್ತೆಯವರೂ, ಅಂದರೆ ಗೋಪಾಲನ ತಾಯಿಯೂ, ನಮ್ಮ ಗುರುಗಳೂ ಎಷ್ಟು ಸಂತೋಷ ಪಡುವರೋ.

ವಿಲಾಸಿನಿ—ಹೌದು. ಇದು ಎಲ್ಲರಿಗೂ ಸಂತೋಷಕರವಾದ ವಿಷಯ. ನನ್ನ ಪಕ್ಕದಲ್ಲಿ ನಿಂತಿದ್ದ ಭಾಗ್ಯಲಕ್ಷ್ಮಿ ಅಂತೂ ಹಿಗ್ಗಿನಿಂದ ಕುಣಿದೇ ಬಿಟ್ಟಳು. ಆಮೇಲೆ ಮಹಾರಾಜರು ಛಲಚ್ಛಲನಿಗೆ ಬಹುಮಾನವನ್ನು ಕೊಟ್ಟರು. ಗೋಪಾಲನಿಗೂ ಬಹುಮಾನಗಳು, ಅಂದರೆ ಒಂದು ಛಲಚ್ಛಲನನ್ನು ಹಿಡಿದಿದ್ದಕ್ಕೆ, ಎರಡನೆಯದು ಸ್ಪರ್ಧೆಯಲ್ಲಿ ಅವನನ್ನು ಗೆದ್ದಿದ್ದಕ್ಕೆ; ಎರಡು ಬಹುಮಾನಗಳು ಕೊಡಲು ಬಂದಾಗ ಗೋಪಾಲನು ತನಗೆ ಮಹಾರಾಜರ ಪ್ರೀತಿಯೇ ಎಲ್ಲಕ್ಕಿಂತ ದೊಡ್ಡ ಬಹುಮಾನವೆಂದೂ, ಆಸೆಯಿಂದ ದೂರದೇಶದಿಂದ ಬಂದ ಛಲಚ್ಛಲನಿಗೇ ಆ ಬಹುಮಾನಗಳೂ ಕೊಡಬೇಕೆಂದೂ ರಾಜನನ್ನು ಬೇಡಿಕೊಂಡನು. ಮಹಾರಾಜರು ಹಾಗೆಯೇ ಮಾಡಿದರು.

ಕಮಲಮ್ಮ—ನಾನು ಊಹಿಸಿಕೊಳ್ಳುತ್ತಲೇ ಇದ್ದೆ. ಗೋಪಾಲನು

ಬಹುಮಾನಗಳಿಗಾಸೆ ಪಡುವುದಿಲ್ಲವೆಂದು. ಗೋಪಾಲನು ಬಹುಮಾನಗಳನ್ನು ತೆಗೆದುಕೊಳ್ಳದಿದ್ದಕ್ಕೆ ಭಾಗ್ಯಲಕ್ಷ್ಮಿ ಏನು ಹೇಳಿದಳು ?

ವಿಲಾಸಿನಿ—ಪಕ್ಕದಲ್ಲಿದ್ದ ನನ್ನನ್ನು ನೋಡಿ ಆವೇಶದಿಂದ ಗೋಪಾಲನನ್ನು ಬೈದಳು. ಆತನು ಜೀವನದಲ್ಲಿ ಭಾಗ್ಯ ಬಂದರೆ ಮೋಣಕಾಲೊಡ್ಡುವ ಮೂರ್ಖ ಸನ್ಯಾಸಿ ಎಂದು.

ಕಮಲಮ್ಮ—ಅವರವರ ಧ್ಯೇಯಗಳು ಅವರವರವು. ಆಕ್ಷೇಪಿಸುವುದಕ್ಕೆ ಕಾರಣವಿಲ್ಲ. ನೀನು ಗೀತೆಯನ್ನು ಹಾಡಬೇಕೆಂದು ಹೋಗಿದ್ದೆಯಲ್ಲಾ, ಹಾಡಿದೆಯಾ ?

ವಿಲಾಸಿನಿ—ಹಾಡಿದೆ. ವೀರ ತರುಣಿಯರಿಂದಲೂ ಹಾಡಿಸಿದೆ.

ಕಮಲಮ್ಮ—ಮಹಾರಾಜರ ಪ್ರತಿಕ್ರಿಯೆ ಹೇಗಿತ್ತು ? ಅವರು ಇತರ ಕಲೆಗಳೊಂದಿಗೆ ಸಂಗೀತ ಕಲೆಯನ್ನೂ ಬಹಿಷ್ಕರಿಸಿದ್ದಾರೆ. ನೀನೋ ಸಂಗೀತ ಕಲೋಪಾಸಿನಿ. ನಮ್ಮ ನಾಡಿನಲ್ಲಿ ದಿವ್ಯವಾದ ಸಂಗೀತ ಕಲೆಗೇ ಸ್ಥಾನವಿಲ್ಲ.

ವಿಲಾಸಿನಿ—ಹಾಗೇನು? ಸಂಗೀತ ಕಲೆ ದ್ವೇಷಿಸುವವರನ್ನೂ ಮೋಹಗೊಳಿಸುತ್ತದೆ. ಒಂದಾನೊಂದು ದಿನ ಮಹಾರಾಜರು ಸಂಗೀತ ಕಲೆಗೆ ತಲೆಬಾಗಿಸಲೇ ಬೇಕು. ನನ್ನ ಗೀತೆ ಅವರನ್ನು ಮುಗ್ಧರನ್ನಾಗಿ ಮಾಡಿತು.

ಕಮಲಮ್ಮ—ಇರಬಹುದು. ನಿನಗೆ ಅಷ್ಟು ಶಕ್ತಿ ಇದೆ. ಊಟ ಮಾಡೋಣ ಬಾ, ನಿನಗಾಗಿ ಕಾದಿದ್ದೇನೆ.

## ೨೦

ಆ ರಾತ್ರಿ ರುದ್ರಸಿಂಹನು ಮಲಗುವುದಕ್ಕೆ ಮೊದಲು ರಾಣಿಯೊಂದಿಗೆ ಮಾತಾಡುತ್ತ ಆ ದಿನದ ಸ್ಪರ್ಧೆಯನ್ನು ನೆನಸಿಕೊಂಡನು. ಛಲಚ್ಛಲನ ಅದ್ಭುತಕ್ರಿಯೆಗಳನ್ನೂ ಗೋಪಾಲನ ಅಮಾನುಷ ಶಕ್ತಿಯನ್ನೂ ಆತನು ರಾಣಿಗೆ ವರ್ಣಿಸಿ ಹೇಳಿದನು. ಇನ್ನೊಂದು ವಿಷಯವನ್ನು ರಾಣಿಗೆ ಹೇಳೋಣವೆಂದು ಆತನಿಗೆ ಮೇಲಿಂದ ಮೇಲೆ ಇಚ್ಛೆ ಆಗುತ್ತಿದ್ದರೂ ಆತನು ಹಿಂದೆಗೆಯುತ್ತಿದ್ದನು. ಗೋಪಾಲನ ವಿಷಯ ಹೇಳಿ ಮುಗಿಸಿ ಸ್ವಲ್ಪ ಹೊತ್ತು ಸುಮ್ಮನೆ ಏನೋ ಯೋಚಿಸುತ್ತಾ ಕುಳಿತುಬಿಟ್ಟನು. ಅದನ್ನು ನೋಡಿ ರಾಣಿ ಕುತೂಹಲದಿಂದ

"ಮಹಾರಾಜರ ಮನಸ್ಸನ್ನು ಆಕರ್ಷಿಸಿದ ವಿಷಯವಿನ್ನೊಂದು ಯಾವುದೋ ಒಂದು ಇದ್ದ ಹಾಗಿದೆ. ಅದನ್ನೇಕೋ ಮಹಾರಾಜರು ನನಗೆ ತಿಳಿಸಲು ಶಂಕಿಸುತ್ತಿದ್ದಾರೆ" ಎಂದಳು. ಅಲ್ಲಿಯವರೆಗೆ ವಿಲಾಸಿನಿಯ ಗಾನಮಾಧುರ್ಯವನ್ನು ನೆನೆಯುತ್ತಿದ್ದ ಮಹಾರಾಜನು ಈ ಮಾತನ್ನು ಕೇಳಿ ಚಕಿತನಾದನು. "ಇದೇನಾಶ್ಚರ್ಯ, ನೀನು ನನ್ನ ಆಲೋಚನೆಗಳನ್ನು ಎಷ್ಟು ಚೆನ್ನಾಗಿ ಕಂಡುಹಿಡಿಯುತ್ತಿದ್ದೀಯೆ? ನನ್ನನ್ನಾಕರ್ಷಿಸಿದ ಇನ್ನೊಂದು ಘಟನೆಯೂ ಇದೆ. ನನ್ನನ್ನು ಸ್ತೋತ್ರ ಮಾಡುವ ಗೀತೆಯನ್ನು ಛಲಚ್ಛಲನು ನಿನ್ನೆ ಸಭೆಯಲ್ಲಿ ಹಾಡಿದನಲ್ಲಾ. ಅದನ್ನೇ ಈ ದಿನ ಬೆಳಿಗ್ಗೆ ವೀರ ತರುಣಿಯರೂ ಹಾಡಿದರು. ಗೀತೆ ಬಹಳ ಚೆನ್ನಾಗಿದೆ. ಅದರ ಸಂಗೀತವೂ ಬಹಳ ಚೆನ್ನಾಗಿದೆ." ಎಂದು ಹೇಳಿದನು. ರಾಣಿಯು "ಇದೇನಾಶ್ಚರ್ಯ, ಮಹಾರಾಜರು ಸಂಗೀತ ಪ್ರೇಮಿಗಳಾದರೇ ?" ಎಂದು ಹೇಳಿದಳು. ರುದ್ರಸಿಂಹನು "ನಾನಾಗಲಿಲ್ಲ. ಆ ಕಂಠ ಮಾಧುರ್ಯ ನನ್ನಲ್ಲಿ ಸಂಗೀತ ಪ್ರೇಮವನ್ನು ಹುಟ್ಟಿಸಿತು."

ರಾಣಿ—ಯಾರ ಕಂಠಮಾಧುರ್ಯ? ಛಲಚ್ಛಲನ ಕಂಠಮಾಧುರ್ಯವೇ ?

ರುದ್ರ—ಅಲ್ಲ, ಅವಳೊಬ್ಬಳು ಹುಡುಗಿ. ನಮ್ಮ ಮಗಳು ಪ್ರಭಾವತಿ ಬದುಕಿದ್ದರೆ ಇಲ್ಲಿಗೆ ಅಷ್ಟು ವಯಸ್ಸಾಗಬೇಕಾಗಿತ್ತು. ಅವಳೂ ಆ ಗೀತೆಯನ್ನು ಹಾಡಿದಳು. ವೀರ ತರುಣಿಯರಿಂದ ಹಾಡಿಸಿದಳು. ಆ ಹುಡುಗಿಯ ಕಂಠದಲ್ಲಿ ಎಷ್ಟು ಮಾಧುರ್ಯವಿದೆ! ಕೇಳಿದರೆ ಅವಳಿಂದ ಹಾಡುಗಳನ್ನು ಕೇಳಬೇಕು.

ರಾಣಿ—ಇಂದಿಗಾದರೂ ನಿಮಗೆ ಸಂಗೀತದಲ್ಲಿ ಅಭಿರುಚಿ ಹುಟ್ಟಿತಲ್ಲಾ. ಇದೇ ನನ್ನ ಭಾಗ್ಯ.

ರುದ್ರಸಿಂಹನು ಗಾನ ಮಾಧುರ್ಯವನ್ನು ನೆನೆಯುತ್ತ ಮಲಗಿಬಿಟ್ಟನು.

ಮಾರನೆಯ ದಿನ ಮಧ್ಯಾಹ್ನ ಭಾಗ್ಯಲಕ್ಷ್ಮಿಯು ವರದಪ್ಪ ಸ್ವಾಮಿಗಳ ಆಶ್ರಮಕ್ಕೆ ಬಂದು ವಿಲಾಸಿನಿಯನ್ನು ಕಂಡು "ವಿಲಾಸಿನೀ, ಮಹಾರಾಜರು ನಿನ್ನನ್ನು ನೋಡಿ ನಿನ್ನ ಹಾಡನ್ನು ಕೇಳಿ ತಮ್ಮ ಸತ್ತುಹೋದ ಮಗಳನ್ನು ನೆನೆಸಿಕೊಂಡರಂತೆ. ಅವರೂ ಮಹಾರಾಣಿಯೂ, ನಿನ್ನಿಂದ ಹಾಡುಗಳನ್ನು ಹಾಡಿಸಿ ಕೇಳಬಯಸುತ್ತಿದ್ದಾರೆ. ನಿನಗೆ ಒಪ್ಪಿಗೆಯಿದ್ದಲ್ಲಿ ಈ ದಿನ ಸಾಯಂಕಾಲ

ಅಂತಃಪುರದ ಪಕ್ಕದಲ್ಲಿರುವ ರಾಮಸ್ವಾಮಿ ದೇವಸ್ಥಾನಕ್ಕೆ ರಾಜದಂಪತಿಗಳು ಬಂದು ನಿನ್ನನ್ನು ಪಲ್ಲಕ್ಕಿಯೊಳಗೆ ಕರೆದುಕೊಂಡು ಹೋಗುವರು. ಅಲ್ಲಿ ದೇವರ ಎದುರಿನಲ್ಲಿ ನಿನ್ನ ಹಾಡುಗಳನ್ನು ಅವರು ಕೇಳುತ್ತಾರೆ." ಎಂದು ಹೇಳಿದಳು. ಪ್ರಸಂಗದಲ್ಲಿ ಜುಗುಪ್ಸೆ ವಹಿಸಿದ್ದ ವಿಲಾಸಿನಿ ಸ್ವಲ್ಪ ಹೊತ್ತು ಸುಮ್ಮನಿದ್ದಳು. ಕಮಲಮ್ಮನೂ ಸ್ವಲ್ಪ ಹೊತ್ತು ಸುಮ್ಮನಿದ್ದಳು. ಆ ಮೇಲೆ "ಹೋಗದಿರುವುದು ಧರ್ಮವಲ್ಲ ವಿಲಾಸಿನೀ" ಎಂದು ಆಕೆ ಹೇಳಿದಳು. ವಿಲಾಸಿನಿ ಒಪ್ಪಿಕೊಂಡಳು. ಆದರೆ ತಾನು ಪಾದಚಾರಿಣಿಯಾಗಿಯೇ ಬರುವುದಾಗಿ ಹೇಳಿ ಕಳುಹಿಸಿದಳು.

ಕೂಡಲೇ ವಿಲಾಸಿನಿ ಕಾವಿ ಬಟ್ಟೆಗಳನ್ನುಟ್ಟು ಹಣೆಯಲ್ಲಿ ದಪ್ಪವಾಗಿ ಕುಂಕುಮದ ನಾಮವನ್ನು ಹಾಕಿಕೊಂಡು, ರುದ್ರಾಕ್ಷಿಗಳ ಸರವನ್ನು ಧರಿಸಿ, ದೇವರ ನಾಮಗಳನ್ನು ತನ್ನಲ್ಲಿ ತಾನೇ ನೆನೆಸಿಕೊಳ್ಳುತ್ತ ಹಾಡಿಕೊಳ್ಳಲಾರಂಭಿಸಿದಳು. ಮುಂಚಿತವಾಗಿಯೇ ಕಾಲ್ನಡಿಗೆಯಿಂದ ರಾಮಸ್ವಾಮಿ ದೇವಾಲಯವನ್ನು ತಲುಪಿ ರಾಜದಂಪತಿಗಳ ಆಗಮನವನ್ನು ನಿರೀಕ್ಷಿಸುತ್ತಿದ್ದಳು. ಭಾಗ್ಯಲಕ್ಷ್ಮಿ ಎಲ್ಲಿಂದಲೋ ತರಿಸಿದ ಒಂದು ತಂಬೂರಿಯನ್ನು ವಿಲಾಸಿನಿಗೆ ಕೊಟ್ಟಳು. ರಾಜದಂಪತಿಗಳು ಆಗಮಿಸಿದರು. ದೇವರಿಗೆ ಪೂಜೆ ನಡೆಯಿತು. ವೇದಶಾಸ್ತ್ರಪಾಠಗಳ ಶಾಸ್ತ್ರವೂ ಬೇಗ ಮುಗಿಸಿ ಅರ್ಚಕರು 'ಸಂಗೀತಮವಧಾರಯ' ಎಂದು ದೇವರಿಗೆ ವಿಜ್ಞಾಪಿಸಿದರು. ವಿಲಾಸಿನಿಯ ಭಕ್ತಿಗೀತೆಗಳು ರಾಜದಂಪತಿಗಳನ್ನೂ ಅಲ್ಲಿ ಸೇರಿದ್ದ ಇತರ ಪರಿವಾರವನ್ನೂ ತನ್ಮಯಗೊಳಿಸಿದವು ; ಶ್ರೀರಾಮಚಂದ್ರನ ಕಿವಿಗೂ ಅವು ಸೋಕಿರಬೇಕು.

ಸೂಕ್ಷ್ಮಬುದ್ಧಿಯುಳ್ಳ ಅರ್ಚಕನು ಸಂಗೀತವಾದ ಮೇಲೆ 'ನಾಟ್ಯಮವಧಾರಯ' ಎಂದು ಹೇಳಿ ವಿಲಾಸಿನಿಯನ್ನು ನೋಡಿ "ಏನಮ್ಮಾ ಸಂಗೀತದ ಜೊತೆಗೆ ನಾಟ್ಯದ ಅಭ್ಯಾಸವೇನಾದರೂ ಇದೆಯೇ? ಇದ್ದರೆ ತೋರಿಸು. ದೇವರ ಸೇವೆ." ಎಂದು ಪ್ರಚೋದಿಸಿದನು. ಭಕ್ತಿಭಾವಭರಿತಳಾದ ವಿಲಾಸಿನಿಯ ಮೈಯಿಂದ ನಾಟ್ಯವು ಉಕ್ಕಿ ಬಂತು. ಅವಳು ತಾನು ನಿಜವಾಗಿ ದೇವದಾಸಿಯಾದೆನೆಂಬ ತನ್ಮಯಭಾವದಿಂದ ಭಾವಗೀತೆಯನ್ನು ರಚಿಸಿಕೊಂಡು ಹಾಡುತ್ತ ಅಭಿನಯಿಸಿದಳು. ಕೊನೆಗೆ ಆವೇಶದಲ್ಲಿ ನೃತ್ಯವನ್ನೂ ಮಾಡಿದಳು. ರಾಜ

ದಂಪತಿಗಳು ಮುಗ್ಧರಾದರು. ರಾಣಿ ಬಂದು ವಿಲಾಸಿನಿಯನ್ನು ತಬ್ಬಿಕೊಂಡು ಕೊಂಡಾಡಿದಳು.

## ೨೧

ಸುಮಾರು ಒಂದು ತಿಂಗಳು ಕಳೆದನಂತರ ಘನಗಿರಿ ರಾಜ್ಯದ ಲಕ್ಷ್ಮೀಪುರವೆಂಬ ಪಟ್ಟಣಕ್ಕೆ ಬರುವ ದಾರಿಯಲ್ಲಿ ಇಬ್ಬರು ರಾಜಭಟರು ಶಸ್ತ್ರಪಾಣಿಗಳಾಗಿ ಬಂದು ಲಕ್ಷ್ಮೀಪುರದ ಕಡೆ ಹೋಗುತ್ತಿದ್ದ ಒಂದು ಎತ್ತಿನ ಗಾಡಿಯನ್ನು ನಿಲ್ಲಿಸಿದರು. ಗಾಡಿ ಹೊಡೆಯುವವನು ಹೆದರಿಕೊಂಡು ಕೆಳಕ್ಕೆ ಧುಮುಕಿ ಒಳಗಿದ್ದವರನ್ನು ಕುರಿತು "ಏನು ಸ್ವಾಮೀ, ನೀವು ನನ್ನ ಮಾತು ಕೇಳಲಿಲ್ಲ. ಈಗ ಇವರಿಗೆ ಸಮಾಧಾನ ನೀವೇ ಹೇಳಿ." ಎಂದು ಆಕ್ರೋಶಿಸಿದನು. ರಾಜಭಟರು ಬಂದು ಒಳಗಿದ್ದ ಇಬ್ಬರು ಯುವಕರನ್ನು ಈಚೆಗೆಳೆದರು. ಒಬ್ಬನು ಕುಮಾರ. ಇನ್ನೊಬ್ಬನು ಮಾರುವೇಷದಲ್ಲಿದ್ದ ರಂಗಯ್ಯ. ಇಬ್ಬರೂ ರಾಜಭಟರೊಂದಿಗೆ ಸೌಮ್ಯವಾದ ರೀತಿಯಲ್ಲಿ "ಯಾಕಪ್ಪಾ ಗಾಡಿ ನಿಲ್ಲಿಸಿದ್ದು. ನಿಮಗೇನು ಬೇಕು ಹೇಳಿ" ಎಂದು ಹೇಳುತ್ತ ಕೆಳಕ್ಕಿಳಿದರು. ಒಬ್ಬ ರಾಜಭಟನು ಜಂಭದಿಂದ ಹೇಳಿದ—"ಕೋಶಾಧಿಕಾರಿಯ ಆಜ್ಞೆ ನಿಮಗೆ ತಿಳಿಯದೇ? ಯಾರೂ ಗಾಡಿಗಳನ್ನು ಹೊಡೆದುಕೊಂಡು ಹೋಗಬಾರದು ಅಂತ. ಎಲ್ಲಾ ಕಡೇನೂ ಡಂಗೂರ ಬಾರಿಸಿದ್ದೇವೆ. ನೀವೇಕೆ ಗಾಡಿಯಲ್ಲಿ ಹೋಗುತ್ತಿರುವುದು. ಬನ್ನಿ, ನಮ್ಮ ನಾಯಕನ ಹತ್ತಿರಕ್ಕೆ. ಆತನು ನಿಮಗೆ ಶಿಕ್ಷೆ ವಿಧಿಸುತ್ತಾನೆ."

ಕುಮಾರನು "ಆಜ್ಞೆ ಮಾಡಿರುವುದು ಹಾಗಲ್ಲಪ್ಪಾ. ಆಜ್ಞೆಯಿರುವುದು ಯಾರೂ ಗಾಡಿಗಳಲ್ಲಿ ದವಸ, ಧಾನ್ಯಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಬಾರದು ಅಂತ. ನಾವೇನು ದವಸ ಸಾಗಿಸುತ್ತಿಲ್ಲವಲ್ಲಾ. ಬೇಕಾದರೆ ನೋಡಿಕೊಳ್ಳಿ. ನಮ್ಮ ಗಾಡಿ ಬಿಟ್ಟು ಬಿಡಿ" ಎಂದನು.

ಅದಕ್ಕೆ ಅದೇ ರಾಜಭಟನೇ "ಅದು ನಮಗೆ ಬೇಕಾಗಿಲ್ಲ. ನಮಗೆ ಅಪ್ಪಣೆ ಇರುವುದು ಯಾವ ಗಾಡಿ ದಾರಿಯಲ್ಲಿ ಹೋಗುತ್ತಿದ್ದರೂ ಹಿಡಿದು ತರಬೇಕು ಅಂತ." ಎಂದನು. ಅದಕ್ಕೆ ರಂಗಯ್ಯನು "ಹಾಗಾದರೆ ಗಾಡಿ ನಿಮ್ಮ ನಾಯಕನ ಹತ್ತಿರಕ್ಕೆ ತೆಗೆದುಕೊಂಡು ಹೋಗೋಣ ಬನ್ನಿ. ಗಾಡಿ

ಯೊಳಗೆ ಕುಳಿತುಕೊಳ್ಳಿ" ಎಂದನು. ಅದಕ್ಕೆ ಇನ್ನೊಬ್ಬ ರಾಜಭಟನು ಸೌಮ್ಯವಾಗಿ "ಯಾಕೆ ಅಲ್ಲಿಗೆ ಹೋಗುತ್ತೀರಿ. ನಮ್ಮ ನಾಯಕ ಬಹಳ ಕ್ರೂರ. ನಿಮಗೆ ದಂಡ ವಿಧಿಸಿದರೆ ಹತ್ತು ವರಹಕ್ಕೆ ಕಡಿಮೆಯಿಲ್ಲ. ನಮಗೆ ಐದು ವರಹ ಕೊಟ್ಟುಬಿಡಿ. ನಾವು ಬಿಟ್ಟುಬಿಡುತ್ತೇವೆ. ನಾವು ತನಿಖೆ ಮಾಡಿದ್ದೇವೆಂದು ನಿಮಗೆ ಗುರ್ತು ಸಹ ಕೊಡುತ್ತೇವೆ. ಆಮೇಲೆ ನಿಮ್ಮನ್ನು ಯಾರೂ ಕೇಳುವುದಿಲ್ಲ" ಎಂದ.

ಇದನ್ನು ಕೇಳಿ ರಂಗಯ್ಯನು "ಏನಪ್ಪಾ, ನೀವು ರಾಜರ ಉಪ್ಪು ತಿಂದು ಇಂತಹ ಕೆಲಸ ಮಾಡಬಹುದೇ? ನಾನೂ ರಾಜನ ಉಪ್ಪು ತಿನ್ನುವವನೇ. ಇದು ಬಹಳ ಅನ್ಯಾಯ. ನಾನು ಇಂತಹ ಕೆಲಸಕ್ಕೆ ಹೋಗುವುದಿಲ್ಲ." ಎಂದ.

ಈ ಮಾತು ಕೇಳಿ ರಾಜಭಟರು ಗಾಬರಿಯಾದರು. "ನೀವೂ ರಾಜರ ಉಪ್ಪು ತಿನ್ನುವವರಾದರೆ ನಿಮ್ಮ ಗಾಡಿ ನಮಗೆ ಬೇಕಾಗಿಲ್ಲ. ಆದರೆ ನಿಮ್ಮ ಮಾತು ನಂಬುವುದು ಹೇಗೆ. ಎಲ್ಲಿ, ತೋರಿಸಿ ಗಾಡಿಯೊಳಗೆ ಏನಿದೆ?" ಎಂದರು.

"ನೀವೇ ನೋಡಿಕೊಳ್ಳಿ" ಎಂದು ಕುಮಾರನು ಹೇಳಿದನು.

ರಾಜಭಟರು ಗಾಡಿಯನ್ನೆಲ್ಲಾ ಶೋಧಿಸಿದರು. ಅದರಲ್ಲಿ ಹಳೆಯ ಓಲೆಯ ಗರಿಯ ಪುಸ್ತಕಗಳಿದ್ದವೇ ಹೊರತು ಇನ್ನೇನೂ ಇರಲಿಲ್ಲ.

ರಾಜಭಟರು ಆಶ್ಚರ್ಯದಿಂದ ಏನಪ್ಪಾ, ನೀವೆಂತಹ ದಡ್ಡರು? ಈ ಕಾಲದಲ್ಲಿ ನಿಮಗೆ ಇವೆಲ್ಲಾ ಏಕೆ? ಹೋಗಿ, ಹೋಗಿ. ಈವತ್ತು ನರಿ ಮುಖ ನೋಡಿ ಬಂದಿದ್ದೀರಿ. ನಮ್ಮಿಂದ ತಪ್ಪಿಸಿಕೊಂಡಿರಿ." ಎಂದು ಹೇಳಿದರು.

ಗಾಡಿಯವನಿಗೆ ಮನಸ್ಸಿಗೆ ಸಮಾಧಾನವಾಯಿತು.

ಆದರೆ ರಂಗಯ್ಯನು ಬಿಡಲಿಲ್ಲ. "ನೀವು ನಿಮ್ಮ ಕೆಲಸ ಮಾಡದಿದ್ದರೂ ನಾನು ರಾಜನ ಉಪ್ಪು ತಿಂದದ್ದಕ್ಕೆ ನನ್ನ ಕೆಲಸವನ್ನು ಮಾಡಬೇಕಲ್ಲಾ" ಎಂದು ಹೇಳಿ ಜೋರಾಗಿ "ನಾನಾರೆಂದು ತಿಳಿಯುವುದೋ ನಿಮಗೆ? ನಾನು ಕೋಶಾಧಿಕಾರಿಯ ಮಗ ರಂಗಯ್ಯ. ನಿಮ್ಮಂತಹ ಲಂಚ ಕೋರರನ್ನು ಹಿಡಿಯಲು ಮಾರು ವೇಷದಲ್ಲಿ ಹೋಗುತ್ತಿದ್ದೇನೆ. ನಿಮ್ಮ ಹೆಸರುಗಳನ್ನೂ ಪತ್ತೆಯನ್ನೂ

ಕೊಡಿ. ಇಲ್ಲವಾದರೆ ನಿಮಗೆ ಒಂದಕ್ಕೆ ಎರಡರಷ್ಟು ಶಿಕ್ಷೆ" ಎಂದು ಹೆದರಿಸಿದನು.

ಅದನ್ನು ಕೇಳಿ ರಾಜಭಟರು ಹೆದರಿದರೂ 'ಪಾಕಡಾ'ಗಳಾಗಿದ್ದುದರಿಂದ ಅವರು "ನೀವು ರಂಗಯ್ಯ ಸ್ವಾಮಿಗಳಾದರೆ ಗುರ್ತು ತೋರಿಸಿ. ಇಲ್ಲದಿದ್ದರೆ ನಾವು ಹೇಗೆ ನಂಬುವುದು ?" ಎಂದು ಹೇಳಿದರು.

ಅದಕ್ಕೆ ರಂಗಯ್ಯನು ತಾನು ಧರಿಸುತ್ತಿದ್ದ ರಾಜ ಮುದ್ರೆಯುಳ್ಳ ಒಂದು ಪದಕದಲ್ಲಿ ತನ್ನ ವಿಳಾಸವಿರುವುದನ್ನು ತೋರಿಸಿದನು.

ತೋರಿಸುತ್ತಿರುವಂತೆಯೇ ಒಬ್ಬ ರಾಜಭಟನು ಅದನ್ನು ಕಿತ್ತುಕೊಂಡು "ಈಗ ಏನು ಮಾಡುತ್ತೀಯ. ಇಲ್ಲಿಂದ ಸುಮ್ಮನೆ ಹೊರಟುಹೋಗಿ. ಇಲ್ಲದಿದ್ದರೆ ನಮ್ಮ ಆಯುಧಗಳಿಂದ ನಿಮಗೆ ತಕ್ಕ ಶಾಸ್ತಿ ಆಗುತ್ತದೆ" ಎಂದು ಬೆದರಿಸಿದನು. ರಂಗಯ್ಯನು ಭಯಪಟ್ಟನು. ಕುಮಾರನು ಕೂಡಲೇ ಧೈರ್ಯದಿಂದ "ಗೋಪಾಲಾ, ಗೋಪಾಲಾ" ಎಂದು ಕೂಗಿಕೊಂಡನು.

ಕೂಡಲೇ ಗೋಪಾಲನಲ್ಲಿಗೆ ಓಡಿಬಂದನು. ಆತನು ಕತ್ತಿ ಗುರಾಣಿಗಳನ್ನು ಧರಿಸಿದ್ದನು. ಆತನನ್ನು ನೋಡಿದ ಕೂಡಲೇ ರಾಜಭಟರು ತಮ್ಮ ಆಯುಧಗಳನ್ನು ಕೆಳಗೆ ಹಾಕಿ ಆತನಿಗೆ ಪಾದಾಕ್ರಾಂತರಾದರು. ಎದ್ದು "ಗೋಪಾಲ, ಗೋಪಾಲ" ಎಂದು ಭಯದಿಂದ ಉಚ್ಚರಿಸತೊಡಗಿದರು. ಗೋಪಾಲನು ಅವರಿಬ್ಬರನ್ನೂ ಸೆರೆಹಿಡಿದನು.

ಗಾಡಿ ಮುಂದೆ ಸಾಗಿತು. ರಂಗಯ್ಯನು ಮಾತನಾಡದೆ ಆಲೋಚಿಸುತ್ತಿದ್ದನು. ಕುಮಾರ ಹೇಳಿದನು : "ರಂಗಯ್ಯಾ, ಗೋಪಾಲನಿದ್ದುದರಿಂದ ನಮಗೆ ಎಷ್ಟು ಒಳ್ಳೆಯದಾಯಿತು ನೋಡು. ದುಷ್ಟರು ಯಾವ ಕೆಲಸ ಮಾಡುವುದಕ್ಕೂ ಹಿಂಜರಿಯರು. ಜನರಲ್ಲಿ ಸಂಸ್ಕೃತಿ ಪೂರ್ತಿ ನಾಶವಾಗಿದೆ. ಮೇಲೆ ಯುದ್ಧದ ಭಯ ಬೇರೆ ಆವರಿಸಿದೆ. ದೇಶದಲ್ಲೆಲ್ಲ ದೊಡ್ಡ ಕ್ಷೋಭೆ ಉಂಟಾಗಲಿದೆ. ಇದನ್ನು ಹೇಗೆ ನಿವಾರಿಸುವುದು ?"

ರಂಗಯ್ಯ—ನಾವಿಬ್ಬರೂ ನಮ್ಮ ಬುದ್ಧಿಶಕ್ತಿಯನ್ನುಪಯೋಗಿಸಿ ಪ್ರಯತ್ನ ಮಾಡೋಣ. ದೇವರ ಕೃಪೆಯಿದ್ದರೆ ನಿವಾರಿಸಬಹುದು.

ಕುಮಾರ—ಮೊದಲು ಯುದ್ಧವನ್ನು ನಿವಾರಿಸಬೇಕು. ಆ ಮೇಲೆ ಜನರಲ್ಲಿ ಸಂಸ್ಕೃತಿಯನ್ನು ಬೆಳೆಸುವ ಪ್ರಯತ್ನ ನಡೆಯಬೇಕು.

ರಂಗಯ್ಯ—ಯುದ್ಧವನ್ನು ನಿವಾರಿಸಬೇಕಾದರೆ ಏನು ಮಾಡಬೇಕು? ಯುದ್ಧ ಬೇಕೆನ್ನುವವರಾರು? ಅವರಿಗೆ ಯುದ್ಧವೇಕೆ ಬೇಕು? ಎಲ್ಲಾ ಯೋಚನೆ ಮಾಡೋಣ."

ಇಬ್ಬರೂ ಯುದ್ಧವನ್ನು ನಿವಾರಿಸಲು ಏನು ಮಾಡಿದರೆ ಸಾಧ್ಯವೆಂಬುದಾಗಿ ತೀವ್ರವಾಗಿ ಆಲೋಚಿಸಿದರು. ಯುದ್ಧಕ್ಕೆ ಕಾರಣಗಳು ರಾಜನ ಪ್ರತಿಜ್ಞೆ ಮತ್ತು ರಾಜನ ಇಚ್ಛೆಯಂತೆ ಹೇಮಗಿರಿ ರಾಜ್ಯದವರು ರುದ್ರಸಿಂಹನ ವಂಶಕ್ಕೆ ಸಂಬಂಧಿಸಿದವನನ್ನೇ ರಾಜನನ್ನಾಗಿ ಮಾಡಲು ಒಪ್ಪುವುದು ಅಸಾಧ್ಯವಾಗಿರುವುದು. ರುದ್ರಸಿಂಹನು ಆಂಧ್ರನು. ಆತನ ವಂಶಕ್ಕೆ ಸಂಬಂಧಿಸಿದವರೆಲ್ಲ ಆಂಧ್ರರೇ. ವಿಜಯಾಂಬಿಕೆ ಒಬ್ಬಳೇ ಕನ್ನಡಿಗನಾದ ಕೃಷ್ಣದೇವನನ್ನು ಮದುವೆಯಾದವಳು. ಅವರಿಗೆ ಸಂತಾನವಿಲ್ಲ. ಆಂಧ್ರನನ್ನು ರಾಜನನ್ನಾಗಿ ಮಾಡಲು ಹೇಮಗಿರಿ ರಾಜ್ಯದವರು ಒಪ್ಪುವುದಿಲ್ಲ. ಅವರು ಆರಿಸಿಕೊಳ್ಳುವ ರಾಜನು ರುದ್ರಸಿಂಹನಿಗೆ ಸಂಬಂಧಿ ಹೇಗೆ ಆಗುತ್ತಾನೆ? ರುದ್ರಸಿಂಹನು ತನ್ನ ಪ್ರತಿಜ್ಞೆಯನ್ನು ಪರಿಪಾಲಿಸದೆ ಬಿಡುವುದಿಲ್ಲ. ಜನರಿಗಾಗುವ ಕ್ಷೋಭೆ ಆತನಿಗೆ ಹೇಳಿದರೂ ಪ್ರಯೋಜನವಿಲ್ಲ. ಆತನು ಸತ್ಯ ವಾಕ್ಯಪರಿಪಾಲಕನೆಂಬ ಹೆಮ್ಮೆಯಿಂದ ಜೀವಿಸುವನು. ಆತನು ಪ್ರತಿಜ್ಞೆಯನ್ನು ಬಿಡುವುದಿಲ್ಲ. ಯುದ್ಧವನ್ನು ಆತನ ಕೈಯಿಂದ ನಿವಾರಿಸಲು ಸಾಧ್ಯವಿಲ್ಲ. ಯಾರ ಕೈ ಇದನ್ನು ನಿವಾರಿಸಬಲ್ಲುದು? ಭಗವಂತನ ಕೈ ಒಂದೇ—ಈ ರೀತಿಯಾಗಿ ಇಬ್ಬರೂ ಯೋಚಿಸುತ್ತ ಹೋಗುವಾಗ ರಂಗಯ್ಯನಿಗೆ ಒಂದು ಉಪಾಯ ಹೊಳೆಯಿತು. ಆತನು ಹೇಳಿದ. "ಕುಮಾರಾ, ತೀರಾ ಅಸಂಭವವೆಂದು ಕಂಡರೂ ನಾವು ಒಂದು ಮಾರ್ಗವಿದ್ದರೆ ಅದನ್ನು ಬಿಡಬಾರದು. ನಾನು ಈ ವಿಷಯದಲ್ಲಿ ಸಾಧ್ಯಾಸಾಧ್ಯತೆಗಳನ್ನು ಎಷ್ಟು ಪರಿಶೀಲಿಸಿದರೂ ನನಗೆ ಒಂದೇ ಒಂದು ಬಹಳ ಅಸಂಭವವಾದ ಮಾರ್ಗ ಕಂಡುಬರುತ್ತಿದೆ. ಅದು ಬಿಟ್ಟರೆ ಬೇರೆ ಯಾವ ಮಾರ್ಗವೂ ಇಲ್ಲ. ಆದರೆ ಅದಕ್ಕೆ ಬೆಟ್ಟವನ್ನೆತ್ತುವಷ್ಟು ಪರಿಶ್ರಮ ಮಾಡಬೇಕು. ಕೊನೆಗೆ ಅದೆಲ್ಲಾ ವ್ಯರ್ಥವಾಗಬಹುದು. ಅಥವಾ ಫಲಿಸಬಹುದು. ಫಲಿಸಿದರಂತೂ ನಮ್ಮ ನಾಡಿನ ಪುಣ್ಯವೇ ಪುಣ್ಯ."

ಕುಮಾರ ಆತುರದಿಂದ ಕೇಳಿದ "ಏನು ಆ ಮಾರ್ಗ ರಂಗಯ್ಯಾ? ನನಗೆ ಹೇಳು. ನಾನು ಎಷ್ಟು ಶ್ರಮವನ್ನಾದರೂ ಪಡಲು ಸಿದ್ಧನಾಗಿದ್ದೇನೆ."

ರಂಗಯ್ಯ—ನೋಡು ಕುಮಾರಾ, ನಾನು ಸೂಕ್ಷ್ಮವಾಗಿ ಪರಿಶೀಲಿಸಿದ್ದರಲ್ಲಿ ವಿಲಾಸಿನಿಯ ಸಂಗೀತದ ರುಚಿಯನ್ನು ಕಂಡ ಮಹಾರಾಜನಲ್ಲಿ ಸೌಮ್ಯತೆ ಅಂಕುರಿಸುತ್ತಾ ಇದೆ. ಅದು ಇನ್ನೂ ಬೆಳೆಯಬಹುದು. ಮನಸ್ಸು ಮೃದುವಾದಂತೆಲ್ಲಾ ಆತನು ಯುದ್ಧಕ್ಕೆ ವಿಮುಖನಾಗಬಹುದು. ಯುದ್ಧವನ್ನು ಹೇಗಾದರೂ ತಪ್ಪಿಸಬೇಕೆಂದು ಆತನೇ ಭಗವಂತನನ್ನು ಪ್ರಾರ್ಥಿಸಬಹುದು. ಆದರೆ ಆತನ ಸತ್ಯ ಬಹು ಕಠಿಣವಾದುದು. ಅದನ್ನು ಮುರಿಯುವ ಶಕ್ತಿಯಿಲ್ಲ. ಆತನು ಕೊನೆಗೆ ಪ್ರತಿಜ್ಞೆಗೆ ಭಂಗ ಬರಬಾರದೆಂದು ಮಾತ್ರ ಕೋರುವ ಸ್ಥಿತಿಗೆ ಬರಬಹುದು. ಅದು ಭಂಗವಾಗುವುದಾದರೆ ಯುದ್ಧ ತಪ್ಪಿಸಲು ಸಾಧ್ಯವಿಲ್ಲ. ಆತನಿಗೆ ಹೇಮಗಿರಿ ರಾಜ್ಯದ ಮೇಲೆ ಅಧಿಕಾರ ಲಾಲಸೆಯನ್ನೂ, ಆ ದೇಶದವರ ಮೇಲಿನ ಹಗೆಯನ್ನೂ ಸಹ ಹೋಗಲಾಡಿಸಬಹುದು. ಆದರೆ ಆತನ ಪ್ರತಿಜ್ಞೆ ಮಾತ್ರ ಪರಿಪಾಲಿತವಾಗಲೇಬೇಕು. ಒಂದು ವೇಳೆ ಹೇಮಗಿರಿ ರಾಜ್ಯದವರು ಆರಿಸುವ ಕನ್ನಡದವನು ರುದ್ರಸಿಂಹನ ವಂಶಕ್ಕೆ ಸಂಬಂಧಿಸಿಯೇ ಇರಬಹುದು. ಹತ್ತಿರದ ಸಂಬಂಧವಿಲ್ಲದಿದ್ದರೆ ದೂರದ ಸಂಬಂಧವಿರಬಹುದು. ಆಂಧ್ರರೂ ಕರ್ಣಾಟಕರೂ ದೂರ ಸಂಬಂಧಿಗಳಾಗಿ ಯಾಕಿರಬಾರದು? ಅದರಲ್ಲೂ ದೊರೆತನದವರು ಎಲ್ಲಿಂದ ಎಲ್ಲಿಗೋ ಹೋಗಿ ರಾಜ್ಯಗಳನ್ನು ಕಟ್ಟುವುದು ಸಹಜ. ಕೆಲವು ತಲೆ ಮಾರುಗಳಾದ ಮೇಲೆ ಆ ದೇಶದ ಭಾಷೆಯನ್ನೇ ಅವರೂ ಬಳಸುತ್ತಾರೆ."

ಕುಮಾರನು ಇದನ್ನು ಕೇಳುತ್ತ ಕೇಳುತ್ತಲೇ ಆಶಾಜ್ಯೋತಿಯಿಂದ ವಿಕಸಿತ ಮುಖನಾಗಿ ರಂಗಯ್ಯನನ್ನು ತಬ್ಬಿಕೊಂಡ, ಆಮೇಲೆ ಹೀಗೆ ಹೇಳಿದ—"ಇನ್ನು ನನಗೆ ಬಿಡು. ನಾನು ಮುಂದಿನ ಕೆಲಸ ಮಾಡುತ್ತೇನೆ. ನೀನು ಕೊಟ್ಟ ಈ ಸಲಹೆಯೇ ನಾಡಿನ ಉದ್ಧಾರಕ್ಕೆ ಬೀಜವಾಗಬಹುದು. ನಿನ್ನ ಬುದ್ಧಿ ಕುಶಲತೆ ಅಸಾಧಾರಣ."

ರಂಗಯ್ಯ—ನನ್ನದೇನೂ ಇಲ್ಲ, ಕುಮಾರಾ. ನನಗೆ ತೋಚಿದ್ದು ಹೇಳಿದೆ. ಎಲ್ಲಾ ದೇವರ ಇಚ್ಛೆಯಂತೆ ನಡೆಯುತ್ತದೆ.

## ೨೨

ಲಕ್ಷ್ಮೀಪುರದ ಬಳಿ ಶಿಬಿರದಲ್ಲಿ ತಂಗಿದ್ದ ರುದ್ರಸಿಂಹನಿಗೆ ಘನಗಿರಿಯಲ್ಲಿದ್ದ ಪ್ರಧಾನಿಯಿಂದ ದೂತನೊಬ್ಬನು ಪತ್ರವನ್ನು ತಂದು ಸಮರ್ಪಿಸಿದನು. ಅಷ್ಟು ಹೊತ್ತಿಗೆ ಅಪರಾಹ್ಣವಾಗಿತ್ತು. ಆ ಪತ್ರದಲ್ಲಿ ಹೇಮಗಿರಿಯಿಂದ ವಾರ್ತೆ ಬಂದಿರುವುದಾಗಿಯೂ, ಹೇಮಗಿರಿಯ ಜನರು ರುದ್ರಸಿಂಹನ ವಂಶಕ್ಕೆ ಸಂಬಂಧಿಸಿದವನನ್ನೇ ರಾಜನನ್ನಾಗಿ ಮಾಡಿಕೊಳ್ಳಲು ಒಪ್ಪಲಿಲ್ಲವೆಂದೂ, ಬಲದೇವನ ಬಂಧುವರ್ಗದಲ್ಲಿ ಒಬ್ಬನನ್ನು ರಾಜನನ್ನಾಗಿ ಆರಿಸಿಕೊಳ್ಳಲಿರುವರೆಂದೂ, ಈ ವಿಷಯದಲ್ಲಿ ಮುಂದಿನ ಕ್ರಮ ಕೈಗೊಳ್ಳಲು ತಕ್ಕ ಆಜ್ಞೆ ಮಾಡಲು ಮಹಾರಾಜರು ಘನಗಿರಿಗೆ ಕೂಡಲೇ ಹಿಂತಿರುಗಿ ಬರುವುದು ಒಳ್ಳೆಯದೆಂದೂ ಬರೆದಿತ್ತು. ಅದನ್ನು ಓದಿಸಿ ಕೇಳಿದ ಕೂಡಲೇ ರುದ್ರಸಿಂಹನಿಗೆ ಬಹಳ ಕೋಪ ಬಂತು. ತನ್ನ ಇಚ್ಛೆಯನ್ನು ಒಪ್ಪದ ಹೇಮಗಿರಿ ರಾಜ್ಯದ ಮೇಲೆ ಯುದ್ಧ ಮಾಡಲೇಬೇಕಾಗಿರುವುದೆಂದೂ, ಅದಕ್ಕಾಗಿ ಇನ್ನೂ ತೀವ್ರ ಪ್ರಯತ್ನಗಳನ್ನು ನಡೆಸಬೇಕೆಂದೂ ಪರಿವಾರದವರಿಗೆಲ್ಲಾ ಆದೇಶವನ್ನು ಕೊಟ್ಟು ಕೂಡಲೇ ತಾನು ಅಲ್ಪ ಪರಿವಾರದೊಂದಿಗೆ ಕುದುರೆಗಳ ಮೇಲೆ ಘನಗಿರಿಗೆ ಹಿಂತಿರುಗಲುದ್ಯುಕ್ತನಾದನು. ಕತ್ತಲಾಗುವ ವೇಳೆಗೆ ಇವರೆಲ್ಲರೂ ರಾಮಪುರವೆಂಬ ಗ್ರಾಮಕ್ಕೆ ಬಂದರು. ಅಲ್ಲಿ ಜನರೆಲ್ಲರು ಮಹಾರಾಜರನ್ನು ಸ್ವಾಗತಿಸಿ ಆ ರಾತ್ರಿ ಅಲ್ಲಿಯೇ ಇದ್ದು ಬೆಳಿಗ್ಗೆ ಪ್ರಯಾಣ ಮಾಡಬೇಕೆಂದು ಕೇಳಿಕೊಂಡರು. ಘನಗಿರಿ ಇನ್ನೂ ಎರಡುಮೂರು ಕ್ರೋಶಗಳ ದೂರದಲ್ಲಿ ಮಾತ್ರ ಇದ್ದರೂ ಕತ್ತಲಾದುದರಿಂದ ರುದ್ರಸಿಂಹನು ಅದಕ್ಕೆ ಸಮ್ಮತಿಸಿದನು. ಅಲ್ಲದೆ ಅಲ್ಲಿ ಒಂದು ಪ್ರಸಿದ್ಧವಾದ ದೊಡ್ಡ ರಾಮ ದೇವಸ್ಥಾನವಿತ್ತು. ರುದ್ರಸಿಂಹನಿಗೆ ದೇವರ ದರ್ಶನ ಮಾಡಬೇಕೆಂದು ಆಸೆಯು ಮೂಡಿತು. ಆ ದೇವಸ್ಥಾನದಲ್ಲಿಯೇ ರುದ್ರಸಿಂಹನು ತಂಗಲು ಎಲ್ಲಾ ಏರ್ಪಾಟುಗಳನ್ನು ಗ್ರಾಮಸ್ಥರು ಮತ್ತು ರಾಜ ಪರಿವಾರದವರು ಮಾಡಿದರು.

ರಾತ್ರಿ ರಾಮಾಲಯದಲ್ಲಿ ಪೂಜೆ ನಡೆದ ಮೇಲೆ ರುದ್ರಸಿಂಹನು ತನ್ನ ಪ್ರತಿಜ್ಞೆಯ ಪರಿಪಾಲನೆಯ ವಿಷಯವಾಗಿ ನಾನಾ ರೀತಿಯ ಆಲೋಚನೆಗಳಲ್ಲಿ ಮಗ್ನನಾದನು. ಹೇಗಾದರೂ ಇದನ್ನು ನೆರವೇರಿಸಬೇಕೆಂದು ಸತ್ಯವಾಕ್ಯಪರಿ

ಪಾಲನೂ ಧೀರನೂ ಆದ ಶ್ರೀರಾಮನನ್ನು ಮನಸ್ಸಿನಲ್ಲಿಯೇ ಪ್ರಾರ್ಥಿಸಿಕೊಂಡನು. ವಿಲಾಸಿನಿಯ ಗಾನಪ್ರಭಾವದಿಂದ ಆತನಲ್ಲಿ, ದೈವಶಕ್ತಿಯಲ್ಲಿ ಭಕ್ತಿ ಮೂಡಿತ್ತು.

ಮಾರನೆಯ ದಿನ ಬೆಳಿಗ್ಗೆ ಪ್ರಯಾಣವನ್ನು ಮುಂದುವರಿಸಿ ರುದ್ರಸಿಂಹನು ಘನಗಿರಿಯನ್ನು ತಲುಪಿದನು. ಕೂಡಲೇ ಮಂತ್ರಾಲೋಚನಾ ಮಂದಿರದಲ್ಲಿ ಪ್ರಧಾನಿಯನ್ನೂ ಇತರ ಮಂತ್ರಿಗಳನ್ನೂ, ಸೈನ್ಯಾಧಿಪತಿಯನ್ನೂ, ಕೋಶಾಧಿಪತಿಯನ್ನೂ ಕರೆಸಿಕೊಂಡು ಮಂತ್ರಾಲೋಚನೆ ಮಾಡಿದನು. ಎಲ್ಲರೂ ವಿನಯವಾಗಿ, ಯುದ್ಧ ನಡೆದರೆ ಜಯಗಳಿಸುವಷ್ಟು ಸೈನ್ಯಬಲವಿಲ್ಲವೆಂದೂ, ಆ ವರ್ಷ ಬೆಳೆಗಳು ಸರಿಯಾಗಿ ಆಗದೇ ಇರುವುದರಿಂದ ಹಿಂದೆಯೇ ತೆರಿಗೆಗಳ ಭಾರದಿಂದ ಮಣಿದಿದ್ದ ಜನರಿಗೆ ಯುದ್ಧದಿಂದ ಇನ್ನೂ ಅಪಾರ ಕಷ್ಟನಷ್ಟಗಳು ಸಂಭವಿಸುವುವೆಂದೂ, ಹೇಮಗಿರಿಯ ಚಿಂತೆಯನ್ನು ಬಿಟ್ಟು ಸ್ವದೇಶದ ಜನರಿಗೆ ಸೌಖ್ಯವನ್ನುಂಟುಮಾಡುವ ಪ್ರಯತ್ನಗಳನ್ನು ಮಾಡುವುದು ಲೇಸೆಂದೂ, ಇದರ ಮೇಲೆ ಮಹಾರಾಜರ ಅಪ್ಪಣೆಯಂತೆ ತಾವು ನಡೆದುಕೊಳ್ಳಲು ಸಿದ್ಧರಾಗಿರುವುದಾಗಿಯೂ ಅರಿಕೆ ಮಾಡಿದರು. ಇದನ್ನು ಕೇಳಿ ಬಹಳ ಹೊತ್ತು ಆಲೋಚನೆ ಮಾಡಿದ ರುದ್ರಸಿಂಹನು, ಅವರು ಹೇಳಿದುದನ್ನು ಒಪ್ಪಬಹುದಾದರೂ ತಾನು ಸತ್ಯವಾಕ್ಯಪರಿಪಾಲನೆಯನ್ನು ಮಾತ್ರ ಬಿಡುವುದಿಲ್ಲವೆಂದೂ, ಶ್ರೀ ರಾಮಚಂದ್ರನು ತನಗೆ ತಪ್ಪದೆ ನೆರವಾಗುವನೆಂದೂ, ಯುದ್ಧಪ್ರಯತ್ನವನ್ನು ತೀವ್ರವಾಗಿ ನಡೆಸಬೇಕೆಂದೂ ಆಜ್ಞೆಯಿತ್ತನು.

ಈ ವಿಷಯವು ದೇಶದಾದ್ಯಂತ ಹರಡಿತು. ಜನರಿಗೆಲ್ಲ ಬಹಳ ದುಃಖವೂ ಭಯವೂ ಆದವು. ಆದರೆ ಈ ವಿಪತ್ತಿನಿಂದ ಪಾರಾಗಲು ಮಾರ್ಗವು ಯಾರಿಗೂ ಕಂಡುಬರಲಿಲ್ಲ. ಇನ್ನೂ ಹೇಮಗಿರಿ ರಾಜ್ಯದಿಂದ ದೂತಮುಖವಾಗಿ ಯಾವ ಸಮಾಚಾರವೂ ಬಂದಿರಲಿಲ್ಲವಾದುದರಿಂದ ಭಗವಂತನು ಏನಾದರೂ ಒಂದು ರೂಪದಲ್ಲಿ ಯುದ್ಧವಾಗದಂತೆ ಮಾಡಿಯಾನೆಂಬ ಆಸೆಯನ್ನು ಕೆಲವರಿಟ್ಟುಕೊಂಡಿದ್ದರು.

ರಂಗಯ್ಯನ ಸಹಾಯದಿಂದ ಕುಮಾರನು ಹೇಮಗಿರಿ ರಾಜ್ಯಕ್ಕೆ ಹೋಗಿ ಉಪಾಯದಿಂದ ಅಲ್ಲಿ ವಿಜಯಾಂಬಿಕೆ ರಚಿಸಿದ್ದ ಕೆಲವು ಸಂಸ್ಕೃತ ಕಾವ್ಯಗಳನ್ನು ಸಂಗ್ರಹಿಸಿ ಗುಪ್ತವಾಗಿ ಆಶ್ರಮಕ್ಕೆ ತಂದು ಅಧ್ಯಯನ ಮಾಡುತ್ತಿದ್ದನು. ಆ

ದೇಶದಲ್ಲಿ ರಾಜನಾಗಲು ಇಬ್ಬರ ಹೆಸರುಗಳನ್ನು ಮುಂದಿಟ್ಟುಕೊಂಡು ಸಾಂಸ್ಥಿಕರು ಒಮ್ಮತವಿಲ್ಲದೆ ಕಾಲಹರಣ ಮಾಡುತ್ತಿದ್ದಾರೆಂಬ ವಿಷಯ ಕುಮಾರಸ್ವಾಮಿ ರಂಗಯ್ಯನಿಗೂ, ಆತನ ತಂದೆಗೂ, ಅಲ್ಲಿಂದ ಪ್ರಧಾನಿಗೂ, ಅಲ್ಲಿಂದ ಮಹಾರಾಜರಿಗೂ ತಿಳಿಯಿತು.

## ೨೩

ಘನಗಿರಿ ಪಟ್ಟಣದ ಕೋಟೆಯಲ್ಲಿ ಆಗ್ನೇಯ ಭಾಗವೆಲ್ಲವೂ ರಮ್ಯವಾದ ಉದ್ಯಾನವನಗಳಿಂದ ತುಂಬಿತ್ತು. ಅನೇಕ ವಿಧವಾದ ಹೂಗಳೂ ಹಣ್ಣುಗಳೂ ಅಲ್ಲಿ ಬೆಳೆಯುತ್ತಿದ್ದವು. ತೋಟಗಳ ನಡುವೆ ಅಲ್ಲಲ್ಲಿ ಸುಂದರವಾದ ಕಲ್ಲಿನ ಸೋಪಾನಗಳುಳ್ಳ ಭಾವಿಗಳಿದ್ದವು. ಪಾಲೊಕ್ಕರಿ ಎಂಬ ಕಲ್ಯಾಣಿ ಅವುಗಳಲ್ಲಿ ಬಹಳ ಮನೋಹರವಾಗಿತ್ತು. ಅದರ ನಡುವೆ ಸುಂದರವಾದ ಗೋಪುರವುಳ್ಳ ಒಂದು ಮಂಟಪವಿತ್ತು. ಅದರ ಸುತ್ತಲೂ ಕಲ್ಯಾಣಿಯಲ್ಲಿ ತುಂಬಿದ್ದ ತಿಳಿನೀರಿನಲ್ಲಿ ಅದರ ಪ್ರತಿಬಿಂಬವು ಮನೋಹರವಾಗಿ ಕಾಣಿಸುತ್ತಿತ್ತು. ಆ ಕಲ್ಯಾಣಿಯ ಪೂರ್ವ ದಿಕ್ಕಿಗೆ ಎರಡು ತೋಟಗಳಿದ್ದವು. ಅವುಗಳಲ್ಲಿ ಒಂದು ಸೈನ್ಯಾಧಿಪತಿಗೂ ಅದರ ಪಕ್ಕದಲ್ಲಿರುವ ಮತ್ತೊಂದು ಕೋಶಾಧಿಕಾರಿಗೂ ಸೇರಿದ್ದವು; ಎರಡು ತೋಟಗಳ ನಡುವೆ ಬದಿಯ ಮೇಲೆ ಒಂದು ಸಂಪಿಗೆ ಮರ ದೊಡ್ಡದಾಗಿ ಬೆಳೆದಿತ್ತು.

ಅಂದು ಚೈತ್ರ ಶುದ್ಧ ತ್ರಯೋದಶಿ ; ಬೆಳಗ್ಗೆ ಒಂದು ಜಾವ ಕಳೆದಿತ್ತು. ಕುದುರೆಯ ಮೇಲೆ ಕುಳಿತುಕೊಂಡು ಭಾಗ್ಯಲಕ್ಷ್ಮಿ ಒಬ್ಬಳೇ ತೋಟಗಳ ನಡುವೆ ಡೊಂಕು ಡೊಂಕಾಗಿದ್ದ ಸಣ್ಣ ದಾರಿಯೊಳಗೆ ತನ್ನ ತಂದೆಯ ತೋಟದ ಒಳಗೆ ಬರುತ್ತಿದ್ದಳು. ವಸಂತ ಕಾಲವಾಗಿದ್ದುದರಿಂದ ಎಲ್ಲಿ ನೋಡಿದರೂ ದಟ್ಟವಾದ ಕೆಂದಳಿರುಗಳು ಕಾಣಿಸುತ್ತಿದ್ದವು. ಅಲ್ಲಲ್ಲಿ ಹೂವಿನ ಗಿಡಗಳಲ್ಲಿ ಒತ್ತಾಗಿ ಹೂಗಳೂ ಬಿಟ್ಟಿದ್ದವು ಮಾವಿನ ಮರಗಳಲ್ಲಿ ಹೂವು ಬಿಡುವುದಕ್ಕೆ ಪ್ರಾರಂಭವಾಗಿತ್ತು. ಕಣ್ಣಿಗೆ ಕಾಣಿಸದೆ ದೂರದ ಮಾವಿನ ಮರದಿಂದ ಕೋಗಿಲೆಯೊಂದು ಮಧುರವಾಗಿ ಗಾನ ಮಾಡುತ್ತಿತ್ತು. ಎಲೆಗಳ ಸಂದಿಗಳಿಂದ ಬಂದು ಮೈಮೇಲೆ ಬೀಳುತ್ತಿದ್ದ ಬೆಚ್ಚಗಿರುವ ಬಿಸಿಲೂ, ಹೂಗಳ ಪರಿಮಳ

ವನ್ನು ಹೊತ್ತು ಮೆಲ್ಲನೆ ಬೀಸುತ್ತಿದ್ದ ಗಾಳಿಯೂ ಹಿತಕರವಾಗಿದ್ದವು. ಆ ಹೊತ್ತಿನಲ್ಲಿ ತೋಟಗಳ ನಡುವೆ ಜನಸಂಚಾರವೇ ಇರಲಿಲ್ಲ. ದಾರಿಯಲ್ಲಿ ಭಾಗ್ಯಲಕ್ಷ್ಮಿ ಪಕ್ಕಕ್ಕೆ ತಿರುಗಿನೋಡಿದಳು. ತೋಟಗಳಲ್ಲಿ ಕೆಲಸ ಮಾಡುವ ತನ್ನಷ್ಟೇ ವಯಸ್ಸಾದ ಒಬ್ಬ ಹುಡುಗಿ ಒಂದು ಸಂಪಿಗೆ ಮರದ ಕೆಳಗಡೆ ಬೀಳುತ್ತಿದ್ದ ಸಂಪಿಗೆ ಹೂಗಳನ್ನು ಆರಿಸಿಕೊಳ್ಳುತ್ತಿದ್ದಳು. ಯುವಕನಾದ ಅವಳ ಗಂಡ ಮರದ ಮೇಲೆ ಕುಳಿತು ಹೂಗಳನ್ನು ಕಿತ್ತು ಕಿತ್ತು ಕೆಳಕ್ಕೆ ಹಾಕುತ್ತಿದ್ದನು. ಅವರಿಬ್ಬರೂ ಹೊಸದಾಗಿ ಮದುವೆಯಾಗಿದ್ದರು. ಇಬ್ಬರೂ ಸಲ್ಲಾಪ ಮಾಡುತ್ತಿದ್ದರು. ಗಂಡ ಕೆಳಕ್ಕೆ ಹಾಕುತ್ತಿದ್ದ ಹೂಗಳನ್ನು ನೆಲದ ಮೇಲೆ ಬೀಳುವುದಕ್ಕೆ ಮುಂಚೆಯೇ ಹಿಡಿಯಲು ಅವಳು ಪ್ರಯತ್ನಿಸಿದಾಗಲೆಲ್ಲ ಗಂಡ ಹೆಂಡಿರು ಒಬ್ಬರನ್ನೊಬ್ಬರು ನೋಡಿ ನಗುತ್ತಿದ್ದರು. ಆ ನೋಟದಲ್ಲಿಯೂ, ಆ ನಗುವಿನಲ್ಲಿಯೂ ದಂಪತಿಗಳ ಪ್ರಣಯವು ವಿಕಸಿತವಾಗುತ್ತಿತ್ತು. ಇದನ್ನು ನೋಡುತ್ತಿದ್ದ ಭಾಗ್ಯಲಕ್ಷ್ಮಿಯ ಮನಸ್ಸಿನಲ್ಲಿ ಗೋಪಾಲನ ಧೀರ ಸ್ವರೂಪವು ಗೋಚರವಾಯಿತು. ಅವಳು ಮನಸ್ಸಿನಲ್ಲಿಯೇ ಅವನ ಮುಖವನ್ನು ಆಸಕ್ತಿಯಿಂದ ನೋಡಿದಳು. ಅದರೆ ಆತನ ಮುಖದಲ್ಲಿ ಯಾವ ವಿಕಾರವೂ ಯಾವ ಪ್ರತ್ಯುತ್ತರವೂ ಕಂಡುಬರಲಿಲ್ಲ. ಅವಳು ಅಸಹಾಯತೆಯನ್ನನುಭವಿಸಿದಳು. ಪ್ರಕೃತಿ ಅವಳ ಮನಸ್ಸನ್ನು ಆತನ ಮೇಲಕ್ಕೆ ಅಟ್ಟುತ್ತಿತ್ತು.

ಭಾಗ್ಯಲಕ್ಷ್ಮಿ ತಂದೆಯ ತೋಟಕ್ಕೆ ಬಂದು ನೋಡುವಲ್ಲಿ ರಂಗಯ್ಯನು ಒಂದು ಬುಟ್ಟಿಯನ್ನು ಹಿಡಿದುಕೊಂಡು ತೋಟಗಳ ನಡುವಿನ ಬದಿಯ ಪಕ್ಕದಲ್ಲಿ ಸಂಪಿಗೆ ಮರದ ಕೆಳಗೆ ತನ್ನ ತಂದೆಯ ತೋಟದಲ್ಲಿ ನಿಂತಿದ್ದನು. ಆತನು ಭಾಗ್ಯಲಕ್ಷ್ಮಿಯನ್ನೇ ನೋಡುತ್ತಿದ್ದನು. ಭಾಗ್ಯಲಕ್ಷ್ಮಿ ಆತನ ಇರುವಿಕೆಯನ್ನು ಲಕ್ಷಿಸದೆ ಹೋಗಿ ತನ್ನ ತೋಟದಲ್ಲಿ ಅದೇ ಸಂಪಿಗೆ ಮರದ ಕೆಳಗೆ ನಿಂತುಕೊಂಡಳು. ಸ್ವಲ್ಪ ಹೊತ್ತು ಏನೂ ಮಾತಾಡದೆ ದೂರದಲ್ಲಿ ಅಂತಃಪುರದ ಗೋಪುರಗಳ ಹಿನ್ನೆಲೆಯಲ್ಲಿ ಕಾಣುತ್ತಿದ್ದ ಎತ್ತರವಾದ ಬೆಟ್ಟವನ್ನು ನೋಡುತ್ತ ನಿಂತಿದ್ದಳು. ರಂಗಯ್ಯನು ಸ್ವಲ್ಪ ಹೊತ್ತು ಕಾದು ಅನಂತರ ಮೆಲ್ಲನೆ "ಭಾಗ್ಯಲಕ್ಷ್ಮೀ, ಬೆಟ್ಟದಲ್ಲಿ ಏನು ನೋಡುತ್ತಿದ್ದೀಯೆ. ಈಗ ಎಲ್ಲರೂ ಬೇಟೆಗೆ ಹೋಗುವ ಕಾಲ. ನೀನೂ ಬೇಟೆಯಾಡಬೇಕೆಂದು ಯೋಚಿಸಿ ಬೆಟ್ಟವನ್ನು ನೋಡುತ್ತಿದ್ದೀಯಾ ?" ಎಂದು ಕೇಳಿದನು.

ಭಾಗ್ಯಲಕ್ಷ್ಮಿ ನಿಟ್ಟುಸಿರನ್ನು ಬಿಟ್ಟು ಬಿಟ್ಟವನ್ನೇ ನೋಡುತ್ತಾ "ನಾನೇ ಬೇಟೆಮೃಗವಾಗಿ ಬಿಟ್ಟಿದ್ದೇನೆ." ಎಂದಳು.

ರಂಗಯ್ಯ ಆತುರವಾಗಿ "ಯಾರು ಆ ಬೇಟೆಗಾರ? ಹೇಳು, ನಾನು ನಿನ್ನನ್ನು ರಕ್ಷಿಸುತ್ತೇನೆ." ಅಂದನು.

ಭಾಗ್ಯಲಕ್ಷ್ಮಿ—ಅದು ನನ್ನ ಮನಸ್ಸಿಗೆ ಸಂಬಂಧಿಸಿದ ವಿಷಯ. ಯಾರಿಗೂ ಹೇಳುವುದಿಲ್ಲ.

ರಂಗಯ್ಯ—ಹೇಳದಿದ್ದರೆ ಬೇಡ. ನನ್ನ ಆಶ್ರಯವನ್ನು ಸೇರಿದರೆ ನಿನಗೆ ಅವನಿಂದ ಭಯವಿರುವುದಿಲ್ಲ.

ಭಾಗ್ಯಲಕ್ಷ್ಮಿ—ಆ ಮುಹೂರ್ತಕ್ಕೆ ಕಾದಿರು.

ರಂಗಯ್ಯ—ಆ ಮುಹೂರ್ತ ಯಾವಾಗಲೋ ಏಕೆ? ನೀನು ಮನಸ್ಸು ಮಾಡಿದರೆ ಈಗಲೇ ಬರುತ್ತೆ ಆ ಮುಹೂರ್ತ.

ಹೀಗೆ ಹೇಳುತ್ತಿರುವಾಗಲೇ ಐದಾರು ಸಂಪಿಗೆ ಹೂಗಳು ಮರದಿಂದ ಭಾಗ್ಯಲಕ್ಷ್ಮಿಯ ಎದುರಿನಲ್ಲಿ ನೆಲಕ್ಕೆ ಬಿದ್ದವು. ಭಾಗ್ಯಲಕ್ಷ್ಮಿಗೆ ಅಶ್ಚರ್ಯ ವಾಯಿತು. ಅವಳಮನ ಹೂಗಳ ಮೇಲೆ ಹೋಯಿತು. ಅವಳು ಹೂಗಳನ್ನೆತ್ತಿ ಕೊಂಡು ಮೇಲಕ್ಕೆ ನೋಡಿದಳು. ಮರದ ಮೇಲೆ ಗೋಪಾಲನು ಕಾಣಿಸಲಿಲ್ಲ. ಯಾರೂ ಕಾಣಿಸಲಿಲ್ಲ. ರಂಗಯ್ಯನನ್ನು ನೋಡಿದಳು. ಆತನು ಹೂಗಳಿಗಾಗಿ ಭಿಕ್ಷೆ ಬೇಡುವಂತೆ ಬುಟ್ಟಿಯನ್ನು ಹಿಡಿದಿದ್ದನು. ಹೂಗಳಿಂದ ಬುಟ್ಟಿ ಆಗಲೇ ಅರ್ಧ ತುಂಬಿತ್ತು. ಹೂಗಳನ್ನು ಅದರಲ್ಲಿ ಹಾಕಲಿದ್ದವಳು ಬುಟ್ಟಿಯಲ್ಲಿದ್ದ ಹೂ ಗಳನ್ನು ನೋಡಿ "ಏನು ಭಾವಾ, ಈ ಹೂಗಳು ಯಾರಿಗಾಗಿ ?" ಎಂದು ಕೇಳಿ ದಳು. ರಂಗಯ್ಯನು "ನಿನ್ನನ್ನು ಬೇಟೆ ಮಾಡುವವನಿಗಾಗಿ" ಎಂದು ಉತ್ತರ ಕೊಟ್ಟ. "ಸಾಕು ಭಾವಯ್ಯಾ, ನನ್ನ ಜೊತೆಯಲ್ಲಿ ಸರಸ, ನಿಜ ಹೇಳು." ಎಂದು ಭಾಗ್ಯಲಕ್ಷ್ಮಿ ಹೇಳಿದಳು. ರಂಗಯ್ಯನು "ನಿಜವಾಗಿ" ಎಂದು ಉತ್ತರ ಕೊಟ್ಟ. ಆ ವೇಳೆಗೆ ಸರಿಯಾಗಿ ಸಂಪಿಗೆ ಮರದಿಂದ ಕೋಗಿಲೆಯ ಕೂಗು ಕೇಳಿ ಸಿತು. ರಂಗಯ್ಯ ಹೇಳಿದ "ಅಗೋ ಕೇಳು. ಕೋಗಿಲೆಯೂ ನನ್ನ ಮಾತು ಸತ್ಯವೆಂದು ಹೇಳುತ್ತಾ ಇದೆ." ಎಂದು. ಭಾಗ್ಯಲಕ್ಷ್ಮಿಗೆ ಆಶ್ಚರ್ಯವಾಯಿತು. ಮೇಲೆ ನೋಡಿದಳು. ಏನೂ, ಯಾರೂ ಕಾಣಿಸಲಿಲ್ಲ. ಭಾಗ್ಯಲಕ್ಷ್ಮಿ ಹೇಳಿ

ದಳು: "ಹಾಗಾದರೆ ನಿನಗೆ ಆ ಬೇಟೆಗಾರನ ಮೇಲೆ ಅಸೂಯೆಯಿಲ್ಲವೆಂದಾಯಿತು."

ರಂಗಯ್ಯ—ಆ ಬೇಟೆಗಾರನಿಗೆ ಭಾಗ್ಯಲಕ್ಷ್ಮಿ ಬೇಡ. ಹೂಗಳು ಬೇಕು. ಹೂಗಳನ್ನು ಕೇಳಿದ್ದಾನೆ. ಕೊಡುತ್ತೇನೆ. ನೀನೂ ನನ್ನ ಜೊತೆಯಲ್ಲಿ ಸೇರಿದರೆ ಇಬ್ಬರೂ ಕೊಡೋಣ. ಈ ಮರ ನಮ್ಮಿಬ್ಬರಿಗೂ ಸೇರಿದ್ದು.

"ಆ ವೇಳೆಗೆ ಸರಿಯಾಗಿ ಮತ್ತೆ ಐದಾರು ಸಂಪಿಗೆ ಹೂಗಳು ಮರದಿಂದ ಭಾಗ್ಯಲಕ್ಷ್ಮಿಯ ಮುಂದೆ ನೆಲಕ್ಕೆ ಬಿದ್ದವು. ಭಾಗ್ಯಲಕ್ಷ್ಮಿಗೆ ಆಶ್ಚರ್ಯವಾಯಿತು. ಮೇಲೆ ನೋಡಿದಳು. ಯಾರೂ ಕಾಣಿಸಲಿಲ್ಲ. ಪುನಃ ಕೋಗಿಲೆಯ ಧ್ವನಿ ಕೇಳಿ ಬಂತು. ಭಾಗ್ಯಲಕ್ಷ್ಮಿಗೆ ಸಂದೇಹವುಂಟಾಯಿತು. ಮರದ ಮೇಲೆ ಕುಳಿತು ಯಾರೋ ಕಪಿ ಚೇಷ್ಟೆಗಳನ್ನು ಮಾಡುತ್ತಿದ್ದಾರೆಂದು. ಅವಳು ಜೋರಾಗಿ ನಕ್ಕು ಬಿಟ್ಟಳು. "ಛಲಚ್ಛಲಾ, ನೀನೇನಾ ಚೇಷ್ಟೆಗಳನ್ನು ಮಾಡುತ್ತಿರುವುದು?" ಎಂದು ಗಟ್ಟಿಯಾಗಿ ಕೂಗಿದಳು. ಮರದ ಮೇಲೆ ಕುಳಿತಿದ್ದ ಛಲಚ್ಛಲನು ಭಯಂಕರವಾದ ಧ್ವನಿಯನ್ನು ಮಾಡಿದ. ರಂಗಯ್ಯನು ಭಯದಿಂದ ಮರದ ಕಾಂಡವನ್ನಪ್ಪಿಕೊಂಡ. ಛಲಚ್ಛಲನು ಮರದಿಂದ ಕೆಳಕ್ಕೆ ಧುಮುಕಿದ.

ಭಾಗ್ಯಲಕ್ಷ್ಮಿಯು "ಏನು ಭಾವಯ್ಯಾ, ನೀನಿಷ್ಟು ಭಯ ಬೀಳುತ್ತೀಯಲ್ಲಾ. ಹೇಗೆ?" ಎಂದಳು.

ರಂಗಯ್ಯ—ಅಬ್ಬಬ್ಬ, ಇವನೊಬ್ಬ ಅಸಾಧ್ಯ. ನನ್ನನ್ನೇ ಹೆದರಿಸಿಬಿಟ್ಟ.

ಭಾಗ್ಯಲಕ್ಷ್ಮಿ—ಏನು ಛಲಾ, ನನ್ನ ಅನುಮತಿ ಇಲ್ಲದೆ ನೀನು ಈ ಮರವನ್ನೇಕೆ ಹತ್ತಿದೆ? ಹೂಗಳನ್ನೇಕೆ ಕಿತ್ತೆ?"

ಛಲಚ್ಛಲ—ಅಮ್ಮಾ, ಈ ಮರಕ್ಕೆ ತಾವು ಯಜಮಾನಿತಿ, ರಂಗಯ್ಯನವರು ಯಜಮಾನರು. ಯಜಮಾನರು ಅನುಮತಿ ಕೊಟ್ಟರೆ ಸಾಲದೇ?

ಭಾಗ್ಯ—ನೀನೂ ಮದುವೆ ಮಾಡುವ ಪುರೋಹಿತನಾಗಿಬಿಟ್ಟೆಯಾ?

ಛಲಚ್ಛಲ—ನಾನು ಪುರೋಹಿತನು ಹೇಗಾಗುತ್ತೇನೆ ತಾಯೀ? ಗೋಪಾಲನು ರಂಗಯ್ಯನನ್ನು ಕೇಳಿ ಹೂಗಳು ತೆಗೆದುಕೊಂಡು ಬಾ. ವರದಪ್ಪ ಸ್ವಾಮಿಗಳ ಆಶ್ರಮದಲ್ಲ ವಸಂತೋತ್ಸವಕ್ಕೆ ಬೇಕು. ಎಂದು ಕಳುಹಿಸಿದ ಬಂದೆ. ಯಜಮಾನರೂ ದೊಡ್ಡ ಮನಸ್ಸು ಮಾಡಿ ಜೊತೆಯಲ್ಲಿ ಬಂದರು.

ಭಾಗ್ಯ—ಗೋಪಾಲನು ನನಗೆ ಹೇಳಿ ಕಳುಹಿಸಿದ್ದರೆ ನಾನು ಕೊಡುತ್ತಿರ ಲಿಲ್ಲವೇ.

ಛಲಚ್ಛಲ—ಅದಕ್ಕೆ ಸಂದೇಹವುಂಟೇ ತಾಯೀ? ಈಗ ಕೊಡಿ, ಇಬ್ಬರೂ ಕೊಡಿ. ಇಬ್ಬರೂ ಸೇರಿ ಕೊಡಿ. ದಂಡಿಯಾಗಿ ತೆಗೆದುಕೊಂಡು ಹೋಗುತ್ತೇನೆ. ಗೋಪಾಲನಿಗೆ ತೃಪ್ತಿ ಆಗುತ್ತೆ. ಆಶ್ರಮದಲ್ಲಿ ದೇವರಿಗೆ ಪೂಜೆ ಆಗುತ್ತೆ. ಆ ಮೇಲೆ ಕಮಲಮ್ಮ, ವಿಲಾಸಿನಿಯಮ್ಮ, ಉತ್ಸವಕ್ಕೆ ಬಂದಿರುವ ಪಂಡಿತರೂ ಎಲ್ಲರಿಗೂ ತೃಪ್ತಿ ಆಗುತ್ತೆ.

ಭಾಗ್ಯ—ನೋಡಿದೆಯಾ ಭಾವಯ್ಯಾ ಇವನು ಹೇಗೆ ಮಾತಾಡುತ್ತಾನೆ? ನಾನು ಬರುವುದಕ್ಕೆ ಮುಂಚೆ ನಿನ್ನಿಂದ ಕಲಿತಿರಬೇಕು.

ರಂಗ—ಅವನು ನನ್ನ ಶಿಷ್ಯನಲ್ಲ. ಗೋಪಾಲನ ಶಿಷ್ಯ.

ಭಾಗ್ಯ—ಗೋಪಾಲನಿಗೆ ಮಾತಾಡುವುದೇ ಬರುವುದಿಲ್ಲವಲ್ಲಾ ?

ರಂಗ—ಹೌದು. ಬೇಟೆಯಾಡುವುದೊಂದೇ ಬರುವುದು.

ಭಾಗ್ಯಲಕ್ಷ್ಮಿ "ನಾನಿಲ್ಲಿರುವುದಿಲ್ಲ" ಎಂದು ನಗುತ್ತ ಹೇಳಿ ಓಡಿ ಹೋಗಿ ಕುದುರೆಯನ್ನು ಹತ್ತಿ ಮನೆಯ ಕಡೆ ಹೊರಟಳು.

## ೨೪

ಮಾರನೆಯ ದಿನ ಅಪರಾಹ್ಣದಲ್ಲಿ ಛಲಚ್ಛಲನು ಭಾಗ್ಯಲಕ್ಷ್ಮಿಯ ಮನೆಗೆ ಬಂದನು. ಭಾಗ್ಯಲಕ್ಷ್ಮಿ ಅವನನ್ನು ಸ್ವಾಗತಿಸಿದಳು. ಅವನು ನೆಲದ ಮೇಲೆ ಹಾಸಿದ್ದ ರತ್ನಕಂಬಳಿಯ ಮೇಲೆ ಕುಳಿತುಕೊಂಡನು. ಭಾಗ್ಯಲಕ್ಷ್ಮಿ ಒಂದು ಕುರ್ಚಿಯ ಮೇಲೆ ಕುಳಿತುಕೊಂಡು ಅವನೊಂದಿಗೆ ಮಾತನಾಡಲಾರಂಭಿಸಿದಳು.

ಭಾಗ್ಯ—ಏನು ಛಲಾ, ಎಲ್ಲಿಂದ ಬಂದೆ?

ಛಲ—ಎಲ್ಲಿಂದ ಬರುತ್ತೇನೆ ತಾಯೀ? ನನ್ನ ಯಜಮಾನನ ಮನೆಯಿಂದ ಬಂದೆ.

ಭಾಗ್ಯ—ಯಜಮಾನನು ಕಳುಹಿಸಿಕೊಟ್ಟನೋ?; ಯಜಮಾನನ ತಾಯಿ ಕಳುಹಿಸಿಕೊಟ್ಟಳೋ ? ಯಜಮಾನಿತಿ ಇಲ್ಲವಲ್ಲಾ ಕಳುಹಿಸಿಕೊಡುವುದಕ್ಕೆ.

ಛಲ—ಯಾಕಿಲ್ಲ ತಾಯೀ. ಎಲ್ಲೋ ಒಂದು ಕಡೆ ಇದ್ದೇ ಇರುತ್ತಾಳಲ್ಲಾ. ಇನ್ನೂ ಹುಟ್ಟಿಯೇ ಇಲ್ಲ ಅಂತ ಹೇಳುವುದಕ್ಕೆ ಆಗುವುದಿಲ್ಲವಲ್ಲಾ.

ಭಾಗ್ಯ—ಹುಟ್ಟಿದ್ದಾಳೆ. ಬೆಳೆದಿದ್ದಾಳೆ. ಆದರೆ ಯಜಮಾನಿತಿ ಆಗಿಲ್ಲ ಇನ್ನೂ.

ಛಲಚ್ಛಲನು "ಅಷ್ಟೇ ಅಲ್ಲ, ಅವಳನ್ನು ನಾನು ನೋಡಿಯೂ ಇದ್ದೇನೆ. ಆ ಯಜಮಾನಿತಿ ಸಹ ನನ್ನನ್ನು ಕಳುಹಿಸಿಕೊಟ್ಟಳು."

ಈ ಮಾತಿನಿಂದ ಭಾಗ್ಯಲಕ್ಷ್ಮಿಯ ಮನಸ್ಸಿಗೆ ಆಘಾತವುಂಟಾಯಿತು. ಅವಳ ಮುಖದಲ್ಲಿ ಕೋಪದ ರೇಖೆ ಕಾಣಿಸಿತು. ಅವಳು ಬಾಯಿಂದ ಹೊರಡಲಿರುವ ಮಾತನ್ನು ಅಡಗಿಸಿಕೊಂಡು ಸ್ವಲ್ಪ ಹೊತ್ತು ಮೌನ ತಾಳಿದಳು. ಛಲಚ್ಛಲನೂ ನಾನೇಕೆ ಹೀಗೆ ಮಾತನಾಡಿದೆ? ಎಂದು ಮನಸ್ಸಿನಲ್ಲಿ ಬೇಜಾರುಪಟ್ಟ. ಸ್ವಲ್ಪ ಹೊತ್ತಾದ ಮೇಲೆ "ಅಮ್ಮಾ, ನಾನೇನಾದರೂ ಚಮತ್ಕಾರವಾಗಿ ಮಾತನಾಡಿದರೆ ನಿಮ್ಮ ವಿನೋದಕ್ಕಾಗಿಯೇ ಹೊರತು ಬೇರೆ ಭಾವವೆಯಿಂದಲ್ಲ. ನೀವು ಮನಸ್ಸಿಗೆ ತಪ್ಪು ತಿಳಿದುಕೊಳ್ಳಬೇಡಿ" ಎಂದನು. ಭಾಗ್ಯಲಕ್ಷ್ಮಿ ಸಮಾಧಾನ ಪಡೆದಳು. ಬಳಿಕ ಹೇಳಿದಳು "ಛಲಾ, ನನಗೆ ನಿನ್ನ ಸ್ವಭಾವ ಗೊತ್ತಿಲ್ಲವೇ? ನೀನು ಬಹಳ ಒಳ್ಳೆಯ ಮನುಷ್ಯ. ಹೋಗಲಿ, ನೀನಿಲ್ಲಿಗೆ ಏಕೆ ಬಂದೆ ಹೇಳು."

ಛಲ—ಗೋಪಾಲನೂ, ಕಮಲಮ್ಮನೂ ಕಳುಹಿಸಿದರು. ಬಂದೆ.

ಭಾಗ್ಯ—ಅದು ಆಗಲೇ ತಿಳಿಯಿತಲ್ಲಾ. ಅವರೇಕೆ ಕಳುಹಿಸಿದರು?

ಛಲ—ಬಡವರು ಭಾಗ್ಯವಂತರ ಬಳಿಗೆ ಏಕೆ ಬರುತ್ತಾರೆ ತಾಯೀ, ಏನಾದರೂ ಧನವೋ ಧಾನ್ಯವೋ ಬೇಡಲು ತಾನೇ ಬರುವುದು.

ಭಾಗ್ಯ—ಗೋಪಾಲನು ಧನವನ್ನೂ ಧಾನ್ಯವನ್ನೂ ಬೇಡಲು ನನ್ನ ಬಳಿಗೆ ನಿನ್ನನ್ನು ಕಳುಹಿಸಿದನೇ? ಆಶ್ಚರ್ಯ. ನಾನು ನಂಬಲಾರೆ! ಮಹಾರಾಜರು ಕೊಟ್ಟ ಬಹುಮಾನವನ್ನೇ ತೆಗೆದುಕೊಳ್ಳದ ಆ ಸನ್ಯಾಸಿ ನನ್ನ ಬಳಿಗೆ ಬೇಡುವುದಕ್ಕೆ ಕಳುಹಿಸಿದನೇ.

ಛಲ—ಕಳುಹಿಸದಿದ್ದರೆ ನಾನು ಬರುತ್ತೇನೆಯೇ, ತಾಯೀ? ಆದರೆ ತನಗಾಗಿ ಅಲ್ಲ. ವರದಪ್ಪ ಸ್ವಾಮಿಗಳ ಆಶ್ರಮದಲ್ಲಿ ನಡೆಯುತ್ತಿರುವ ವಸಂತೋತ್ಸವಕ್ಕಾಗಿ ನಿನ್ನ ಬಳಿ ಕಳುಹಿಸಿದ್ದೊಂದೇ ಅಲ್ಲ. ಗೋಪಾಲನೂ ಕಮಲಮ್ಮನೂ

ಸ್ವಾಮಿಗಳ ಶಿಷ್ಯರ ಜೊತೆಯಲ್ಲಿ ಪಟ್ಟಣದ ಬೀದಿ ಬೀದಿಗಳಲ್ಲೂ ತಿರುಗುತ್ತಾ ಇದ್ದಾರೆ.

ಭಾಗ್ಯ—ಇದು ಎಂತಹ ಮೂರ್ಖತನ! ತಾನು ಮನಸ್ಸು ಮಾಡಿದರೆ ದೊಡ್ಡ ಅಧಿಕಾರಸ್ಥನಾಗಬಹುದು. ಅಷ್ಟು ಶಕ್ತಿ ಇಟ್ಟುಕೊಂಡು ಗೋಪಾಲನು ಬೀದಿಗಳಲ್ಲಿ ಭಿಕ್ಷೆ ಬೇಡಲು ಹೊರಡುವುದೇ? ಇದೇನು ಗ್ರಹಚಾರ? ನಾನು ಆತನಿಗೆ ಹೇಳಿದ್ದೆಲ್ಲಾ ವ್ಯರ್ಥವಾಯಿತು. ಈ ಹುಚ್ಚು ಎಂದಿಗೆ ಬಿಡುತ್ತೋ. ದೊಡ್ಡ ಪದವಿಯನ್ನು ಪಡೆದ ಮೇಲೆ ಇನ್ನೂ ಹೆಚ್ಚಾಗಿ ಪಂಡಿತರಿಗೆ ಇಡಬಹುದಲ್ಲಾ? ಭಿಕ್ಷೆ ಬೇಡುವ ಕಷ್ಟವೇ ತಪ್ಪುತ್ತಲ್ಲಾ, ದಡ್ಡತನ (ಎಂದು ಹೇಳಿ ತಲೆ ಚಚ್ಚಿಕೊಂಡಳು.)

ಭಲಚ್ಛಲ—ಗೋಪಾಲನಿಗೆ ಐಶ್ವರ್ಯ ದೇವತೆಗಿಂತಲೂ ದಾರಿದ್ರ್ಯ ದೇವತೆಯ ಮೇಲೆ ಹೆಚ್ಚು ಪ್ರೀತಿ, ತಾಯೀ.

ಭಾಗ್ಯ—ಆ ದಾರಿದ್ರ್ಯದೇವತೆಯ ವರಪ್ರಸಾದಕ್ಕೇ ಕಾದಿರಬೇಕು. ಇಲ್ಲದಿದ್ದರೆ ಪ್ರೀತಿ ಎಲ್ಲಿಂದ ಹುಟ್ಟುತ್ತೆ?

ಭಲಚ್ಛಲನು ಪ್ರತ್ಯುತ್ತರ ಕೊಡಬೇಕೆಂದಿದ್ದವನು ಸುಮ್ಮನಾದ. ಭಾಗ್ಯ ಲಕ್ಷ್ಮಿ ಸ್ವಲ್ಪ ಹೊತ್ತು ತದೇಕ ಧ್ಯಾನದಲ್ಲಿ ಆಲೋಚನೆ ಮಾಡಿ ಮತ್ತೆ ಹೇಳಿದಳು. "ನನಗೂ ದರಿದ್ರ ದೇವರ ಮೇಲೆ ಪ್ರೀತಿ ಹುಟ್ಟಿದೆ ಭಲಾ. ಅದೇ ನನ್ನನ್ನು ಕಾಡಿಸುತ್ತಾ ಇದೆ. ಒಂದು ಕಡೆ ಸ್ಥಿರವಾಗಿರಲು ಸಾಧ್ಯವಿಲ್ಲ. ಎಲ್ಲಿಗಾದರೂ ಓಡಿಹೋಗೋಣ ಅನ್ನಿಸುತ್ತೆ. ಎಲ್ಲಿಗೆ ಹೋಗಲಿ?"

ಭಲ—ಪ್ರೀತಿಯ ಸ್ವಭಾವವೇ ಹಾಗೆ ತಾಯೀ. ನಿಮಗೆ ಯಾವ ದಿಕ್ಕಿಗೆ ಹೋಗಬೇಕೆನ್ನಿಸುತ್ತದೆ?

ಭಾಗ್ಯ—ನನಗೆ ಮೇಲೆ ಹೋಗಬೇಕೆನ್ನಿಸುತ್ತದೆ.

ಭಲ—ಹಾಗಾದರೆ ಬೆಟ್ಟ ಹತ್ತೋಣವೇ? ನಾನೂ ಬರಲೇ?

ಭಾಗ್ಯ—ಹೋಗೋಣ ಬಾ. ಅಲ್ಲಿಂದ ಬಂದ ಮೇಲೆ ನಮ್ಮ ತಂದೆಯವರು ಬಂದಿರುತ್ತಾರೆ. ಅವರನ್ನು ಕೇಳಿ ಉತ್ಸವಕ್ಕೆ ಕಾಣಿಕೆ ಕೊಡಿಸುತ್ತೇನೆ.

ಇಬ್ಬರೂ ಕುದುರೆಗಳ ಮೇಲೆ ಕುಳಿತು ಬೆಟ್ಟ ಹತ್ತುತ್ತಿದ್ದರು. ದಾರಿಯಲ್ಲಿ ಅಲ್ಲಲ್ಲಿ ನಿಂತು ನಿಂತು ಮಾತಾಡುತ್ತ ಹೋಗುತ್ತಿದ್ದರು. ಭಾಗ್ಯಲಕ್ಷ್ಮಿ ತನಗೆ ಗೋಪಾಲನನ್ನು ಮದುವೆಯಾಗಬೇಕೆಂಬ ಆಸೆಯಿದೆಯೆಂದೂ, ಗೋಪಾ

ಲನು ಉನ್ನತ ಪದವಿಯನ್ನು ಹೊಂದಿದರೆ ಮಾತ್ರ ಅದು ಸಾಧ್ಯವೆಂದೂ ಆತನಿಗೆ ಮನ ಬಿಚ್ಚಿ ಹೇಳಿದಳು. "ನಾನು ಕೋಪದಿಂದ ಗೋಪಾಲನನ್ನು ಬೈದೆನೆಂದು ಆತನಿಗೆ ಹೇಳಬೇಡ" ಎಂದೂ ಛಲಚ್ಛಲನಿಗೆ ಹೇಳಿದಳು.

ಛಲ—ನಿಮ್ಮ ಸ್ವಭಾವ ಗೋಪಾಲನಿಗೆ ಗೊತ್ತು ತಾಯೀ. ನೀವು ಬಯ್ಯುವುದೂ ಗೊತ್ತು. ಅದನ್ನು ನನಗೆ ಹೇಳಿ ಆತನು ನಕ್ಕುಬಿಟ್ಟ. ಆತನಿಗೆ ನಿಮ್ಮ ಮೇಲೆ ಬಹಳ ಪ್ರೀತಿ.

ಭಾಗ್ಯಲಕ್ಷ್ಮಿಯ ಮುಖವರಳಿತು.

ಭಾಗ್ಯ—ಛಲಾ, ನೀನು ನನಗೆ ಆಪ್ತನೆಂದು ನಿನಗೆ ಒಂದು ಮಾತು ಹೇಳಬಹುದೇ ?

ಛಲ—ಅವಶ್ಯವಾಗಿ ಹೇಳಿ ತಾಯೀ.

ಭಾಗ್ಯ—ನೀನು ಗೋಪಾಲನ ಮೇಲೆ ನನಗಿರುವ ಪ್ರೀತಿಯನ್ನೂ, ಅವನನ್ನು ಮದುವೆಯಾಗಬೇಕೆಂಬ ಆಸೆಯನ್ನೂ ಆತನಿಗೆ ಸ್ಪಷ್ಟವಾಗಿ ಹೇಳು. ಉನ್ನತ ಪದವಿಗೆ ಪ್ರಯತ್ನಿಸಬೇಕೆಂದು ಬೋಧೆ ಮಾಡು.

ಹೀಗೆ ಹೇಳಿ ಸ್ವಲ್ಪ ಹೊತ್ತು ತಾಳಿ "ನಾನು ಮನಸ್ಸಿನಲ್ಲಿ ಅನುಭವಿಸುತ್ತಿರುವ ಬಾಧೆಯನ್ನೂ ಆತನಿಗೆ ಹೇಳು" ಎಂದು ನುಡಿದಳು.

ಛಲ—ಕ್ಷಮಿಸಿ ತಾಯೀ, ನನಗೆ ಗೋಪಾಲನು ಯಜಮಾನ. ಈ ವಿಷಯಗಳನ್ನು ನಾನು ಹೇಗೆ ಹೇಳಲಿ ?

ಭಾಗ್ಯ—ಹಾಗಾದರೆ ನಾನೇ ಹೇಳುತ್ತೇನೆ. ಗೋಪಾಲನನ್ನು ಇಲ್ಲಿಗೆ ಕರೆತರುವಿಯಾ ?

ಛಲ—ತಮ್ಮ ಅಪ್ಪಣೆ. ನಾನು ಹೋಗಿಬರಲಾ ?

ಭಾಗ್ಯ—ಕೂಡಲೇ ಕರೆದುಕೊಂಡು ಬಾ. ನನ್ನ ಮೇಲೆ ಪ್ರೀತಿ ಇದ್ದರೆ ಬರುತ್ತಾನೆ.

ಛಲ—ತಾವು ಕರೆದಿರಿ ಎಂದು ಹೇಳಿದರೆ ತಪ್ಪದೆ ಬರುತ್ತಾನೆ ತಾಯೀ. ತಮ್ಮ ಮೇಲೆ ಪ್ರೀತಿ ಗೌರವಗಳೆರಡೂ ಇವೆ. ಆತನು ಬಹಳ ಸಾಧು. ತಾವು ಇಲ್ಲಿಯೇ ಈ ದೇವಸ್ಥಾನದ ಬಳಿ ಇರಿ.

ಛಲಚ್ಛಲನು ಹೊರಟು ಹೋದನು. ಭಾಗ್ಯಲಕ್ಷ್ಮಿ ಬೆಟ್ಟವನ್ನು ಸ್ವಲ್ಪ

ಮಾತ್ರ ಕಟ್ಟಿದಳು; ಅಲ್ಲಿದ್ದ ಆಂಜನೇಯನ ದೇವಸ್ಥಾನದ ಜಗುಲಿಯ ಮೇಲೆ ಕುಳಿತುಕೊಂಡಳು.

ಸ್ವಲ್ಪ ಹೊತ್ತಾದ ಮೇಲೆ ಗೋಪಾಲನೂ ಛಲಪತ್ಯನೂ ಒಂದೇ ಕುದುರೆಯ ಮೇಲೆ ಕುಳಿತು ಅಲ್ಲಿಗೆ ಬಂದರು. ಭಾಗ್ಯಲಕ್ಷ್ಮಿ ನಿಂತು ಗೋಪಾಲನನ್ನು ಸ್ವಾಗತಿಸಿದಳು. ಎಲ್ಲರೂ ನಿಂತುಕೊಂಡೇ ಮಾತಾಡಿದರು.

ಭಾಗ್ಯ—ನಾನು ನಿನ್ನನ್ನಿಲ್ಲಿಗೆ ಕರೆಸಿದ್ದಕ್ಕೆ ಕ್ಷಮಿಸು ಗೋಪಾಲಾ. ನಾನೇ ನಿಮ್ಮ ಮನೆಗೇ ಬರಬಹುದಾಗಿತ್ತು. ನಾನೂ ಎಷ್ಟೋ ಸಲ ನಿಮ್ಮ ಮನೆಗೆ ಬಂದಿದ್ದೇನೆ. ಆದರೆ ಅಲ್ಲಿ ನಾವು ಕೆಲವು ವಿಷಯಗಳನ್ನು ಮಾತಾಡಲು ಅವಕಾಶವಾಗುವುದಿಲ್ಲ. ಆದುದರಿಂದ ನೀನೇ ಇಷ್ಟು ದೂರ ಬರಬೇಕಾಯಿತು.

ಗೋಪಾಲ—ಹತ್ತಿರದವರು ಹೇಳಿಕಳುಹಿಸಿದಾಗ ಹೋಗುವುದರಲ್ಲಿ ದೂರದ ಲೆಕ್ಕವೇ?

ಭಾಗ್ಯ—ನೀನು ಬಹಳ ಒಳ್ಳೆಯವನು. ನನ್ನ ಮೇಲೆ ನಿನಗೆ ಬಹಳ ಪ್ರೀತಿ. ನಾವಿಬ್ಬರೂ ಒಬ್ಬರಿಗೊಬ್ಬರು ಹತ್ತಿರ ಇದ್ದೇವೆ. ಆದರೆ ನಮ್ಮ ನಡುವೆ ಬಹಳ ದೂರವೂ ಇದೆ. ಅದೇ ನನಗೆ ವ್ಯಥೆಯನ್ನುಂಟುಮಾಡುತ್ತಿದೆ. ನೀನು ಹತ್ತಿರವಿದ್ದೂ ನನ್ನ ಪಾಲಿಗಿಲ್ಲದವನಾಗಿ ನನ್ನನ್ನು ಕಾಡಿಸುತ್ತಿದ್ದೀಯೆ.

ಗೋಪಾಲ—ಭಾಗ್ಯಲಕ್ಷ್ಮೀ, ನೀನು ಇನ್ನೂ ಚಿಕ್ಕವಳು. ಇಂತಹ ಯೋಚನೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬಾರದು. ನಿನಗೇನು ಕಡಿಮೆಯಾಗಿದೆ? ನಿಮ್ಮ ತಂದೆ ಯಾವ ವರನಿಗೆ ಕೊಟ್ಟು ಮದುವೆ ಮಾಡಿದರೆ ಅವನನ್ನು ಪ್ರೀತಿಸಿ ನಿನ್ನ ಬಾಳನ್ನು ಬೆಳಗಿಸು.

ಭಾಗ್ಯ—ನಮ್ಮ ತಂದೆಯವರು ನಾನು ಒಪ್ಪಿದ ವರನಿಗೇ ನನ್ನನ್ನು ಕೊಡುವುದಾಗಿ ಒಪ್ಪಿಕೊಂಡಿದ್ದಾರೆ. ಆದರೆ ಆ ವರನ ಅಂತಸ್ತು ನಮ್ಮ ಅಂತಸ್ತಿಗೆ ಸರಿಯಾಗಿರಬೇಕಂತೆ. ಅದಕ್ಕೆ ನಾನೂ ಒಪ್ಪಿಗೆ ಕೊಟ್ಟಿದ್ದೇನೆ. ನನಗೆ ನಿನ್ನನ್ನು ಮದುವೆಯಾಗಬೇಕೆಂಬ ಆಸೆ ಬಹಳವಾಗಿದೆ. ಆದರೆ ನೀನು ತಟಸ್ಥನಾಗಿರುವೆ. ನನ್ನ ಮಾತನ್ನು ಕೇಳಿ ನೀನು ದೊಡ್ಡ ಪದವಿಗೆ ಪ್ರಯತ್ನಿಸಿದರೆ ಎಲ್ಲವೂ ಒಡಗೂಡುತ್ತೆ.

ಗೋಪಾಲ—ಪದವಿಯ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ನಿನಗಾಗಲೇ ತಿಳಿಸಿದ್ದೇನಲ್ಲಾ.

ಭಾಗ್ಯ—ನಿನಗೆ ಪದವಿಯ ಮೇಲೆ ಆಸೆಯಿಲ್ಲ. ಅದನ್ನೂ ಒಪ್ಪಬಹುದು. ಪದವಿಗೆ ಪ್ರಯತ್ನ ಮಾಡುವುದರಲ್ಲಿ ತಪ್ಪೇನಿಲ್ಲವಲ್ಲಾ? ಯಾರ ಸೊತ್ತನ್ನೂ ಕಿತ್ತುಕೊಳ್ಳುವುದಿಲ್ಲವಲ್ಲಾ? ಪದವಿಯಲ್ಲಿದ್ದರೆ ಸತ್ಪುರುಷರಿಗೂ ಬಡವರಿಗೂ ಸಹಾಯ ಮಾಡಬಹುದಲ್ಲಾ? ನನ್ನ ಮೇಲೆ ಪ್ರೀತಿಯಿದ್ದರೆ ನೀನು ಪದವಿಗೆ ಪ್ರಯತ್ನಿಸ ಬಹುದಲ್ಲಾ?

ಗೋಪಾಲ—ನೀನು ಹೀಗೆ ಹೇಳುವುದರಲ್ಲಿ ತಪ್ಪೇನಿಲ್ಲ ಭಾಗ್ಯಲಕ್ಷ್ಮೀ. ಆದರೆ ಬ್ರಹ್ಮದೇವನು ಯಾರಿಗೆ ಯಾರನ್ನು ಗಂಟುಹಾಕಿದ್ದಾನೋ? ಇನ್ನೂ ಎಂದೋ ನಡೆಯಲಿರುವ ಮದುವೆಯ ವಿಷಯವಾಗಿ ಇಂದಿನಿಂದ ಯೋಚನೆಗಳನ್ನು ಇಟ್ಟುಕೊಳ್ಳಬಾರದು. ಸಮಯ ಬಂದಾಗ ದೊಡ್ಡವರ ಅನುಮೋದನೆಗೆ ಒಳಪಟ್ಟು ಒಂದು ತೀರ್ಮಾನಮಾಡಿಕೊಂಡರಾಯಿತು. ಮದುವೆಯ ಉದ್ದೇಶದಲ್ಲಿ ಮುಖ್ಯವಾದುದು ಗೃಹಸ್ಥನ ಧರ್ಮವನ್ನು ಆಚರಿಸುವುದು. ಉಳಿದ ಪ್ರಯೋಜನಗಳ ವಿಷಯದಲ್ಲಿ ನಾವು ಸಂಯಮದಿಂದ ವರ್ತಿಸಬೇಕು. ಕಮಲಮ್ಮನು ಕಾಳಿದಾಸ ಮಹಾಕವಿಯ ಕಾವ್ಯದಲ್ಲಿ ರಘುವಂಶದ ರಾಜರನ್ನು ವರ್ಣಿಸುವ ಒಂದು ಮಾತನ್ನು ನನಗೆ ವಿವರಿಸಿ ಹೇಳಿದಳು.......

ಭಾಗ್ಯ—"ನಾನು ಕಮಲಮ್ಮನಂತೆ ವಿಷಯಗಳನ್ನು ಹೇಳಿ ನಿನ್ನ ಮನಸ್ಸು ವಶಪಡಿಸಿಕೊಳ್ಳಲು ಓದಿನ ಸರಸ್ವತಿಯಲ್ಲ. ನಿನಗೆ ಆ ಸರಸ್ವತಿಯನ್ನೇ ಮದುವೆಯಾಗಬೇಕೆಂಬ ಆಸೆ ಇದ್ದಹಾಗಿದೆ" ಹೀಗೆ ಹೇಳಿ ಭಾಗ್ಯಲಕ್ಷ್ಮಿ ಅಳತೊಡಗಿದಳು. ಗೋಪಾಲನು ಸ್ವಲ್ಪ ಹೊತ್ತು ಸುಮ್ಮನಿದ್ದು ಮತ್ತೆ ಹೇಳಿದನು.

ಗೋಪಾಲ—ಇಲ್ಲದ ಅರ್ಥಗಳನ್ನು ಮಾಡಬೇಡ ಭಾಗ್ಯಲಕ್ಷ್ಮೀ. ನನಗೆ ಕಮಲಮ್ಮ ಹೇಗೋ ನೀನೂ ಹಾಗೆಯೇ. ಏಕೆ ಅಳುತ್ತೀಯೆ. ಸಮಾಧಾನ ಮಾಡಿಕೋ. ನಾನು ಯಾರನ್ನೂ ಮದುವೆ ಮಾಡಿಕೊಳ್ಳಬೇಕೆಂಬ ಆಲೋಚನೆಯನ್ನೇ ಇನ್ನೂ ಮಾಡಿಲ್ಲ. ಈಗ ಮಾಡಲು ಸಮಯವೂ ಅಲ್ಲ. ಸಮಯ ಬಂದಾಗ ಯೋಚಿಸುತ್ತೇನೆ. ತಿಳಿಸುತ್ತೇನೆ.

ಭಾಗ್ಯಲಕ್ಷ್ಮಿ ಅಳುವುದನ್ನು ನಿಲ್ಲಿಸಿದಳು. ಸೆರಗಿನಿಂದ ಕಣ್ಣೊರೆಸಿ ಕೊಂಡಳು.

ಭಾಗ್ಯ—ಆಗಲಿ. ನೀನು ಕಮಲಮ್ಮನನ್ನು ಮದುವೆಯಾಗಬಹುದು. ಇಲ್ಲದಿದ್ದರೆ ನನ್ನನ್ನು ಮದುವೆಯಾಗಬಹುದು. ಅಷ್ಟೇ ತಾನೇ.

ಗೋಪಾಲ—ನನ್ನ ಮನಸ್ಸಿನಲ್ಲಿ ಈಗ ಯಾರೂ ಇಲ್ಲ.

ಭಾಗ್ಯ—ನೀನು ತಿಳಿಸುವವರೆಗೂ ಕಾದಿರುತ್ತೇನೆ.

## ೨೫

ಚೈತ್ರ ಶುದ್ಧ ಪೂರ್ಣಿಮೆಯ ದಿನ ಮಧ್ಯಾಹ್ನದ ವೇಳೆಗೆ ಆಶ್ರಮದಲ್ಲಿ ವೇದಪಾರಾಯಣ, ಸೂರ್ಯ ನಮಸ್ಕಾರಗಳು, ಶ್ರೀಮದ್ರಾಮಾಯಣ ಪಾರಾಯಣ ಮುಗಿದವು. ಎಲ್ಲರೂ ಊಟಕ್ಕೆ ಕುಳಿತರು. ವರದಪ್ಪಸ್ವಾಮಿಗಳು ಎಲ್ಲರನ್ನೂ ನಿಧಾನವಾಗಿ ಊಟ ಮಾಡಬೇಕೆಂದು ಉಪಚರಿಸುತ್ತಿದ್ದರು. ಶಾಸ್ತ್ರಕ್ಕೆ ಹೆಸರುಬೇಳೆ, ಬೆಲ್ಲ ಹಾಕಿ ಮಾಡಿದ್ದ ಪಾಯಸ ಹಾಗೂ ಎಳ್ಳೆಣ್ಣೆಯ ಒಗ್ಗರಣೆ, ಹುಣಸೆಹಣ್ಣಿನ ರಸ, ಅರಿಸಿನ ಹಾಕಿ ಕಲಿಸಿದ್ದ ಹುಳಿಯನ್ನ ಮಾತ್ರ ಹಬ್ಬವಾದ ಪ್ರಯುಕ್ತ ಮಾಡಿದ ವಿಶೇಷ ತಿನಿಸುಗಳಾಗಿದ್ದವು. ಅಲಸಂದೆ, ಬದನೇಕಾಯಿ ಹುಳಿ, ಅನ್ನ, ಸಾರು, ಚಟ್ನಿಪುಡಿ, ನೀರು ಮಜ್ಜಿಗೆ ಮಾತ್ರ ಉಳಿದ ಅಡಿಗೆಯಾಗಿತ್ತು. ನಿತ್ಯತೃಪ್ತರಾದ ಅತಿಥಿಗಳೆಲ್ಲರೂ ಅದನ್ನೇ ಸಂತೋಷವಾಗಿ ಭುಜಿಸಿದರು. ಆಮೇಲೆ ಆಶ್ರಮವಾಸಿಗಳೂ ಊಟಮಾಡಿದರು.

ಮಧ್ಯಾಹ್ನ ಎಲ್ಲರೂ ಮರಗಳ ನೆರಳಿನಲ್ಲಿ ಸದಸ್ಸಿಗೆ ಸೇರಿದರು. ವರದಪ್ಪಸ್ವಾಮಿಗಳು ಆ ಸದಸ್ಸಿನಲ್ಲಿ ಅನೇಕ ವಿಷಯಗಳನ್ನು ಕುರಿತು ಉಪನ್ಯಾಸಮಾಡಿ ಕೊನೆಗೆ ಹೀಗೆ ಹೇಳಿದರು.

"ನಮ್ಮೆಲ್ಲರ ಧ್ಯೇಯ ವಿದ್ಯೆಯನ್ನು ಕಲಿಯುವುದು, ಅದರ ಆನಂದವನ್ನನುಭವಿಸುವುದು ಅದರಿಂದ ಇತರರಿಗೆ ಏನಾದರೂ ಸಹಾಯವನ್ನು ಮಾಡುವುದು, ಇತರರಿಗೆ ಆನಂದವನ್ನು ಕೊಡುವುದು, ಇತರರಿಗೆ ವಿದ್ಯೆಯನ್ನು ಕಲಿಸುವುದು, ಇಷ್ಟೇ. ಈ ಧ್ಯೇಯಕ್ಕೆ ಶ್ರಮಿಸುವವರೆಲ್ಲಾ ವಿದ್ಯೆಯನ್ನು ಉಪಾಸಿಸುವವರು. ಒಂದೊಂದು ವಿದ್ಯೆಯನ್ನು ಉಪಾಸಿಸುವುದಕ್ಕೂ ಅದಕ್ಕೆ ಬೇಕಾದ ಅರ್ಹರಿಂದ ಮಾತ್ರ ಸಾಧ್ಯ. ಅನರ್ಹರ ಅಧೀನದಲ್ಲಿ ವಿದ್ಯೆ ಅಶಾಸ್ತ್ರೀಯ ಕಲ್ಪನೆಗಳಿಗೂ, ದುರುಪಯೋಗಕ್ಕೂ ದಾರಿ ಮಾಡಿ ಕೊಡುತ್ತದೆ. ದುರುಪಯುಕ್ತವಾದ ವಿದ್ಯೆಯಿಂದ ಲೋಕಕ್ಕೆ ಬಹಳ ಕೇಡಾಗುತ್ತದೆ. ಜನರಲ್ಲಿನ ಸಂಪ್ರದಾಯಗಳನ್ನೂ, ಸೌಹಾರ್ದವನ್ನೂ, ಸಾಂಘಿಕ ವ್ಯವಸ್ಥೆಯನ್ನೂ ಅದು

ಕೆಡಿಸುತ್ತದೆ. ವಿದ್ಯೋಪಾಸಕರಿಗೆ ವಿದ್ಯೆಯೇ ಪ್ರಧಾನವಾದ ಲಕ್ಷ್ಯವಾಗಿರಬೇಕೇ ಹೊರತು ಧನ, ಸುಖ, ಕೀರ್ತಿ ಮುಂತಾದವು ಪ್ರಧಾನವಾಗಿರಬಾರದು. ಹೀಗಿರುವವರೇ ಉತ್ತಮ ವಿದ್ವಾಂಸರು. ಧನ, ಸುಖ, ಕೀರ್ತಿಗಳು ಪ್ರಧಾನವಾಗಿ ಅವುಗಳನ್ನು ಪಡೆಯುವುದಕ್ಕೆ ವಿದ್ಯೆಯನ್ನು ಒಂದು ಸಾಧನವಾಗಿ ಉಪಯೋಗಿಸಿಕೊಳ್ಳುವ ವಿದ್ವಾಂಸರೇ ಲೋಕದಲ್ಲಿ ಹೆಚ್ಚಾಗಿರುವರು. ಇವರಲ್ಲಿ ಕೆಲವರು ಸಂಯಮವುಳ್ಳವರೂ ಧರ್ಮಿಷ್ಠರೂ. ಇತರರು ಸಂಯಮವೂ, ಧರ್ಮನಿಷ್ಠೆಯೂ ಇಲ್ಲದವರು. ಮೊದಲನೆಯ ವರ್ಗದವರು ಮಧ್ಯಮರು. ಎರಡನೆಯ ವರ್ಗದವರು ಎಷ್ಟು ವಿದ್ಯಾವಂತರಾದರೂ ಅವರನ್ನು ಅಧಮರೆಂದೇ ಪರಿಗಣಿಸಬೇಕು. ಇಂತಹ ಅಧಮ ವಿದ್ಯಾವಂತರಿಂದಲೇ ಲೋಕವು ಕೆಡುವುದು. ಉತ್ತಮ ವಿದ್ಯಾವಂತರಿಗೂ, ಮಧ್ಯಮರಿಗೂ ಪ್ರೋತ್ಸಾಹ ಕೊಟ್ಟು ಅವರ ಪ್ರಭಾವದಿಂದ ಅಧಮ ವಿದ್ಯಾವಂತರನ್ನು ತಲೆಯೆತ್ತದಂತೆ ಮಾಡುವುದು ಸಂಘದ ಮತ್ತು ರಾಜನ ಕರ್ತವ್ಯ. ನೀವು ಅನರ್ಹರಾಗಿರುವವರಿಗೆ ಮಾತ್ರ ವಿದ್ಯೆಯನ್ನು ಕಲಿಸಬೇಡಿ. ಅರ್ಹನಾದವನು ಕಂಡು ಬಂದಲ್ಲಿ ಏನಾದರೂ ಮಾಡಿ ಅವನಿಗೆ ನಿಮ್ಮ ವಿದ್ಯೆಯನ್ನು ಕಲಿಸಿ. ಈಗ ಕಾಲ ಚೆನ್ನಾಗಿಲ್ಲವೆಂದು ಚಿಂತಿಸಬೇಡಿ. ಕಾಲಗತಿಗೆ ರಾಜನು ಕಾರಣ. ರಾಜರ ಏಳ್ಗೆಗಳಿಗೂ ವಿನಾಶಕ್ಕೂ ದೈವವು ಕಾರಣ. ಒಳ್ಳೆಯ ಕಾಲ ತಪ್ಪದೆ ಬರುತ್ತದೆ. ವಿದ್ಯೆಯಲ್ಲಿ ಆಸಕ್ತಿ ಇದ್ದರಷ್ಟೇ ಸಾಲದು. ದೀಕ್ಷೆಯೂ ಬೇಕು. ದೀಕ್ಷೆಯೆಂದರೆ ವಿದ್ಯೆಯೇ ಪ್ರಧಾನವಾಗಿರುವುದು ಮತ್ತು ಇತರ ಪ್ರಯೋಜನಗಳು ಗೌಣವಾಗಿರುವುದು. ದೀಕ್ಷೆಯಿರುವವರು ವಿದ್ಯೆಯನ್ನು ಉನ್ನತ ಮಟ್ಟದಿಂದ ಕೆಳಕ್ಕಿಳಿಸುವುದಿಲ್ಲ, ಮಾರುವುದಿಲ್ಲ, ದುರುಪಯೋಗ ಪಡಿಸುವುದಿಲ್ಲ. ಅಂತಹವರು ಸಾಂಘಿಕ ಜೀವನದಲ್ಲಿ ಧರ್ಮನಿಷ್ಠೆಯುಳ್ಳವರಾಗಿ, ಸತ್ಯವಂತರಾಗಿ, ನಿಷ್ಪಕ್ಷಪಾತಿಗಳಾಗಿ, ಸ್ವತಂತ್ರರಾಗಿ ಭಯರಹಿತರಾಗಿ, ಯದೃಚ್ಛಾಲಾಭಸಂತುಷ್ಟರಾಗಿ ಖಂಡಿತವಾದಿಗಳಾಗಿ ಇರುವರು. ಲೋಕದಲ್ಲಿ ಬರುವ ವಿಪತ್ತುಗಳನ್ನು ಪರಿಹಾರ ಮಾಡಲು ಇಂತಹವರ ಉಪದೇಶವನ್ನು ಪಡೆದು ಅದರಂತೆ ನಡೆಯುವುದೊಂದೇ ಸುಲಭೋಪಾಯ. ಇಂತಹವರು ಲೋಕಪೂಜ್ಯರು. ಇಂತಹವರ ಗೌರವವನ್ನು ಕಾಪಾಡುವುದೇ ನನ್ನ ಲಕ್ಷ್ಯ."

ಆ ರಾತ್ರಿ ಬೆಳದಿಂಗಳಲ್ಲಿ, ಪ್ರತಿ ದಿನದಂತೆ ಪ್ರತಿಯೊಬ್ಬರಿಂದಲೂ ಅವರ

ವರ ವಿದ್ಯೆಯ ಪ್ರದರ್ಶನ ನಡೆಯಿತು. ಕಮಲಮ್ಮನು ಕಾವ್ಯವಾಚನವನ್ನು ಮಾಡಿದಳು. ವಿಲಾಸಿನಿ ಸಂಗೀತವನ್ನು ಹಾಡಿದಳು. ಮಾರನೆಯ ದಿನ ಬಂದ ವಿದ್ವಾಂಸರೆಲ್ಲರೂ ತಮ್ಮ ತಮ್ಮ ಊರುಗಳಿಗೆ ತೆರಳಿದರು.

## ೨೬

ಜ್ಯೇಷ್ಠ ಮಾಸದ ಬಿಸಿಲು ಅಂತಃಪುರದ ಅಂತರಾಳದಲ್ಲಿಯೂ ತಡೆಯಲಸಾಧ್ಯವಾಗಿತ್ತು. ಸೇವಕರು ಮಾಡುತ್ತಿದ್ದ ಶೈತ್ಯೋಪಚಾರಗಳು ಮಹಾರಾಜನಿಗೆ ತಾಪಶಾಂತಿಯನ್ನು ಮಾಡಲಿಲ್ಲ. ಬಿಸಿಲಿಗಿಂತಲೂ ಪ್ರತಿಜ್ಞಾ ಪರಿಪಾಲನದ ಆವೇಗವು ಆತನಿಗೆ ಹೆಚ್ಚು ತಾಪವನ್ನುಂಟುಮಾಡಿತ್ತು. ಹೇಮಗಿರಿ ರಾಜ್ಯದಿಂದ ನನ್ನ ದೂತರು ಎಂದು ಹಿಂತಿರುಗಿಬರುವರೋ, ನಾನು ಕಳುಹಿಸಿದ್ದ ಸಂದೇಶದಲ್ಲಿನ ಯುದ್ಧದ ಬೆದರಿಕೆ ಹೇಮಗಿರಿ ನಾಯಕರ ಮೇಲೆ ಪ್ರಭಾವ ಬೀರುವುದೇ ? ಅವರು ಅದನ್ನು ಧಿಕ್ಕರಿಸಿದಲ್ಲಿ ಪ್ರತಿಜ್ಞಾ ಪರಿಪಾಲನೆಯನ್ನು ಮಾಡುವುದು ಹೇಗೆ ಸಾಧ್ಯ? ಯುದ್ಧವು ನಡೆದರೆ ನಮಗೆ ಜಯ ಲಭಿಸುವುದೇ? ಯುದ್ಧಕ್ಕೆ ಇನ್ನೂ ಏನೇನು ಸಿದ್ಧತೆಗಳನ್ನು ಮಾಡಿಕೊಳ್ಳಬೇಕು? ಯುದ್ಧವನ್ನು ಯಾವ ಪ್ರದೇಶದಲ್ಲಿ ನಡೆಸಬೇಕು? ಯುದ್ಧದಲ್ಲಿ ಸೋತರೆ ನನ್ನ ಗತಿ, ನನ್ನ ದೇಶದ ಜನರ ಗತಿ ಏನಾದೀತು? ಗೆದ್ದ ಶತ್ರು ಸೈನಿಕರು ನಮ್ಮ ದೇಶದ ಜನರನ್ನೆಲ್ಲಾ ಕೊಳ್ಳೆ ಹೊಡೆಯುವುದಿಲ್ಲವೇ? ಇಲ್ಲಿನವರೆಗೂ ಮಳೆಯೇ ಆಗಲಿಲ್ಲವಲ್ಲಾ? ಮಳೆ ಬಾರದಿದ್ದರೆ ಬೆಳೆಗಳೆಲ್ಲಿ? ಜನರಿಗೆ ತಿನ್ನುವುದಕ್ಕೆ ಏನಿರುವುದು? ಇವೇ ಮೊದಲಾದ ಪ್ರಶ್ನೆಗಳು ರಾಜನ ಮೆದುಳನ್ನು ಕೊರೆಯುತ್ತಿದ್ದವು. ಇದರಿಂದ ಆತನಿಗೆ ತಲೆ ನೋವು ಉಂಟಾಯಿತು. ಆತನು ಹಾಸಿಗೆ ಹಿಡಿದನು.

ಎರಡು ಮೂರು ದಿನಗಳು ರಾಜವೈದ್ಯರು ಬಹಳ ಪ್ರಯತ್ನದಿಂದ ಚಿಕಿತ್ಸೆ ಮಾಡಿದರೂ ಖಾಯಿಲೆ ಗುಣವಾಗಲಿಲ್ಲ ರಾಜವೈದ್ಯರು ಸದಾ ರಾಜನು ಮಲಗಿದ್ದ ಕೋಣೆಯಲ್ಲಿ ಹಾಜರಿದ್ದರು. ರಾಣಿ ಆಗಾಗ್ಗೆ ಹೋಗಿ ಗಂಡನನ್ನು ಉಪಚರಿಸುತ್ತಿದ್ದಳು. ರಾಣಿಗೂ ಇದೇ ಬಿಡದ ಯೋಚನೆಯಾಗಿಬಿಟ್ಟಿತು

ಮಹಾರಾಜನಿಗೆ ಉಪಚರಿಸುತ್ತಿದ್ದ ಆಪ್ತ ಸೇವಕರಲ್ಲಿ ಗೋಪಾಲನೂ ಒಬ್ಬ. ಆತನು ರಾಣಿಗೂ, ರಾಜನ ಬಂಧುವರ್ಗದವರಿಗೂ ಸಮಾಧಾನ ಹೇಳುತ್ತಿದ್ದನು. ಮೂರು ದಿವಸ ಚಿಕಿತ್ಸೆ ಮಾಡಿದರೂ ರಾಜನ ತಲೆನೋವು ತಗ್ಗದೆ ಇರುವುದನ್ನು ನೋಡಿ ರಾಣಿ ನಿರಾಶಳಾದಳು. ಗೋಪಾಲನು ಮೆಲ್ಲನೆ ರಾಣಿಗೆ ಸಲಹೆ ಕೊಟ್ಟನು.

ಗೋಪಾಲ—"ಅಮ್ಮನವರೇ, ರಾಜ ವೈದ್ಯರಿಂದ ಖಾಯಿಲೆ ಗುಣವಾಗಲಿಲ್ಲವೆಂದು ನಿರಾಶೆ ಪಡಬೇಡಿ. ಒಬ್ಬ ಒಳ್ಳೆಯ ವೈದ್ಯನು ಸಮೀಪದ ಹಳ್ಳಿಯಲ್ಲಿರುವನು. ಆತನ ಶಕ್ತಿ ನನಗೆ ಗೊತ್ತು. ಅಪ್ಪಣೆ ಆದರೆ ನಾನು ಹೋಗಿ ಆತನನ್ನು ಕರೆ ತರುವೆನು. ಆತನಿಂದ ಖಾಯಿಲೆ ಗುಣವಾಗಬಹುದು."

ಹೀಗೆ ಹೇಳಿ ಸ್ವಲ್ಪ ಬಿಟ್ಟು ಪುನಃ ಗೋಪಾಲನು ಹೇಳಿದನು: "ಮಹಾರಾಜರಿಗೆ ಇದು ಶರೀರದಲ್ಲಿ ಹುಟ್ಟಿರುವ ಖಾಯಿಲೆ ಅಲ್ಲ. ಅವರಿಗೆ ಪ್ರತಿಜ್ಞಾ ಪರಿಪಾಲನೆಯ ಆವೇಗದಿಂದ ಈ ಖಾಯಿಲೆ ಉಂಟಾಗಿದೆ. ಮನೋರೋಗಕ್ಕೆ ಮದ್ದಿಲ್ಲ. ತಾತ್ಕಾಲಿಕವಾಗಿ ಖಾಯಿಲೆ ಗುಣವಾದರೂ ಮನಸ್ಸಿನಲ್ಲಿ ಚಿಂತೆಯನ್ನು ಬಿಡುವವರೆಗೂ ಖಾಯಿಲೆ ಸಮೂಲವಾಗಿ ಹೋಗುವುದಿಲ್ಲ. ಇದನ್ನು ಮಾಡುವುದಕ್ಕೆ ನಿಮಗೆ ಮಾತ್ರ ಸಾಧ್ಯ. ಇದರಲ್ಲಿ ನಾನು ತಮಗೆ ಬೇಕಾದರೆ ಕೆಲವು ಸಲಹೆಗಳನ್ನು ಕೊಡಬಲ್ಲೆ".

ರಾಣಿ ಸ್ವಲ್ಪ ಹೊತ್ತು ಆಲೋಚಿಸಿ ಗತ್ಯಂತರವಿಲ್ಲದೆ ಗೋಪಾಲನು ಹೇಳಿದ ವೈದ್ಯನನ್ನು ಕರೆತರಲು ಅನುಮತಿ ಕೊಟ್ಟಳು.

ಆ ದಿನ ಸಾಯಂಕಾಲಕ್ಕೆ ಗೋಪಾಲನು ವೆಂಕಟಸ್ವಾಮಿಯನ್ನು ಕರೆತಂದನು. ಆತನಿಗೆ ಇದು ಕೇವಲ ಮನೋರೋಗವೆಂದು ಸೂಚನೆಕೊಟ್ಟನು. ಆದುದರಿಂದ ಆತನು ಮನೋರೋಗದಿಂದ ಬಂದ ತಲೆನೋವಿಗೆ ತಕ್ಕ ಚಿಕಿತ್ಸೆಯನ್ನು ಮಾಡಿದನು. ಕೆಲವು ಗಳಿಗೆಗಳಲ್ಲಿ ರಾಜನ ತಲೆನೋವು ಕಡಿಮೆಯಾಯಿತು. ಆ ರಾತ್ರಿ ಮಹಾರಾಜನು ಸುಖನಿದ್ರೆಯನ್ನು ಮಾಡಿದ. ರಾಣಿ ವೆಂಕಟಸ್ವಾಮಿಗೆ ತಕ್ಕ ಬಹುಮಾನವನ್ನು ಕೊಟ್ಟು ಕಳುಹಿಸಿದಳು. ಗೋಪಾಲನು ಹೇಳಿದ ಮಾತುಗಳಲ್ಲಿ ಅವಳಿಗೆ ನಂಬಿಕೆಯುಂಟಾಯಿತು. ಗೋಪಾಲನೂ ರಾಣಿಗೆ ಮಹಾರಾಜನ ಮನೋರೋಗಕ್ಕೆ ಕಾರಣವಾದ ವಿಷಯಗಳನ್ನು ಬಿಡಿಸಿ ಬಿಡಿಸಿ ತಿಳಿಸಿ, ಹೇಮಗಿರಿಯವರ ಮೇಲಿನ ಹಿಂದಿನ ದ್ವೇಷವನ್ನು

ರಾಜನು ಬಿಡುವಂತೆ ಮಾಡಬೇಕೆಂದೂ ಸಲಹೆ ಕೊಟ್ಟನು. ಘನಗಿರಿ ರಾಜರಿಗೆ ಅವಮಾನಕರವಾದ ಕೆಲಸಗಳನ್ನು ಮಾಡಿದ್ದ ವಿಜಯಾಂಬಿಕೆಯೂ, ಬಲದೇವನೂ ತೀರಿಕೊಂಡಿರುವುದರಿಂದ ಹೇಮಗಿರಿ ದೊರೆತನದ ಮೇಲೆ ಶತ್ರುಭಾವವನ್ನು ಮಹಾರಾಜರು ಬಿಡಬೇಕೆಂದೂ, ಹೀಗೆ ಮಾಡುವುದರಿಂದ ಅವರ ಅಭಿಮಾನಕ್ಕೂ, ಕೀರ್ತಿಗೂ ಧಕ್ಕೆ ವುಂಟಾಗುವುದಿಲ್ಲವೆಂದೂ ವಿವರಿಸಿದನು.

ಕೆಲವು ದಿನಗಳಾದ ಮೇಲೆ ಮಹಾರಾಜನು ಹಿಂದಿನ ಆರೋಗ್ಯವನ್ನು ಮತ್ತೆ ಪಡೆದಿರುವುದನ್ನು ಕಂಡು ಸಮಯ ನೋಡಿ ರಾಣಿಯು ಆತನೊಂದಿಗೆ ಹೇಮಗಿರಿ ದೊರೆಗಳ ವಿಷಯ ಪ್ರಸ್ತಾಪಿಸಿದಳು. ರಾಣಿಯು ಬುದ್ಧಿವಂತಳಾಗಿದ್ದುದರಿಂದ ರಾಜನ ಮನ ಮೆಚ್ಚುವಂತೆ ಮಾತನಾಡಿದಳು. ದ್ವೇಷಕ್ಕೆ ಕಾರಣಗಳನ್ನು ವಿವರಿಸಿ, ವಿಜಯಾಂಬಿಕೆಯ ಮತ್ತು ಬಲದೇವನ ಮರಣದಿಂದ ಆ ಕಾರಣಗಳು ನಾಶವಾಗಿವೆಯೆಂದೂ, ಹಗೆಯ ವಿಷವನ್ನು ತಲೆಯಲ್ಲಿಟ್ಟುಕೊಂಡು ಚಿಂತಿಸುವುದರಿಂದ ಆರೋಗ್ಯ ಕೆಡುವುದೆಂದೂ, ಈ ಚಿಂತೆಯನ್ನು ಬಿಡಬೇಕೆಂದೂ ಬೋಧಿಸಿದಳು. ಇದರಿಂದ ಮಹಾರಾಜನಿಗೆ ಹೇಮಗಿರಿ ಜನರ ಮೇಲಿನ ಶತ್ರುಭಾವವು ತೀರಾ ಕಡಿಮೆಯಾಯಿತು.

ಕೆಲವು ದಿನಗಳನಂತರ ಹೇಮಗಿರಿಯಿಂದ ದೂತರು ಹಿಂತಿರುಗಿ ಬಂದರು. ಅಲ್ಲಿನ ನಾಯಕರೆಲ್ಲ ಒಮ್ಮತಕ್ಕೆ ಬಂದು ರಾಜೇಂದ್ರದೇವನೆಂಬ ಅರಸು ಕುಲದವನನ್ನು ರಾಜನನ್ನಾಗಿ ಮಾಡಲು ತೀರ್ಮಾನಿಸಿರುವುದಾಗಿಯೂ, ವರ್ಷಾ ಕಾಲ ಕಳೆದ ಕೂಡಲೇ ವಿಜಯದಶಮಿಯ ದಿನ ಆತನಿಗೆ ಪಟ್ಟಾಭಿಷೇಕವನ್ನು ಮಾಡಲಿರುವುದಾಗಿಯೂ ಸಂದೇಶವನ್ನು ಅವರು ತಂದರು. ಆಂಧ್ರನಾದ ರುದ್ರಸಿಂಹನ ಬಂಧುವರ್ಗಕ್ಕೆ ಸೇರಿದವನನ್ನೇ ಹೇಮಗಿರಿಗೆ ರಾಜನನ್ನಾಗಿ ಮಾಡಿಕೊಳ್ಳಲು ಕನ್ನಡಿಗರಿಗೆ ಒಪ್ಪಿಗೆಯಿಲ್ಲವೆಂದೂ, ರುದ್ರಸಿಂಹನು ಮೇಲೆ ಬಿದ್ದು ಯುದ್ಧಕ್ಕೆ ಬಂದರೆ ಕನ್ನಡಿಗರು ಹೆದರಿಕೊಳ್ಳುವ ಹೇಡಿಗಳಲ್ಲವೆಂದೂ ಸಂದೇಶದಲ್ಲಿ ಬರೆಯಲ್ಪಟ್ಟಿತ್ತು. ರುದ್ರಸಿಂಹನು ಇದನ್ನು ಕೇಳಿ ಕೋಪೋದ್ರಿಕ್ತನಾದನು. ಆತನು ಮಂತ್ರಿಗಳ ಮುಖವನ್ನು ನೋಡಿ ಕೋಪದಿಂದ ನಡುಗುವ ಧ್ವನಿಯಲ್ಲಿ ಗಟ್ಟಿಯಾಗಿ "ಹೇಮಗಿರಿ ರಾಜ್ಯವು ಹಿಂದೆ ನಮ್ಮ ವಂಶದವರಿಗೆ ಅಧೀನವಾಗಿತ್ತೆಂಬುದು ಕನ್ನಡಿಗರು ಮರೆತಂತಿದೆ. ನಾವು ಕಾರಣವಿಲ್ಲದೆ ಕೇವಲ ಯುದ್ಧದ ಚಟದಿಂದ ಯುದ್ಧದ ಬೆದರಿಕೆಯನ್ನು ತೋರಿಸಿದವರಲ್ಲ. ನ್ಯಾಯ

ವಾಗಿ ಹೇಮಗಿರಿ ರಾಜ್ಯವನ್ನು ಪೂರ್ತಿ ನಮ್ಮ ಅಧಿಕಾರಕ್ಕೆ ತೆಗೆದುಕೊಳ್ಳಬಹು ದಾಗಿತ್ತು. ಆದರೂ ಅದು ಸ್ವತಂತ್ರ ರಾಜ್ಯವಾಗಿರಲು ಒಪ್ಪಿಕೊಂಡು ನಮ್ಮ ವಂಶಕ್ಕೆ ಸಂಬಂಧಿಸಿದ ಯಾರನ್ನೇ ಆಗಲಿ ಅವರ ಇಚ್ಛೆಯಂತೆಯೇ ಆರಿಸಿ ಕೊಳ್ಳಲು ಅವಕಾಶ ಕೊಟ್ಟರೂ ನಮ್ಮ ಮಾತಿಗೆ ಬೆಲೆಯನ್ನೇ ಕೊಡದ ಹೇಮ ಗಿರಿಯ ನಾಯಕರನ್ನು ನಾವು ಶಾಸಿಸಲೇ ಬೇಕು. ಇದಕ್ಕಾಗಿ ಯುದ್ಧವನ್ನು ಮಾಡಲೇಬೇಕು. ನಾವೂ ಯುದ್ಧಕ್ಕೆ ಹೆದರುವ ಹೇಡಿಗಳಲ್ಲ" ಎಂದು ಹೇಳಿ, "ಇದೇ ರೀತಿಯಾಗಿ ತಕ್ಷಣ ಅವರಿಗೆ ಸಂದೇಶವನ್ನು ಕಳುಹಿಸಿಕೊಡಿ. ಯುದ್ಧ ವಾಗುವುದೆಂಬ ಶಂಕೆಯಿಂದ ನಾನು ಎಷ್ಟೋ ದಿನಗಳಿಂದ ಅದಕ್ಕೆ ತಕ್ಕ ಆಲೋಚನೆಗಳನ್ನು ಮಾಡುತ್ತಲೇ ಇದ್ದೇನೆ. ಭಾದ್ರಪದ ಬಹುಳ ತದಿಗೆಯ ದಿನ ಕಾಳಗಾಪುರದ ಬಳಿಯಲ್ಲಿರುವ ಯುದ್ಧಭೂಮಿಯಲ್ಲಿ ಯುದ್ಧ ಮಾಡಲು ನಮ್ಮ ಸೈನ್ಯ ಬರುವುದೆಂದೂ, ನಿಮ್ಮ ಸೈನ್ಯವೂ ಆ ದಿನಕ್ಕೆ ಮುಂಚಿತವಾಗಿ ಅಲ್ಲಿಗೆ ಬಂದು ಆ ದಿನ ಮಧ್ಯಾಹ್ನಕ್ಕೆ ಸರಿಯಾಗಿ ಯುದ್ಧವನ್ನು ಪ್ರಾರಂಭಿಸ ಬೇಕೆಂದೂ, ಯುದ್ಧದಿಂದ ತಪ್ಪಿಸಿಕೊಳ್ಳಬೇಕಾಗಿದ್ದರೆ ಶ್ರಾವಣ ಶುದ್ಧ ಹುಣ್ಣಿಮೆಯ ಒಳಗಾಗಿ ನಮ್ಮ ಪ್ರತಿಜ್ಞೆಯನ್ನು ಹೇಮಗಿರಿ ನಾಯಕರು ಒಪ್ಪಿರುವರೆಂಬ ಸಂದೇಶವನ್ನು ನಮಗೆ ತಲುಪಿಸಲು ಅವಕಾಶವಿದೆಯೆಂದೂ ಬರೆದು ಕಳುಹಿಸಿ" ಎಂದು ಆಜ್ಞೆ ಕೊಟ್ಟನು. ಪ್ರಧಾನಿಯು ದೂತರನ್ನು ಹೊರಗೆ ಕಳುಹಿಸಿದನು. ಆಲೋಚನಾ ಮಂದಿರದಲ್ಲಿ ಮಹಾರಾಜನೂ ಇತರ ಮಂತ್ರಿಗಳೂ ಮಾತ್ರ ಇದ್ದರು. ಪ್ರಧಾನಿಯು ಯುದ್ಧಗಳಿಂದುಂಟಾಗಬಹು ದಾದ ಹಾನಿಗಳನ್ನೂ ಯುದ್ಧದಲ್ಲಿ ಜಯಿಸುವ ನಂಬಿಕೆ ಇಲ್ಲದಿರುವುದನ್ನೂ ಇನ್ನೂ ಒಂದು ಹನಿ ಮಳೆಯೂ ಬೀಳದೆ ಯುದ್ಧ ಪ್ರಯತ್ನದಿಂದ ಬಡವರಾದ ಜನರಿಗಾಗಲೇ ಕ್ಷೋಭೆಯುಂಟಾಗಿರುವುದನ್ನೂ ವಿವರಿಸಿ ಹೇಳಿದನು. "ಹೇಮ ಗಿರಿಯ ಜನರು ಏನು ಮಾಡಿಕೊಂಡರೆ ನಮಗೇನು? ಅದರಿಂದ ನಮಗೆ ಆಗುವ ನಷ್ಟವೇನು? ಇನ್ನೂ ಬೇಕಾದರೆ ಸೈನ್ಯವನ್ನು ಕ್ರಮೇಣ ಅಭಿವೃದ್ಧಿ ಮಾಡಿ ಕೊಂಡು ಯುದ್ಧದಲ್ಲಿ ಗೆಲ್ಲಬಹುದೆಂಬ ನಂಬಿಕೆ ಉಂಟಾದಾಗ ಸೇಡನ್ನು ತೀರಿಸಿ ಕೊಳ್ಳಬಹುದು" ಎಂದೂ, ಅಲ್ಲಿನವರಿಗೆ ಸುಮ್ಮನಿರುವುದು ರಾಜನೀತಿಯೆಂದೂ ಸಲಹೆ ಕೊಟ್ಟನು. ಮಹಾರಾಜನು ಇದನ್ನು ಕೇಳಿ ನಕ್ಕುಬಿಟ್ಟನು. "ನನ್ನ ಮನಸ್ಸಿನಲ್ಲಿ ಸೇಡು ತೀರಿಸಿಕೊಳ್ಳಬೇಕೆಂಬ ಆಕಾಂಕ್ಷೆ ಮಹಾರಾಣಿಯ ಮಾತು

ಗಳಿಂದ ಮಾನವಾಗಿದೆ. ಹೇಮಗಿರಿಯ ಜನರ ನೋಡಿ ನನಗೆ ಕ್ಲೇಶವಾಗಿದೆ. ನನ್ನ ದೇಶದ ಜನರಿಗೆ ಇನ್ನಷ್ಟು ಕಷ್ಟ ಕೊಡುವ ಉದ್ದೇಶವಿಲ್ಲ ನಿಜ. ಆದರೆ ನನ್ನ ಪ್ರತಿಜ್ಞೆಯನ್ನು ಮಾತ್ರ ನಾನು ಬಿಡಲಾರೆ. ನನ್ನ ಪ್ರಾಣ ಬಿಟ್ಟರೂ ಪ್ರತಿಜ್ಞೆಯನ್ನು ಬಿಡಲಾರೆ. ಸತ್ಯವಾಕ್ಯಪರಿಪಾಲನೆ ನನ್ನ ವ್ರತ. ಯುದ್ಧ ನಡೆಯಲೇಬೇಕಾದರೆ ನಡೆಯಲಿ. ಶ್ರೀರಾಮಚಂದ್ರನು ನನಗೆ ಜಯವನ್ನುಂಟು ಮಾಡುವನು." ಎಂದು ಪ್ರಧಾನಿಗೆ ಪ್ರತ್ಯುತ್ತರ ಕೊಟ್ಟನು. "ನಾನು ಎಲ್ಲ ಯೋಚನೆ ಮಾಡಿ ಈ ನಿರ್ಧಾರಕ್ಕೆ ಬಂದಿದ್ದೇನೆ. ನನ್ನ ಆಜ್ಞೆಯನ್ನು ಪಾಲಿಸಿ" ಎಂದು ಹೇಳಿ ಆತನು ಸಿಂಹಾಸನದಿಂದೆದ್ದು ರಾಣಿವಾಸಕ್ಕೆ ಹೋದನು.

## ೨೭

ರುದ್ರಸಿಂಹನು ರಾಣಿವಾಸದಲ್ಲಿ ನಡೆದ ಸಂಗತಿಯನ್ನೆಲ್ಲ ಮಹಾರಾಣಿಗೆ ತಿಳಿಸಿದನು. ಗೋಪಾಲನು ಅಲ್ಲಿ ಸೇವೆ ಮಾಡುತ್ತಿರುವುದರಿಂದ ಆತನಿಗೆ ಈ ವಿಷಯವೆಲ್ಲ ತಿಳಿಯಿತು. ತನ್ನ ಕೆಲಸದ ವೇಳೆಯೂ ಮುಗಿದ ಕೂಡಲೆ ಗೋಪಾಲನು ರಂಗಯ್ಯನ ಮನೆಗೆ ಓಡಿಹೋಗಿ ಆತನಿಗೆ ಸಮಾಚಾರ ತಿಳಿಸಿ, ಕುಮಾರನಿಗೆ ಪುನಃ ಹೇಮಗಿರಿ ರಾಜ್ಯಕ್ಕೆ ಹೋಗುವುದಕ್ಕೆ ಧನ ಬೇಕೆಂದು ಸೂಚಿಸಿದನು. ರಂಗಯ್ಯನು ಧನವನ್ನು ತಾನು ಕೊಡುವುದಾಗಿ ಹೇಳಿ, ಧನ ವನ್ನು ತೆಗೆದುಕೊಂಡು ಗೋಪಾಲನ ಜೊತೆಯಲ್ಲಿ ಆಶ್ರಮಕ್ಕೆ ಹೋದನು. ಆಶ್ರಮದಲ್ಲಿ ಪುಸ್ತಕ ಸಮುದ್ರದಲ್ಲೀಜುತ್ತಿದ್ದ ಕುಮಾರನಿಗೆ ವಿಷಯವನ್ನೆಲ್ಲ ಗೋಪಾಲನು ತಿಳಿಸಿದನು. "ರಾಜೇಂದ್ರ ದೇವನ" ಹೆಸರು ಕೇಳಿ ಕುಮಾರನು ಸ್ವಲ್ಪ ಹೊತ್ತು ಮನಸ್ಸಿನಲ್ಲಿಯೇ ಆಲೋಚಿಸಿ, "ಸ್ವಲ್ಪ ಆಶಾದಾಯಕವಾದ ಹೆಸರು. ಆದರೂ ದೃಢ ಪಡಿಸುವ ಆಧಾರಗಳು ಸಿಕ್ಕಬೇಕಲ್ಲಾ. ಕಾಲ ಬಹು ಬೇಗ ಕಳೆದುಹೋಗುತ್ತಿದೆ. ಯುದ್ಧವಾರಂಭವಾಗುವ ದಿನವೂ ನಿಶ್ಚಯ ಯಾಗಿದೆ. ನನಗೆ ಸಮಯವೇ ಇಲ್ಲವಲ್ಲಾ. ಈಗ ನಾನು ಕೂಡಲೇ ಹೇಮ ಗಿರಿ ರಾಜ್ಯಕ್ಕೆ ಹೋಗಿ ಪ್ರಯತ್ನಿಸಬೇಕು. ಧನವಿಲ್ಲವಲ್ಲಾ." ಎಂದನು. ರಂಗಯ್ಯ ತಾನು ತಂದಿದ್ದ ಧನವನ್ನು ಕೊಟ್ಟನು. ಕುಮಾರನು ಗುರುಗಳ

ಅನುಮತಿ ಪಡೆದು ಕೂಡಲೇ ಹೇಮಗಿರಿಗೆ ಹೊರಟನು. ಗೋಪಾಲನು ರಂಗಯ್ಯನನ್ನು ಬಹಳ ಅಭಿನಂದಿಸಿದನು. ಇಬ್ಬರೂ ಕೂಡಿ ಕೋಟೆಗೆ ಬಂದರು.

ಮಹಾರಾಜನಿಗೆ ಪ್ರಧಾನಿ ಹೇಳಿದ ಸಲಹೆ ಆಗಿಂದಾಗ್ಗೆ ನೆನಪಿಗೆ ಬಂದು ಆತನದನ್ನೇ ಕುರಿತು ಪದೇ ಪದೇ ಯೋಚಿಸಿದನು. ಯೋಚಿಸಿದಷ್ಟೂ ಆತನಿಗೆ ತಲೆ ಕೆಡಲು ಪ್ರಾರಂಭವಾಯಿತು. ಪುನಃ ತಲೆನೋವು ಬಂತು. ರಾಜವೈದ್ಯರ ವೈದ್ಯ ಕೆಲಸ ಮಾಡಲಿಲ್ಲ. ಪುನಃ ವೆಂಕಟಸ್ವಾಮಿಯನ್ನು ಕರೆಸಿದರು. ಆತನ ಚಿಕಿತ್ಸೆಯಿಂದ ತಲೆನೋವು ವಾಸಿಯಾಯಿತು. "ಮಹಾ ಪ್ರಭುಗಳೇ, ಹೆಚ್ಚು ಆಲೋಚನೆ ಮಾಡಿ ಆರೋಗ್ಯವನ್ನು ಕೆಡಿಸಿಕೊಳ್ಳಬೇಡಿ. ಎಲ್ಲವೂ ದೇವರ ಇಚ್ಛೆಯಂತೆ ನಡೆಯುವುದು. ತಾವೇಕೆ ಅಷ್ಟೊಂದು ಯೋಚನೆ ಮಾಡಬೇಕು" ಎಂದು ವೆಂಕಟಸ್ವಾಮಿ ಅರಿಕೆಮಾಡಿಕೊಂಡ. ಮಹಾರಾಜನಿಗೆ ಇದೇ ಮನಸ್ಸಿನಲ್ಲಿ ಪ್ರತಿಧ್ವನಿ ಕೊಡಲಾರಂಭಿಸಿತು. ವೆಂಕಟಸ್ವಾಮಿ ಕೊಟ್ಟಿದ್ದ ಆಸವವನ್ನು ಸೇವಿಸಿ ಮಲಗಿದನು. ಆ ರಾತ್ರಿ ಕನಸಿನಲ್ಲಿ ರಾಮಪುರದ ಶ್ರೀರಾಮಚಂದ್ರನ ವಿಗ್ರಹ ಕಾಣಿಸಿತು. ಕನಸಿನಲ್ಲೇ ತಾನು ಆ ದೇವರಿಗೆ ಅಡ್ಡಬಿದ್ದು ಹೇಗಾದರೂ ತನ್ನ ಪ್ರತಿಜ್ಞೆಯನ್ನುಳಿಸಬೇಕೆಂದು ಪ್ರಾರ್ಥಿಸಿಕೊಂಡನು.

ರುದ್ರಸಿಂಹನು ಬೆಳಗ್ಗೆ ಎದ್ದ ಕೂಡಲೇ ಈ ವಿಷಯವನ್ನು ಮಹಾರಾಣಿಗೆ ಹೇಳಿ ರಾಮಪುರದ ದೇವರಿಗೆ ಪೂಜಾ ದ್ರವ್ಯಗಳನ್ನು ಕಳುಹಿಸಿ ಕೊಟ್ಟನು. ಅಂದಿನಿಂದ ಮನಸ್ಸಿಗೆ ಚಿಂತೆ ಹತ್ತಿದಾಗೆಲ್ಲ ಆ ದೇವರನ್ನು ಮನಸ್ಸಿನಲ್ಲೇ ಪ್ರಾರ್ಥಿಸಿಕೊಳ್ಳುತ್ತಿದ್ದನು. ತಾನು ಪಾದಚಾರಿಯಾಗಿ ಬಂದು ದೇವರ ಸೇವೆ ಮಾಡುವುದಾಗಿಯೂ ಭಗವಂತನಿಗೆ ಹರಿಸಿಕೊಳ್ಳುತ್ತಿದ್ದನು. ಅರಮನೆಯಲ್ಲಿ ಸೀತಾಲಕ್ಷ್ಮಣ ಸಮೇತನಾದ ರಾಮದೇವರ ವಿಗ್ರಹಗಳಿದ್ದವು. ಅವು ಒಂದು ಕೋಣೆಯಲ್ಲಿನ ದೊಡ್ಡ ಹಳೆಯ ಮಂದಾಸನದಲ್ಲಿದ್ದವು. ಆ ಕೋಣೆಗೆ ಯಾರೂ ಹೋಗುತ್ತಿರಲಿಲ್ಲ. ಅದರ ಬಾಗಿಲು ಅರ್ಧ ಮುಚ್ಚಿ ಅರ್ಧ ತೆರೆದಿತ್ತು. ಅದು ವಿಜಯಾಂಬಿಕೆ ಪೂಜೆ ಮಾಡುತ್ತಿದ್ದ ಗೃಹ. ಅದರ ತುಂಬ ಹಳೆಯ ಸಾಮಾನುಗಳನ್ನು ಹಾಕಿದ್ದರು. ಎಲ್ಲಾ ವಿಪರೀತ ಧೂಳಿನಿಂದ ಮುಚ್ಚಲ್ಪಟ್ಟಿತ್ತು. ಆದರೂ ವಿಗ್ರಹಗಳಲ್ಲಿರುವುದು ಗವಿಯಪ್ಪನಿಗೆ ತಿಳಿದಿತ್ತು. ವಿಜಯಾಂಬಿಕೆಯ ಮೇಲಿನ ದ್ವೇಷದಿಂದ ಆವಳು ದೇಶ ಬಿಟ್ಟಲಾಗಾಯಿತು ಆ ಕೋಣೆಯನ್ನು

ನೋಡಿದರೆ ಅಂತಃಪುರದ ಎಲ್ಲರೂ ಮುಖ ತಿರುಗಿಸಿಕೊಂಡು ಹೋಗುತ್ತಿದ್ದರು. ಯಾರೂ ಆ ಕೋಣೆಯನ್ನು ಪ್ರವೇಶಿಸಬಾರದೆಂದು ಸೇವಕರಿಗೆಲ್ಲಾ ಆಜ್ಞೆಯಾಗಿತ್ತು. ಆದರೂ ಬಾಗಿಲುಗಳು ಪೂರ್ತಿ ಮುಚ್ಚದೆ ಇರುವುದರಿಂದ ಸೇವಕರು ಅನಾವಶ್ಯಕವಾದ ಹಳೆಯ ಸಾಮಾನುಗಳನ್ನು ಇಡಲು ಕೂಡಲೆ ಯಾವ ಜಾಗವು ಸಿಕ್ಕದಿದ್ದಾಗಲೆಲ್ಲ ಯಾರೂ ನೋಡದಂತೆ ಅವನ್ನು ತಂದು ಬಾಗಿಲುಗಳ ಸಂದಿಯಿಂದ ಈ ಕೋಣೆಯೊಳಕ್ಕೆ ಎಸೆಯುತ್ತಿದ್ದರು. ರುದ್ರಸಿಂಹನಿಗೆ ಈ ವಿಷಯ ಗೊತ್ತೇ ಇಲ್ಲ. ಆತನು ಅರಮನೆಯಲ್ಲೇ ಒಂದು ಕೋಣೆಯಲ್ಲಿ ದೇವರ ವಿಗ್ರಹಗಳನ್ನಿಟ್ಟು ಪೂಜೆ ಮಾಡಿ ಪ್ರಾರ್ಥನೆ ಮಾಡುತ್ತಿರಬೇಕೆಂದು ಅಪೇಕ್ಷೆ ಪಟ್ಟನು. ರಾಣಿಯು ಇದಕ್ಕೆ ಏರ್ಪಾಟು ಮಾಡಿದಳು. ಆದರೆ ವಿಗ್ರಹಗಳು ಎಲ್ಲಿ ಸಿಕ್ಕುವುದೆಂದು ಅವಳಿಗೆ ಗೊತ್ತಾಗಲಿಲ್ಲ. ಗೋಪಾಲನ ಸಲಹೆ ಕೇಳಿದಳು. ಗೋಪಾಲನು ಸ್ವಲ್ಪ ಆಲೋಚನೆ ಮಾಡಿ "ಸ್ವಲ್ಪ ತಾಳಿ ಅಮ್ಮನವರೇ. ನಾನು ಏನಾದರೂ ಉಪಾಯ ಹೇಳುತ್ತೇನೆ" ಎಂದು ಹೇಳಿ, ಅಲ್ಲಿಂದ ಹೋಗಿ ಗವಿಯಪ್ಪನ ಸಲಹೆ ಕೇಳಲು ಗವಿಯಪ್ಪ ಹಳೆಯ ಕೋಣೆಯಿಂದ ವಿಗ್ರಹಗಳನ್ನು ತಂದು ಕೊಟ್ಟು ಗೋಪಾಲನಿಗೆ "ನಮ್ಮ ಅಂತಃಪುರದಲ್ಲೇ ಹಿಂದಿನವರು ಪೂಜೆ ಮಾಡುತ್ತಿದ್ದವು ಇವು." ಎಂದು ಹೇಳಿದನು. ಗೋಪಾಲನು ವಿಗ್ರಹಗಳನ್ನು ಶುಭ್ರವಾಗಿ ತೊಳೆಸಿ ರಾಣಿಗೆ ಸಮರ್ಪಿಸಿ ಗವಿಯಪ್ಪನು ತಂದು ಕೊಟ್ಟ ವಿಷಯವನ್ನೂ ಆತನು ಹೇಳಿದ ಮಾತುಗಳನ್ನೂ ತಿಳಿಸಿದನು. ರಾಣಿಯು ಕೆಲಸವಾಯಿತಲ್ಲಾ ಎಂದುಕೊಂಡು ವಿಗ್ರಹಗಳ ಚರಿತ್ರೆಯನ್ನು ವಿಚಾರಿಸಲು ಹೋಗಲಿಲ್ಲ. ವಿಗ್ರಹಗಳನ್ನು ನೋಡಿ ಭಕ್ತಿಪರವಶನಾದ ಮಹಾರಾಜನು ವಿಗ್ರಹಗಳು ಆತನ ಪೂರ್ವಿಕರು ಪೂಜೆ ಮಾಡುತ್ತಿದ್ದವೆಂದು ತಿಳಿದ ಕೂಡಲೇ ಅದರ ಚರಿತ್ರೆಯನ್ನು ವಿಚಾರಿಸಲು ಹೋಗಲಿಲ್ಲ. ವಿಗ್ರಹಗಳನ್ನಿಟ್ಟುಕೊಂಡು ಪ್ರತಿದಿನವೂ ಪೂಜೆ ಮಾಡುತ್ತ ಪ್ರಾರ್ಥಿಸಿಕೊಳ್ಳುತ್ತಿದ್ದನು.

## ೨೮

ಅಂದು ಶ್ರಾವಣ ಶುದ್ಧ ಪೂರ್ಣಿಮಾ ಮಂಗಳವಾರವಾಗಿತ್ತು. ಗುರು

ವಾರ ರಾಮಕ್ಕ ಗಣಪತಿಯ ಗುಡಿಗೆ ಹೋಗಿ ಪೂಜೆ ಮಾಡಿ ಬರಬೇಕಾಗಿತ್ತು. ಮನೆಯಲ್ಲಿ ಅಕ್ಕಿ ಇರಲಿಲ್ಲ. ಕಷ್ಟಕಾಲ. ಸರಿಯಾದ ಮಳೆಯಿಲ್ಲದೆ ನಾಡಿನಲ್ಲಿ ಭತ್ತದ ಬೆಳೆ ತೀರಾ ಕಡಿಮೆಯಾಗಿತ್ತು. ರಾಮಕ್ಕನ ಮನೆಯಲ್ಲಿ, ರಾಗಿ, ನವಣೆ ಮುಂತಾದುವನ್ನೇ ಹೆಚ್ಚಾಗಿ ಉಪಯೋಗಿಸತೊಡಗಿದರು. ಗಣಪತಿಗೆ ನೈವೇದ್ಯ ಮಾಡಲು ತಂಬಿಟ್ಟು ಮಾಡುವುದಕ್ಕೆ ಅಕ್ಕಿ ಬೇಕಾಗಿತ್ತು. ಅವಶ್ಯಕತೆ ಬಿದ್ದರೆ ಇನ್ನಾವುದಕ್ಕಾದರೂ ಅಕ್ಕಿ ಮನೆಯಲ್ಲಿರಲೇ ಬೇಕಲ್ಲ. ಸ್ವಲ್ಪ ಹಣ ತೆಗೆದುಕೊಂಡು ರಾಮಕ್ಕ ಪೇಟೆಗೆ ಹೋಗಿ ಒಂದು ಬಳ್ಳದಷ್ಟು ಅಕ್ಕಿ ಖರೀದಿ ಮಾಡಿ ತೆಗೆದುಕೊಂಡು ಬರುತ್ತಿದ್ದಳು. ವಯಸ್ಸಾಗಿತ್ತು. ದಾರಿಯಲ್ಲಿ ಎಡವಿ ಬಿದ್ದುಬಿಟ್ಟಳು. ಮೊಣಕಾಲಿಗೂ ಕೈಗೂ ಗಾಯಗಳಾದವು. ಯಾರೋ ಪುಣ್ಯಾತ್ಮರು ಎಬ್ಬಿಸಿದರು. ತಲೆಯ ಮೇಲಿದ್ದ ಮಂಕರಿ ನೆಲಕ್ಕೆ ಬಿದ್ದು ಅದರಲ್ಲಿನ ಅಕ್ಕಿಯೆಲ್ಲಾ ಮಣ್ಣು ಪಾಲಾಯಿತು. ಆ ಎಬ್ಬಿಸಿದ ಪುಣ್ಯಾತ್ಮರೇ ಮಣ್ಣು ಮಿಶ್ರಿತವಾದ ಅಕ್ಕಿಯನ್ನೆಲ್ಲಾ ಎತ್ತಿ ಮಂಕರಿಗೆ ಹಾಕಿ ತಲೆಯಮೇಲಿಟ್ಟರು. ನಡೆಯಲು ಕಷ್ಟವಾಗಿದ್ದುದರಿಂದ ಅಲ್ಲಿದ್ದ ಒಂದು ಮನೆಯಿಂದ ಒಂದು ಕೋಲು ತಂದು ರಾಮಕ್ಕನಿಗೆ ಕೊಟ್ಟರು. ರಾಮಕ್ಕ ಕೋಲೂರಿಕೊಂಡು ಅಕ್ಕಿ ಹೊತ್ತುಕೊಂಡು ಮನೆಗೆ ಬಂದು ತಲುಪಿದಳು. ಸಾಯಂಕಾಲವಾಗಿತ್ತು. ಗೋಪಾಲನಿನ್ನೂ ಬಂದಿರಲಿಲ್ಲ. ಆಯಾಸದಿಂದ, ಗಾಯಗಳ ನೋವಿನಿಂದ ಬಳಲಿದ್ದ ರಾಮಕ್ಕ ಹಾಸಿಗೆ ಹಿಡಿದಳು.

ಸ್ವಲ್ಪ ಹೊತ್ತಿಗೆ ಗೋಪಾಲ ಬಂದ. ಆತನ ಮುಖದಲ್ಲಿ ಎಂದಿನಂತೆ ಶೋಭಿಸುತ್ತಿದ್ದ ಬಾಲಕರ ಮುಖದಲ್ಲಿ ತೋರುವ ಮುಗ್ಧತೆ ಮತ್ತು ಮುಗುಳ್ನಗೆ ಆ ದಿನ ಇರಲಿಲ್ಲ. ವಿಷಾದವಿಲ್ಲದಿದ್ದರೂ ಗಂಭೀರ ಮೌನ ಕಾಣುತ್ತಿತ್ತು. ತಾಯಿ ಮಲಗಿರುವುದನ್ನು ನೋಡಿದ ಕೂಡಲೇ ಆತನು ಸ್ವಲ್ಪ ಚಕಿತನಾಗಿ ಆಕೆಯನ್ನು ಸಮೀಪಿಸಿದ. ತಾಯಿ ಆತನಿಗೆ ನಡೆದ ಸಮಾಚಾರವನ್ನು ತಿಳಿಸಿದಳು. ಆತನು ತಾಯಿಗೆ "ನೀನು ಯೋಚನೆ ಮಾಡಬೇಡ, ಎಲ್ಲಾ ಸರಿಹೋಗುತ್ತೆ." ಎಂದು ಉತ್ತರ ಕೊಟ್ಟು, ಸ್ವಲ್ಪ ಹೊತ್ತು ಮೌನವಾಗಿ ಕುಳಿತಿದ್ದನು.

"ಏನು ಗೋಪಾಲಾ, ಏನೋ ಬಹಳಯೋಚನೆ ಮಾಡುತ್ತಿದ್ದೀಯಲ್ಲಾ ?" ಎಂದು ತಾಯಿ ಕೇಳಿದಳು : ಗೋಪಾಲನು ನಿಟ್ಟುಸಿರನ್ನು ಬಿಟ್ಟು ಹೇಳಿದ. "ಈ ದಿನ ಸಾಯಂಕಾಲದವರೆಗೂ ಹೇಮಗಿರಿ ರಾಜ್ಯದಿಂದ ಮಹಾರಾಜರ

ಇಷ್ಟವನ್ನು ಗೌರವಿಸುವ ವಾರ್ತೆ ಬರಲಿಲ್ಲ. ಕೊನೆಯುತನಕ ಕಾದಿದ್ದು ನೋಡಿ ಮಂತ್ರಾಲೋಚನಾ ಮಂದಿರದಲ್ಲಿ ಮಹಾರಾಜನರು ನಾಳೆಯೇ ಸೈನ್ಯವನ್ನು ಕಾಳಗಾಪುರಕ್ಕೆ ಕಳುಹಿಸಬೇಕೆಂದು ಆಜ್ಞೆ ಮಾಡಿದರು. ಕೂಡಲೇ ಹೇಮಗಿರಿ ರಾಜ್ಯದಿಂದ ದೂತರು ಬಂದು ಹೇಮಗಿರಿ ಸೈನ್ಯಾಧಿಪತಿಯಿಂದ ಪ್ರತ್ಯುತ್ತರವನ್ನು ತಂದುಕೊಟ್ಟರು. ಅದರಲ್ಲಿ 'ಘನಗಿರಿ ಮಹಾರಾಜರು ಇಷ್ಟ ಪಟ್ಟ ಯುದ್ಧಕ್ಕೆ ನಾವು ಮನ್ನಣೆ ಕೊಟ್ಟಿದ್ದೇವೆ. ಅವರ ಈ ಇಷ್ಟ ಈಡೇರಲಿ, ಭಾದ್ರಪದ ಬಹುಳ ತದಿಗೆಯೊಳಗೆ ನಮ್ಮ ಸೈನ್ಯಗಳೂ ಕಾಳಗಾಪುರದ ಬಳಿ ಸೇರುವುವು. ಆ ದಿನ ಯುದ್ಧವಾರಂಭವಾಗಲಿ.' ಎಂದು ಬರೆದಿತ್ತು. ಇದನ್ನು ಕೇಳಿ ಮಹಾರಾಜರ ಅಹಂಕಾರವೆಂಬ ಸರ್ಪವು ಕೋಲಿನ ಪೆಟ್ಟು ತಿಂದಂತೆ ಹೆಡೆಯೆತ್ತಿತ್ತು. ಅವರು 'ಹಾಗೆಯೇ ಆಗಲಿ. ಯುದ್ಧವೇ ನಡೆಯಲಿ. ಸೈನ್ಯದ ಪರಿಮಾಣವಲ್ಲ. ಸೈನಿಕರ ವೀರತ್ವ ಜಯವನ್ನು ತಂದು ಕೊಡುವುದು. ಜಯದಲ್ಲಿ ಅಪನಂಬಿಕೆ ನಮಗೆ ಬೇಡ. ಶ್ರೀರಾಮಚಂದ್ರ, ಅರ್ಜುನ, ಆಂಜನೇಯ, ಭೀಮ ಮುಂತಾದ ವೀರರನ್ನು ನೆನೆಸಿಕೊಳ್ಳಿ. ಕ್ಷತ್ರಿಯ ವೃತ್ತಿಯಲ್ಲಿರುವ ಸೈನಿಕರೂ ಸೈನ್ಯಾಧಿಪತಿಗಳೂ ಸಾವಿಗಂಜುವರೇ? ಸಾವನ್ನು ಲಕ್ಷಿಸದೆ ಶೌರ್ಯದಿಂದ ಹೋರಾಡಿದರೆ ಒಬ್ಬನು ಹತ್ತು ಶತ್ರುಗಳನ್ನು ಕೊಲ್ಲಬಹುದು. ಆದರ ಮೇಲೆ ತಾನು ಸತ್ತರೂ ತನ್ನ ಸ್ವಾಮಿಗೆ ಜಯ. ತನಗೆ ವೀರಸ್ವರ್ಗ. ಸೈನ್ಯವನ್ನು ಕಳುಹಿಸುವುದಕ್ಕೆ ಮೊದಲು ಸೈನಿಕರಿಗೆ ಈ ವಿಷಯಗಳನ್ನು ಪದೇ ಪದೇ ಹೇಳಿ ಉತ್ತೇಜನ ಕೊಡಿ. ಹೆಂಗಸರಿಂದ ಆರತಿಗಳನ್ನೆತ್ತಿಸಿ. ಹರಕೆಗಳನ್ನು ಮಾಡಿಸಿ. ಶಪಥಗಳನ್ನು ಮಾಡಿಸಿ. ಮುಖ್ಯವಾಗಿ ನಾಯಕರು ಸಾಹಸಿಗಳಾಗಿರಬೇಕು. ಸೈನ್ಯಾಧಿಪತಿಯ ಧೈರ್ಯ ಸಾಹಸಗಳು ನಮ್ಮ ಜಯಕ್ಕೆ ಆಧಾರ. ನಾನು ಸೈನ್ಯದೊಂದಿಗೆ ಬರುತ್ತೇನೆ. ಸೈನ್ಯವನ್ನು ನಡೆಸುತ್ತೇನೆ. ಜಯ ಹೇಗೆ ಸಿಗದೋ ನೋಡೋಣ.' ಎಂದು ಹೇಳಿದ. ಕೂಡಲೇ ಸೈನ್ಯಾಧಿಪತಿ ವೀರಪ್ಪ ಆಸನದಿಂದೆದ್ದು ಖಡ್ಗವನ್ನು ಒರೆಯಿಂದೆಳೆದು "ಮಹಾರಾಜರೇ, ಹೇಮಗಿರಿ ಸೈನ್ಯಾಧಿಪತಿಗೆ ಘನಗಿರಿ ಸೈನ್ಯಾಧಿಪತಿ ಸಾಲದೇ? ತಾವೇಕೆ ಬರಬೇಕು? ರಾಜರ ಪ್ರತಿಜ್ಞೆ ಜಯಿಸಬೇಕು. ಇಲ್ಲವೇ ನಾನು ಯುದ್ಧದಲ್ಲಿ ಮಡಿಯಬೇಕು. ನಾನು ಪ್ರತಿಜ್ಞೆ ಮಾಡುತ್ತಿದ್ದೇನೆ" ಎಂದು ಕತ್ತಿಯನ್ನೆತ್ತಿ ಪ್ರತಿಜ್ಞೆ ಮಾಡಿದನು. ಪ್ರಧಾನಿ ಮುಂತಾದ ಎಲ್ಲರೂ 'ಮಹಾರಾಜರಿಗೆ

ಜಯವಾಗಲಿ' ಎಂದು ಘೋಷಿಸಿದರು. ಪ್ರಧಾನಿ ಮಹಾರಾಜನನ್ನು ಕುರಿತು, 'ಹೇಮಗಿರಿ ಸೈನ್ಯಾಧಿಪತಿಗೆ ಎದುರಾಗಿ ನಮ್ಮ ಸೈನ್ಯಾಧಿಪತಿಯನ್ನು ಕಳುಹಿಸಿದರೆ ಸಾಕು. ಅಲ್ಲಿನ ರಾಜನು ಬಂದರೆ ತಾನೆ ತಾವು ಯುದ್ಧಕ್ಕೆ ಹೋಗಬೇಕಾಗಿರುವುದು. ಅಲ್ಲಿ ಎಲ್ಲಿದ್ದಾನೆ ರಾಜ? ತಮ್ಮ ಆರೋಗ್ಯವನ್ನು ನೋಡಿಕೊಳ್ಳಿ, ಹೆಚ್ಚು ಯೋಚಿಸಬೇಡಿ.' ಎಂದು ಅರಿಕೆ ಮಾಡಿಕೊಂಡನು.

"ಮಳೆಯ ಮೋಡಗಳ ಧ್ವನಿ ಇಲ್ಲದಿದ್ದರೂ ಯುದ್ಧದ ಮೋಡಗಳು ದಟ್ಟವಾಗಿ ಕವಿದು ಭೀಕರ ಧ್ವನಿ ಮಾಡುತ್ತಿವೆ. ಅವು ಸುರಿಯುವುದು ರಕ್ತ. ನಾಳೆಯೆಲ್ಲಾ ಘನಗಿರಿಯ ವಾಸಿಗಳಿಗೆ ಯುದ್ಧವಾದ್ಯಗಳ ಘೋಷಣೆಯೇ ಕೇಳಿಬರುವುದು. ಸಂಗೀತ ಸಾಹಿತ್ಯಗಳ ಮೃದು ಧ್ವನಿ ಎಲ್ಲಿ ಅಡಗಿಹೋಗುವುದೋ ?"

ರಾಮಕ್ಕ ಇದನ್ನೆಲ್ಲ ಕೇಳಿ ಮಲಗಿಯೇ ನಿಟ್ಟುಸಿರುಬಿಟ್ಟು ನುಡಿದಳು: "ಏನೋನಪ್ಪಾ, ಇನ್ನೂ ಏನೇನು ಕಷ್ಟಗಳು ಬರಲಿವೆಯೋ? ಭಗವಂತನೇ ಕಾಪಾಡಬೇಕು."

ಗೋಪಾಲನು ರಾತ್ರಿಗೆ ಅಡಿಗೆ ಮಾಡಲುದ್ಯುಕ್ತನಾದನು. ಒಲೆ ಹಚ್ಚಿ ಎಸರಿಟ್ಟು ತಾಯಿಯ ಬಳಿ ಬಂದು ಮಂಕರಿಯಲ್ಲಿನ ಅಕ್ಕಿಯನ್ನು ಹಣತೆಯ ಬೆಳಕಿನಲ್ಲಿ ಶುದ್ಧ ಮಾಡುತ್ತ ಕುಳಿತನು. ಅವರಿಬ್ಬರೂ ಮಾತಾಡುತ್ತಿರುವ ಸಂದರ್ಭದಲ್ಲಿ ತಾಯಿ ಹೀಗೆಂದಳು:—

"ಗೋಪಾಲಾ, ನೀನು ಮನೆ ಕೆಲಸ ಮಾಡುವುದನ್ನು ನಾನು ನೋಡಲಾರೆ. ನಿನಗೂ ಮದುವೆ ಮಾಡಿಕೊಳ್ಳುವುದಕ್ಕೆ ತಕ್ಕ ವಯಸ್ಸಾಯಿತು. ನನ್ನ ಕೈ ಕಾಲು ಗಟ್ಟಿ ಮುಟ್ಟಿಯಾಗಿರುವಾಗಲೇ ನೀನು ಮದುವೆ ಮಾಡಿಕೊಳ್ಳಬೇಕೆಂದು ನನ್ನ ಆಸೆ. ಭಾಗ್ಯಲಕ್ಷ್ಮಿ ನಿನ್ನ ಮೇಲೆ ಮನಸ್ಸಿಟ್ಟುಕೊಂಡಿರುವ ವಿಚಾರವೆಲ್ಲಾ ಛಲಚ್ಛಲನು ನನಗೆ ಹೇಳಿದ್ದಾನೆ. ನಿನಗೆ ಇಷ್ಟವಿದ್ದರೆ ಅವಳನ್ನೇ ಮಾಡಿಕೋ. ನನ್ನ ಅಭ್ಯಂತರವೇನಿಲ್ಲ."

ಗೋಪಾಲನು—ತಾಯೀ, ನನಗೆ ಇನ್ನೂ ಮದುವೆಯ ಮೇಲೆ ಗಮನವೇ ಇಲ್ಲ. ಈ ದುರ್ಭಿಕ್ಷ ಕಳೆದು, ಯುದ್ಧ ನಿಂತು, ಜನರಲ್ಲಿ ಸಂತೋಷ, ಸಂಸ್ಕೃತಿ ಎಂದು ಮೂಡುವುವೋ ಆ ದಿನ ನೋಡಿದರೆ ನನಗೆ ನೂರು ಮದುವೆಗಳನ್ನು ಮಾಡಿಕೊಂಡಷ್ಟು ಸಂತೋಷ.

ರಾಮಕ್ಕ—"ನೀನು ಹೇಳುವುದು ಇತರರ ಕ್ಷೇಮದ ಮಾತಾಯಿತು. ನಿನ್ನ ಕ್ಷೇಮವನ್ನೂ ನೀನು ನೋಡಿಕೊಳ್ಳಬೇಕಲ್ಲಾ ? ಭಾಗ್ಯಲಕ್ಷ್ಮಿಯ ಆಸೆ ನೀನು ಉನ್ನತ ಪದವಿಗೆ ಪ್ರಯತ್ನಿಸಬೇಕು, ತನ್ನನ್ನು ಮದುವೆ ಮಾಡಿಕೊಳ್ಳಬೇಕು ಎಂದು. ಅವಳು ವಾದಿಸಿದಳಂತೆ, ಉನ್ನತ ಪದವಿ ಸಿಕ್ಕಿದರೆ ವಿದ್ವಾಂಸರ ಉಪಕಾರ ಇನ್ನೂ ಚೆನ್ನಾಗಿ ಮಾಡಬಹುದಲ್ಲಾ ಎಂದು. ಇದಕ್ಕೆ ನಿನ್ನ ಉತ್ತರವೇನು ? ಈ ವಾದದಿಂದ ಹೇಗೆ ತಪ್ಪಿಸಿಕೊಳ್ಳುತ್ತೀಯೆ ?" ಹೀಗೆ ಹೇಳಿ ರಾಮಕ್ಕ ನಕ್ಕಳು.

ಗೋಪಾಲ—ಅದಕ್ಕೂ ಪ್ರತ್ಯುತ್ತರವಿದೆ. ಆದರೆ ಅವಳಿಗೆ ಹೇಳಲಿಲ್ಲ. ಉನ್ನತ ಪದವಿಯಿಂದ ವಿದ್ವಾಂಸರಿಗೆ ಉಪಕಾರ ಮಾಡುವುದಕ್ಕೆ ಮತ್ತೂ ಅನುಕೂಲವೆಂದು ತಾನೆ ಅವಳ ವಾದ. ಸಿಕ್ಕಿದರೆ ಉನ್ನತ ಪದವಿಯನ್ನೂ ಧರಿಸೋಣ. ವಿದ್ವಾಂಸರಿಗೆ ಉಪಕಾರವೂ ಮಾಡೋಣ. ನನ್ನ ಸ್ವಾರ್ಥಕ್ಕಾಗಿ ನನಗೆ ಉನ್ನತ ಪದವಿ ಬೇಡ, ಅಷ್ಟೇ.

ರಾಮಕ್ಕ—ನಿನ್ನ ಉತ್ತರ ಪೂರ್ಣವಾಗಲಿಲ್ಲ. ನಿನ್ನ ಸ್ವಾರ್ಥಕ್ಕಲ್ಲದಿದ್ದರೆ ಭಾಗ್ಯಲಕ್ಷ್ಮಿಗಾಗಿ ಯೇಕೆ ಉನ್ನತ ಪದವಿಗೆ ಪ್ರಯತ್ನಿಸಬಾರದು? ಎಂದು ಹೇಳಿ ಪುನಃ ನಕ್ಕಳು.

ಗೋಪಾಲನು—ತಾಯೀ, ನೀನು ನನಗಿಂತಲೂ ದೊಡ್ಡವಳು. ವಾದದಲ್ಲಿ ನಿನ್ನ ಮುಂದೆ ನಾನು ನಿಲ್ಲಬಲ್ಲೆನೇ ? ಅಥವಾ ನಿನ್ನ ಪ್ರಶ್ನೆ ನನ್ನ ಮನಸ್ಸು ತಿಳಿದುಕೊಳ್ಳುವುದಕ್ಕಾದರೆ ನನ್ನ ಸಮಾಧಾನ—ನಾನು ಯಾವ ಸ್ವಪ್ನ ಸುಂದರಿಯನ್ನೂ ಇನ್ನೂ ವರಿಸಿಲ್ಲ ವೆಂದು.

ಹೀಗೆ ಹೇಳುತ್ತಿರುವಾಗಲೇ ಛಲಚ್ಛಲನು ಪ್ರತ್ಯಕ್ಷನಾದ. ಅವನು ದೂರದಿಂದಲೇ "ನಾನು ಯಾವ ಸ್ವಪ್ನ ಸುಂದರಿಯನ್ನೂ ಇನ್ನೂ ವರಿಸಿಲ್ಲ." ಎಂದು ಹೇಳುವುದನ್ನು ಕೇಳಿ ಹಠಾತ್ತಾಗಿ ಕಾಣಿಸಿಕೊಂಡು, "ಏನಣ್ಣಾ, ಯಾಕೆ ಈ ಸುಳ್ಳು ಮಾತು ? ನಿಮ್ಮ ಸ್ವಪ್ನ ಸುಂದರಿ ಈಗ ಎದುರಿಗೇ ಬರುತ್ತಿದ್ದಾಳಲ್ಲಾ" ಎಂದು ತಿರುಗಿನೋಡಿ "ಅಗೋ ಬಂದುಬಿಟ್ಟಳು" ಎಂದು ಹೇಳುವಷ್ಟರಲ್ಲಿಯೇ ಕಮಲಮ್ಮ ಅಲ್ಲಿಗೆ ಬಂದಳು. ರಾಮಕ್ಕ "ಸರಿಯಾಗಿ ಹೇಳಿದೆಯೋ, ಛಲಾ," ಎಂದು ಹೇಳಿ ಆತುರದಿಂದ ತನ್ನ ಬಳಿ ಬಂದು ಕುಳಿತುಕೊಂಡ ಕಮಲಮ್ಮನ ಹೆಗಲ ಮೇಲೆ ಕೈಯಿಟ್ಟು ನೇವರಿಸಿದಳು.

ಕಮಲಮ್ಮನಿಗೆ ಪಾಪ ಇವರ ಹಾಸ್ಯೋಕ್ತಿಗಳಿಗಿಂತಲೂ ರಾಮಕ್ಕನ ದೇಹಸ್ಥಿತಿಯ ಮೇಲೂ, ಮನೆಯ ಕೆಲಸದ ಮೇಲೂ ಹೆಚ್ಚು ಆಸಕ್ತಿ ಇತ್ತು. ಅವಳು ಗೋಪಾಲನಿಂದ ಅಕ್ಕಿಯ ಮಂಕರಿಯನ್ನು ಕಿತ್ತುಕೊಂಡು ಮೊರಗಳನ್ನು ತಂದು ಶುದ್ಧಿ ಮಾಡುವುದಕ್ಕೆ ಇಟ್ಟುಕೊಂಡು "ಇದು ಹೆಂಗಸರ ಕೆಲಸ, ಗಂಡಸರು ಮಾಡಬಾರದು. ಮಾಡಲು ಬರುವುದೂ ಇಲ್ಲ. ಮೊರಗಳನ್ನು ಹಿಡಿದುಕೊಳ್ಳದೇ ಅಕ್ಕಿ ಮಾಡುವುದಕ್ಕಾಗುತ್ತದೆಯೇ, ಮೊರ, ಪರಕೆ ಇವುಗಳನ್ನು ಗಂಡಸು ಮುಟ್ಟಬಾರದೆಂದೂ, ಗೃಹಿಣಿಯೇ ಅವುಗಳಿಗೆ ಅಧಿಕಾರಿಣಿಯೆಂದೂ ಪೂರ್ವಿಕರು ಸುಮ್ಮನೆ ಕಡ್ಡಾಯ ಮಾಡಿದ್ದಾರೆಯೇ ?" ಎಂದು ಹೇಳಿದಳು.

ಅದಕ್ಕೆ ರಾಮಕ್ಕ—ಕಮಲಮ್ಮಾ ನೀನು ಒಳ್ಳೇ ಗೃಹಿಣಿಯಾಗು ಎಂದು ಹೇಳಿದಳು. ಛಲಚ್ಛಲನು "ಕಮಲಮ್ಮ ಒಳ್ಳೇ ಗೃಹಿಣಿ ಆಗುವುದಕ್ಕೆ ಅರ್ಹತೆಯನ್ನು ಯಾವಾಗಲೋ ಹೊಂದಿದ್ದಾಳೆ ತಾವು ಹೇಳಬೇಕಾದುದು "ಈ ಗೃಹಕ್ಕೆ ಗೃಹಿಣಿಯಾಗು ಎಂದಲ್ಲವೇ ?" ಎಂದ.

ರಾಮಕ್ಕ ನಗುತ್ತಾ "ಹಾಗೇ ಆಗಲಿ. ಅದೇ ನನ್ನ ಕೋರಿಕೆ. ಕೇಳಿದೆಯಾ ಗೋಪಾಲಾ" ಎಂದಳು.

ಗೋಪಾಲನು ಸುಮ್ಮನಿದ್ದನು. ಕಮಲಮ್ಮ ನಾಚಿದಳು. ಕೂಡಲೇ ಅಡಿಗೆಯ ಮನೆಗೆ ಹೋಗಿ ಅಡಿಗೆಯ ಕೆಲಸದಲ್ಲಿ ಮಗ್ನಳಾದಳು.

## ೨೯

ಮಾರನೆಯ ದಿನವೆಲ್ಲಾ ಘನಗಿರಿಯ ಕೋಟೆಯಲ್ಲಿ ಗಾಬರಿ. ಸೈನಿಕರ ಸುಳಿದಾಟ, ಭೇರಿಗಳ, ತಮ್ಮಟೆಗಳ, ತುತ್ತೂರಿಗಳ ಧ್ವನಿಗಳೂ ವೀರ ಘೋಷಣೆಗಳೂ, ಶಪಥಗಳೂ ನಡೆಯುತ್ತಿದ್ದವು. ಮರುದಿನ ಸೈನ್ಯ ತೆರಳಬೇಕಾಗಿತ್ತು. ಅದಕ್ಕೆ ಹಿಂದಿನ ರಾತ್ರಿ ಸೈನ್ಯಾಧಿಪತಿ ವೀರಪ್ಪನ ಮನೆಯಲ್ಲಿ ಎಲ್ಲರೂ ಹೊರಟುಹೋದ ಮೇಲೆ ವೀರಪ್ಪನೂ ಆತನ ಹೆಂಡತಿಯೂ, ಭಾಗ್ಯಲಕ್ಷ್ಮಿಯೂ ಪರಸ್ಪರ ಮಾತನಾಡುತ್ತಿದ್ದರು. ಮರುದಿನ ವೀರಪ್ಪನು ಸೈನ್ಯವನ್ನು ನಡೆಯಿಸಿಕೊಂಡು ಹೊರಡಬೇಕಾಗಿತ್ತು. ವೀರಪ್ಪನ ಹೆಂಡತಿ ಪರಿಚಾರಕರನ್ನಾಚೆ ನಿಲ್ಲಿಸಿ ತಾನೇ ಗಂಡನ ಸೇವೆ ಮಾಡುತ್ತಿದ್ದಳು. ಭಾಗ್ಯಲಕ್ಷ್ಮಿ ಇದರಲ್ಲಿ ಅವಳಿಗೆ ನೆರವಾಗಿದ್ದಳು.

ವೀರಪ್ಪ ಯುದ್ಧ ವಿಷಯವಾದ ವೀರ ವಾಕ್ಯಗಳನ್ನಾಡುತ್ತಿದ್ದನೇ ಹೊರತು ಹೆಂಡತಿಯ ಮೇಲೂ, ಪುತ್ರಿಯ ಮೇಲೂ ಬಂಧುಗಳ ಮೇಲೂ ಮನೆಯ ಮೇಲೂ ಊರಿನ ಮೇಲೂ ಆಸಕ್ತಿಯನ್ನು ತೋರಿಸುವ ಮಾತನ್ನೇ ಆಡುತ್ತಿರಲಿಲ್ಲ. ಆತನು ವೀರಾವೇಶ ಭರಿತನಾಗಿ ಹೆಂಡತಿಯ ಮತ್ತೆ ಮಗಳ ದೃಷ್ಟಿಗೆ ಭಾರವಾಗಿದ್ದನು. ಹೆಚ್ಚು ಪ್ರಕಾಶಮಾನವಾಗಿದ್ದನು. ಮಮಕಾರದ ಮಾತುಗಳನ್ನೆತ್ತುವುದಕ್ಕೆ ಇಬ್ಬರಿಗೂ ಧೈರ್ಯವಿರಲಿಲ್ಲ. ಆದರೆ ಇಬ್ಬರೂ ಒಳ ಕೋಣೆಗಳಲ್ಲಿ ಸೇರಿದಾಗ ಒಬ್ಬರನ್ನೊಬ್ಬರು ದೀನ ದೃಷ್ಟಿಯಿಂದ ನೋಡುತ್ತಿದ್ದರು. ಅವರ ಕಣ್ಣುಗಳಲ್ಲಿ ನೀರು ಬರುತ್ತಿತ್ತು. ಆದರೆ ವೀರಪ್ಪನ ಬಳಿಗೆ ಬರುವಾಗ ಅವರು ದುಃಖದ ಚಿಹ್ನೆಗಳನ್ನು ಮರೆ ಮಾಚಿ ಕೊಳ್ಳುತ್ತ ವೀರ ಸಂತೋಷವನ್ನು ನಟಿಸುತ್ತಿದ್ದರು. ಇದು ಭಾಗ್ಯಲಕ್ಷ್ಮಿಗೆ ಹೊಸದಾಗಿದ್ದರೂ ವೀರಪ್ಪನ ಹೆಂಡತಿ ಇವರಲ್ಲಿ ಪಳಗಿದ್ದಳು. ಅವಳನ್ನು ನೋಡಿಕೊಂಡು ಭಾಗ್ಯಲಕ್ಷ್ಮಿ ಅವಳನ್ನೇ ಅನುಸರಿಸುತ್ತಿದ್ದಳು.

ಮಾರನೇ ದಿನ ವೀರಪ್ಪನನ್ನು ತಾಯಿಯೂ ಮಗಳೂ ಕುಂಕುಮ ತಾಂಬೂಲಗಳಿಂದಲೂ ಆರತಿಯಿಂದಲೂ ಅರ್ಚಿಸಿ ಆಶೀರ್ವದಿಸಿ ಬೀಳ್ಕೊಟ್ಟರು. ಆ ವೇಳೆಯಲ್ಲಿ ರಂಗಯ್ಯನೂ, ಅಲ್ಲಿದ್ದನು. ವೀರಪ್ಪ ಹೊರಟ ಮೇಲೆ ಭಾಗ್ಯಲಕ್ಷ್ಮಿ ತಾಯಿಯ ಮುಖ ನೋಡಿದಳು. ಇಬ್ಬರ ಕಣ್ಣುಗಳಲ್ಲೂ ನೀರು ಬಂತು. ಭಾಗ್ಯಲಕ್ಷ್ಮಿ ರಂಗಯ್ಯನ ಮುಖವನ್ನು ನೋಡಿದಳು. ಆತನ ಕಣ್ಣುಗಳಲ್ಲೂ ನೀರು ಬರುತ್ತಿತ್ತು. ಆತನು ವೀರಪ್ಪ ಹೋದ ಕಡೆಯಲ್ಲೇ ನೋಡುತ್ತಿದ್ದನು. ಪುನಃ ಎಲ್ಲರೂ ವೀರಪ್ಪನು ನಡೆಸಿಕೊಂಡು ಹೋಗುವ ಸೈನ್ಯವನ್ನು ನೋಡಲು ರಾಮಬುರುಜಿಗೆ ಹೋದರು. ಅಲ್ಲಿಂದ ಸೈನ್ಯ ಕಣ್ಮರೆಯಾಗುವವರೆಗೂ ನೋಡುತ್ತಲೇ ಇದ್ದರು.

ಸೈನ್ಯವು ಘನಗಿರಿಯನ್ನು ಬಿಟ್ಟು ದೂರ ಹೋದ ಮೇಲೆ ಕೋಟೆ ಪೇಟೆಗಳಲ್ಲಿ ಎಲ್ಲೆಲ್ಲಿ ನೋಡಿದರೂ ಗಂಡಂದಿರನ್ನೂ ಮಕ್ಕಳನ್ನೂ ಯುದ್ಧಕ್ಕೆ ಕಳುಹಿಸಿಕೊಟ್ಟ ಸ್ತ್ರೀಯರ ಮತ್ತು ಅವರ ಬಂಧುಗಳ ಖಿನ್ನ ಮುಖಗಳೇ ಕಾಣುತ್ತಿದ್ದವು. ಎಲ್ಲರೂ ಮೌನವನ್ನು ತಾಳಿದ್ದರು. ಎಷ್ಟೋ ಜನ ಭೂತಾವೇಶ ಹೋದಮೇಲೆ ಭೂತಾವಿಷ್ಟನು ಅನುಭವಿಸುವ ನಿಸ್ಪ್ರಾಣ ಸ್ಥಿತಿಯಲ್ಲಿದ್ದರು. ಬೀದಿಗಳಲ್ಲಿ ಜನಸಂಚಾರವೇ ಇರಲಿಲ್ಲ. ರಾಮಕ್ಕ ಮಾತ್ರ ಕುಂಟುತ್ತಾ

ವಿಶ್ವೇಶ್ವರನ ದೇವಸ್ಥಾನಕ್ಕೆ ಹೋಗಿ ದೇವರಿಗೆ ಪೂಜೆ ಮಾಡಿ ತಂಬಿಟ್ಟಿನ ಜ್ಯೋತಿಗಳನ್ನೂ, ಎಳನೀರಿನ ಅಭಾವದಿಂದ ಒಂದು ಮಣ್ಣಿನ ಪಾತ್ರೆಯಲ್ಲಿ ಬೆಲ್ಲದ ಪಾನಕವನ್ನೂ ಇಟ್ಟು ಬಂದಳು.

ರಾಜಾಂತಃಪುರದ ಆಲೋಚನಾ ಮಂದಿರದಲ್ಲಿ ರುದ್ರಸಿಂಹನು ಪ್ರಧಾನಿಯನ್ನು ಕರೆಸಿಕೊಂಡು ಎರಡೂ ಸೈನ್ಯಗಳ ಬಲಾ ಬಲಗಳನ್ನು ಕುರಿತು ಮಾತನಾಡತೊಡಗಿದನು. ಪ್ರಧಾನಿಯು, ತಾನು ಸಂಗ್ರಹಿಸಿದ ವಾರ್ತೆಗಳಿಂದ, ಹೇಮಗಿರಿ ಸೈನ್ಯವನ್ನು ಗೆಲ್ಲುವುದು ಘನಗಿರಿ ಸೈನ್ಯಕ್ಕೆ ಅಸಾಧ್ಯವೆಂದೂ. ನೆರೆಯ ತಮಿಳು ರಾಜ್ಯಗಳ ಸಹಕಾರವನ್ನು ಹೇಮಗಿರಿ ರಾಜ್ಯದವರು ಪಡೆಯದಂತೆ ತಾನು ತಂತ್ರ ಮಾಡಿರುವುದಾಗಿಯೂ, ಹೇಮಗಿರಿ ರಾಜ್ಯದಲ್ಲಿಯೇ ಯುದ್ಧ ವಿಮುಖರಾದ ಕೆಲವರು ನಾಯಕರಿರುವುದಾಗಿ ತಿಳಿದುಬಂದಿದೆಯೆಂದೂ, ಆದರೂ ಅಲ್ಲಿನ ಸೈನ್ಯಾಧಿಪತಿಯು ಬಲದೇವನ ಅನುಸಾರಿಯಾಗಿ ಬಹಳ ಅಹಂಕಾರದಿಂದ ಇರುವನೆಂದೂ, ತನ್ನ ಸೈನ್ಯಬಲದಿಂದ ಯುದ್ಧದಲ್ಲಿ ರುದ್ರಸಿಂಹನ ಸೈನ್ಯವನ್ನು ಗೆದ್ದು ಘನಗಿರಿ ರಾಜ್ಯವನ್ನೇ ಆಕ್ರಮಿಸಬೇಕೆಂಬ ಆಸೆಯೂ ಆತನಿಗಿದೆಯೆಂದೂ, ಹಾಗೆ ಮಾಡಿದರೆ ತಾನು ಘನಗಿರಿಗೆ ರಾಜನಾಗಬಹುದೆಂದೂ, ಇಲ್ಲದಿದ್ದರೆ ಹೇಮಗಿರಿಯಲ್ಲಾಗಲಿ ಮತ್ತೆಲ್ಲಿಯಾಗಲಿ ರಾಜನಾಗುವ ಅವಕಾಶ ತನಗಿಲ್ಲದಿರುವುದರಿಂದ ಆತನು ರುದ್ರಸಿಂಹನ ಸೈನ್ಯವನ್ನು ಗೆದ್ದು ಘನಗಿರಿ ರಾಜ್ಯವನ್ನೇ ಆಕ್ರಮಿಸಲು ಪ್ರಯತ್ನ ಪಡುವನೆಂದೂ ವರ್ತಮಾನಗಳು ತಿಳಿದು ಬಂದಿರುವುದಾಗಿಯೂ ಹೇಳಿದನು. ಇದನ್ನೆಲ್ಲ ಕೇಳಿದ ಮಹಾರಾಜನಿಗೆ ಪುನಃ ಆಲೋಚನೆಯ ಬೇನೆ ಹತ್ತಿತು. ಯುದ್ಧದಲ್ಲಿ ತಾನು ಜಯಿಸುವುದಾಗಿ ಖಂಡಿತವಾಗಿ ಹೇಳುವುದಕ್ಕೆ ಎಂಥವರಿಗೂ ಸಾಧ್ಯವಿಲ್ಲ. ಅಲ್ಲದೆ ಪ್ರಧಾನಿಯ ಮಾತಿನಂತೆ ಗೆಲ್ಲುವುದಕ್ಕಿಂತ ಸೋತು ಹೋಗುವ ಸಂಭವವೇ ಹೆಚ್ಚಾಗಿದೆ. ಇದರ ಮೇಲೆ ಹೇಮಗಿರಿ ಸೈನ್ಯಾಧಿಪತಿಯ ದುರಾಶೆ, ಆತನು ಗೆದ್ದು ಘನಗಿರಿಗೆ ಬಂದರೆ ತನ್ನ ಗತಿಯೇನು? ಇವೇ ಮೊದಲಾದ ಪ್ರಶ್ನೆಗಳು ಆತನನ್ನು ಬಾಧಿಸತೊಡಗಿದವು.

ಸ್ವಲ್ಪ ದಿನಗಳು ಹೀಗೆಯೇ ಕಳೆದವು. ಪ್ರಧಾನಿಗೆ ಬಂದ ವಾರ್ತೆ ನಿಜವಾಗಿತ್ತು. ಹೇಮಗಿರಿ ರಾಜ್ಯದಲ್ಲಿನ ನಾಯಕರಲ್ಲಿ ಹೆಚ್ಚುಮಂದಿ ಯುದ್ಧ ವಿಮುಖರಾಗಿದ್ದರು. ಅವರಿಗೆ ಘನಗಿರಿಯ ಸೈನ್ಯವನ್ನು ಗೆದ್ದು ಘನಗಿರಿಯನ್ನಾಕ್ರಮಿಸಿ ತಾನು ಅದಕ್ಕೆ ರಾಜನಾಗಬೇಕೆಂಬ ಸೈನ್ಯಾಧಿಪತಿಯ ಅಭಿಲಾಷೆ ತಿಳಿಯುತ್ತಾ

ಬಂದು, ಅವರು ಯುದ್ಧಕ್ಕೆ ಮೂಲ ಕಾರಣಗಳನ್ನಾಲೋಚಿಸಿ ಘನಗಿರಿಯ ಸೈನ್ಯವು ಮುಂಚಿತವಾಗಿಯೇ ಕಾಳಗಾಪುರಕ್ಕೆ ಬರುತ್ತಿರುವುದನ್ನು ತಿಳಿದು ರುದ್ರಸಿಂಹನಿಗೆ ಪ್ರತ್ಯೇಕವಾದ ಸಂದೇಶವನ್ನು ಕಳುಹಿಸಿದರು. ಆ ಸಂದೇಶದಲ್ಲಿ ರುದ್ರಸಿಂಹನ ವಿಷಯವಾಗಿ ಗೌರವವನ್ನು ಸೂಚಿಸುವ ವಾಕ್ಯಗಳಿದ್ದವು. ಅದನ್ನು ಕೇಳಿ ರುದ್ರಸಿಂಹನು ಸಂತುಷ್ಟನೂ ಕುತೂಹಲಿಯೂ ಆದನು. ಆ ಸಂದೇಶದಲ್ಲಿ ಅಲ್ಪರಾದ ವ್ಯಕ್ತಿಗಳ ಕಾರಣದಿಂದಾಗಿ ಉಂಟಾದ ಎರಡು ದೊಡ್ಡ ರಾಜ್ಯಗಳನಡುವಿನ ದ್ವೇಷವು ಎರಡು ರಾಜ್ಯಗಳ ಜನರಿಗೂ ತೀರದ ಕಷ್ಟನಷ್ಟಗಳನ್ನುಂಟುಮಾಡುವುದೆಂದೂ, ತಾವು ಆರಿಸಿಕೊಂಡ ರಾಜೇಂದ್ರದೇವನು ವಿನಯವುಳ್ಳವನೆಂದೂ, ಜನರ ಕ್ಷೇಮಕ್ಕೆ ಶ್ರಮಿಸುವನೆಂದೂ, ರುದ್ರಸಿಂಹ ಪ್ರಭುಗಳ ವಿಷಯದಲ್ಲಿ ಆತನಿಗೆ ದ್ವೇಷವಿಲ್ಲವೆಂದೂ, ಮೇಲಾಗಿ ಗೌರವಭಾವವಿದೆಯೆಂದೂ, ಸೈನ್ಯಾಧಿಪತಿಗೆ ಈ ವಿಷಯದಲ್ಲಿ ಸಂದೇಶ ಕಳುಹಿಸಲು ತಾವು ಸಮ್ಮತಿ ಕೊಟ್ಟಿಲ್ಲವೆಂದೂ, ತಮ್ಮ ಬಹುಮತದ ಮೇಲೆ ರಾಜೇಂದ್ರದೇವನನ್ನು ಆರಿಸಿಕೊಂಡಿರುವುದಾಗಿಯೂ, ಆತನಿಗೆ ಯುದ್ಧ ಮಾಡಬೇಕೆಂಬ ಹಂಬಲವಿಲ್ಲವೆಂದೂ, ಹಿಂದಿನ ವೈರದ ಕಾರಣಗಳು ಈಗಿಲ್ಲದಿರುವುದರಿಂದ ರುದ್ರಸಿಂಹನು ಹಿಂದಿನ ವೈರವನ್ನು ಮರೆತುಬಿಡಬೇಕೆಂದೂ, ಯುದ್ಧ ನಿಲ್ಲಿಸಿ ತಮ್ಮ ರಾಜ್ಯಕ್ಕೆ ಮಿತ್ರನಾಗಿರಬೇಕೆಂದೂ ಬರೆದಿತ್ತು. ಇದನ್ನು ಕುರಿತು ಪ್ರಧಾನಿಯೂ ಈ ಅವಕಾಶವನ್ನು ತೆಗೆದುಕೊಂಡು ಮಹಾರಾಜರು ಸೈನ್ಯವನ್ನು ಹಿಂತಿರುಗಿಸಿ ಯುದ್ಧ ನಿಲ್ಲಿಸುವುದು ಒಳ್ಳೆಯದೆಂದು ಸಲಹೆಯಿತ್ತನು. ಮಹಾರಾಜನು ದೀರ್ಘಾಲೋಚನೆ ಮಾಡಿ ''ಪ್ರಧಾನಿಯ ಸಲಹೆ ಉಚಿತವಾಗಿದೆ. ಮೆಚ್ಚುವಂತಿದೆ. ಆದರೆ ನಾನು ಪ್ರತಿಜ್ಞಾಭಂಗಕ್ಕೆ ಒಪ್ಪಲಾರೆ. ಏನೇ ಆಗಲಿ'' ಎಂದು ಹೇಳಿ,ಸ್ವಲ್ಪಹೊತ್ತು ಸುಮ್ಮನಿದ್ದು "ಒಳ್ಳೆಯ ಮಾತಿಗೆ ನಾವೂ ಒಳ್ಳೆಯ ಮಾತಿನಿಂದಲೇ ಪ್ರತ್ಯುತ್ತರವನ್ನು ಕಳುಹಿಸೋಣ. ಸಂದೇಶವನ್ನು ಕಳುಹಿಸಿದ ನಾಯಕರಿಗೆ ನೀವು ಗೌರವ ಪೂರ್ವಕವಾಗಿ ಬರೆದು ಕಳುಹಿಸಿ. ರುದ್ರಸಿಂಹನಿಗೆ ಹೇಮಗಿರಿ ರಾಜ್ಯದ ಜನರ ಮೇಲೆ ಯಾವ ದ್ವೇಷಭಾವವೂ ಇಲ್ಲ. ಯುದ್ಧವಾಗಲೇ ಬೇಕೆಂಬ ಹಂಬಲವಿಲ್ಲ. ಹೇಮಗಿರಿ ರಾಜ್ಯವನ್ನಾಕ್ರಮಿಸಬೇಕೆಂಬ ಆಸೆಯೂ ಇಲ್ಲ. ಆದರೆ ತಾನು ಮಾಡಿದ ಪ್ರತಿಜ್ಞೆಯಿಂದಾಗಿ ವಿಧಿಯಿಲ್ಲದೆ ಆತನು ಯುದ್ಧಕ್ಕೆ ಸೈನ್ಯವನ್ನು ಕಳುಹಿಸಿದ್ದಾನೆ. ಈ ವಿಷಯದಲ್ಲಿ ಹೇಮ

ಗಿರಿಯ ನಾಯಕರು ಪರ್ಯಾಲೋಚಿಸಿ ತನ್ನ ಪ್ರತಿಜ್ಞೆಗೆ ಭಂಗವಿಲ್ಲದಂತೆ ನಡೆಯಲು ಒಪ್ಪಿ ರಾಜೇಂದ್ರ ದೇವನ ಪಟ್ಟಾಭಿಷೇಕವನ್ನು ನಿಲ್ಲಿಸಿದರೆ ಮುಂದಿನ ಸಂಧಾನವನ್ನು ಮಾಡಬಹುದೆಂದು ಬರೆದು ಕಳುಹಿಸಿ. ಕೂಡಲೇ ಪ್ರತ್ಯುತ್ತರವನ್ನು ಕೊಡುವಂತೆಯೂ ಬರೆದು ಕಳುಹಿಸಿ" ಎಂದು ಹೇಳಿದನು.

## ೩೦

ಮರುದಿನವೇ ಗಣೇಶನ ಹಬ್ಬವಾದುದರಿಂದ, ವೀರಪ್ಪನ ಮನೆಯಲ್ಲಿ ಅತನ ಹೆಂಡತಿಯೂ ಭಾಗ್ಯಲಕ್ಷ್ಮಿಯೂ ಗಣೇಶನನ್ನಿಡುವುದಕ್ಕೆ ಸೇವಕರಿಂದ ಮಂಟಪವನ್ನು ತಯಾರು ಮಾಡಿಸುತ್ತಿದ್ದರು, ರಂಗಯ್ಯನು ಅಲ್ಲಿಯೇ ಇದ್ದು ಮಂಟಪಕ್ಕೆ ಅಲಂಕಾರ ಮಾಡುವ ವಿಷಯದಲ್ಲಿ ಸಲಹೆಗಳನ್ನು ಕೊಡುತ್ತಿದ್ದನು. ಅವರೆಲ್ಲರೂ ವೀರಪ್ಪನನ್ನೇ ನೆನೆಸಿಕೊಳ್ಳುತ್ತ ಮಾತಾಡುತ್ತಿದ್ದರು. ವೀರಪ್ಪನಿಲ್ಲದ ಹಬ್ಬದಲ್ಲಿ ತಮಗೆ ಸಂತೋಷವಿಲ್ಲವೆಂದೂ, ಗಣಪತಿಯ ಕರುಣೆಯಿಂದ ವೀರಪ್ಪ ಹಿಂತಿರುಗಿ ಬಂದರೆ ಮರುವರ್ಷ ಗಣೇಶನ ಹಬ್ಬವನ್ನು ಇನ್ನೂ ವಿಜೃಂಭಣೆಯಿಂದ ಮಾಡಬಹುದೆಂದೂ ಮಾತಾಡಿಕೊಳ್ಳುತ್ತಿದ್ದರು.

ಒಬ್ಬ ಸೇವಕ ಹೇಳಿದ—"ಈ ವರ್ಷ ಇನ್ನೂ ಮಳೆಯೇ ಸರಿಯಾಗಿ ಬೀಳಲಿಲ್ಲ. ಕೆರೆಗಳು ತುಂಬಲಿಲ್ಲ. ಗೌರೀ ಗಣೇಶರನ್ನು ಬಿಡಲು ನೀರೇ ಇಲ್ಲ"

ಇನ್ನೊಬ್ಬ ಸೇವಕ—"ನಮ್ಮ ಮನೆಯ ಹಸುಗಳಿಗೆ ಹುಲ್ಲು ಸಿಗುವುದೇ ಕಷ್ಟವಾಗಿದೆ. ಈ ವರ್ಷ ಹಸುಗಳ ಗತಿಯೇನೋ ತಾಯೀ."

ಭಾಗ್ಯ—ಯಾರಾದರೂ ಮಾರುವುದಕ್ಕೆ ತಂದರೆ ತೆಗೆದುಕೊಳ್ಳಿ. ನಾನು ದುಡ್ಡು ಕೊಡುತ್ತೇನೆ.

ಸೇವಕ—ಬೆಳಗಿಂದ ನೋಡಿದ್ದಾಯಿತು ತಾಯೀ. ಯಾರೂ ಬರಲೇ ಇಲ್ಲ.

ಭಾಗ್ಯಲಕ್ಷ್ಮಿಯು ಇನ್ನೊಬ್ಬ ಸೇವಕನನ್ನು ಕರೆದು ಪೇಟೆಗಾದರೂ ಕಳುಹಿಸಿ ಅಲ್ಲಿ ಯಾರಾದರೂ ಹುಲ್ಲು ತಂದಿದ್ದರೆ, ತರಿಸೋಣವೆಂದು ಈಚೆಗೆ ಬಂದು ನೋಡಿದಳು. ಸೇವಕರು ಯಾರೂ ಮನೆಯ ಹೊರಗಡೆ ನಿಂತಿರಲಿಲ್ಲ.

ಅವಳು ಹೆಬ್ಬಾಗಿಲಿನಿಂದ ಬಲಗಡೆ ತಿರುಗಿ ನೋಡಿದಳು. ಅವಳ ಮನೆಯ ಮುಂದಿನ ರಸ್ತೆಗೆ ಅಡ್ಡಲಾಗಿದ್ದ ರಸ್ತೆಯಲ್ಲಿ ತಲೆಯಮೇಲೆ ಭಾರಿ ಹುಲ್ಲಿನ ಹೊರೆಯನ್ನು ಹೊತ್ತುಕೊಂಡು ಯಾರೋ ಒಬ್ಬನು ವೇಗವಾಗಿ ಹೋಗುವುದನ್ನು ಕಂಡು ಅಲ್ಲಿಂದಲೇ ಹುಲ್ಲೂ, ಹುಲ್ಲೂ ಎಂದು ಕೂಗಿದಳು. ಹುಲ್ಲು ಹೊತ್ತುಕೊಂಡು ಹೋಗುತ್ತಿದ್ದಾತನು ಕೂಗನ್ನು ಕೇಳಿ ಧ್ವನಿಯನ್ನು ಗುರ್ತಿಸಿ ಕೂಡಲೇ ಹಿಂತಿರುಗಿ ಬಂದನು. ಆತನ ಹಿಂದೆ ಒಬ್ಬ ಯುವತಿಯು ಬಂದಳು. ಇಬ್ಬರನ್ನೂ ನೋಡಿ ಭಾಗ್ಯಲಕ್ಷ್ಮಿ ಚಕಿತಳಾದಳು. ಅವರಿಬ್ಬರೂ ಗೋಪಾಲ ಮತ್ತು ಕಮಲಮ್ಮ.

ಭಾಗ್ಯಲಕ್ಷ್ಮಿ—ನನ್ನಪರಾಧವನ್ನು ಕ್ಷಮಿಸು, ಗೋಪಾಲಾ. ನೀನೆಂದು ತಿಳಿಯದೆ ಕೂಗಿದೆ. ನಿಮ್ಮನ್ನು ನೋಡಿ ಎಷ್ಟು ದಿನಗಳಾಯಿತು. ಇಬ್ಬರೂ ಒಳಗೆ ಬನ್ನಿ.

ಗೋಪಾಲ—ಕ್ಷ ಮಿ ಸು ವು ದ ಕ್ಕೆ ನೀನೇನು ತಪ್ಪು ಮಾಡಿದೆ, ಭಾಗ್ಯಲಕ್ಷ್ಮೀ.

ಗೋಪಾಲನು ಹುಲ್ಲಿನ ಹೊರೆಯನ್ನು ಅಲ್ಲಿಯೇ ಇಳಿಸಿದನು. ಗೋಪಾಲನೂ ಕಮಲಮ್ಮನೂ ಮನೆಯೊಳಗೆ ಪ್ರವೇಶಿಸಿದರು. ಎಲ್ಲರೂ ವೀರಪ್ಪನು ಸ್ನೇಹಿತರು ಬಂದಾಗ ಕುಳಿತುಕೊಂಡು ಮಾತಾಡುವ ಹಜಾರಕ್ಕೆ ಹೋದರು. ಅಲ್ಲಿ ವೀರಪ್ಪನು ಕುಳಿತುಕೊಳ್ಳುತ್ತಿದ್ದ ಅಲಂಕೃತವಾದ ಕುರ್ಚಿಯನ್ನು ಬಿಟ್ಟು ಬೇರೆ ಕುರ್ಚಿಗಳ ಮೇಲೆ ಕುಳಿತುಕೊಂಡರು. ವೀರಪ್ಪನ ಹೆಂಡತಿ ಗೋಪಾಲನನ್ನೂ ಕಮಲಮ್ಮನನ್ನೂ ಕುಶಲ ಪ್ರಶ್ನೆ ಮಾಡಿದಳು. ರಂಗಯ್ಯನೂ ಅವರ ಜೊತೆಯಲ್ಲಿದ್ದನು.

ಗೋಪಾಲ—ನಾವೆಲ್ಲಾ ಕ್ಷೇಮವಾಗಿದ್ದೇವೆ ತಾಯೀ. ತಮ್ಮ ಯಜಮಾನರು ಯುದ್ಧಕ್ಕೆ ಹೋಗಿರುವುದರಿಂದ ತಮಗೆಲ್ಲಾ ಅವರ ಚಿಂತೆಯೇ ಇರಬಹುದು. ಯೋಚಿಸಬೇಡಿ. ಭಗವಂತನು ಒಳ್ಳೆಯದನ್ನು ಮಾಡುವನು.

ಭಾಗ್ಯಲಕ್ಷ್ಮಿ—ಅದೇ ನಮ್ಮೆಲ್ಲರ ಚಿಂತೆಯಾಗಿದೆ. ಹಗಲೂ ರಾತ್ರೀ ನಮ್ಮ ತಂದೆಯದೇ ನನಗೆ ಚಿಂತೆ.

ಗೋಪಾಲ—ಹೌದು. ನೀನು ಹಿಂದೆ ಮನೆಯಲ್ಲಿಯೇ ಇರುತ್ತಿರಲಿಲ್ಲ. ತಂದೆಯ ಜೊತೆಯಲ್ಲೋ ವೀರ ತರುಣಿಯರ ಜೊತೆಯಲ್ಲೋ ಯಾವುದೋ

ಒಂದು ಕೆಲಸದಲ್ಲಿ ಯಾವ ಚಿಂತೆಯೂ ಇಲ್ಲದೆ ಇರುತ್ತಿದ್ದೆ. ಚಿಂತಿಸಬೇಡ. ನಿಮ್ಮ ತಂದೆ ತಪ್ಪದೆ ಹಿಂತಿರುಗಿಬರುವನೆಂದು ನನ್ನ ಮನಸ್ಸಿನಲ್ಲಿ ದೃಢವಾದ ನಂಬಿಕೆ ಇದೆ. ಯುದ್ಧ ನಡೆಯಲಾರದೆಂದೂ ನನಗೆ ತೋರುತ್ತದೆ. ಆಗಲೇ ಒಂದು ಒಳ್ಳೆಯ ಸೂಚನೆ ಕಂಡು ಬಂದಿದೆ. ಹೇಮಗಿರಿ ನಾಯಕರಿಗೆ ಯುದ್ಧ ಮಾಡಲು ಇಷ್ಟವಿಲ್ಲ. ಅವರಿಂದ ಮಹಾರಾಜರಿಗೆ ಸಂದೇಶ ಬಂದಿದೆ. ಅದಕ್ಕೆ ಉತ್ತರವೂ ಹೋಗಿದೆ. ಏನೋ ಹೊಸ ಸಂಧಾನವು ನಡೆಯುತ್ತಿದೆ.

ರಂಗಯ್ಯ—ನಿನಗೆ ತಿಳಿದಿದ್ದೆಲ್ಲಾ ವಿವರವಾಗಿ ಹೇಳು, ಗೋಪಾಲಾ. ಈ ವಿಷಯದಲ್ಲಿ ನನಗಿರುವ ಆಸಕ್ತಿ ನಿನಗೆ ಗೊತ್ತೇ ಇದೆಯಲ್ಲಾ.

ಗೋಪಾಲ—ವಿವರಗಳನ್ನು ಆ ಮೇಲೆ ಪ್ರತ್ಯೇಕವಾಗಿ ನಿನಗೆ ತಿಳಿಸುತ್ತೇನೆ ರಂಗಯ್ಯಾ. ಯುದ್ಧವು ನಿಂತು ಹೋದರೆ ಸಾಕೆಂಬ ನಿನ್ನ ಅಪೇಕ್ಷೆ ನನಗೆ ಗೊತ್ತಿದೆ.

ಭಾಗ್ಯಲಕ್ಷ್ಮಿಯು "ನಮ್ಮ ಭಾವಯ್ಯನು ಕನಸಿನಲ್ಲಿಯೂ ಯುದ್ಧ ನಿಂತು ಹೋದರೆ ಸಾಕೆಂದು ಮಾತಾಡಿಕೊಳ್ಳುತ್ತಾನಂತೆ. ನೀನು ಸಮಾಚಾರ ಹೇಳದಿದ್ದರೆ ಆತನು ತಡೆದುಕೊಳ್ಳುವುದು ಹೇಗೆ?" ಎಂದು ಹೇಳಿ ರಂಗಯ್ಯನ ಮುಖವನ್ನು ನೋಡಿದಳು.

ರಂಗಯ್ಯನು ಭಾಗ್ಯಲಕ್ಷ್ಮಿಯ ಮುಖವನ್ನು ಸ್ವಲ್ಪ ಹೊತ್ತು ನೋಡಿ "ಆ ವಿಷಯ ನಾನು ಗೋಪಾಲನಿಂದ ಆಮೇಲೆ ತಿಳಿದುಕೊಳ್ಳುತ್ತೇನೆ. ಕೆಲವು ವಿಷಯಗಳು ಗುಪ್ತವಾಗಿಟ್ಟುಕೊಂಡಿರುವುದು ಒಂದೊಂದು ಸಲ ಅವಶ್ಯಕವಾಗುತ್ತೆ." ಎಂದು ಹೇಳಿದನು.

ಭಾಗ್ಯಲಕ್ಷ್ಮಿ—ನಿಮ್ಮಿಬ್ಬರಲ್ಲಿ ಅಷ್ಟು ಮೈತ್ರಿ ಇದೆಯೇ?

ರಂಗಯ್ಯ—ಇದೆ. ಗೋಪಾಲನೆಂದರೆ ನನಗೆ ಬಹಳ ಪ್ರೀತಿ.

ವೀರಪ್ಪನ ಹೆಂಡತಿ—ನಮ್ಮ ರಂಗಯ್ಯ ಬಹಳ ಒಳ್ಳೆಯವನು ಗೋಪಾಲಾ. ನಮ್ಮ ಯಜಮಾನರು ಬೇರೆ ಇಲ್ಲ. ನಮ್ಮ ಚಿಂತೆಯಲ್ಲಿ ಮೂರು ಹೊತ್ತೂ ಈತನು ಇಲ್ಲಿಯೇ ಇದ್ದು ನಮಗೆ ಬೇಸರ ಕಳೆಯುತ್ತಿದ್ದಾನೆ. ನಮ್ಮ ಯೋಗಕ್ಷೇಮವನ್ನು ಸದಾ ನೋಡಿಕೊಳ್ಳುತ್ತಿದ್ದಾನೆ.

ಗೋಪಾಲ—ರಂಗಯ್ಯನೆಂದರೆ ನನಗೆ ಬಹಳ ಗೌರವ ಮತ್ತು ಪ್ರೀತಿ.

ಹೊರಗಡೆಗೆ ಒಬ್ಬರಿಗೊಬ್ಬರಿಗೆ ಯಾವ ಸಂಬಂಧವೂ, ಯಾವ ಹೋಲಿಕೆಯೂ ಇಲ್ಲದಿದ್ದರೂ ನಮ್ಮಲ್ಲಿ ಅಂತರಂಗ ಮೈತ್ರಿ ಇದೆ.

ರಂಗಯ್ಯ—ಏನು ಗೋಪಾಲಾ, ಹಾಗೆ ಹೇಳುತ್ತೀಯೆ. ನಿನ್ನೊಡನೆ ಹೋಲಿಸಿಕೊಳ್ಳಲು ನನಗೆ ಅರ್ಹತೆ ಇದೆಯೇ ? ನೀನು ಕೆತ್ತದಿರುವ ವಜ್ರ. ಹೌದೋ ಅಲ್ಲವೋ ಹೇಳು ಕಮಲಮ್ಮಾ.

ಕಮಲಮ್ಮ ನಾಚಿಕೆಯಿಂದ ತಲೆ ಬಾಗಿಸಿದಳು. ಭಾಗ್ಯಲಕ್ಷ್ಮಿಯ ಅಂತ ರಂಗವು ಕಲುಕಿದಂತಾಯಿತು.

ಭಾಗ್ಯ—ನೀನು ಹುಲ್ಲು ಹೊತ್ತುಕೊಂಡು ಹೋಗುತ್ತಿರುವುದನ್ನು ನೋಡಿ ನನ್ನ ಮನಸ್ಸಿಗೆ ಬಹಳ ವ್ಯಥೆ ಆಗುತ್ತಿದೆ ಗೋಪಾಲಾ. ನನಗೆ ತಡೆಯುವುದಕ್ಕಾಗದು. (ಸ್ವಲ್ಪ ನಿಂತು) ನನ್ನ ತಂಗಿಯ ವಿಷಯದಲ್ಲೂ ಅಷ್ಟೇ.

ಕಮಲಮ್ಮ—ನಮಗಿದು ರೂಢಿಯಾಗಿದೆ, ಅಕ್ಕಾ. ನಾವು ಸಂತೋಷ ವಾಗಿಯೇ ಇದ್ದೇವೆ.

ಭಾಗ್ಯ—(ಕಮಲಮ್ಮನನ್ನು ನೋಡಿ) ಅದೇನದು ಸೆರಗಿನ ತುಂಬಾ ಕಟ್ಟಿಕೊಂಡಿರುವುದು.

ಕಮಲಮ್ಮ—ದೇವದಾರು ಎಲೆ ಅಕ್ಕಾ. ಬೆಟ್ಟದಲ್ಲಿ ಕಿತ್ತುಕೊಂಡು ಬರುತ್ತಿದ್ದೇನೆ. ಗೋಪಾಲನು ಹುಲ್ಲನ್ನೂ ನಾನು ಈ ಎಲೆಯನ್ನೂ ತರು ತ್ತಿದ್ದೇವೆ. ಈ ಬರಗಾಲದಲ್ಲಿ ಆಹಾರಕ್ಕೆ ಇದನ್ನು ಸೇರಿಸಿ ಬೇಯಿಸಿ ತಿಂದರೆ ಆಹಾರವನ್ನು ಉಳಿಸಬಹುದು. ಆಶ್ರಮದಲ್ಲಿನ ಪರಿಸ್ಥಿತಿ ತೀರಾ ಕಷ್ಟವಾಗಿದೆ. ಗೋಪಾಲನಿಗೆ ಸಂಬಳವೂ ಇರುವುದರಿಂದ ಆತನಿಗೆ ಕಷ್ಟವಿಲ್ಲ. ಆದರೂ ಇತರರಿ ಗಾಗಿ ಹುಲ್ಲು ಹೊರುತ್ತಿದ್ದಾನೆ.

ಭಾಗ್ಯ—ದೇಶದ ಪರಿಸ್ಥಿತಿಯೇ ಹಾಗಾಗಿದೆ. ಕಾಲ ಹೇಗಿತ್ತು? ಹೇಗೆ ಬದಲಾಯಿಸಿತು ? ಮುಂದೆ ಹೇಗಿರುತ್ತೋ! ದೇವರ ಕೃಪೆಯಿಂದ ನಮ್ಮ ತಂದೆ ಹಿಂತಿರುಗಿದರೆ ಸಾಕು. ಇಲ್ಲದಿದ್ದರೆ ನಮ್ಮ ಗತಿಯೇನು ? ಹೀಗೆಂದುಕೊಳ್ಳ ಬಾರದು ನಾನು. ಅಂದುಕೊಂಡರೆ ಭಯವಾಗುತ್ತೆ.

ಗೋಪಾಲ—ಹಾಗೆಂದುಕೊಳ್ಳಬಾರದು. ಭಯವೂ ಪಡಬಾರದು. ಯಾವಾಗಲೂ ಧೈರ್ಯದಿಂದಿರಬೇಕು. ಹಾಗಿರುವುದನ್ನು ಅಭ್ಯಾಸ ಮಾಡಿ

ಕೊಳ್ಳಬೇಕು. ಎಂತಹ ವಿಪತ್ತಿನಲ್ಲೂ ಧೈರ್ಯಕ್ಕಿಂತ ಹೆಚ್ಚಿನ ಅಪ್ತನಿಲ್ಲ. ನಮ್ಮ ಕರ್ತವ್ಯವನ್ನು ನಾವು ಮಾಡಬೇಕು. ಹೀಗೇ ಆಗಬೇಕೆಂದು ಅತಿಯಾದ ಮಮಕಾರವನ್ನಿಟ್ಟುಕೊಳ್ಳಬಾರದು. ದೇವರ ಇಚ್ಛೆ ಹೇಗಿದ್ದರೆ ಹಾಗೆ ನಡೆಯುತ್ತೆ. ನಮ್ಮ ಕೈಯಲ್ಲೇನಿದೆ? ಯಾವ ಕಾಲಕ್ಕೆ ದೇವರು ಏನು ಕೊಟ್ಟರೆ ಅದರಿಂದಲೇ ತೃಪ್ತಿ ಪಡಬೇಕು.

ಭಾಗ್ಯ—ಈ ಪರಿಸ್ಥಿತಿಗಳಲ್ಲಿ ನನಗೂ ಒಂದೊಂದು ಸಲ ಹಾಗೆಯೇ ಅನ್ನಿಸುತ್ತೆ. ಆದರೆ ಕೇಳಬೇಕಲ್ಲಾ ಮನಸ್ಸು.

ಹೀಗೆ ಸ್ವಲ್ಪ ಹೊತ್ತು ಮಾತಾಡಿದ ಮೇಲೆ ಭಾಗ್ಯಲಕ್ಷ್ಮಿ ಕಮಲಮ್ಮನಿಗೆ ಕುಂಕುಮವನ್ನೂ ಫಲತಾಂಬೂಲವನ್ನೂ ಕೊಟ್ಟಳು. ಗೋಪಾಲನೂ ಕಮಲಮ್ಮನೂ ಮನೆಗೆ ಹೊರಟರು. ಉಳಿದೆಲ್ಲರೂ ಅವರ ಜೊತೆಯಲ್ಲಿ ಬಂದು ಅವರು ಕಣ್ಮರೆಯಾಗುವವರೆಗೂ ಅವರನ್ನೇ ನೋಡುತ್ತಿದ್ದರು.

## ೩೧

ಸ್ವಲ್ಪ ದಿನಗಳಲ್ಲಿ ಹೇಮಗಿರಿ ನಾಯಕರಿಂದ ಪ್ರತ್ಯುತ್ತರವೂ ಬಂತು. ರುದ್ರಸಿಂಹನು ಅದನ್ನು ಕೇಳಿ ನಿರಾಶನಾಗಿಬಿಟ್ಟ. ಅವರು ರಾಜೇಂದ್ರ ದೇವನ ಪಟ್ಟಾಭಿಷೇಕವನ್ನು ನಿಲ್ಲಿಸಲು ಒಪ್ಪಲಿಲ್ಲ. ಯುದ್ಧವಾದರೆ ಆಗಬಹುದೆಂದೂ, ತಮ್ಮ ಸೈನ್ಯಗಳೂ ಕಾಳಗಾಪುರಕ್ಕೆ ತೆರಳುತ್ತಿವೆಯೆಂದೂ ಬರೆಯಲ್ಪಟ್ಟಿತ್ತು. ರುದ್ರಸಿಂಹನಿಗೆ ಇದೇ ಚಿಂತೆ ಹತ್ತಿತು. ಆತನು ಇನ್ನು ಯಾರು ಬಂದು ಏನು ಮಾಡುವರು? ಎಂಬ ನಿರಾಶೆಯಿಂದ ಯಾರ ಜೊತೆಯಲ್ಲಿಯೂ ಮಾತನಾಡುತ್ತಿರಲಿಲ್ಲ. ಸಾಧ್ಯವಾದಷ್ಟೂ ಏಕಾಂತವನ್ನು ಬಯಸುತ್ತಿದ್ದ. "ಉಪಚಾರಕ್ಕೆ ಗೋಪಾಲನೊಬ್ಬನಿದ್ದರೆ ಸಾಕು ಇನ್ನಾರೂ ಬೇಕಿಲ್ಲ." ಎಂದು ಹೇಳಿಬಿಟ್ಟ.

ಗೋಪಾಲನು ಮಹಾರಾಜನನ್ನು ನೆರಳಿನಂತೆ ಅನುಸರಿಸಿದ. ಸರ್ವಕಾಲದಲ್ಲೂ ಆತನ ಸೇವೆಯಲ್ಲಿ ಜಾಗರೂಕನಾಗಿದ್ದ. ಪ್ರತ್ಯುತ್ತರವನ್ನು ತಿಳಿದು ಮಹಾರಾಜರಷ್ಟೇ ಗೋಪಾಲನೂ ವೇದನೆಯನ್ನನುಭವಿಸಿದರೂ ಅದು ಆತನಿಗೆ ಕ್ಷಣಿಕವಾಯಿತು. ಪುನಃ ಧೈರ್ಯವುಕ್ಕಿ ಬಂತು. ಆಸೆ ಮೂಡಿತು. ಭಗವಂತ

ನಲ್ಲಿ ನಂಬಿಕೆ ಮೂಡಿತು. ಇನ್ನೊಂದೇ ಒಂದು ಮಾರ್ಗವಿತ್ತು. ಅದು ಮೂವರಿಗೆ ಮಾತ್ರ ತಿಳಿದಿತ್ತು. ಅವರು ರಂಗಯ್ಯ, ಕುಮಾರ ಮತ್ತು ಗೋಪಾಲ. ಆದರೆ ಅದು ಎಷ್ಟು ಮಾತ್ರ ಫಲಿಸುವುದೋ ಏನಾಗುವುದೋ ಯಾರಿಗೂ ನಂಬಿಕೆ ಇರಲಿಲ್ಲ. ಮಹಾರಾಜನ ಹೃದಯದ ಆವೇಗವು ಬಹಳ ಹೆಚ್ಚಾಗಿತ್ತು. ಯಾವಾಗಾದರೂ ಗೋಪಾಲನ ಮುಖ ನೋಡಿದಾಗ ಆತನಿಗೆ ಸ್ವಲ್ಪ ಶಾಂತಿ ಧೈರ್ಯಗಳ ಬೆಳಕು ಕಾಣುತ್ತಿತ್ತು. ಆದುದರಿಂದಲೇ ಆತನು ಗೋಪಾಲನನ್ನು ಬಿಡಲಿಲ್ಲ.

ಅಂದು ಭಾದ್ರಪದ ಶುದ್ಧ ಚತುರ್ದಶಿ ಮಂಗಳವಾರ ರಾತ್ರಿ. ಊಟದ ಶಾಸ್ತ್ರವನ್ನು ಬೇಗನೆ ಮುಗಿಸಿಕೊಂಡು ಮಹಾರಾಜನು ಗೋಪಾಲನ ಜೊತೆಯಲ್ಲಿ ಉದ್ಯಾನವನಕ್ಕೆ ಹೊರಟ. ಅಷ್ಟು ಹೊತ್ತಿಗಾಗಲೇ ಚಂದ್ರ ಬಿಂಬವು ಆಕಾಶದಲ್ಲಿ ಸ್ವಲ್ಪ ಏರಿ ಬಂದಿತ್ತು. ವರ್ಷ ಋತುವಾದರೂ ಮೋಡಗಳಿಲ್ಲದ ಪ್ರಯುಕ್ತ ಬೆಳದಿಂಗಳು ಪೂರ್ಣವಾಗಿತ್ತು. ಬಹುಳ ತದಿಗೆ ಯುದ್ಧ ಪ್ರಾರಂಭವಾಗುವುದು. ಬೆಂಕಿಯನ್ನು ಹಚ್ಚುವವರೆಗೂ ಯೋಚಿಸಬಹುದು, ಅದನ್ನು ತಡೆಯಬಹುದು; ಹಚ್ಚಿದ ಮೇಲೆ ಏನು ಮಾಡುವುದಕ್ಕೂ ಆಗುವುದಿಲ್ಲ. ಫಲಿತವು ಜಯದಿಂದ ಸರ್ವನಾಶದವರೆಗೂ ತೂಗುತ್ತಿದೆ. ಎಲ್ಲಿ ನಿಲ್ಲುವುದೋ? ಏನಾಗುವುದೋ? ಇವೇ ಮೊದಲಾದ ಯೋಚನೆಗಳನ್ನು ಮಾಡುತ್ತ ರುದ್ರಸಿಂಹನು ಉದ್ಯಾನದಲ್ಲಿ ಬಂದು ಕುಳಿತಿದ್ದ. ನಿಶ್ಶಬ್ದವಾಗಿದ್ದ ಆ ಸಮಯದಲ್ಲಿ ತೋಟಗಳ ನಡುವಿನ ದಾರಿಯಿಂದ ಒಂದು ಹೃದಯವನ್ನು ಕರಗಿಸುವಂತಹ ಆರ್ತವಾದರೂ ಇಂಪಾದ ಸ್ತ್ರೀಕಂಠದಿಂದ ಹೊರಟ ಹಾಡು ಕೇಳಿಬಂತು. ಮಹಾರಾಜನ ಮನಸ್ಸು ಅದನ್ನು ಕೇಳಿದ ಕೂಡಲೇ ಉತ್ಕಂಠಿತವಾಯಿತು. ಆತನು ಸ್ವಲ್ಪ ಹೊತ್ತು ಅದನ್ನು ಕೇಳಿದ. ಅವನ ಮನಸ್ಸು ಕರಗಿ ಹೋಯಿತು. ಅದು ಗಾನವೋ, ಅಳುವೋ, ಆಕ್ರೋಶವೋ? ಅದರಲ್ಲಿ ಎಲ್ಲಾ ಸೇರಿದ್ದವು. ಅದನ್ನು ಹಾಡುತ್ತಿದ್ದ ಕಾಕಲೀ ಧ್ವನಿ ಬೇರೆ ಆತನಿಗೆ ಸುಪರಿಚಿತವಾಗಿತ್ತು.

ಚಕಿತನಾದ ರುದ್ರಸಿಂಹನು ಹೇಳಿದ—ಗೋಪಾಲಾ, ಅದನ್ನು ಕೇಳು. ಹಾಡುತ್ತಿರುವುದು ಯಾರು? ವಿಲಾಸಿನಿ ಇರಬಹುದೇ?

ಗೋಪಾಲನೂ ಮಹಾರಾಜನಿಗೆ ಅತ್ಯಾಪ್ತನೂ, ಚತುರನೂ, ಉತ್ಕಂಠಿತನೂ ಆಗಿದ್ದ.

ಗೋಪಾಲ—ಇರಬಹುದು ಪ್ರಭುಗಳೇ, ನಾನೂ ವಿಲಾಸಿನಿಯನ್ನು ನೋಡಿ ಬಹಳ ದಿನಗಳಾದವು. ಅವಳ ಸಮಾಚಾರ ತಿಳಿಯಲಿಲ್ಲ. ಏನು ಕಷ್ಟವೋ. ಪಾಪ, ಬಹಳ ದುಃಖದಿಂದ ಸಾಯುತ್ತಿದ್ದಾಳೆ. ಅವಳಿಗಿರುವುದು ತಾಯಿ ಮಾತ್ರ—ಅವಳೂ ಏನಾಗಿಬಿಟ್ಟಳೋ?

ರುದ್ರಸಿಂಹ: ಅಯ್ಯೋ ಪಾಪ. ಅವಳನ್ನು ಕರೆಯಿಸು.

ಗೋಪಾಲನು "ಅಪ್ಪಣೆ" ಎಂದು ಹೇಳಿ ಅಲ್ಲಿದ್ದ ಉದ್ಯಾನ ರಕ್ಷಕರಿಗೆ ಹೇಳಿ ವಿಲಾಸಿನಿಯನ್ನು ಕರೆಸಿದನು. ವಿಲಾಸಿನಿ ಅಳುತ್ತ ಬಂದು ಮಹಾರಾಜನ ಮುಂದೆ ನೆಲದ ಮೇಲೆ ಕುಳಿತಳು.

ರುದ್ರ—ವಿಲಾಸಿನೀ, ಏನಿದು? ಏಕೆ ಇಷ್ಟು ಅಳುತ್ತಿರುವೆ?

ವಿಲಾ—ಪ್ರಭುಗಳೇ, ನನ್ನ ತಾಯಿ ತೀರಿಕೊಂಡಳೆಂಬ ವಾರ್ತೆಯನ್ನು ಯಾರೋ ತಿಳಿಸಿದರು. ನಾನು ದೂರದಲ್ಲಿದ್ದೆ. ಸಾಯುವಾಗಲಾದರೂ ನನ್ನ ತಾಯಿಯ ಬಳಿಯಿರುವ ಭಾಗ್ಯ ನನಗಿರಲಿಲ್ಲ. ಮಗಳನ್ನು ನೋಡಿ ಪ್ರಾಣ ಬಿಡುವ ಭಾಗ್ಯ ಅವಳಿಗಿರಲಿಲ್ಲ. 'ಅಲ್ಲ ಅಲ್ಲ' ನಾನವಳ ಬಳಿಯಿದ್ದಿದ್ದರೆ ಅವಳೇಕೆ ಸಾಯುತ್ತಿದ್ದಳು. ಅಯ್ಯೋ, ಅಯ್ಯೋ.

ರುದ್ರ—ಇದೇನು ಹೀಗೆ ಹೇಳುತ್ತೀಯೆ? ನೀನಿದ್ದಿದ್ದರೆ ಸಾಯುತ್ತಿರಲಿಲ್ಲವೇ? ಏಕೆ ಸತ್ತಳು?

ವಿಲಾಸಿನಿಯು "ಪ್ರಭುಗಳೇ, ಏನು ಹೇಳಲಿ. ಹೊಟ್ಟೆಗಿಲ್ಲದೆ ಸತ್ತಳಂತೆ" ಎಂದು ತಲೆ ಬಡೆದುಕೊಳ್ಳುತ್ತ ಗೊಳೋ ಎಂದು ಅತ್ತಳು.

ರುದ್ರ—ಇದೇನಿದು? ಏಕೆ ಹಾಗಾಯಿತು?

ವಿಲಾಸಿನಿ:—ಇನ್ನೇನನ್ನು ಹೇಳಿ ಏನು ಪ್ರಯೋಜನ, ಪ್ರಭುಗಳೇ. ಅವಳಿಗೆ ಯಾರೂ ಗತಿಯಿರಲಿಲ್ಲ. ಮುದುಕಿ ಎಲ್ಲಿಯೋ ಸ್ವಲ್ಪ ಹಣ ಕೂಡಿಟ್ಟುಕೊಂಡಿದ್ದಳು. ಅದನ್ನೂ ಯುದ್ಧದ ಕಾರಣ ಹೇಳಿ ಅಧಿಕಾರಿಗಳು ಕಿತ್ತುಕೊಂಡರಂತೆ. ಅವರನ್ನು ಕೇಳುವವರು ಯಾರು? ಮೇಲೆ ಮಳೆಯಿಲ್ಲ, ಬೆಳೆಗಳಿಲ್ಲ. ನಾಡಿನಲ್ಲಿ ಇನ್ನೆಷ್ಟು ಜನ ಯುದ್ಧದ ಹೆಸರಿನಿಂದ ಸತ್ತಿದ್ದಾರೋ,

ಪ್ರಭುಗಳೇ? ಈಯುದ್ಧದ ಕಷ್ಟ ಜನರಿಗೆ ಯಾವಾಗತಪ್ಪುವುದೋ? ದೊರೆಗಳೇ, ತಾವು ಕಾಪಾಡದಿದ್ದರೆ ಜನರನ್ನು ಕಾಪಾಡುವವರು ಯಾರು ?

ಇವನ್ನು ಕೇಳಿ ರುದ್ರಸಿಂಹನ ಹೃದಯವು ಕರಗಿ ಹೋಯಿತು. ಅಯ್ಯೋ, ತನ್ನಿಂದ ಜನರಿಗೆ ಎಂತಹ ಕಷ್ಟವೊದಗಿತು ! ಎಂದು ಮನಸ್ಸಿನಲ್ಲಿಯೇ ಕುಸಿದುಬಿದ್ದ. ಸ್ವಲ್ಪ ಹೊತ್ತಿಗೆ "ವಿಲಾಸಿನೀ, ಆಗಿದ್ದಾಗಿ ಹೋಗಿದೆ. ದುಃಖಿಸ ಬೇಡ" ಎಂದು ಹೇಳಿ ವನಪಾಲಕರಿಗೆ ಹೇಳಿ ಇವಳನ್ನು ಕರೆದುಕೊಂಡು ಹೋಗಿ ಸಮಾಧಾನ ಪಡಿಸಿ, ಇವಳಿಗೆ ಯಾವ ತೊಂದರೆಯೂ ಇಲ್ಲದಂತೆ ವ್ಯವಸ್ಥೆ ಮಾಡಬೇಕಾಗಿ ಅಧಿಕಾರಿಗಳಿಗೆ ತಿಳಿಸಿ" ಎಂದು ಹೇಳಿ ಅವಳನ್ನು ಕಳುಹಿಸಿದನು.

ರುದ್ರಸಿಂಹನು ಸ್ವಲ್ಪ ಹೊತ್ತು ಬಹಳ ಆಲೋಚಿಸಿದನು. ಯುದ್ಧವನ್ನು ನಿಲ್ಲಿಸೋಣವೆಂದು ಯಾರು ಎಷ್ಟು ಬುದ್ಧಿ ಹೇಳಿದರೂ ಆತನ ನಿಷ್ಠೆ ಪ್ರತಿಜ್ಞಾ ಪರಿಪಾಲನವನ್ನು ಬಿಡಲು ಒಪ್ಪಲಿಲ್ಲ. ಆಲೋಚನೆ ಬಗೆ ಹರಿಯ ಲಿಲ್ಲ. ಗೋಪಾಲನನ್ನು ಕೇಳಿದ—

"ಗೋಪಾಲಾ, ನನಗೆ ಮುಂದಿನ ಗತಿಯ ವಿಚಾರವಾಗಿ ಏನೂ ತೋಚ ದಂತಾಗಿದೆ. ಏನು ಮಾಡುವುದಕ್ಕೂ ನಿರ್ಧರಿಸುವುದೇ ಕಷ್ಟವಾಗಿದೆ. ಏನು ಮಾಡಲಿ ?"

ಗೋಪಾಲ—ಪ್ರಭುಗಳೇ, ಹೆಚ್ಚು ಆಲೋಚಿಸಿದಷ್ಟೂ ಬುದ್ಧಿ ಭ್ರಮಣ ವಾಗುವುದು. ತಾವು ತಮ್ಮ ಅಂತಃಕರಣಕ್ಕೆ ಯಾವುದು ಸರಿಯೆಂದು ತೋರಿವರೆ ಹಾಗೆ ತೀರ್ಮಾನಿಸಿಕೊಳ್ಳಿ. ಅದನ್ನು ಆಚರಿಸಿ. ಫಲವನ್ನು ದೇವರಿಗೆ ಬಿಡಿ. ನಮ್ಮ ಕೈಯಲ್ಲೇನೂ ಇಲ್ಲ. ಎಲ್ಲವೂ ಭಗವಂತನಾಡಿಸುವ ಆಟ.

ಮಹಾರಾಜನಿಗೆ ಇದು ಸಮಂಜಸವಾಗಿತ್ತು. ಪುನಃ ಆಲೋಚಿಸಿದ. ಪ್ರತಿಜ್ಞಾ ಭಂಗಕ್ಕೆ ಆತನ ಅಂತಃಕರಣವು ಒಪ್ಪಲಿಲ್ಲ. ರಾಮಪುರದ ಶ್ರೀ ರಾಮಚಂದ್ರನಿಗೆ ಹರಸಿಕೊಂಡಿದ್ದೇನೆ. ಆತನು ತಪ್ಪದೆ ತನಗೆ ಕೃಪೆ ತೋರಿಸು ವನು ಎಂಬ ಭರವಸೆ ಮೂಡಿಬಂತು. ಹರಕೆಯನ್ನು ಮೊದಲೇ ತೀರಿಸಿ ಬಿಡೋಣ. ಫಲ ಕೊಡುವುದನ್ನು ದೇವರಿಗೆ ಬಿಡೋಣ. ಇದೇ ನನ್ನ ಕರ್ತವ್ಯ ಎನ್ನಿಸಿತು. ಹಾಗೆಯೇ ನಿರ್ಧಾರ ಮಾಡಿದ. ಗೋಪಾಲನಿಗೆ ಹೇಳಿದ— "ಗೋಪಾಲಾ, ನಾಳೆಯೇ ನಾನು ಪಾದಚಾರಿಯಾಗಿ ರಾಮಪುರಕ್ಕೆ ಹೊರಡು

ತ್ತೇನೆ. ನೀನೊಬ್ಬನು ನನ್ನ ಜೊತೆಯಲ್ಲಿ ಬಾ, ಇನ್ಯಾರೂ ಬೇಡ" ಎಂದ. ಗೋಪಾಲನು "ಅಪ್ಪಣೆ" ಎಂದ.

## ೩೨

ಮೂರನೆಯ ದಿನ ರಾಣಿಯ, ಮತ್ತೆ ಪ್ರಧಾನಿಯ ಹಿತವಚನವನ್ನು ಸಹ ಕೇಳದೆ ಶ್ರೀರಾಮದೇವರಲ್ಲಿ ಅತ್ಯಂತ ಭಕ್ತಿಯಿಂದ "ಯುದ್ಧವನ್ನು ನಿಲ್ಲಿಸು ದೇವನೇ" ಎಂಬ ಪ್ರಾರ್ಥನೆಯೊಂದಿಗೆ ಮಹಾರಾಜನು ಪಾದಚಾರಿಯಾಗಿ ರಾಮಪುರಕ್ಕೆ ಹೊರಟೇ ಬಿಟ್ಟ. ಅದಕ್ಕಾಗಿ ಯಾರೂ ಯಾವ ಏರ್ಪಾಟನ್ನೂ ಮಾಡಬಾರದೆಂದೂ ಹೇಳಿದ: ಗೋಪಾಲನು ಮಾತ್ರ ತನ್ನ ಜೊತೆಗಿರಲು ಒಪ್ಪಿದ. ಬಿಸಿಲಿನ ಮತ್ತು ಆರೋಗ್ಯದ ಕಾರಣ ಹೇಳಿ ರಾಣಿಯು ಗೋಪಾಲನು ಛತ್ರ ಹಿಡಿದುಕೊಂಡು ಆತನನ್ನು ಅನುಸರಿಸಲು ಮಹಾರಾಜನಿಂದ ಅನುಮತಿಯನ್ನು ಪಡೆದಳು.

ಮಹಾರಾಜನು ಹೊರಟ ಕೂಡಲೇ ಪ್ರಧಾನಿಯು ಅಂತಃಪುರದ ರಕ್ಷಣೆಗಾಗಿ ತಾನು ಅಲ್ಲಿಯೇ ತನಗಾಗಿದ್ದ ಕೋಣೆಯಲ್ಲಿ ಸೇವೆಗಾಗಿ ನಿಂತುಬಿಟ್ಟ. ಆತನು ಅಲ್ಲಿ ಇದ್ದುಕೊಂಡೇ ತನ್ನ ಕೆಲಸಗಳನ್ನು ಮಾಡುತ್ತಿದ್ದ. ಯುದ್ಧವೊಂದು ಕಡೆ ಆರಂಭವಾಗಲಿತ್ತು. ಇನ್ನೊಂದು ಕಡೆ ಮಹಾರಾಜನಿಗೆ ಮನೋವಿಕಲತೆ. ಮತ್ತೊಂದು ಕಡೆ ನಾಡಿನಲ್ಲಿ ದುರ್ಭಿಕ್ಷ. ಇವೆಲ್ಲವೂ ಪ್ರಧಾನಿಯ ಬುದ್ಧಿಶಕ್ತಿಯನ್ನು ತೀವ್ರವಾಗಿ ಪರೀಕ್ಷಿಸುತ್ತಿದ್ದವು. ಆತನು ಅನ್ನಪಾನಗಳ ಅರಿವೇ ಇಲ್ಲದೆ ಯೋಚಿಸುತ್ತಿದ್ದ; ಭಗವಂತನನ್ನು ಪ್ರಾರ್ಥಿಸುತ್ತಿದ್ದ. ರಾತ್ರಿಯೆಲ್ಲಾ ಯೋಚಿಸುತ್ತಲೇ ಇದ್ದ.

ಬುಧವಾರ ಕಳೆದು ಗುರುವಾರ ಬಂದಿತು. ಯುದ್ಧ ಪ್ರಾರಂಭವಾಗಲು ಇನ್ನು ಎರಡೇ ದಿನಗಳು ಉಳಿದಿದ್ದವು. ಮಹಾರಾಜನೇನಾದರೂ ಮನಸ್ಸು ಮಾಡಿ ಯುದ್ಧವನ್ನು ನಿಲ್ಲಿಸಬೇಕೆಂಬ ಅಪ್ಪಣೆ ಕೊಟ್ಟರೂ ಕಾಳಗಾಪುರಕ್ಕೆ ಅದನ್ನು ತೆಗೆದುಕೊಂಡು ಹೋಗಲು ಎಂತಹ ಕುದುರೆ ಸವಾರನಿಗಾದರೂ ಒಂದು, ಅಥವಾ ಒಂದೂವರೆ ದಿನ ಬೇಕಾಗಿತ್ತು. ಗುರುವಾರ ಕಳೆದು ಶುಕ್ರ

ವಾರ ಹುಟ್ಟಿದರೆ ಮಹಾರಾಜರು ಯುದ್ಧ ಬೇಡವೆಂದರೂ ನಿಲ್ಲಿಸಲು ಅವಕಾಶ ವಿರುವುದಿಲ್ಲ. ಏನು ಮಾಡುವುದಕ್ಕೂ ತೋಚದೆ ಪ್ರಧಾನಿ ದಿಗ್ಭ್ರಾಂತನಾಗಿದ್ದ.

ಬೆಳಗ್ಗೆ ಸುಮಾರು ಐದು ಘಳಿಗೆ ಕಳೆದ ಮೇಲೆ ಕುಮಾರನು ವೇಗವಾಗಿ ರಂಗಯ್ಯನ ಮನೆಗೆ ಹೋದನು. ರಂಗಯ್ಯ ಆತನನ್ನು ನೋಡಲು ಆತುರ ದಿಂದ ಹೊರಗೆ ಬಂದನು. ಕುಮಾರನ ಮುಖದಲ್ಲಿ ಸಂತೋಷದ ಜ್ಯೋತಿ ಬೆಳಗುತ್ತಿತ್ತು. ಇದನ್ನು ನೋಡಿ ರಂಗಯ್ಯನಿಗೆ ಹರ್ಷದಿಂದ ಕೂಡಿದ ಕುತೂಹಲವುಂಟಾಯಿತು. ರಂಗಯ್ಯನು ಕೇಳುವುದಕ್ಕೆ ಮೊದಲೇ ಕುಮಾರನು, "ನನ್ನ ಪರಿಶೋಧನೆ ಫಲಿಸಿದೆ. ನಾವಿಬ್ಬರೂ ತಕ್ಷಣ ಮಹಾರಾಜರಿಗೆ ಈ ವಿಷಯವನ್ನು ತಿಳಿಸೋಣ" ಎಂದು ಹೇಳಿದ. ರಂಗಯ್ಯನು "ಮಹಾರಾಜನು ಪಟ್ಟಣದಲ್ಲಿಲ್ಲ. ಪ್ರಧಾನಿಗೆ ತಿಳಿಸೋಣ ಬಾ." ಎಂದು ಕುಮಾರನನ್ನು ಕರೆದು ಕೊಂಡು ಅಂತಃಪುರಕ್ಕೆ ಹೊರಟನು. ಪ್ರಧಾನಿಯ ಅನುಮತಿಯನ್ನು ಪಡೆದು ಇಬ್ಬರೂ ಆತನನ್ನು ಸಂದರ್ಶಿಸಿದರು. ಇಬ್ಬರ ಮುಖದಲ್ಲೂ ಸಂತೋಷದ ವಾರ್ತೆಯನ್ನು ಹೇಳಲು ಬಂದಿರುವ ಇಂಗಿತವನ್ನು ಕಂಡು ಪ್ರಧಾನಿ ಕುತೂಹಲಿ ಯಾದನು. ಪ್ರಧಾನಿಯು ಕೇಳುವುದಕ್ಕೆ ಮೊದಲೇ ರಂಗಯ್ಯನು ಹೇಳಿದ. "ಸ್ವಾಮೀ, ನಾನು ಕೋಶಾಧಿಕಾರಿಯ ಮಗ ರಂಗಯ್ಯ, ಈತನು ನನ್ನ ಸ್ನೇಹಿತ ಕುಮಾರನು. ಯುದ್ಧವನ್ನು ನಿಲ್ಲಿಸಲು ಒಂದು ಮಾರ್ಗವನ್ನು ಈತನು ಕಂಡು ಹಿಡಿದಿದ್ದಾನೆ.

ಪ್ರಧಾನಿ ಬಹು ಆತುರದಿಂದ ಕೇಳಿದ—"ಏನು ಮಾರ್ಗವದು? ಕೂಡಲೇ ಹೇಳು. ಕಾಲವಿಳಂಬವಾಗಬಾರದು."

ಕುಮಾರ—ರಾಜೇಂದ್ರದೇವನಿಗೂ ನಮ್ಮ ಮಹಾರಾಜರಿಗೂ ದೂರದ ಬಂಧುತ್ವವಿರುವುದು ತಿಳಿದುಬಂದಿದೆ. ಆದುದರಿಂದ ರಾಜೇಂದ್ರ ದೇವನನ್ನು ಹೇಮಗಿರಿ ರಾಜ್ಯದ ಒಡೆಯನನ್ನಾಗಿ ಮಾಡುವುದರಿಂದ ನಮ್ಮ ಮಹಾರಾಜರ ಪ್ರತಿಜ್ಞೆಗೆ ಭಂಗ ಬರುವುದಿಲ್ಲ. ಅವರು ಒಪ್ಪಿದರೆ ಕೂಡಲೇ ಯುದ್ಧವನ್ನು ನಿಲ್ಲಿಸಬಹುದು.

ಪ್ರಧಾನಿ—ಹೇಗೆ ತಿಳಿದು ಬಂದಿದೆ? ನಮ್ಮ ಮಹಾರಾಜರು ಆಂಧ್ರರು. ರಾಜೇಂದ್ರದೇವನು ಕನ್ನಡಿಗನು. ಬಂಧುತ್ವವು ದೂರದ್ದಾದರೂ ರಕ್ತಸಂಬಂಧ

ವಾಗಿದ್ದಾಗಿರಬೇಕು. ಇಲ್ಲದಿದ್ದರೆ ಈ ಲೋಕದಲ್ಲಿ ಯಾರಿಗೆ ಯಾರನ್ನು ಬೇಕಾದರೂ ಬಂಧುಗಳೆಂದು ತೋರಿಸಬಹುದು.

ಕುಮಾರ—ರಕ್ತ ಸಂಬಂಧವಾದ ಬಂಧುತ್ವವಿದೆ. ಇಬ್ಬರ ವಂಶಗಳಿಗೂ ಮೂಲ ಪುರುಷನೊಬ್ಬನೇ. ಆದರೆ ಬಹಳ ತಲೆಮಾರುಗಳು ಕಳೆದಿರುವುದರಿಂದ ಇದು ಯಾರಿಗೂ ತಿಳಿದಿಲ್ಲ.

ಪ್ರಧಾನಿ—ಇದು ನಿನಗೆ ಹೇಗೆ ತಿಳಿಯಿತು?

ಕುಮಾರ—ಸಂಸ್ಕೃತ, ಕನ್ನಡ, ತೆಲುಗು, ಕಾವ್ಯಗಳ ಪರಿಶೋಧನೆಯಿಂದ. ನಾನು ನಮ್ಮ ನಾಡಿನಲ್ಲಿ ಮಾತ್ರವಲ್ಲದೆ ಹೇಮಗಿರಿ ರಾಜ್ಯಕ್ಕೂ ಹೋಗಿ ಅನೇಕ ಕಾವ್ಯಗಳನ್ನು ಸಂಗ್ರಹಿಸಿದ್ದೇನೆ. ಅದನ್ನೆಲ್ಲಾ ಓದಿ ಈ ವಿಷಯವನ್ನು ತಿಳಿದುಕೊಂಡಿದ್ದೇನೆ. ನಮ್ಮ ಆಶ್ರಮದಲ್ಲಿ ಆ ಕಾವ್ಯಗಳೆಲ್ಲಾ ಇವೆ. ಅವುಗಳಲ್ಲಿ ಬರುವ ಪದ್ಯಗಳನ್ನು ಬೇಕಾದರೆ ನಾನು ಹೇಳಬಲ್ಲೆ. ಕಾವ್ಯಗಳನ್ನು ನೋಡಬೇಕೆಂದರೆ ತರಿಸುತ್ತೇನೆ. ರುದ್ರಸಿಂಹ ಪ್ರಭುಗಳು ಪೂರ್ವ ಚಾಳುಕ್ಯರ ವಂಶದವರು. ರಾಜೇಂದ್ರದೇವನು ಪಶ್ಚಿಮ ಚಾಳುಕ್ಯರ ವಂಶದಲ್ಲಿ ಹುಟ್ಟಿದವನು. ಪೂರ್ವ ಚಾಳುಕ್ಯರಿಗೂ ಪಶ್ಚಿಮ ಚಾಳುಕ್ಯರಿಗೂ ಮೂಲ ಪುರುಷನೊಬ್ಬನೇ. ಪೂರ್ವ ಚಾಳುಕ್ಯರು ಆಂಧ್ರ ದೇಶದ ಅರಸುಗಳಾಗಿದ್ದುದರಿಂದ ಆಂಧ್ರರಾದರು. ಪಶ್ಚಿಮ ಚಾಳುಕ್ಯರು ಕರ್ನಾಟಕ ದೇಶದ ಅರಸುಗಳಾಗಿದ್ದುದರಿಂದ ಕನ್ನಡಿಗರಾದರು. ತಾನು ಪೂರ್ವ ಚಾಳುಕ್ಯರ ವಂಶದಲ್ಲಿ ಹುಟ್ಟಿದವಳೆಂದೂ, ರಾಜೇಂದ್ರದೇವನ ತಾತ ಎಂದರೆ ತನ್ನ ಗಂಡನಾದ ಕೃಷ್ಣರಸನ ಸೋದರತ್ತೆಯ ಗಂಡ ವಿಜಯೇಂದ್ರ ದೇವನು ಪಶ್ಚಿಮ ಚಾಳುಕ್ಯರ ವಂಶದವನೆಂದೂ ವಿಜಯಾಂಬಿಕೆಯು ತಾನು ರಚಿಸಿರುವ ಚಂದ್ರಿಕಾ ಚಂದ್ರನವೆಂಬ ಸಂಸ್ಕೃತ ಕಾವ್ಯದಲ್ಲಿ ತನ್ನ ಮತ್ತು ತನ್ನ ಗಂಡನ ವಂಶಗಳನ್ನು ವರ್ಣಿಸುತ್ತಾ ಬರೆದಿದ್ದಾಳೆ. ಆ ಕಾವ್ಯವನ್ನು ಸಹ ಬಹು ಪ್ರಯಾಸಪಟ್ಟು ಹೇಮಗಿರಿ ರಾಜ್ಯದಲ್ಲಿ ಪತ್ತೆಹಚ್ಚಿ ತಂದಿರುತ್ತೇನೆ. ಈ ಕಾವ್ಯವು ಲಭಿಸಿದ ಕೂಡಲೇ ಹೇಮಗಿರಿ ರಾಜ್ಯದ ನಾಯಕರಿಗೆ ಈ ವಿಷಯವನ್ನು ತಿಳಿಸಿದೆನು. ಅವರೆಲ್ಲಾ ನನ್ನ ಪರಿಶೋಧನೆಯಿಂದ ತಿಳಿದು ಬಂದ ವಿಷಯಗಳನ್ನು ಒಪ್ಪಿ, ರುದ್ರಸಿಂಹ ಪ್ರಭುಗಳ ಪ್ರತಿಜ್ಞೆಗೆ ಭಂಗವಿಲ್ಲದಿರುವುದರಿಂದ ಅವರು ಯುದ್ಧ ಬೇಡವೆಂದೂ, ಎರಡು ರಾಜ್ಯಗಳೂ ಮೈತ್ರಿಯಿಂದ ವರ್ತಿಸಬೇಕೆಂದೂ ಒಪ್ಪಿದರೆ,

ಅದೇ ರೀತಿ ಸಂಧಿ ಮಾಡಿಕೊಳ್ಳಲು ತಾವು ಸಿದ್ಧವಾಗಿರುವುದಾಗಿ ಹೇಳಿದರು. ಈ ವಿಷಯದಲ್ಲಿ ಮುಂದಿನ ಮಾತುಕತೆಗಳನ್ನು ನಡೆಸುವುದಕ್ಕೆ ಅನುಕೂಲವಿರುವಂತೆ ಅವರು ದೂತನ ದ್ವಾರಾ ಸಂದೇಶವನ್ನೂ ಕಳುಹಿಸಿಕೊಡುತ್ತೇವೆಂದು ಹೇಳಿದರು. ಬಹುಶಃ ದೂತನು ಇನ್ನು ಸ್ವಲ್ಪ ಹೊತ್ತಿನಲ್ಲಿ ಇಲ್ಲಿಗೆ ಬರಬಹುದು.

ಪ್ರಧಾನಿಯು ಇದನ್ನು ಕೇಳುತ್ತ ಕೇಳುತ್ತ ಮುಂದೆ ಬಂದು ಆನಂದದಿಂದ ಕುಮಾರನನ್ನು ತಬ್ಬಿಕೊಂಡನು.

ಪ್ರಧಾನಿ—ಭೇಷ್, ನಮ್ಮ ನಾಡಿನ ಉದ್ಧಾರವನ್ನು ನೀನು ಸಾಧಿಸಿದ್ದೀಯೆ.

ಕುಮಾರ—ಇದೆಲ್ಲ ರಂಗಯ್ಯನವರ ಸಹಾಯದಿಂದ ಮಾತ್ರ ಸಾಧ್ಯವಾಯಿತು.

ಪ್ರಧಾನಿ—ಇನ್ನು ಕಾಲವಿಳಂಬ ಮಾಡಬಾರದು. ತಕ್ಷಣ ಮಹಾರಾಜರನ್ನು ಕರೆಸಿಕೊಳ್ಳಬೇಕು.

ಹೀಗೆ ಹೇಳಿ ಪ್ರಧಾನಿಯು ಸೇವಕರನ್ನು ಕರೆದು ಯಾರಾದರೂ ಕುದುರೆ ಸವಾರನಿದ್ದರೆ ಕರೆಯಬೇಕೆಂದು ಹೇಳಿದನು. ಎಲ್ಲ ಕುದುರೆ ಸವಾರರನ್ನೂ, ಬಹುಶಃ ಎಲ್ಲ ಕುದುರೆಗಳನ್ನೂ ಯುದ್ಧಕ್ಕೆ ಕಳುಹಿಸಿದ್ದುದರಿಂದ ರಾಜಯೋಗ್ಯವಾದ ಕುದುರೆಯೂ ಅದನ್ನೇರಿ ವೇಗವಾಗಿ ಹೋಗಬಲ್ಲ ಸವಾರನೂ ಲಭಿಸುವುದೇ ಕಷ್ಟವಾಯಿತು. ಕೊನೆಗೆ ಒಬ್ಬ ಕುದುರೆ ಸವಾರನನ್ನು ರಾಜಯೋಗ್ಯವಾದ ಕುದುರೆಯ ಮೇಲೆ ರಾಮಪುರಕ್ಕೆ ಪ್ರಧಾನಿ ಕಳುಹಿಸಿಕೊಟ್ಟನು. ಅತನೊಂದಿಗೆ ಮಹಾರಾಜನಿಗೆ ಮಹಾರಾಜರ ಪ್ರತಿಜ್ಞೆಗೆ ಭಂಗವಿಲ್ಲದೆ ಯುದ್ಧ ನಿಲ್ಲಿಸುವ ಮಾರ್ಗವೊಂದು ಕಂಡು ಬಂದಿದೆಯೆಂದೂ, ಹೇಮಗಿರಿ ನಾಯಕರು ಸಹ ಇದಕ್ಕೆ ಒಪ್ಪಿ ದೂತನನ್ನು ಕಳುಹಿಸಿ ಕೊಡುತ್ತೇವೆಂದು ಹೇಳಿರುವುದಾಗಿಯೂ, ಮಹಾರಾಜರು ಕೂಡಲೇ ಘನಗಿರಿಗೆ ಬಂದು ವಿಷಯಗಳನ್ನು ನಿರ್ಧಾರ ಮಾಡಿ ಯುದ್ಧ ನಿಲ್ಲಿಸಲು ಆಜ್ಞೆಯನ್ನು ಹೊರಡಿಸಬೇಕಾಗಿದೆಯೆಂದೂ ಸ್ವಲ್ಪ ತಡವಾದರೂ ಯುದ್ಧವಿರಮಣಾಜ್ಞೆಯು ಕಾಳಗಾಪುರದಲ್ಲಿರುವ ಸೈನ್ಯಾಧಿಪತಿಗೆ ತಲುಪುವುದಕ್ಕೆ ಕಾಲಾವಕಾಶವಿಲ್ಲದೇ ಹೋಗಬಹುದೆಂದೂ ಪತ್ರವನ್ನು ಬರೆದು ಕಳುಹಿಸಿದನು.

ಪ್ರಧಾನಿ ಮತ್ತೆ ಕುಮಾರನನ್ನೂ ರಂಗಯ್ಯನನ್ನೂ ಅಭಿನಂದಿಸಿ, ಮಹಾರಾಜರು ಬಂದ ಕೂಡಲೇ ಅವರಿಗೆ ಈ ವಿಷಯಗಳು ಸತ್ಯವೆಂದು ಹೇಗೆ ರುಜು ಮಾತು ಮಾಡಿಕೊಡಬಹುದೆಂದು ಯೋಚಿಸತೊಡಗಿದನು. ಮೊದಲು ಆಶ್ರಮದಿಂದ ಪರಿಶೋಧಿತಾಂಶಕ್ಕೆ ಸಂಬಂಧಪಟ್ಟ ಕಾವ್ಯಗಳನ್ನು ತರಿಸುವ ಏರ್ಪಾಟು ಮಾಡಿ ಕುಮಾರನನ್ನು ಕಳುಹಿಸಿಕೊಟ್ಟನು. ಅನಂತರ ರಂಗಯ್ಯನ ಜೊತೆಯಲ್ಲಿ ಕಾವ್ಯಗಳಿಂದ ಕುಮಾರನು ತೋರಿಸುವ ಪದ್ಯಗಳನ್ನು ಓದಿ ಕುಮಾರನ ನಿರ್ಣಯವು ಸರಿಯೋ ಇಲ್ಲವೋ ತಿಳಿಸುವ ಪಂಡಿತರನ್ನು ಕಲೆ ಹಾಕುವ ವಿಷಯವಾಗಿ ಮಾತಾಡಿದನು. ರಂಗಯ್ಯನು ತಕ್ಷಣಕ್ಕೆ ಕೆಲಸಕ್ಕಾಗುವ ಘನಗಿರಿಯಲ್ಲೂ ಅದಕ್ಕೆ ಬಹಳ ಹತ್ತಿರದಲ್ಲಿಯೂ ಇರುವ ಸತ್ಯನಿಷ್ಠರಾದ ನಾಲ್ಕೈದು ವೃದ್ಧ ವಿದ್ವಾಂಸರ ಹೆಸರುಗಳನ್ನು ತಿಳಿಸಿದನು. ಅವರಲ್ಲಿ ವರದಪ್ಪ ಸ್ವಾಮಿಗಳೂ ಒಬ್ಬರಾಗಿದ್ದರು. ಉಳಿದವರೆಲ್ಲ ಬಹಳ ನಿರ್ಗತಿಕರಾಗಿದ್ದವರು. ಪ್ರಧಾನಿಯು ಮಹಾರಾಜರು ಬರುವ ವೇಳೆಗೆ ಇವರನ್ನೆಲ್ಲಾ ಕರೆಯಿಸಬೇಕೆಂದು ಅಪ್ಪಣೆ ಕೊಟ್ಟನು. ಸ್ವಲ್ಪ ಹೊತ್ತಿಗೆ ಕುಮಾರನು ತಿಳಿಸಿದಂತೆ ಹೇಮಗಿರಿ ರಾಜ್ಯದ ದೂತನೂ ಬಂದು ಪ್ರಧಾನಿಗೆ ಸಂದೇಶವನ್ನು ತಲುಪಿಸಿದನು.

೩೩

ಪ್ರಧಾನಿಯು ಒಬ್ಬ ಕುದುರೆಯ ಸವಾರನು ರಾಮಪುರಕ್ಕೆ ಹೋಗಿ ಹಿಂತಿರುಗಿ ಬರುವುದಕ್ಕೆ ಎಷ್ಟು ಕಾಲ ಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡೇ ಎಲ್ಲ ಏರ್ಪಾಟುಗಳನ್ನೂ ಮಾಡಿ ತಾನು ಕೋಟೆಯ ಪೂರ್ವದ ಬಾಗಿಲಿನ ಬಳಿ ಛತ್ರಚಾಮರವಾಹಿಗಳೊಂದಿಗೆ ಮಹಾರಾಜರನ್ನು ಎದುರ್ಗೊಂಡು ಅಂತಃಪುರಕ್ಕೆ ಕರೆತರಲು ಕಾದಿದ್ದನು. ಸ್ವಲ್ಪ ಹೊತ್ತಿನಲ್ಲೇ ಮಹಾರಾಜನು ಕುದುರೆಯ ಮೇಲೆ ಕುಳಿತು ಪೂರ್ವ ಬಾಗಿಲಿಗೆ ಬಂದನು. ಅದೇ ರಾಮಪುರದಿಂದ ಬರುವವರು ಕೋಟೆಯನ್ನು ಪ್ರವೇಶಿಸುವ ಬಾಗಿಲು. ಮಹಾರಾಜನು ವೇಗವಾಗಿ ಕುದುರೆಯ ಮೇಲೆ ಕುಳಿತು ಪೂರ್ವದ ಬಾಗಿಲಿಗೆ ಬಂದನು. ಮಹಾರಾಜನು ವೇಗವಾಗಿ ಕುದುರೆಯನ್ನೋಡಿಸುತ್ತ ಕಾದಿದ್ದ ರಾಜಪರಿವಾರದ ಸಮೀಪಕ್ಕೆ ಬಂದು ನಿಲ್ಲಿಸಿದನು. ಗೋಪಾಲನೂ ಮಹಾರಾಜನಿಗೆ ತಲೆಯ ಮೇಲೆ ಬಿಸಿಲು

ಬೀಳದಂತೆ ಛತ್ರವನ್ನು ಹಿಡಿದುಕೊಂಡು ರಾಜನ ಪಕ್ಕದಲ್ಲಿಯೇ ಓಡಿ ಬಂದು ನಿಂತನು. ಕಾದಿದ್ದ ಪರಿವಾರದಲ್ಲಿನ ಇನ್ನೊಬ್ಬ ಛತ್ರದಾರಿಯು ಬಂದು ಮಹಾರಾಜನಿಗೆ ಕೊಡೆ ಹಿಡಿದ ಕೂಡಲೇ ಮಹಾರಾಜನು ಆ ಛತ್ರದ ನೆಳಲಲ್ಲಿ ಅಂತಃಪುರಕ್ಕೆ ತೆರಳಿದನು. ಪರಿವಾರವೆಲ್ಲಾ ಆತನನ್ನನುಸರಿಸಿತು.

ಮಹಾರಾಜನು ಅಂತಃಪುರವನ್ನು ತಲುಪಿದ ಕೂಡಲೇ ಒಡ್ಡೋಲಗದಲ್ಲಿ ಕುಳಿತನು. ಆ ವೇಳೆಗೆ ಸರಿಯಾಗಿ ಅವನ ಆಗಮನದ ವಾರ್ತೆಯು ಉನ್ನತಾಧಿಕಾರಿಗಳಿಗೂ ಪೌರ ಪ್ರಮುಖರಿಗೂ ತಲುಪಿತ್ತು. ಆದುದರಿಂದ ಅವರೆಲ್ಲರೂ ಬಹಳ ಕುತೂಹಲದಿಂದ ಆಸ್ಥಾನಕ್ಕೆ ಬಂದಿದ್ದರು. ಆಮೇಲೆಯೂ ಆಸ್ಥಾನ ಪ್ರವೇಶಕ್ಕೆ ಅಪ್ಪಣೆಯಿರುವವರು ಬರುತ್ತಲೇ ಇದ್ದರು.

ರುದ್ರಸಿಂಹನಿಗೆ ಪ್ರಧಾನಿಯು ಎಲ್ಲ ವಿಷಯವನ್ನೂ ತಿಳಿಸಿದನು. ಹೇಮಗಿರಿ ರಾಜ್ಯದ ನಾಯಕರಿಂದ ಬಂದ ದೂತನನ್ನು ತೋರಿಸಿ ಸಂದೇಶವನ್ನು ಓದಿದನು. ಮಹಾರಾಜನಿಗೆ ಬಹಳ ಆನಂದವಾಯಿತು. ರಾಮಪುರದ ಶ್ರೀರಾಮಚಂದ್ರನು ತನ್ನ ಹರಕೆಗೆ ಕೃಪೆ ದೋರಿರುವನೆಂದು ಆತನು ಭಾವಿಸಿದನು. ವಿಷಯವನ್ನೆಲ್ಲಾ ಕೇಳಿ ಆತನು ಹೀಗೆ ಹೇಳಿದನು—"ಪ್ರಧಾನಿಗಳೇ, ಇದು ನನಗೆ ಬಹಳ ಸಂತೋಷವನ್ನುಂಟುಮಾಡಿದ ವಿಷಯ. ನಾನು ಶ್ರೀರಾಮಚಂದ್ರನನ್ನು ನನ್ನ ಪ್ರತಿಜ್ಞೆಗೆ ಭಂಗವಿಲ್ಲದಂತೆಯೂ ಪ್ರಜೆಗಳಿಗೆ ಯುದ್ಧದಿಂದುಂಟಾಗಬಹುದಾದ ಕಷ್ಟ ನಷ್ಟಗಳು ಬಾರದಂತೆಯೂ ಕಾಪಾಡಬೇಕೆಂದು ಸದಾ ಪ್ರಾರ್ಥಿಸುತ್ತಿದ್ದೆ. ಈ ಇಬ್ಬರು ಯುವಕರ ರೂಪದಲ್ಲಿ ಆತನ ಕೃಪೆ ನಮಗೆ ಪ್ರಾಪ್ತವಾದಂತೆ ಕಾಣಿಸುತ್ತದೆ. ಇವರಿಗೆ ಮೊದಲು ತಕ್ಕ ಸತ್ಕಾರವನ್ನು ಮಾಡಿ."

ಪ್ರಧಾನಿ—ಪ್ರಭುಗಳೇ, ಅವರು ಸತ್ಕಾರಕ್ಕೆ ಆಸೆ ಪಡದ ತ್ಯಾಗಿಗಳು. ಲೋಕದ ಹಿತವನ್ನು ಕೋರುವವರು. ಅವರ ಸತ್ಕಾರವನ್ನು ನಾನು ಆಮೇಲೆ ನೋಡಿಕೊಳ್ಳುತ್ತೇನೆ. ಈಗ ಕಾಲವು ಬಹಳ ಅಲ್ಪವಾಗಿದೆ. ತಾವು ಯುದ್ಧವನ್ನು ನಿಲ್ಲಿಸಬಹುದೆಂದು ಅಪ್ಪಣೆ ಕೊಟ್ಟರೆ ಅದನ್ನು ಕಾಳಿಗಾಪುರದಲ್ಲಿರುವ ನಮ್ಮ ಸೈನ್ಯಾಧಿಪತಿ ವೀರಪ್ಪನಿಗೆ ಕಳುಹಿಸಬೇಕು.

ರುದ್ರ—ನನ್ನ ಪ್ರತಿಜ್ಞೆಗೆ ಭಂಗ ಬಾರದಿದ್ದರೆ ಸಾಕು. ಈ ಕುಮಾರನು ಪರಿಶೋಧಿಸಿ ಕಂಡುಹಿಡಿದ ವಿಚಾರವು ಸತ್ಯವಾದರೆ ನನ್ನ ಪ್ರತಿಜ್ಞೆಗೆ ಭಂಗವಿಲ್ಲ.

ಅಲ್ಲದೆ ನಮ್ಮ ವಂಶದವನು ಹೇಮಗಿರಿ ಜನರಿಗೆ ಪ್ರಿಯನಾಗಿ ರಾಜನಾಗು ತ್ತಿರುವುದು ನನಗಿನ್ನೂ ಹೆಚ್ಚು ಸಂತೋಷಕರವಾದುದು. ಯುದ್ಧ ನಿಂತು ಹೋಗಿ ಎರಡು ದೇಶಗಳ ಜನರಿಗೂ ಆನಂದವುಂಟಾಗುವುದು ನನಗಿನ್ನೂ ಹೆಚ್ಚಿನ ಸಂತೋಷಕಾರಿ. ಆದರೆ ಮೊದಲು ಈ ಬಾಂಧವ್ಯದ ಸಂಗತಿ ಸತ್ಯ ವೆಂದು ತೀರ್ಮಾನವಾಗಬೇಕು. ನಾಳೆ ಇದು ಸತ್ಯವಲ್ಲವೆಂದು ಕಂಡುಬಂದರೆ ಅಥವಾ ಯಾರಾದರೂ ಹೇಳಿದರೆ ನನ್ನ ಪ್ರತಿಜ್ಞೆಗೆ ಭಂಗ ಬಂದು ನನ್ನ ಕೀರ್ತಿ ಕೆಡುತ್ತದೆ. ಅದಕ್ಕಿಂತಲೂ ನನಗೆ ಮರಣವೇ ಇಷ್ಟ.

ಪ್ರಧಾನಿ—ಅದಕ್ಕಾಗಿ ತಾವು ಅಷ್ಟು ದೂರ ಯೋಚಿಸಬೇಕಾಗಿಲ್ಲ. ನಾನು ಈ ವಿಷಯವನ್ನು ಕುರಿತು ಮೊದಲೇ ಆಲೋಚನೆ ಮಾಡಿ ಈ ವಯಸ್ಸಾದ ವಿದ್ವಾಂಸರನ್ನು ಇಲ್ಲಿಗೆ ಬರಮಾಡಿಕೊಂಡಿದ್ದೇನೆ. ಇವರು ಒಳ್ಳೆಯ ವಿದ್ವಾಂಸರು ಮಾತ್ರವಲ್ಲ, ಆಚಾರವಂತರು, ಸತ್ಯನಿಷ್ಠೆಯುಳ್ಳವರು. ಇವರಿಂದ ಸತ್ಯವಾಗಿ ಕಂಡು ಬರುವ ಅಭಿಪ್ರಾಯವನ್ನೇ ಕೊಡುತ್ತೇವೆಂದು ಪ್ರಮಾಣ ವನ್ನು ಮಾಡಿಸಿ ವಿಷಯವನ್ನು ತೀರ್ಮಾನಿಸುವ ಅಧಿಕಾರವನ್ನು ತಾವು ಇವ ರಿಗೆ ಕೊಡಿ. ಇವರು ಇಲ್ಲಿಯೇ ಕುಳಿತುಕೊಂಡು ತೀರ್ಮಾನ ಮಾಡಲಿ.

ಮಹಾರಾಜನು ಇದಕ್ಕೆ ಸಮ್ಮತಿಸಿದನು. ವಿದ್ವಾಂಸರು ಪ್ರಮಾಣ ಮಾಡಿದರು. ಕುಮಾರನು ಕಾವ್ಯಗಳಿಂದ ಪದ್ಯಗಳನ್ನು ಹೇಳಿ ಹೇಳಿ ವಿವರಿಸ ತೊಡಗಿದನು. ಆ ಕಾವ್ಯಗಳಲ್ಲಿ ವಿದ್ವಾಂಸರು ಓದದೆ ಇದ್ದ ಕಾವ್ಯಗಳಿಂದ ಪದ್ಯಗಳನ್ನು ಹೇಳಿದಾಗ ಅವರು ಆ ಕಾವ್ಯಗಳನ್ನು ನೋಡಬೇಕೆಂದು ಅಪೇಕ್ಷೆ ಪಟ್ಟರು. ಆಗ ಕುಮಾರನು ಆ ಕಾವ್ಯದ ತಾಳಪತ್ರಗ್ರಂಥಗಳನ್ನು ರಂಗಯ್ಯನ ಸಹಾಯದಿಂದ ಕೊಟ್ಟನು. ಅವರು ಆ ಕಾವ್ಯಗಳ ಇತರ ಭಾಗಗಳ ಶೈಲಿ ಯನ್ನೂ ಸಂದರ್ಭಗಳನ್ನೂ ನೋಡಿ ನೋಡಿ, ಇವೆಲ್ಲವನ್ನೂ ನಂಬಬಹುದೆಂದು ಕೊನೆಗೆ ತೀರ್ಮಾನಿಸಿದರು. ಆದರೆ ವಿಜಯಾಂಬಿಕೆಯ ಇತರ ಕಾವ್ಯಗಳನ್ನು ಅವರು ಯಾರೂ ನೋಡಿರಲಿಲ್ಲ. ಆದುದರಿಂದ ಅವರು ವಿಜಯಾಂಬಿಕೆಯ 'ಚಂದ್ರಿಕಾ ಚಂದನ' ಕಾವ್ಯದ ವಿಷಯವಾಗಿ ತಾವು ಏನು ಅಭಿಪ್ರಾಯವನ್ನು ಕೊಡುವುದಕ್ಕೂ ಅಸಮರ್ಥರೆಂದು ನುಡಿದರು. ಆಗ ರಂಗಯ್ಯನು, "ವಿಜ ಯಾಂಬಿಕೆಯು ಸ್ವಹಸ್ತದಿಂದ ಈ ಕಾವ್ಯವನ್ನು ಬರೆದುದಾಗಿ ಇದರಲ್ಲಿ ಉಲ್ಲೇಖನವಿದೆ. ವಿಜಯಾಂಬಿಕೆ ಬರೆದ ಇತರ ಬರವಣಿಗೆಗಳು ಯಾವುದಾದರೂ

ಈ ಅಂತಃಪುರದಲ್ಲಿ ಸಿಕ್ಕಿದರೆ ಲಿಪಿಯನ್ನು ಹೋಲಿಸಿ ನೋಡಿ ಇದು ವಿಜಯಾಂಬಿಕೆಯಿಂದ ರಚಿತವಾಗಿದೆಯೋ ಇಲ್ಲವೋ ಎಂಬ ವಿಷಯವನ್ನು ನಿರ್ಧರಿಸಬಹುದು." ಎಂದು ಸಲಹೆ ಕೊಟ್ಟನು.

ವಿದ್ವಾಂಸರು ಅದಕ್ಕೆ ಸಮ್ಮತಿಸಿದರು. ಮಹಾರಾಜನು "ಮಹಾರಾಣಿಯನ್ನು ಈ ವಿಷಯ ಕೇಳಿ ಅಂತಃಪುರದಲ್ಲಿರುವ ಎಲ್ಲರನ್ನೂ ಇಲ್ಲಿಗೆ ಕರೆದು ಕೊಂಡು ಬನ್ನಿ. ಇಲ್ಲಿ ವಿಚಾರಿಸೋಣ. ಅವರಿಗೆ ತಿಳಿದ ಹಾಗೆ ಎಲ್ಲಿಯಾದರೂ ವಿಜಯಾಂಬಿಕೆಯಿಂದ ಬರೆಯಲ್ಪಟ್ಟ ಪುಸ್ತಕವಿದ್ದಲ್ಲಿ ಹುಡುಕಿಸೋಣ" ಎಂದು ಅಪ್ಪಣೆ ಕೊಟ್ಟನು.

ಮಹಾರಾಣಿಯನ್ನು ಕೇಳಿ ಬಂದ ಪರಿಚಾರಕರು ಅವರಿಗೆ ಈ ವಿಚಾರ ತಿಳಿಯದೆಂದು ಹೇಳಿದರು. ಉಳಿದ ಪರಿಚಾರಕರಲ್ಲಿ ಗವಿಯಪ್ಪನೇ ಹೆಚ್ಚು ವೃದ್ಧನಾಗಿದ್ದನು. ಆತನಿಗೆ ಮಾತ್ರ ವಿಜಯಾಂಬಿಕೆಯ ದೇವರ ಮನೆಯ ವಿಚಾರ ತಿಳಿದಿತ್ತು.

"ವಿಜಯಾಂಬಿಕೆಯವರು ಪೂಜೆ ಮಾಡಲು ಉಪಯೋಗಿಸುತ್ತಿದ್ದ ಒಂದು ಕೋಣೆ ಇದೆ. ಅಲ್ಲಿಂದಲೇ ನಾನು ಪ್ರಭುಗಳಿಗೆ ಶ್ರೀರಾಮಚಂದ್ರನ ವಿಗ್ರಹವನ್ನು ಕೆಲವು ದಿನಗಳ ಕೆಳಗೆ ತೆಗೆದುಕೊಟ್ಟದ್ದು. ಆ ವಿಗ್ರಹಗಳನ್ನು ಅವರು ಪೂಜಿಸುತ್ತಿದ್ದರು. ಅಲ್ಲಿ ಅವರಿಂದ ಬರೆಯಲ್ಪಟ್ಟ ಪುಸ್ತಕಗಳು ಇರುವ ಸಂಭವವಿದೆ." ಎಂದು ಗವಿಯಪ್ಪ ಹೇಳಿದನು.

ಕೂಡಲೇ ರುದ್ರಸಿಂಹನು ಬಹಳ ಸಂತೋಷ ಕುತೂಹಲಗಳಿಂದ 'ಹಾಗಾದರೆ ಅಲ್ಲಿ ನೋಡಿ ತಕ್ಷಣ ನನಗೆ ಸಮಾಚಾರ ತಿಳಿಸಿ' ಎಂದು ಹೇಳಿದನು. ಗವಿಯಪ್ಪನು ಕೆಲ ಪರಿಚಾರಕರೊಡನೆ ಆ ಕೋಣೆಗೆ ಹೋಗಿ ಹುಡುಕಲಾಗಿ ಅಲ್ಲಿ ವಿಜಯಾಂಬಿಕೆಯಿಂದ ಬರೆಯಲ್ಪಟ್ಟಿದ್ದ ಶ್ರೀರಾಮ ಸಹಸ್ರನಾಮ ಸ್ತೋತ್ರವು ಸಿಕ್ಕಿತು. ಅದನ್ನು ರಾಜ ಸಭೆಗೆ ತಂದರು. ಅದರಲ್ಲಿಯೂ ವಿಜಯಾಂಬಿಕೆ ಸ್ವಹಸ್ತದಿಂದ ಬರೆದಿರುವುದೆಂದು ಬರೆದಿತ್ತು.

ವಿದ್ವಾಂಸರು ಉಭಯ ಕೃತಿಗಳಲ್ಲಿನ ಲಿಪಿಯನ್ನು ಹೋಲಿಸಿ "ಚಂದ್ರಿಕಾ ಚಂದನ" ಕಾವ್ಯವು ವಿಜಯಾಂಬಿಕೆಯ ಸ್ವಹಸ್ತದಿಂದ ಬರೆಯಲ್ಪಟ್ಟಿರುವುದು. ಇದು ಅವಳೇ ರಚಿಸಿರುವುದು ಎಂಬುವುದರಲ್ಲಿ ಸಂದೇಹವಿಲ್ಲ. ಅವಳಿಗೆ ತನ್ನ ತಂದೆಯ ವಂಶದ ವಿಷಯವೂ ರಾಜೇಂದ್ರದೇವನ ತಾತನ ವಂಶದ ವಿಷಯವೂ

ತಿಳಿದಿರುವುದರಿಂದ ಅವಳು ಈ ವಿಷಯವನ್ನು ತನ್ನ ಕಾವ್ಯದಲ್ಲಿ ಬರೆದಿದ್ದಾಳೆ. ಆದುದರಿಂದ ಕುಮಾರನು ಕಂಡು ಹಿಡಿದ ಬಾಂಧವ್ಯದ ವಿಷಯ ಸತ್ಯ. ಇದರಲ್ಲಿ ಸಂದೇಹಕ್ಕೆ ಅವಕಾಶವಿಲ್ಲವೆಂದು ತೀರ್ಮಾನಿಸಿ ಮಹಾರಾಜರಿಗೆ ತಿಳಿಸಿದರು. ಮಹಾರಾಜನು ಬಹಳ ಸಂತೋಷದಿಂದ ಯುದ್ಧವನ್ನು ನಿಲ್ಲಿಸಬೇಕೆಂಬ ಆಜ್ಞೆಯನ್ನು ಬರೆಯಿಸಿದನು. ಹೇಮಗಿರಿ ರಾಜ್ಯದ ನಾಯಕರಿಗೆ ರಾಜೇಂದ್ರದೇವನನ್ನು ಮಹಾರಾಜನನ್ನಾಗಿ ಮಾಡಬೇಕೆಂದೂ, ಎರಡು ರಾಜ್ಯಗಳೂ ಮೈತ್ರಿಯಿಂದಿರಬೇಕೆಂದೂ ಇದು ತನಗೆ ಬಹಳ ಆನಂದದಾಯಕವೆಂದೂ ಪ್ರತ್ಯುತ್ತರವನ್ನು ಬರೆಯಿಸಿದನು. ಪ್ರಧಾನಿ ಕೂಡಲೇ ಎರಡನ್ನೂ ರವಾನಿಸಿದನು.

## ೩೪

ಯುದ್ಧವಿರಾಮದ ಆಜ್ಞೆ ಹೊರಟ ವಾರ್ತೆ ನಗರದಲ್ಲೆಲ್ಲ ವ್ಯಾಪಿಸಿತು. ನಗರದಲ್ಲಿ ಎಲ್ಲರಿಗೂ ಬಹಳ ಆನಂದವಾಯಿತು. ಈ ಸಂಭ್ರಮದಲ್ಲಿ ಗೋಪಾಲನ ಸ್ಥಿತಿ ಏನೆಂಬುದನ್ನು ಯಾರೂ ಗಮನಿಸಲಿಲ್ಲ. ಆದರೆ ಮಹಾರಾಜ ರುದ್ರಸಿಂಹನೇ ಊಟವಾದ ಮೇಲೆ ಸ್ವಲ್ಪ ವಿಶ್ರಾಂತಿಗಾಗಿ ಒಬ್ಬನೇ ಮಲಗಿದ್ದಾಗ ರಾಮಪುರದ ಶ್ರೀರಾಮಚಂದ್ರನನ್ನೂ, ಆತನ ದರ್ಶನಕ್ಕಾಗಿ ತಾನು ಪಾದಚಾರಿಯಾಗಿ ಹೋಗಿದ್ದನ್ನೂ, ತನ್ನ ಜೊತೆಯಲ್ಲಿ ತನ್ನ ತಲೆಯ ಮೇಲೆ ಬಿಸಿಲು ಬೀಳದಂತೆ ಕೊಡೆ ಹಿಡಿದು ಬಂದ ಗೋಪಾಲನನ್ನೂ ನೆನೆಸಿಕೊಂಡನು. ಆಗ ಆತನಿಗೆ ತಾನು ಕುದುರೆಯ ಮೇಲೆ ಹಿಂತಿರುಗಿ ಬರುವಾಗಲೂ ಗೋಪಾಲನು ತನ್ನ ಜೊತೆಯಲ್ಲೇ ಕೊಡೆ ಹಿಡಿದು ಬಂದುದು ನೆನಪಿಗೆ ಬಂತು. ಆತನಿಗೆ ಬಹಳ ಆಶ್ಚರ್ಯವಾಯಿರು. ತಾನು ಕಾಲ್ನಡಿಗೆಯಿಂದ ಹೋಗುವಾಗ ಗೋಪಾಲನು ಕೊಡೆ ಹಿಡಿದುಕೊಂಡು ಬಂದದ್ದೇನೋ ಸರಿ. ಆದರೆ ತಾನು ಕುದುರೆಯನ್ನೋಡಿಸಿಕೊಂಡು ಆತುರವಾಗಿ ಹಿಂತಿರುಗಿ ಬರುವಾಗಲೂ ತನಗೆ ಕೊಡೆ ಹಿಡಿದುಕೊಂಡೇ ಬರುವುದು ಮನುಷ್ಯನಿಗೆ ಸಾಧ್ಯವಾದ ಕೆಲಸವೇ ಎಂದು ಆತನು ಇದೇ ವಿಷಯವನ್ನೇ ಆಲೋಚಿಸತೊಡಗಿದನು. ಆಗ ಆತನಿಗೆ ಗೋಪಾಲನು ತನ್ನ ಜೊತೆಯಲ್ಲಿ ಛತ್ರವನ್ನು ಹಿಡಿದುಕೊಂಡೇ ಕೋಟೆಯ ಬಾಗಿಲಿನವರೆಗೂ ಓಡಿ ಬಂದಿದ್ದಾನೆಂದೂ, ಯುದ್ಧ ವಿರಮಣದ ಮೇಲೆಯೇ

ಧ್ಯಾನವಿದ್ದ ತಾನು ಇದನ್ನು ಗಮನಿಸಲಿಲ್ಲವೆಂದೂ, ಅದುದರಿಂದಲೇ ಗೋಪಾಲನಿಗೆ ನೀನು ನನ್ನ ಜೊತೆಯಲ್ಲಿ ಬರಬೇಕಾಗಿಲ್ಲವೆಂದು ಅಪ್ಪಣೆ ಕೊಡಲಿಲ್ಲವೆಂದೂ ತಿಳಿಯಿತು. ಆದರೆ ಇದು ಆತನಿಗೆ ನಂಬಲ ಸಾಧ್ಯವಾದಷ್ಟು ಆಶ್ಚರ್ಯಕರವಾಗಿತ್ತು. ಹಾಗೆಯೇ ಆತನು ಗೋಪಾಲನ ರಾಜಭಕ್ತಿಯನ್ನೂ ಆತನ ಅಮಾನುಷ ಶಕ್ತಿಯನ್ನೂ, ಮೆಚ್ಚಿಕೊಂಡನು. ಯುದ್ಧದ ಆಲೋಚನೆ ತೊಲಗಿದ ಆತನ ಮನಸ್ಸಿನಲ್ಲಿ ಆಶ್ಚರ್ಯಮಿಳಿತವಾದ ಈ ಮೆಚ್ಚುಗೆ ಕೂಡಲೇ ಇಷ್ಟು ದೂರ ಓಡಿ ಬಂದ ಆತನಿಗೆ ಏನಾಯಿತೋ ಎಂಬ ಭಯಕ್ಕೆ ದಾರಿ ಮಾಡಿಕೊಟ್ಟಿತು. ಕೂಡಲೇ ಆತನು ಎದ್ದು ಹೊರಕ್ಕೆ ಬಂದು ರಾಣಿಯನ್ನೂ ಸೇವಕರನ್ನೂ ಕರೆದನು. ಅವರಿಗೆ ವಿಚಾರ ತಿಳಿಸಿ ಸೇವಕರು ಹೋಗಿ ಗೋಪಾಲನೆಲ್ಲಿದ್ದಾನೆ ಹಾಗೂ ಆತನ ಸ್ಥಿತಿಯೇನು ಎಂಬುದನ್ನು ತಿಳಿದುಕೊಂಡು ಬರಬೇಕೆಂದು ಆಜ್ಞೆ ಮಾಡಿದನು; ಪುನಃ ಪುನಃ ರಾಣಿಯೊಡನೆ ಗೋಪಾಲನ ವಿಷಯವನ್ನು ಕುರಿತೇ ಮಾತಾಡಿಕೊಳ್ಳುತ್ತಿದ್ದನು.

ರಾಣಿ—ಪ್ರಭುಗಳೇ ಆಯಾಸದಿಂದ ಗೋಪಾಲನಿಗೇನಾಯಿತೋ ಏನೋ? ಏನು ಗತಿ?

ರುದ್ರ—ಭಯವಿಲ್ಲ, ಶ್ರೀ ರಾಮಚಂದ್ರನು ಕಾಪಾಡುವನು.

ರಾಣಿ—ಆತನು ಪ್ರಾಣಾಪಾಯ ಸ್ಥಿತಿಯಲ್ಲಿದ್ದರೂ ಇರಬಹುದು. ಹಾಗಾದರೆ ಒಳ್ಳೆಯ ವೈದ್ಯರಿಂದ ಕೂಡಲೇ ಚಿಕಿತ್ಸೆ ಮಾಡಿಸಿ ಆತನ ಪ್ರಾಣವನ್ನು ಕಾಪಾಡಬೇಕು.

ರುದ್ರಸಿಂಹನು "ಹೌದು" ಎಂದು ಹೇಳಿ ರಾಜ ವೈದ್ಯರನ್ನು ಕರೆಯಿಸಿದನು. ಅವರನ್ನು ಬಿಸಿಲಿನಲ್ಲಿ ಬಹಳ ದೂರ ಓಡಿ ಬಂದವನಿಗೆ ಆಯಾಸದಿಂದ ಪ್ರಾಣವು ಹೋಗದಂತೆ ಏನು ಚಿಕಿತ್ಸೆಯನ್ನು ಮಾಡಬೇಕು? ಎಂದು ಕೇಳಿದನು.

ಅತಿವೇಗವಾಗಿ ಬಹಳ ದೂರ ಓಡಿದವನ ಎದೆ ಬಹಳ ವೇಗವಾಗಿ ಹೊಡೆದುಕೊಳ್ಳುತ್ತಾ ರಕ್ತವನ್ನು ದೇಹದ ಎಲ್ಲ ಭಾಗಗಳಿಗೂ ಅತಿ ವೇಗವಾಗಿ ಹಂಚುತ್ತಿರುತ್ತೆ. ಅಂತಹವನು ನಿಂತ ಕೂಡಲೇ ಹೃದಯದ ಬಡಿತ ಕಡಿಮೆಯಾಗುವುದಿಲ್ಲ. ವೇಗವಾಗಿ ಹರಿಯುವ ರಕ್ತವೆಲ್ಲವೂ ತಲೆಗೇರಿ ಮೆದುಳಿಗೆ ಅಪಾಯವುಂಟಾಗಿ ಪ್ರಜ್ಞೆ ತಪ್ಪಿ ಬೀಳುವುದೂ, ಪ್ರಾಣ ಹೋಗುವುದೂ

ಸಂಭವಿಸುತ್ತೆ. ಆದುದರಿಂದ ಅಂತಹವನಿಗೆ ಕೂಡಲೆ ತಲೆಯಲ್ಲಿ ಗಾಯಮಾಡಿ ಸ್ವಲ್ಪ ರಕ್ತ ಸುರಿದು ಹೋಗುವಂತೆ ಮಾಡಬೇಕು. ಇದರಿಂದ ಅವನ ಮಿದುಳಿಗೂ ಪ್ರಾಣಕ್ಕೂ ಅಪಾಯವಿರುವುದಿಲ್ಲ. ಆತನಿಗೆ ಹೊಟ್ಟೆಯಲ್ಲೇನೂ ಇರುವುದಿಲ್ಲವಾದುದರಿಂದ ಅವನು ಶಕ್ತಿ-ಹೀನವಾಗಿ ಪ್ರಾಣಬಿಡುವುದನ್ನು ತಪ್ಪಿಸಲು ಕೂಡಲೇ ಗಟ್ಟಿಯಾದ ತಿಂಡಿಯನ್ನು ತಿನ್ನಿಸಬೇಕು. ಇದಾದಮೇಲೆ ಆತನಿಗೆ ನಿದ್ರೆ ಹತ್ತುವುದು. ಆಗ ಆತನನ್ನು ಮಲಗಿಸಬೇಕು, ಕಾಲುಗಳು ದೇಹದ ಉಳಿದ ಭಾಗಗಳಿಗಿಂತ ಎತ್ತರದಲ್ಲಿರುವಂತೆ ಮಲಗಿಸಬೇಕು. ಚೆನ್ನಾಗಿ ನಿದ್ರೆ ಹೋಗಿ ಎಚ್ಚರವಾಗುವಷ್ಟು ಹೊತ್ತಿಗೆ ಆಯಾಸವೆಲ್ಲ ಪರಿಹಾರವಾಗಿರುತ್ತದೆ. ಆಮೇಲೆಯೂ ಕೈಕಾಲುಗಳ ನೋವು, ನಿಶ್ಶಕ್ತಿಯೂ ಇದ್ದಲ್ಲಿ ವಿಶ್ರಾಂತಿಯಿಂದಲೂ ರಸಾಯನಗಳ ಸೇವನೆಯಿಂದಲೂ ನಿಧಾನವಾಗಿ ಶಕ್ತಿ ಬರುವಂತೆ ಮಾಡಬೇಕು" ಎಂದು ವೈದ್ಯರು ಹೇಳಿದರು.

ಹೀಗೆಯೇ ಮಾತಾಡುತ್ತ ಕೊಂಚ ಕಾಲ ಕಳೆಯಿತು. ಆಮೇಲೆ ಗೋಪಾಲನು ಇತರ ಸೇವಕರ ಜೊತೆಯಲ್ಲಿ ಛತ್ರವನ್ನು ಹಿಡಿದುಕೊಂಡು ಬಂದು ಮಹಾರಾಜನಿಗೆ ನಮಸ್ಕರಿಸಿದನು. ರುದ್ರಸಿಂಹನಿಗೆ ಬಹಳ ಸಂತೋಷವೂ ಆಶ್ಚರ್ಯವೂ ಉಂಟಾಯಿತು.

ರುದ್ರ—ಗೋಪಾಲಾ, ನಿನ್ನ ದೇಹಸ್ಥಿತಿ ಹೇಗಿದೆ? ನಿನಗೆ ನನ್ನ ಜೊತೆಯಲ್ಲಿ ಓಡಿ ಬಂದಿರುವುದರಿಂದ ಬಹಳ ಆಯಾಸವಾಗಿರಬೇಕು. ಈಗ ನಿಶ್ಶಕ್ತಿಯಿದ್ದರೆ ನಿಂತು ಕೊಳ್ಳಬೇಡ ಕುಳಿತುಕೋ. ಆಯಾಸ ಪಡಬೇಡ. ರಾಜವೈದ್ಯರಿಗೆ ತೋರಿಸಿ ಅವರಿಂದ ಚಿಕಿತ್ಸೆ ಪಡೆದುಕೋ.

ಗೋಪಾ—ತಮ್ಮ ಅನುಗ್ರಹದಿಂದ ತಮ್ಮ ಸೇವೆಯಲ್ಲಿ ನನಗೆ ಚ್ಯುತಿ ಬರಲಿಲ್ಲ. ದೇವರು ತಾವು ಕೋಟೆಯ ಪೂರ್ವದ ಬಾಗಿಲು ತಲುಪುವವರೆಗೂ ನಾನು ತಮ್ಮ ಸೇವೆ ಮಾಡುವಷ್ಟು ಶಕ್ತಿಯನ್ನು ನನಗೆ ಕೊಟ್ಟ. ನನಗೆ ಈಗ ಆಯಾಸವೇನೂ ಇಲ್ಲ. ಚಿಕಿತ್ಸೆ ಬೇಕಾಗಿಲ್ಲ.

ಒಬ್ಬ ಸೇವಕ "ತಲೆಯಲ್ಲಿ ಗಾಯವಾಗಿದೆಯಲ್ಲಾ. ಅದಕ್ಕೆ ವೈದ್ಯರಿಂದ ಚಿಕಿತ್ಸೆ ಮಾಡಿಸಿಕೋ" ಎಂದು ಸಲಹೆಯಿತ್ತ.

ಇದನ್ನು ಕೇಳಿ ರುದ್ರಸಿಂಹನು ಕುತೂಹಲದಿಂದ "ತಲೆಯಲ್ಲಿ ಏಕೆ ಗಾಯ

ವಾಯಿತು ? ನೀನು ಕೋಟೆಯ ಪೂರ್ವದ ಬಾಗಿಲಿನಲ್ಲಿ ನನ್ನನ್ನು ಬಿಟ್ಟು ಎಲ್ಲಿಗೆ ಹೋದೆ ? ಏನು ನಡೆಯಿತು. ಇವರಿಗೆ ಎಲ್ಲಿ ಸಿಕ್ಕಿದೆ ?" ಎಂದು ಕೇಳಿದನು.

ಗೋಪಾಲ—ಬಿಸಿಲಿನಲ್ಲಿ ಒಂದೇ ಹಠದಿಂದ ಬಹುದೂರ ವೇಗವಾಗಿ ಓಡಿ ಬಂದುದ್ದರಿಂದ ನನಗೆ ಬಹಳ ಆಯಾಸವಾಯಿತು. ಕೋಟೆಯ ಬಾಗಿಲಿಂದ ಮನೆಗೆ ಹೋಗುವಷ್ಟು ಶಕ್ತಿಯೂ ಇರಲಿಲ್ಲ. ಎಲ್ಲಿ ಬಿದ್ದು ಬಿಡುವೆನೋ ಎನ್ನಿಸಿತು. ಆದರೂ ಹಾಗೆಯೇ ಧೈರ್ಯ ಮಾಡಿ ಪಕ್ಕದಲ್ಲಿದ್ದ ವಿಘ್ನೇಶ್ವರನ ಗುಡಿಯಲ್ಲಿ ಪ್ರವೇಶಿಸಿದೆ. ಇದರಿಂದ ಸ್ವಲ್ಪ ನೆರಳು ಸಿಕ್ಕಿತು. ಗುಡಿಯ ಬಾಗಿಲು ತೀರಾ ಕೆಳಕ್ಕೆ ಇರುವುದರಿಂದ ಅದರೊಳಗೆ ಪ್ರವೇಶಿಸುವಾಗ ತಲೆ ತಗುಲಿ ಗಾಯವಾಗಿ ರಕ್ತ ಸುರಿಯಿತು.

ರುದ್ರ—ಆಶ್ಚರ್ಯ. ಆಮೇಲೆ ಏನಾಯಿತು ?

ಗೋಪಾ—ರಕ್ತ ಸುರಿಯುತ್ತಿದ್ದರೂ ಅದನ್ನೊರಿಸಿಕೊಳ್ಳುವ ಪ್ರಯತ್ನವೇ ನಾನು ಮಾಡಲಿಲ್ಲ. ನನಗೆ ರಾಕ್ಷಸನ ಹಸಿವೆಯಾಗಿತ್ತು. ದೇವರ ಎದುರಿನಲ್ಲಿ ತಂಬಿಟ್ಟಿತ್ತು. ಅದನ್ನು ತಿಂದೆ. ಪಾನಕವಿತ್ತು. ಕುಡಿದೆ. ನಿದ್ದೆ ಹತ್ತಿತು. ಮಲಗಿಬಿಟ್ಟೆ. ಈ ನನ್ನ ಗೆಳೆಯರು ಬಂದು ಎಬ್ಬಿಸಿದಾಗಲೇ ನನಗೆ ಎಚ್ಚರವಾಯಿತು.

ರುದ್ರ—ಬಹಳ ಆಶ್ಚರ್ಯ ಶ್ರೀರಾಮಚಂದ್ರನ ಕೃಪೆಯಿಂದ ನಿನಗೆ ಚಿಕಿತ್ಸೆ ತಾನಾಗಿಯೇ ಲಭಿಸಿತು. ನೀನು ದೈವಭಕ್ತಿ, ರಾಜಭಕ್ತಿ ಉಳ್ಳ ಸತ್ಪುರುಷನು, ಮನುಷ್ಯರಿಗೆ ಮೀರಿದ ಶಕ್ತಿಯುಳ್ಳವನು.

ಗೋಪಾಲ—ನಾನು ಮಾಡಿದ್ದೇನಿಲ್ಲ ಪ್ರಭುಗಳೇ, ನನ್ನ ಕರ್ತವ್ಯವನ್ನು ನಾನು ಮಾಡಿದೆ.

ರುದ್ರ—ನಿನ್ನ ಕರ್ತವ್ಯದಿಂದಲೇ ನನ್ನ ಪ್ರಾಣ ಉಳಿಯಿತು. ನನಗೆ ತಲೆನೋವಿನ ಖಾಯಿಲೆ ಬಂದಲಾಗಾಯಿತು ತಲೆಗೆ ಬಿಸಿಲು ತಗುಲಬಾರದೆಂದು ವೈದ್ಯರು ಹಿಂದೆಯೇ ಹೇಳಿದ್ದರಲ್ಲಾ. ಬಿಸಿಲಿನಲ್ಲಿ ನಾನು ಛತ್ರವಿಲ್ಲದೆ ಬಂದಿದ್ದರೆ ನನ್ನ ಗತಿ ಏನಾಗುತ್ತಿತ್ತೋ ?.

ಗೋಪಾಲ—ತನ್ನ ಪ್ರಾಣವನ್ನಾದರೂ ಕೊಟ್ಟು ಸ್ವಾಮಿಯ ಪ್ರಾಣ ಕಾಪಾಡುವುದು ಸೇವಕನ ಧರ್ಮ.

ಹೀಗೆ ಮಾತಾಡುತ್ತಿರುವಲ್ಲಿ ವೈದ್ಯನೊಬ್ಬನು ಕೇಳಿದ. "ನೀನು ಮಲಗಿದಾಗ ಹೇಗೆ ಮಲಗಿದ್ದೆ. ಕಾಲುಗಳೆಲ್ಲಿಟ್ಟುಕೊಂಡಿದ್ದೆ?

ಗೋಪಾಲ—ವಿಘ್ನೇಶ್ವರನ ಗುಡಿ ಬಹಳ ಚಿಕ್ಕದು. ಅದರ ಅಗಲ ನನ್ನ ಎತ್ತರವಷ್ಟಿಲ್ಲ. ಆದುದರಿಂದ ತಲೆಯನ್ನು ನೆಲದಮೇಲಿಟ್ಟುಕೊಂಡು ಕಾಲುಗಳನ್ನು ಗೋಡೆಗೆ ಸೇರಿಸಿ ಮಲಗಿದ್ದೆ.

ರುದ್ರ—ಇದೇನಾಶ್ಚರ್ಯ ಗೋ ಪಾ ಲಾ. ನೀನು ನಿಜವಾಗಿಯೂ ಶ್ರೀರಾಮನ ಕೃಪೆಗೆ ಪಾತ್ರನಾದವನು. ಆತನ ಕೃಪೆಯಿಲ್ಲದಿದ್ದರೆ ನೀನು ಉಳಿಯುತ್ತಿರಲಿಲ್ಲ. ನನಗಾಗಿ ನೀನು ಪ್ರಾಣದ ಮೇಲೆ ಆಸೆ ಬಿಟ್ಟು ಅಮಾನುಷ ಶಕ್ತಿಯಿಂದ ಎಂತಹ ಸಾಹಸವನ್ನು ಮಾಡಿದೆ? ಪ್ರಪಂಚದಲ್ಲಿ ಯಾರಾದರೂ, ಎಂದಾದರೂ ಕುದುರೆಯ ಸಮನಾಗಿ ಇಷ್ಟು ದೂರ ಓಡಿರುವರೇ? ನನಗೆ ಬಹಳ ಸಂತೋಷವಾಗಿದೆ. ಅಲ್ಲ. ನಾನು ನಿನಗೆ ಋಣಿಯಾಗಿದ್ದೇನೆ. ನಿನಗೇನು ಬೇಕು ಕೇಳು. ತಪ್ಪದೆ ಕೊಡುವೆನು.

ಗೋಪಾಲ—ಸ್ವಾಮೀ, ತಮ್ಮ ಕೃಪೆ ಒಂದಿದ್ದರೆ ಸಾಕು. ನನಗಿನ್ನೇನು ಬೇಕು?

ರುದ್ರ—ಇಲ್ಲ, ಗೋಪಾಲಾ, ನನ್ನ ಕರ್ತವ್ಯ ನಾನು ಮಾಡಲೇ ಬೇಕು. ನನ್ನ ಋಣ ನಾನು ತೀರಿಸಲೇ ಬೇಕು. ನೀನೇನಾದರೂ ಕೇಳಲೇ ಬೇಕು.

ಗೋಪಾಲ—ಪ್ರಭುಗಳೇ, ನಾನು ಕೋರಲೇಬೇಕಾದರೆ ನನಗಿರುವ ಕೋರಿಕೆ ಒಂದೇ ಒಂದು. ಆದರೆ ಅದು ಬಹಳ ದೊಡ್ಡದು. ತಾವು ಒಪ್ಪುವಂತಹದಲ್ಲ.

ರುದ್ರ—ನೀನು ಯಾವ ಕೋರಿಕೆಯನ್ನು ಕೋರಿದರೂ ನಾನು ಕೊಡುತ್ತೇನೆ. ಪ್ರಾಣ ಕೊಡಲು ಮುಂದೆ ಬಂದವನಿಗೆ ಪ್ರಾಣ ಕೊಡಲು ಮುಂದೆ ಬರುವುದು ಮಾನವನ ಧರ್ಮ – ಈ ಧರ್ಮವನ್ನು ನಾನು ಪರಿಪಾಲಿಸಬೇಡವೇ? ನಿನಗೇನು ಬೇಕು? ಕೇಳು. ನಾನು ಸತ್ಯವಾಕ್ಯಪರಿಪಾಲಕ. ಕೊಡುತ್ತೇನೆಂದು ಹೇಳಿದ ಮೇಲೆ ತಪ್ಪದೆ ಕೊಡುತ್ತೇನೆ.

ಗೋಪಾಲ—ಪ್ರಭುಗಳೇ ಅನ್ಯಥಾ ಭಾವಿಸಬೇಡಿ. ನಾನು ಸ್ವಾರ್ಥದಿಂದ ಕೇಳುತ್ತಿಲ್ಲ. ಒಂದು ಒಳ್ಳೆಯ ಉದ್ದೇಶದಿಂದ ಕೇಳುತ್ತಿದ್ದೇನೆ. ತಮಗೆ ಅಸಮಾಧಾನವಿಲ್ಲದಿದ್ದರೆ ಮೂರೂಮುಕ್ಕಾಲು ಗಳಿಗೆಗಳ ಕಾಲ ನನ್ನನ್ನು

ಘನಗಿರಿ ದೇಶದ ರಾಜನನ್ನಾಗಿ ಮಾಡಿ. ಕೇವಲ ಮೂರುಮುಕ್ಕಾಲು ಗಳಿಗೆ ಕಾಲ. ತಮಗೆ ಮನಸ್ಸಿಗೆ ಸಮಾಧಾನವಿಲ್ಲದಿದ್ದರೆ ಬೇಡ. ನನಗಾಗಿ ಬೇರೆ ಯಾವ ಕೋರಿಕೆಯೂ ನನಗಿಲ್ಲ.

ರುದ್ರಸಿಂಹನು ಸ್ವಲ್ಪ ಚಕಿತನಾದರೂ ಈ ಕೋರಿಕೆಯನ್ನು ಧೀರತೆಯಿಂದ ಗ್ರಹಿಸಿದ. ಸುಮ್ಮನೆ ರಾಣಿಯ ಮುಖವನ್ನು ನೋಡಿದ.

ಸ್ವಲ್ಪ ಸುಮ್ಮನಿದ್ದು ರಾಣಿ ಹೇಳಿದಳು. "ಪ್ರಭುಗಳೇ, ತಮಗೆ ಇಂತಹ ಸತ್ಪುರುಷನೂ ವೀರನೂ ಆದ ಮಗನು ಇದ್ದು ಆತನು ಈ ಕೋರಿಕೆಯನ್ನು ಕೇಳಿದ್ದರೆ ತಾವೇನು ಮಾಡುತ್ತಿದ್ದಿರಿ ?"

ರುದ್ರ—ಭೇಷ್, ನಿನ್ನ ಉದಾರತೆಯನ್ನು ಮೆಚ್ಚಿಕೊಂಡಿದ್ದೇನೆ ರಾಣೀ. ಇಂತಹ ಹೆಂಡತಿಯಿರುವ ನಾನೇ ಧನ್ಯ. ಗೋಪಾಲಾ. ನಿನ್ನ ಕೋರಿಕೆಯಂತೆಯೇ ಆಗಲಿ. ಪ್ರಧಾನಿಗಳನ್ನು ಕರೆಸಿ. ಈಗಲೇ ನಮ್ಮ ಗೋಪಾಲನನ್ನು ಭೂಪಾಲನನ್ನಾಗಿ ಮಾಡೋಣ.

ಅಲ್ಲಿದ್ದ ಪರಿಜನರೂ ವೈದ್ಯರೂ ಬೆರಗಾಗಿ ಬಿಟ್ಟರು ಎಂದಾದರೂ ಇಂತಹ ಕೋರಿಕೆ ಕೋರುವುದೂ, ಕೊಡುವುದೂ ಉಂಟೇ, ಎಂದು. ಕೂಡಲೇ ಪ್ರಧಾನಿ ಬಂದನು. ಮಹಾರಾಜನೇ ಆತನಿಗೆ ಎಲ್ಲ ವಿಷಯವನ್ನೂ ತಿಳಿಸಿದನು. ಗೋಪಾಲನ ಕೋರಿಕೆ ಈಡೇರಿಸುವುದಕ್ಕೆ ಕೂಡಲೇ ಏರ್ಪಾಟು ಮಾಡಬೇಕೆಂದೂ, ಗೋಪಾಲನ ಪಟ್ಟಾಭಿಷೇಕವು ಬಹಳ ವಿಜೃಂಭಣೆಯಿಂದ ನಡೆಯಬೇಕೆಂದೂ ಆಜ್ಞೆ ಮಾಡಿದನು.

## ೩೫

ಗೋಪಾಲನ ಪಟ್ಟಾಭಿಷೇಕವು ಕೂಡಲೇ ನಡೆಯುವುದೆಂದು ಪಟ್ಟಣದಲ್ಲೆಲ್ಲಾ ಡಂಗುರ ಬಾರಿಸಿದರು. ಈ ಶಬ್ದವನ್ನು ಪ್ರತಿಸ್ಪರ್ಧಿಸುವಂತೆ ಆಕಾಶದಲ್ಲಿ ಗುಡುಗು ಕೇಳಿಸಿತು. ಒಂದರಿಂದ ಜನರಿಗೆ ಆಶ್ಚರ್ಯವೂ ಇನ್ನೊಂದರಿಂದ ಸಂತೋಷವೂ ಮೂಡಿತು. ಎಲ್ಲರೂ ಅರಮನೆಯ ಕಡೆ ನಡೆಯತೊಡಗಿದರು. ಪಟ್ಟಾಭಿಷೇಕದ ವಿಷಯವನ್ನು ಮೊದಲೇ ಅರಿತ ಛಲಚಲನು ರಾಮಕ್ಕನಿಗೆ ಈ ವಿಷಯವನ್ನು ತಿಳಿಸಿ ಅಲ್ಲಿಂದ ಓಡಿಹೋಗಿ ಭಾಗ್ಯಲಕ್ಷ್ಮಿಗೂ, ರಂಗಯ್ಯ

ನಿಗೂ, ಆಶ್ರಮ ವಾಸಿಗಳಿಗೂ ತಿಳಿಸಿದನು. ಆ ವೇಳೆಯಲ್ಲಿ ಕಮಲಮ್ಮ ರಾಮಕ್ಕನ ಮನೆಯಲ್ಲೇ ಇದ್ದಳು.

ರಾಮಕ್ಕನಿಗೆ ಈ ವಾರ್ತೆಯನ್ನು ಕೇಳಿ ಆಶ್ಚರ್ಯದೊಂದಿಗೆ ಸಂತೋಷವೂ ಸ್ವಲ್ಪ ಭಯವೂ ಆಯಿತು. ಅವಳು ಕಮಲಮ್ಮನಿಗೆ "ನೋಡು ಕಮಲಾ ಗೋಪಾಲನು ಎಂದೂ ಏನೂ ಕೋರದಿರುವವನು ಇಂತಹ ದೊಡ್ಡ ಕೋರಿಕೆಯನ್ನು ಕೋರಿದನಲ್ಲಾ; ಯಾವ ಕಾರಣವಿರಬಹುದು? ಆತನಿಗೆ ರಾಜನಾಗಬೇಕೆಂಬ ಆಸೆ ಏನಾದರೂ ಇತ್ತೆ ? ಅದು ಇಲ್ಲವೆಂದೇ ಕಾಣುತ್ತೆ. ಯಾವುದೋ ಒಂದು ಒಳ್ಳೆಯ ಉದ್ದೇಶದಿಂದಲೇ ಈ ವರವನ್ನು ಕೇಳಿರಬೇಕು. ಈಗ ಒಳ್ಳೆಯ ಉದ್ದೇಶವಿದ್ದರೂ ರಾಜನಾದ ಮರುಘಳಿಗೆಯಲ್ಲೇ ಆಸೆ ಹುಟ್ಟಿದರೆ ಏನು ಗತಿ? ಐಶ್ವರ್ಯವು ಎಂತಹವರನ್ನೂ ಮೋಹ ಗೊಳಿಸುತ್ತದೆ." ಎಂದಳು. ಕಮಲಮ್ಮ "ಆ ವಿಷಯದಲ್ಲಿ ನೀವು ಯಾವ ಸಂದೇಹವನ್ನೂ ಇಟ್ಟು ಕೊಳ್ಳಬೇಡಿ. ನನಗೆ ಆತನ ಮನಸ್ಸು ಚೆನ್ನಾಗಿ ಗೊತ್ತು. ಆತನು ಎಂತಹ ಐಶ್ವರ್ಯ ಬಂದರೂ ಹಿಗ್ಗುವುದಿಲ್ಲ. ಮೋಹವನ್ನು ಹೊಂದುವುದಿಲ್ಲ. ಎಂತಹ ಕಷ್ಟ ಬಂದರೂ ಅಧೈರ್ಯ ಪಡುವುದಿಲ್ಲ. ನಾವಿಬ್ಬರೂ ಕೂಡಲೇ ಅರಮನೆಗೆ ಹೋಗಿ ನೋಡೋಣ ಬಾ." ಎಂದು ಹೇಳಿ ರಾಮಕ್ಕನನ್ನು ಕರೆದುಕೊಂಡು ಹೊರಟಳು.

ಭಾಗ್ಯಲಕ್ಷ್ಮಿಗೂ ಈ ವಾರ್ತೆ ಬಹಳ ಆಶ್ಚರ್ಯವನ್ನುಂಟುಮಾಡಿತು. ಅವಳ ಮನಸ್ಸು ಮೊದಲು ಗೋಪಾಲನ ಅದೃಷ್ಟವನ್ನು ಮೆಚ್ಚಿಕೊಂಡರೂ ಅವಳಿಗೂ ಸ್ವಲ್ಪ ಹೆದರಿಕೆಯಾಯಿತು. ಮೂರು ಮುಕ್ಕಾಲು ಗಳಿಗೆ ರಾಜ್ಯ ಮಾಡುವುದರಲ್ಲಿ ಎಂತಹ ಧೀರನಿಗಾದರೂ, ಸಂಯಮಿಗಾದರೂ ಎಂತಹ ಆಸೆಯಾದರೂ ಹುಟ್ಟಬಹುದು. ಎಂತಹ ಆಸೆಯನ್ನಾದರೂ ತೀರಿಸಿಕೊಳ್ಳುವುದು ಸಾಧ್ಯವೂ ಆಗಿರುವುದು. ಯಾವ ಉದ್ದೇಶದಿಂದ ಈ ವರವನ್ನು ಕೇಳಿದನೋ ಅವಳಿಗೂ ಸ್ಫುರಿಸಲಿಲ್ಲ. ಅವಳ ಮನಸ್ಸಿನಲ್ಲಿ "ಗೋಪಾಲನು ಆ ದಿನ ಹೇಳಿದ್ದನಲ್ಲಾ. ಸಮಯ ಬಂದಾಗ ನಾನು ನಿನ್ನನ್ನು ಮದುವೆ ಮಾಡಿಕೊಳ್ಳುವುದು ಇಲ್ಲದಿರುವುದು ತಿಳಿಸುತ್ತೇನೆಂದು. ಬಹುಶಃ ಆತನಿಗೆ ನನ್ನನ್ನು ಮದುವೆ ಮಾಡಿಕೊಳ್ಳುವುದು ಮನಸ್ಸಿನಲ್ಲಿ ಇಷ್ಟವಿರಬಹುದು. ಅದನ್ನು ಈಡೇರಿಸಿಕೊಳ್ಳುವುದಕ್ಕೇ ಈ ಅವಕಾಶವನ್ನು ಹೀಗೆ ಉಪಯೋಗಿಸಿಕೊಂಡಿರ

ಬಹುದು. ನನ್ನ ಮೇಲೆ ಇಷ್ಟವಿಲ್ಲದಿದ್ದರೆ ಮೊದಲೇ ಹೇಳಿಬಿಡುತ್ತಿದ್ದ. ಈಗ ನನ್ನ ಅದೃಷ್ಟ ಹೇಗಿದೆಯೋ." ಎಂಬ ಅನೇಕ ಭಾವಗಳು ಹುಟ್ಟಿ ಅವಳಿಗೆ ಬಂದು ಮಧುರಾನುಭವವನ್ನುಂಟು ಮಾಡಿದವು. ಆದರೆ ಸ್ವಲ್ಪ ಆಲೋಚನೆ ಮಾಡಿದ ಮೇಲೆ ಒಂದು ವೇಳೆ ಗೋಪಾಲನು ದೇಶದ ಒಂದು ಭಾಗಕ್ಕೆ ತನ್ನನ್ನು ಒಡೆಯನನ್ನಾಗಿ ಮಾಡಿಕೊಂಡರೆ ನನ್ನನ್ನು ವರಿಸುವನೇ ?" ಎಂಬ ಸಂಶಯವೂ ತಲೆದೋರಿತು. ಹೀಗೆಯೇ ಭಾವ ಶಬಲತೆಯಿಂದ ಕೂಡಿ ಅವಳೂ ಅರಮನೆಗೆ ತೆರಳಿದಳು.

ಸೂರ್ಯಾಸ್ತಮಯಕ್ಕೆ ಸುಮಾರು ಐದು ಗಳಿಗೆಗಳಿದ್ದವು. ಆ ವೇಳೆಗೆ ಸರಿಯಾಗಿ ರಾಜನ ಆಸ್ಥಾನದಲ್ಲಿ ಸೇರಬೇಕಾದವರೆಲ್ಲ ಸೇರಿದರು. ಇನ್ನೂ ಬರುವವರು ಬರುತ್ತಲೇ ಇದ್ದರು. ಮಹಾರಾಜನು ಸಿಂಹಾಸನದ ಮೇಲೆ ಕುಳಿತಿದ್ದನು. ಗೋಪಾಲನು ಆತನಿಗೆ ಛತ್ರವನ್ನು ಹಿಡಿದಿದ್ದನು. ಗೋಪಾಲನಿಗೆ ಅಷ್ಟು ಹೊತ್ತಿಗಾಗಲೇ ಕಿರೀಟವನ್ನು ಬಿಟ್ಟು ಉಳಿದ ರಾಜಯೋಗ್ಯವಾದ ಉಡುಪುಗಳನ್ನೂ ಆಭರಣಗಳನ್ನೂ ತೊಡಿಸಿದ್ದರು. ಇವುಗಳಿಂದ ಆತನು ಛತ್ರವನ್ನು ಹಿಡಿದಿದ್ದರೂ ಲೀಲಾರೂಪನಾದ ಒಬ್ಬ ಮಹಾಪುರುಷನಂತೆ ಎಲ್ಲರಿಗೂ ಕಾಣುತ್ತಿದ್ದನು. ಜ್ಯೋತಿಷಿಕರು ಮೂರು ಮುಕ್ಕಾಲುಗಳಿಗೆಯ ಕಾಲವನ್ನಳಿಯುವ ಘಟಿ ಯಂತ್ರವನ್ನು ಸಿದ್ಧವಾಗಿಟ್ಟು ಕೊಂಡು ಕಾದಿದ್ದರು. ಪ್ರಧಾನಿ ಸಭ್ಯರಿಗೆಲ್ಲರಿಗೂ ನಡೆದ ಸಂಗತಿಯನ್ನು ವಿವರಿಸಿದನು. ಎಲ್ಲರೂ ಗೋಪಾಲನ ಸ್ವಾಮಿ ಭಕ್ತಿಯನ್ನೂ, ಶಕ್ತಿಯನ್ನೂ, ಸಾಹಸವನ್ನೂ, ಮಹಾರಾಜರ ಔದಾರ್ಯವನ್ನೂ, ಸತ್ಯ ನಿಷ್ಠೆಯನ್ನೂ ಮೆಚ್ಚಿಕೊಂಡು ಇಬ್ಬರನ್ನೂ ಜಯಕಾರ ಪೂರ್ವಕವಾಗಿ ಅಭಿನಂದಿಸಿದರು. ಕೂಡಲೇ ಮಹಾರಾಜನು ಸಿಂಹಾಸನದಿಂದ ಎದ್ದು ಪಕ್ಕದಲ್ಲಿ ತನಗಾಗಿ ಏರ್ಪಾಟು ಮಾಡಿದ್ದ ಒಂದು ಆಸನದ ಮೇಲೆ ಕುಳಿತುಕೊಂಡನು. ಮಹಾರಾಜರ ಅಪ್ಪಣೆಯಂತೆ ಪ್ರಧಾನಿ ಗೋಪಾಲನನ್ನು ಸಿಂಹಾಸನದ ಮೇಲೆ ಕುಳಿತುಕೊಳ್ಳಬೇಕೆಂದು ಸ್ವಾಗತಿಸಿದನು. ನಿರ್ವಿಕಾರ ಗಂಭೀರ ಹಸನ್ಮುಖನಾದ ಗೋಪಾಲನು ಗಜಗಮನದಿಂದ ಬಂದು ಸಿಂಹಾಸನವನ್ನಲಂಕರಿಸಿದನು. ರುದ್ರಸಿಂಹನು ತನ್ನ ಕಿರೀಟವನ್ನು ತೆಗೆದು ತಾನೇ ಗೋಪಾಲನ ತಲೆಯ ಮೇಲಿಟ್ಟು ಆತನಿಗೆ ತನ್ನ ಕತ್ತಿಯನ್ನೂ ಮುದ್ರೆಯನ್ನೂ ಅರ್ಪಿಸಿದನು. ಆ ವೇಳೆಗೆ ಸರಿಯಾಗಿ ಜಯ ಜಯ ಘೋಷವೂ

ಮಂಗಳ ವಾದ್ಯಗಳ ಘೋಷವೂ ಬೆರೆತು ಕೇಳಿಬಂದವು. ರಾಮಕ್ಕನ ಕಣ್ಣು ಗಳಿಂದ ಆನಂದ ಬಾಷ್ಪಗಳು ಸುರಿದವು. ಕಮಲಮ್ಮ, ಭಾಗ್ಯಲಕ್ಷ್ಮಿ, ರಂಗಯ್ಯ, ಕುಮಾರ, ಫಲಚ್ಛಲ ಮುಂತಾದ ಅನೇಕರು ಹರ್ಷ ಪುಲಕಿತ ರಾದರು. ಹೊರಗಡೆ ಸುವೃಷ್ಟಿಯಾಗುತ್ತಿತ್ತು. ಮಹಾರಾಜನ ಆನಂದಕ್ಕೆ ಮಿತಿಯೇ ಇರಲಿಲ್ಲ.

ಗೋಪಾಲನು ಕೂಡಲೇ ಶಾಸನಗಳನ್ನು ಬರೆಯುವವರನ್ನು ಕುರಿತು ತನ್ನ ಶಾಸನಗಳನ್ನು ಬರೆಯಬೇಕೆಂದು ಆಜ್ಞೆ ಮಾಡಿದನು. ಅವರು ಸಿದ್ಧ ರಾದರು. ಗೋಪಾಲನು ನಾನಾ ವಿದ್ಯೆಗಳಲ್ಲಿ ನಿಷ್ಠೆಯುಳ್ಳ ನಿರ್ಗತಿಕರಾದ ದೇಶದಾದ್ಯಂತವಿರುವ ಅನೇಕ ಪಂಡಿತರಿಗೂ, ವಿದ್ವಾಂಸರಿಗೂ, ಕಳಾಕಾರರಿಗೂ, ಸ್ತ್ರೀಪುರುಷರೆಲ್ಲರಿಗೂ ಆಚಂದ್ರಾರ್ಕವಾಗಿರಬೇಕೆಂದು ಹೇಳಿ ಅವರವರ ವಿದ್ಯೆಗಳ ಪೋಷಣೆಯಿಂದ ಲೋಕೋಪಕಾರ ಮಾಡುವ ಸಲುವಾಗಿ ಅನೇಕ ಮಾನ್ಯ ಗಳನ್ನು ಕೊಟ್ಟನು. ಆತನಿಗೆ ಆ ಪಂಡಿತರ, ವಿದ್ವಾಂಸರ, ಕಲಾವಿದರ ಹೆಸರುಗಳೂ ತಂದೆಯವರ ಹೆಸರುಗಳೂ, ಅವರ ವಾಸಸ್ಥಾನಗಳೂ ಇತ್ಯಾದಿ ಎಲ್ಲ ವಿಷಯಗಳೂ ನೆನಪಿನಲ್ಲೇ ಇದ್ದವು. ಮಾನ್ಯಗಳಾಗಿ ಕೊಡಲು ಅನು ಕೂಲವಾದ ಕ್ಷೇತ್ರಗಳು ಎಲ್ಲೆಲ್ಲಿದ್ದವೆಂದೂ ಆ ಕ್ಷೇತ್ರಗಳ ಹೆಸರುಗಳು ಮುಂತಾದ ವಿಲೇವಾರಿ, ಜ್ಞಾಪಕದಲ್ಲಿಯೇ ಇದ್ದವು. ಘಟ ಯಂತ್ರ ವಾಹ ಕರು ಕಾಲವೆಷ್ಟೆಷ್ಟು ಕಳೆಯಿತೆಂದು ಆಗಿಂದಾಗ್ಗೆ ಹೇಳುತ್ತಲೇ ಇದ್ದರು.

ಮಾನ್ಯಗಳ ದಾನವು ರಾಮಕ್ಕ, ಕಮಲಮ್ಮ, ರಂಗಯ್ಯ ಮುಂತಾದ ಎಲ್ಲರನ್ನೂ ಆನಂದದಲ್ಲಿ ಓಲಾಡಿಸಿತು. ಭಾಗ್ಯಲಕ್ಷ್ಮಿಗೂ ಇದರಿಂದ ಬಹಳ ಸಂತೋಷವಾಯಿತು. ಆದರೆ ಅವಳಿಗೆ ಗೋಪಾಲನು ಇನ್ನೂ ತನ್ನ ವಿಷಯ ವೇನೆಂದು ಸೂಚಿಸಲೇ ಇಲ್ಲವಲ್ಲಾ ಎಂಬ ಆತುರತೆ ಇತ್ತು.

ಮೂರೂ ಮುಕ್ಕಾಲುಗಳಿಗೆ ಮುಗಿಯುವ ಕಾಲ ಬಂತು. ವೇಗ ವೇಗವಾಗಿ ಮಾನ್ಯಗಳ ದತ್ತಿಗಳ ಶಾಸನಗಳನ್ನು ಹೇಳುವುದರಲ್ಲೂ ಬರೆದ ಶಾಸನ ಗಳಿಗೆ ಮುದ್ರೆಯನ್ನು ಒತ್ತುವುದರಲ್ಲೂ ಗೋಪಾಲ ಭೂಪಾಲನು ನಿರತ ನಾಗಿದ್ದನು. ಕಾಲವು ಮುಗಿಯುವ ವೇಳೆಗೆ ಮುಂಚಿತವಾಗಿಯೇ ಹೇಗೋ ಮಾಡಿ ತನ್ನ ಮನಸ್ಸಿನಲ್ಲಿದ್ದ ಎಲ್ಲ ದಾನಗಳನ್ನೂ ಪೂರೈಸಿದನು. ಇನ್ನು ಕೆಲವು ವಿಘಳಿಗೆಗಳು ಇರುವಾಗ್ಗೆ ಕುಮಾರನಿಗೆ ಅವರ ಪೂರ್ವಿಕರ ಮಾನ್ಯವನ್ನು

ಪುನಃ ದಾನವಾಗಿ ಕೊಟ್ಟನು. ಕೊನೆಗೆ ರಂಗಯ್ಯನ ಸಲಹೆಯಿಂದಲೂ ಮತ್ತು ಸಹಾಯದಿಂದಲೂ ಕುಮಾರನು ಪರಿಶೋಧನೆ ಮಾಡಿ ಯುದ್ಧ ನಿಲ್ಲಿಸಲು ಸಮರ್ಥನಾದನೆಂದು ಪ್ರಕಟಿಸಿ ರಂಗಯ್ಯನಿಗೆ, "ಲೋಕೋಪಕಾರಿ ಪ್ರತಿಭ" ನೆಂಬ ಬಿರುದನ್ನು ಕೊಟ್ಟನು. ಕಾಲ ಮುಗಿಯಲು ಬಂದಂತೆಲ್ಲಾ ಭಾಗ್ಯ ಲಕ್ಷ್ಮಿಯ ಆತುರತೆ ಹೆಚ್ಚಿತು. ತನಗಾಗಿ ಕೊನೆಗೆ ಏನು ಶಾಸನ ಮಾಡಿ ಕೊಳ್ಳುವನೋ ಎಂದು. ಆದರೆ ಗೋಪಾಲನು ತನಗಾಗಿ ಯಾವ ಶಾಸನವನ್ನೂ ಮಾಡಲಿಲ್ಲ. ಘಟಿ ಯಂತ್ರದಿಂದ ಹರಿಯುತ್ತಿದ್ದ ನೀರು ನಿಂತ ಕೂಡಲೇ ಸಿಂಹಾಸನದಿಂದೆದ್ದು, ಕಿರೀಟವನ್ನು ತೆಗೆದು ಪ್ರಧಾನಿಯ ಕೈಗೆ ಕೊಟ್ಟನು. ಕತ್ತಿಯನ್ನು ರುದ್ರಸಿಂಹನಿಗೆ ಸಮರ್ಪಿಸಿದನು. ತನ್ನ ಛತ್ರವನ್ನು ಕೈಲಿ ಹಿಡಿದುಕೊಂಡು ಹಿಂದಿನಂತೆ ನಿಂತುಬಿಟ್ಟನು. ಮಹಾರಾಜರಾದಿ ಎಲ್ಲರ ಆಶ್ಚರ್ಯಕ್ಕೂ ಮೇರೆಯೇ ಇರಲಿಲ್ಲ. ಪ್ರಧಾನಿ ಮಹಾರಾಜರನ್ನು ಸಿಂಹಾಸನ ದಲ್ಲಿ ಕುಳ್ಳಿರಿಸಿ ಕಿರೀಟದಿಂದ ಆತನನ್ನು ಅಲಂಕರಿಸಿದನು. ಆತನಿಂದ ಸಭೆಯೂ, ನಾಡೂ ಬೆಳಗಿದವು. ಹೊರಗೆ ಮಳೆ ನಿಂತಿತು. ಭಾಗ್ಯಲಕ್ಷ್ಮಿ ನಿಟ್ಟುಸಿರು ಬಿಟ್ಟು "ಗೋಪಾಲನು ತನ್ನ ಮನಸ್ಸನ್ನು ಈ ರೀತಿಯಾಗಿ ತಿಳಿಸಿಬಿಟ್ಟ" ಎಂದು ಮನಸ್ಸಿನಲ್ಲೇ ಅಂದುಕೊಂಡಳು.

ಮಹಾರಾಜನು ನಿಸ್ವಾರ್ಥಿಯಾದ ಗೋಪಾಲನನ್ನು ಬಹಳ ಪ್ರಶಂಸಿಸಿ ದನು. ವಿದ್ವಾಂಸರ ಪೋಷಣೆ ನಡೆಸದ ತನ್ನ ಲೋಪವನ್ನು ಗೋಪಾಲನು ತೀರಿಸಿದನೆಂದು ಹೇಳಿ ಆತನನ್ನು ಪುನಃ ಅಭಿನಂದಿಸಿದನು. ವಿದ್ವಾಂಸರಿಂದ ಯುದ್ಧವು ನಿಲ್ಲಿಸಲ್ಪಟ್ಟಿತೆಂದು ಹೇಳಿ ವಿದ್ಯೆಗಳಿಗೆ ಜಯವನ್ನು ಕೋರಿದನು. ಗೋಪಾಲನು ಕೊಟ್ಟ ಮಾನ್ಯಗಳು ಶಾಶ್ವತವಾಗಿ ಲೋಕೋಪಕಾರಕ್ಕಾಗಿ ಆಗಲೆಂದು ಹಾರೈಸಿದನು.

ಮಹಾರಾಜನು ಕುಮಾರನನ್ನೂ ರಂಗಯ್ಯನನ್ನೂ ಹತ್ತಿರಕ್ಕೆ ಕರೆಸಿ ಅವರನ್ನು ಬಹಳ ಪ್ರಶಂಸಿಸಿ ಅವರಿಗೆ ತನ್ನ ಮನಸ್ಸಿಗೆ ತೃಪ್ತಿಯಾಗುವಂತೆ ಬಹು ಮಾನ ಮಾಡಿದನು. ಸಭ್ಯರೆಲ್ಲರೂ ರಂಗಯ್ಯನನ್ನೂ ಕುಮಾರನನ್ನೂ ಜಯ ಜಯ ಧ್ವನಿಯಿಂದ ಅಭಿನಂದಿಸಿದರು. ಆ ಜಯ ಘೋಷದಲ್ಲಿ ರಂಗಯ್ಯ ಒಂದು ಸಲ ಭಾಗ್ಯಲಕ್ಷ್ಮಿಯ ಕಡೆ ತಿರುಗಿ ನೋಡಿದನು. ಭಾಗ್ಯಲಕ್ಷ್ಮಿ ನಾಚಿಕೆಯಿಂದ ತಲೆಬಾಗಿಸಿದಳು.

ಸೂರ್ಯಾಸ್ತಮಯವಾಯಿತು. ಮಹಾರಾಜನು ಸಭೆಯನ್ನು ಮುಕ್ತಾಯ ಮಾಡಿ ಗೋಪಾಲನನ್ನು ಮನೆಗೆ ಕಳುಹಿಸಿದನು. ರಾಮಕ್ಕ ಗೋಪಾಲನನ್ನು ತಬ್ಬಿಕೊಂಡಳು.

## ೩೬

ಮಾರನೆಯ ದಿನವೇ ಛಲಚ್ಛಲನು ಗೋಪಾಲನ ಕಥೆಯನ್ನು ಲಾವಣಿಯ ರೂಪದಲ್ಲಿ ರಚಿಸತೊಡಗಿದನು. ಎರಡು ಮೂರು ದಿನಗಳಲ್ಲಿ ರಚನೆ ಪೂರ್ತಿ ಮಾಡಿ ತಾನೇ ಹಾಡಿ ಹಾಡಿ ಕುಣಿದಾಡಿದನು. ರಾಮಕ್ಕನ ಮನೆಯಲ್ಲಿ ಎಲ್ಲರೂ ಅದನ್ನು ಕೇಳಿ ಸಂತೋಷಪಟ್ಟರು. ಇನ್ನೆರಡು ಮೂರು ದಿನಗಳಲ್ಲಿ ವಿಲಾಸಿನಿಗೂ ಅದನ್ನು ಕಲಿಸಿದನು. ಆ ಮೇಲೆ ಇಬ್ಬರೂ ಘನಗಿರಿ ಪಟ್ಟಣದ ಬೀದಿ ಬೀದಿಗಳಲ್ಲೂ ಅದನ್ನು ಹಾಡಿ ಜನರನ್ನು ಸಂತೋಷಗೊಳಿಸಿದರು.

ಆ ವೇಳೆಗೆ ಕಾಳಗಾಪುರದಿಂದ ಸೈನ್ಯ ಹಿಂತಿರುಗಿ ಬಂತು. ಸೈನ್ಯಾಧಿಪತಿ ವೀರಪ್ಪನನ್ನು ನೋಡಿ ಆತನ ಹೆಂಡತಿಯೂ ಭಾಗ್ಯಲಕ್ಷ್ಮಿಯೂ ರಂಗಯ್ಯನೂ ಬಹಳ ಸಂತೋಷಪಟ್ಟರು.

ಭಾದ್ರಪದ ಬಹುಳ ಅಮಾವಾಸ್ಯೆಯ ದಿನ ರಾಮಕ್ಕ ಗೋಪಾಲನಿಂದ ತರ್ಪಣ ಮಾಡಿಸಿದಳು. ಆ ದಿನವೆಲ್ಲಾ ಅವಳು ತನ್ನ ಯಜಮಾನನನ್ನೇ ನೆನೆಸಿಕೊಳ್ಳುತ್ತಿದ್ದಳು. ಸಾಯಂಕಾಲ ಅವಳಿಗೆ ತಾನು ಮುದುಕಿಯಾಗಿ ಬಿಟ್ಟೆನೆಂದೂ, ಗೋಪಾಲನ ಮದುವೆ ಕೂಡಲೇ ನಡೆಸಬೇಕೆಂದೂ ತೀವ್ರ ವಾಂಛೆ ಹುಟ್ಟಿತು. ಅವಳು ಈ ವಿಷಯ ಗೋಪಾಲನಿಗೆ ಹೇಳಿದಳು. ಗೋಪಾಲನು ತಾಯಿ ಯಾರನ್ನು ಮದುವೆಯಾಗಬೇಕೆಂದು ಹೇಳಿದರೆ ಅವಳನ್ನು ಮದುವೆಯಾಗುತ್ತೇನೆಂದು ಒಪ್ಪಿಕೊಂಡನು. ಅಲ್ಲದೆ ಆತನು ಹೀಗೆ ಹೇಳಿದನು. "ಅಮ್ಮಾ, ನಿನ್ನ ಪುತ್ರ ಪ್ರೇಮ ಮಹತ್ತರವಾದುದು. ನೀನು ದೂರದಲ್ಲಿದ್ದರೂ ನನಗೆ ಆಹಾರವನ್ನು ಕೊಟ್ಟು ನನ್ನ ಪ್ರಾಣ ಉಳಿಸಿದೆ."

ರಾಮಕ್ಕನಿಗೆ ಇದರ ಅರ್ಥ ಗೊತ್ತಾಗಲಿಲ್ಲ.

ಗೋಪಾಲನು ಹೇಳಿದ—ತಾನು ಮಹಾರಾಜರ ಜೊತೆಯಲ್ಲಿ ರಾಮಪುರಕ್ಕೆ ಹೋಗಿದ್ದೆ. ಮಹಾರಾಜರು ಹರಕೆ ತೀರಿಸಲು ಪಾದಚಾರಿಯಾಗಿಯೇ

ಹೊರಟಿದ್ದರು. ಆವರಿಗೆ ತಲೆನೋವು ಖಾಯಿಲೆ ಬಂದ ಲಾಗಾಯಿತು ಬಿಸಿಲು ತಲೆಗೆ ತಗುಲಕೂಡದೆಂದು ವೈದ್ಯರು ಹೇಳಿದ್ದರು. ಆದುದರಿಂದ ಆತನಿಗೆ ಸದಾ ಛತ್ರವನ್ನು ಹಿಡಿದು ಆತನನ್ನು ಹಿಂಬಾಲಿಸುವುದು ನನ್ನ ಕರ್ತವ್ಯ ಮಾತ್ರವಲ್ಲದೆ ಮಹಾರಾಜರ ಪ್ರಾಣವನ್ನುಳಿಸಲು ಅವಶ್ಯಕವೂ ಆಗಿತ್ತು. ಪ್ರಧಾನಿಯಿಂದ ಮಹಾರಾಜರು ಕೂಡಲೇ ಘನಗಿರಿಗೆ ಬರಬೇಕೆಂಬ ಪತ್ರ ಬಂತು. ಅದರಲ್ಲಿ ಯುದ್ಧವನ್ನು ನಿಲ್ಲಿಸುವ ವಿಷಯವಾಶಾದಾಯಕವಾಗಿದ್ದುದರಿಂದ ಮಹಾರಾಜರು ಅದೇ ಧ್ಯಾನದಲ್ಲಿ ಬಂದವನು ತಂದಿದ್ದ ಕುದುರೆಯನ್ನೇರಿ ಘನಗಿರಿಗೆ ಹೊರಟೇ ಬಿಟ್ಟರು. ನನಗೆ ನೀನು ಬರಬೇಡ ವೆಂದಾಗಲಿ ರಾಮಪುರದಲ್ಲಿ ಬೇರೆ ಕುದುರೆಯನ್ನು ಯಾವುದನ್ನಾದರೂ ತೆಗೆದುಕೊಂಡು ನನ್ನ ಜೊತೆಯಲ್ಲಿ ಕೊಡೆ ಹಿಡಿದುಕೊಂಡು ಬಾ ಎಂದಾಗಲೀ ಏನೂ ಹೇಳಲಿಲ್ಲ. ಆವರಿಗೆ ಯುದ್ಧದ ವಿಷಯ ಬಿಟ್ಟು ಬೇರೆ ಯಾವ ವಿಷಯದ ಮೇಲೂ ಗಮನವೇ ಇರಲಿಲ್ಲ. ಆಗ ನಾನು ನನ್ನ ಜೀವವಿರುವವರೆಗೂ ಆತನ ಜೊತೆಯಲ್ಲಿ ಕುದುರೆಯ ಸಮವಾಗಿ ಓಡಿ ಆತನಿಗೆ ಛತ್ರ ಹಿಡಿದುಕೊಂಡಿರುವುದು ನನ್ನ ಕರ್ತವ್ಯವಾಗಿತ್ತು. ಓಡಬೇಕಾದ ದೂರ ಸುಮಾರು ಎರಡೂವರೆ ಕ್ರೋಶಗಳು. ಓಡಬೇಕಾಗಿದ್ದುದು ಕುದುರೆಯ ಜೊತೆಯಲ್ಲಿ. ಮಹಾರಾಜರು ಆತುರದಿಂದ ಕುದುರೆಯನ್ನು ಪದೇ ಪದೇ ಪ್ರಚೋದಿಸುತ್ತಲೇ ಇದ್ದರು. ನಾನು ದೇವರ ಮೇಲೆ ಭಾರ ಹಾಕಿ ತದೇಕ ಚಿತ್ತದಿಂದ ಓಡಲಾರಂಭಿಸಿದೆ. ಭಗವಂತನ ಕೃಪೆಯಿಂದ ಕೋಟೆಯ ಪೂರ್ವದ ಬಾಗಿಲಿಗೆ ಬರುವವರೆಗೂ ನನ್ನಲ್ಲಿ ಓಡುವ ಶಕ್ತಿಯಿತ್ತು. ಅಲ್ಲಿ ಬೇರೆ ಛತ್ರಧಾರಿ ಸೇವೆಗಾಗಿ ಕಾದಿದ್ದನು. ಆದುದರಿಂದ ನನ್ನ ಕರ್ತವ್ಯ ಅಲ್ಲಿಗೆ ಮುಗಿಯಿತು. ನನಗೆ ಪ್ರಾಣಗಳು ಹಾರಿಹೋಗುವಷ್ಟು ಆಯಾಸವಾಗಿತ್ತು. ನಾನು ಮನೆಗೆ ಬರುವ ಸ್ಥಿತಿಯಲ್ಲೂ ಇರಲಿಲ್ಲ. ಉರಿಯುತ್ತಿದ್ದ ಬಿಸಿಲಿನಿಂದ ಸ್ವಲ್ಪ ತಲೆ ತಪ್ಪಿಸಿಕೊಂಡರೆ ಸಾಕೆಂದು ನೋಡುವಷ್ಟರಲ್ಲಿ ನೀನು ಪ್ರತಿ ಗುರುವಾರ ಪೂಜೆ ಮಾಡುತ್ತಿರುವ ವಿಶ್ವೇಶ್ವರನ ದೇವಸ್ಥಾನವಲ್ಲಿಯೇ ಇತ್ತು. ತಕ್ಷಣ ಅದರಲ್ಲಿ ಪ್ರವೇಶಿಸಿದೆ. ದ್ವಾರ ಬಂಧನ ತಲೆಗೆ ತಗುಲಿ ರಕ್ತ ಹರಿಯಿತು. ನನಗೆ ಸ್ವಲ್ಪ ತಾಪವು ಶಾಂತವಾಯಿತು. ಅಲ್ಲಿಯೇ ಕುಸಿದು ಬಿಟ್ಟೆ. ಕೂಡಲೇ ನನಗೆ ರಾಕ್ಷಸ ಸಂತಹ ಪ್ರಚಂಡವಾದ ಹಸಿವಾಯಿತು. ನೋಡುವಷ್ಟರಲ್ಲಿ ನೀನಿಟ್ಟಿದ್ದ ತಂಬಿಟ್ಟು, ಪಾನಕವೂ ಸಿಕ್ಕಿದವು. ಗಬ ಗಬ ತಂಬಿಟ್ಟು

ತಿಂದು ಪಾನಕ ಕುಡಿದು ನಿದ್ರೆಯಿಂದ ಕೆಳಕ್ಕೆ ಬಿದ್ದೆ. ಆ ಮೇಲೆ ಸೇವಕರು ಬಂದು ಎಬ್ಬಿಸಿದಾಗಲೇ ನನಗೆ ಎಚ್ಚರವಾದುದು. ಅಷ್ಟು ಹೊತ್ತಿಗೆ ನೀನು ಮಾಡಿ ನನಗೆ ಉಣಿಸಿದ ಅಮೃತದಂತಹ ಆಹಾರದಿಂದ ನನ್ನ ಆಯಾಸವೆಲ್ಲ ಪರಿಹಾರವಾಯಿತು. ನೀನು ಆ ಆಹಾರವನ್ನು ಅಲ್ಲಿ ಇಡದಿದ್ದರೆ ನಾನು ಖಂಡಿತ ಸತ್ತು ಹೋಗುತ್ತಿದ್ದೆ.

ಹೀಗೆ ಹೇಳಿ "ನಾನು ನಿನ್ನ ಋಣವನ್ನು ಹೇಗೆ ನೀಗಲಿ. ನಿನಗೆ ನಮಸ್ಕಾರ ಮಾಡುತ್ತೇನೆ. ನಿನ್ನ ಮಾತಿನಂತೆ ಮದುವೆಯಾಗುತ್ತೇನೆ." ಎಂದು ಎದ್ದು ತಾಯಿಯ ಪಾದಗಳಿಗೆ ವಂದಿಸಿದನು. ತಾಯಿಯ ಕಣ್ಣುಗಳಲ್ಲಿ ನೀರು ಬಂತು. ಅವಳು ಮನಸ್ಸಿನಲ್ಲೂ, ಬಾಯಲ್ಲಿಯೂ ಆತನನ್ನು ಆಶೀರ್ವದಿಸಿದಳು. ಅಲ್ಲೇ ಇದ್ದು ಇದನ್ನೆಲ್ಲ ಕೇಳುತ್ತಿದ್ದ ಛಲಚ್ಛಲನೂ, ವಿಲಾಸಿನಿಯೂ, ತಾಯಿಯ ಮಹತ್ವವನ್ನು ಹೇಳುವ ಹಾಡುಗಳನ್ನು ಹಾಡಿದರು. ಕಮಲಮ್ಮ ಎಲ್ಲವನ್ನೂ ನೋಡುತ್ತ ನೋಡುತ್ತ ಆನಂದಪರವಶಳಾದಳು. ರಾಮಕ್ಕ ತನಗೆ ಸೇವೆ ಮಾಡುತ್ತಿದ್ದ ಕಮಲಮ್ಮನನ್ನು ಹತ್ತಿರಕ್ಕೆ ಕರೆದುಕೊಂಡು ತಲೆ ನಿವುರಿ "ಮಗೂ ಈ ತಂದೆ ತಾಯಿಗಳಿಲ್ಲದ ಮಗುವನ್ನು ನೀನು ಮದುವೆಯಾಗು." ಎಂದು ಗೋಪಾಲನಿಗೆ ಹೇಳಿದಳು. ಗೋಪಾಲನೂ, ಕಮಲಮ್ಮನೂ ರಾಮಕ್ಕನ ಪಾದಗಳಿಗೆ ನಮಸ್ಕಾರ ಮಾಡಿದರು.

ಆಶ್ವಯುಜ ಶುದ್ಧದಲ್ಲಿ ಭಾಗ್ಯಲಕ್ಷ್ಮಿಗೂ, ರಂಗಯ್ಯನಿಗೂ ಮದುವೆಯನ್ನು ವೀರಪ್ಪ ಏರ್ಪಾಟು ಮಾಡಿರುವುದನ್ನು ತಿಳಿದುಕೊಂಡು ರಾಮಕ್ಕ ತನ್ನ ಮಗನಿಗೂ ಕಮಲಮ್ಮನಿಗೂ ಆ ಲಗ್ನದ ಎರಡು ಮೂರು ದಿನಗಳ ನಂತರ ವಿವಾಹ ಲಗ್ನವನ್ನಿಡಿಸಿದಳು. ಆಯಾ ದಿನಗಳಲ್ಲಿ ಎರಡು ಮದುವೆಗಳೂ ಬಹಳ ಸಂಭ್ರಮದಿಂದ ನಡೆದವು. ಎರಡರಲ್ಲೂ ಎಲ್ಲ ಬಂಧು ಮಿತ್ರರು ನೆರೆತಿದ್ದಲ್ಲದೆ; ರಾಣಿಯ ಸಮೇತನಾಗಿ ಮಹಾರಾಜನು ಮದುವೆಗಳಿಗೆ ಬಂದು ವಧೂವರರಿಗೆ ಕಾಣಿಕೆಗಳನ್ನು ಕೊಟ್ಟನು.

ಮಳೆ ಬಂದು ದೇಶವು ಸುಭಿಕ್ಷವಾಯಿತು. ವಿದ್ಯೆಗಳಿಗೂ ಕಲೆಗಳಿಗೂ ಪ್ರೋತ್ಸಾಹ ಸಿಕ್ಕಿತು. ಗೌರವ ಸಿಕ್ಕಿತು. ಅಲ್ಪ ವಿದ್ಯಾವಂತರ ಸ್ವಾರ್ಥ ಪೂರಿತ ಕುಯುಕ್ತಿಗಳಿಗೆ ನಾಶ ಬಂತು. ಸನಾತನವಾದ ಮಾನವ ಧರ್ಮವು

ಪುನಃ ಚೇತರಿಸಿಕೊಂಡು ಬಲಿಷ್ಠವಾಯಿತು. ಲೋಕ ಕಲ್ಯಾಣವಾಯಿತು. ಆನಂದದ ಜ್ಯೋತಿ ಬೆಳಗಿತು.

ಓಂ ತತ್ ಸತ್

ಲಂಕಾ ಕೃಷ್ಣಮೂರ್ತಿಗಳ 'ಕೊಡೆಯ ಗೋಪಾಲ' ಕಾದಂಬರಿಯನ್ನು 'ಕನ್ನಡಪ್ರಭ'ದಲ್ಲಿ ಪ್ರಕಟನೆಗಾಗಿ ಪರಿಶೀಲಿಸಿದಾಗ, ಅದರಲ್ಲಿ ಗಮನ ಸೆಳೆದ ಪ್ರಮುಖ ಅಂಶವೆಂದರೆ, ಕಥೆಯ ನಿರೂಪಣೆಯಲ್ಲಿನ ಸರಳತೆ. ಈ ಕಥೆಯು ಐತಿಹ[illegible]ಗಿರುವ ಕ[illegible]ವಿದರೂ, ಲೇಖಕರ ಪ್ರಕಾರ, ಇದು ಜಾನಪದವೇ. ಎಂದರೆ, ಇದು ನಡೆದಿರಬಹುದು, ಆದರೆ ನಡೆಯಿತೆನ್ನುವುದಕ್ಕೆ ಆಧಾರಗಳಿಲ್ಲ; ಆದರೂ ಜನಜನಿತ. ಇಲ್ಲಿನ ನಾಯಕ ರಾಜನಲ್ಲ, ಮಂತ್ರಿಯಲ್ಲ, ಸೇನಾಪತಿಯಲ್ಲ, ಒ[illegible] ಸಾಮಾನ್ಯ -ರಾಜನಿಗೆ ಕೊಡೆ ಹಿಡಿಯುವ ಸೇವಕ. ಅವನ ಸ್ವಾಮಿನಿಷ್ಠೆ ಇಲ್ಲಿನ ಕೇಂದ್ರವಿಷಯ.

ಕೆಲವಾರು ಶತಮಾನಗಳ ಹಿಂದೆ ಕನ್ನಡ ಮತ್ತು ತೆಲುಗು ಪ್ರದೇಶಗಳ ಸಂಧಿ ಕ್ಷೇತ್ರದಲ್ಲಿ [illegible]ಬಹುದಾಗಿ[illegible] ಸಾಮಾಜಿಕ, ರಾಜಕೀಯ ವಾತಾವರಣದ ಚಿತ್ರಣ [illegible]. ಆಗಲೂ ಭಾಷಾ ವಿವಾದ ಜನರಲ್ಲಿ ಇದ್ದಿರಬಹುದೆಂಬ ಭಾವನೆ ಉಂಟಾಗುತ್ತದೆ. ಆದರೆ ಅದು ಜನಜೀವನದ ಮೇಲೆ ಅಂಥ ಪರಿಣಾಮ ಬೀರಿರಲಾರದು. ಅರಮನೆಯ ರಾಜಕೀಯ, ಒಂದು ರಾಜ್ಯದ ಅವನತಿ–ಇವುಗಳ ಚಿತ್ರಣವೂ ಇಲ್ಲಿದೆ.

ಶ್ರೀ ಕೃಷ್ಣಮೂರ್ತಿಗಳು ಹೈಕೋರ್ಟಿನ ಅಧಿಕಾರಿ. ಅವರನ್ನು ಮೊದಲ ಬಾರಿ ಭೇಟಿ ಮಾಡಿದಾಗ 'ಲಂಕಾ' ಪದದ ಬಗ್ಗೆ ನನ್ನಲ್ಲಿದ್ದ ತಪ್ಪು ತಿಳುವಳಿಕೆ ಅವರಿಂದ ಮಾಯವಾಯಿತು. ಆಂಧ್ರದ ಪ್ರಮುಖ ನದಿಗಳಾದ ಕೃಷ್ಣಾ ಮತ್ತು ಗೋದಾವರಿಗಳ ನದೀ ಮುಖಜಭೂಮಿಗಳಲ್ಲಿನ ನಡುಗಡ್ಡೆಗಳನ್ನು 'ಲಂಕಾ' ಎಂದು ಕರೆಯುವರಂತೆ. ಅವರ ಪೂರ್ವಜರು ಅಲ್ಲಿನವರಂತೆ. ತಮ್ಮ ನೌಕರಿಯ ಜಂಜಾಟದ ನಡುವೆ ಲೇಖನ ವ್ಯವಸಾಯವು ಕೃಷ್ಣಮೂರ್ತಿಯವರ 'ಲಂಕಾ' ಆಗಿದೆ. ಅವರ ಲೇಖನ ವ್ಯವಸಾಯವು ವಿಸ್ತಾರವಾಗಿ ನಡೆಯಬೇಕಾಗಿದೆ.

—ಹೆಚ್. ಎನ್. [illegible] ಮೂರ್ತಿ
ಸಹಾಯಕ ಸಂಪಾದಕ
ಕನ್ನಡಪ್ರಭ